ಚೆಗಟೇರಿ ನಾರಪ್ಪ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಸಂಪ್ರಬಂಧ

ಸಂಶೋಧಕ
ಅಂಜಿನಪ್ಪ ದನಕಾವರ್

ಮಾರ್ಗದರ್ಶಕರು
ಡಾ. ಸಿ.ಟಿ ಗುರುಪ್ರಸಾದ್
ಅಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೧

ಸಂಪೂರ್ಣ ಸಂ.ಕ.೪೫೭.

30

30

ಚಿಗಟೇರಿ ನಾರಪ್ಪ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಸಂಪ್ರಬಂಧ

ಸಂಶೋಧಕ
ಅಂಜಿನಪ್ಪ ದನಕಾವರ್

ಮಾರ್ಗದರ್ಶಕರು
ಡಾ.ಸಿ.ಟಿ ಗುರುಪ್ರಸಾದ್
ಅಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೦೩

ದೃಢೀಕರಣ ಪತ್ರ

ಶ್ರೀ ಅಂಜಿನಪ್ಪ ದನಕಾವರ್ ಇವರು **"ಚಿಗಟೇರಿ ನಾರಪ್ಪ"** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿ ಜಾನಪದ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೦೨-೦೪-೨೦೦೨

(ಡಾ. ಸಿ.ಟಿ. ಗುರುಪ್ರಸಾದ್)
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

"ಚಿಗಟೇರಿ ನಾರಪ್ಪ" ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಡಾ.ಸಿ.ಟಿ. ಗುರುಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇತರೇ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೦೨-೦೪-೨೦೦೨
ಸ್ಥಳ : ವಿದ್ಯಾರಣ

ಅಂಜಿನಪ್ಪ ದನಕಾವರ್
(ಅಂಜಿನಪ್ಪ ದನಕಾವರ್)
ಎಂ.ಫಿಲ್. ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಅಧ್ಯಯನ ಕೈಗೊಳ್ಳಲು ಅವಕಾಶ ಕಲ್ಪಿಸಿ ಕೊಟ್ಟಿರುವ ಮಾನ್ಯ ಕುಲಪತಿಗಳಾದ ಡಾ.ಎಚ್.ಜೆ. ಲಕ್ಕಪ್ಪಗೌಡ ಅವರಿಗೆ, ಕುಲಸಚಿವರಾದ ಡಾ. ಕೆ.ವಿ. ನಾರಾಯಣ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ. ಪ್ರಸಾರಾಂಗದ ನಿರ್ದೇಶಕರಾದ ಡಾ.ಹಿ.ಚಿ. ಬೋರಲಿಂಗಯ್ಯ ಅವರಿಗೆ.

ಧೈರ್ಯತುಂಬಿ ಅತ್ಯಂತ ಕಾಳಜಿವಹಿಸಿ ಅಧ್ಯಯನದ ಕ್ರಮವನ್ನು ಬೋಧಿಸಿ ಅಕ್ಷರ, ಅಕ್ಷರವನ್ನು ನೋಡಿ ನನ್ನ ಅರಿವಿನ ವಿಸ್ತಾರವನ್ನು ಹೆಚ್ಚಿಸಿದ ಹಾಗೂ ಮಾರ್ಗದರ್ಶಕರಾದ ಡಾ.ಸಿ.ಟಿ ಗುರುಪ್ರಸಾದ್ ಅವರಿಗೆ ತುಂಬು ಹೃದಯದ ಕೃತಜ್ಞತೆಗಳು. ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ, ಪ್ರವಾಚಕರಾದ ಡಾ. ಸ.ಚಿ. ರಮೇಶ್ ಅವರಿಗೆ. ಅಧ್ಯಾಪಕರಾದ ಡಾ. ಮೊಗಳ್ಳಿ ಗಣೇಶ್, ಡಾ. ಹೆಬ್ಬಾಲೆ ಕೆ. ನಾಗೇಶ್, ಡಾ. ಹರಿಶ್ಚಂದ್ರ ದಿಗ್ಸಂಗಿಕರ್ ಅವರಿಗೆ ಮತ್ತು ವೀರೇಶ್, ಹನುಮಂತಪ್ಪ ಅವರಿಗೆ.

ಆಸಕ್ತಿಗಳಿಗೆ ಪ್ರೋತ್ಸಾಹ ಕೊಡುವ ಮತ್ತು ಅಧ್ಯಯನದ ಬಗ್ಗೆ ಆಗಾಗ ವಿಚಾರಿಸುತ್ತಿದ್ದ ಡಾ.ಕೆ. ರವೀಂದ್ರನಾಥ, ಡಾ. ರಹಮತ್ ತರೀಕೆರೆ, ಎಸ್.ಎಸ್. ಹಿರೇಮಠ, ಡಾ. ಎಫ್. ಟಿ. ಹಳ್ಳಿಕೇರಿ, ಡಾ. ಮಲ್ಲಿಕಾಘಂಟಿ, ಡಾ. ವೆಂಕಟಗಿರಿ ದಳವಾಯಿ ಮತ್ತು ಸೂಕ್ತ ಸಲಹೆಯನ್ನು ನೀಡಿದ ಹಿರಿಯರಾದ ಮುದೇನೂರು ಸಂಗಣ್ಣ ಅವರಿಗೆ.

ನನ್ನ ಎಲ್ಲಾ ರೀತಿಯ ಅಧ್ಯಯನಕ್ಕೆ ಪ್ರೋತ್ಸಾಹವನ್ನಿತ್ತು ಸದಾ ನನ್ನದೇ ಶ್ರೇಯೋಭಿವೃದ್ಧಿಯನ್ನು ಬಯಸುತ್ತಿದ್ದ ಪ್ರೀತಿಯ ತಂದೆಯಾದ ದಿ. ನಾರಪ್ಪ, ಚಿಕ್ಕಪ್ಪನವರಾದ ದಿ. ಬಸಪ್ಪ ಹಾಗೂ ಮಾವನವರಾದ ದಿ. ಹನುಮಂತಪ್ಪ ಅವರಿಗೆ. ಮತ್ತು ಸದಾ ನನ್ನ ಏಳ್ಗೆಯನ್ನು ಬಯಸುತ್ತಿರುವ ತಾಯಿಯವರಾದ ಗಂಗಮ್ಮ ಅವರಿಗೆ, ಮಾವನವರಾದ ಗೋಣಿಬಸಪ್ಪ ಅವರಿಗೆ, ಅಕ್ಕ ಅನುಸೂಯಮ್ಮ, ಅಣ್ಣಂದಿರಾದ ನಾಗಣ್ಣ, ಹನುಮಣ್ಣ ಅವರುಗಳಿಗೆ ಚಿರಋಣಿ.

ಅಧ್ಯಯನದ ಬಗ್ಗೆ ಕಾಳಜಿ ವಹಿಸುತ್ತಿರುವ ಮಾವನವರಾದ ಅಂಜಿನಪ್ಪ, ಉಮಾಪತಿ. ಚಿಕ್ಕಮ್ಮರಾದ ಸತ್ಯಮ್ಮ, ಅತ್ತೆಯಾದ ಚನ್ನಬಸಮ್ಮ, ಅಣ್ಣಂದಿರಾದ ಬಸವರಾಜಣ್ಣ, ಚಂದ್ರಣ್ಣ, ಅತ್ತಿಗೆಯರಾದ ಬಸಮ್ಮ, ಹಾಲಮ್ಮ, ಕೊಟ್ರಮ್ಮ, ತಮ್ಮಂದಿರಾದ ಮಂಜು, ರವಿ ತಂಗಿಯರಾದ ರೇಣುಕ, ನಾಗಮ್ಮ, ಅಳಿಯನಾದ ಸದಾನಂದ, ಸೊಸೆ ರೇಣುಕ. ಮಾವರಾದ ಸುಬ್ಬಣ್ಣ, ಬಸಪ್ಪ, ಪ್ರಕಾಶ, ಅಂಜಿನಪ್ಪ, ಅಕ್ಕನವರಾದ ಚೌಡಮ್ಮ, ಸಾವಕ್ಕ, ಹೊಸಪೇಟೆಯ ಚಿಕ್ಕಪ್ಪರಾದ ಸಣ್ಣ ಕಣಿಮೆಪ್ಪ, ಚಿಕ್ಕಮ್ಮರಾದ ನಾಗಮ್ಮ, ಅಕ್ಕನಾದ ವಡಕವ್ವ, ಅಣ್ಣಂದಿರಾದ ಮಾರುತಿ, ಮೂರ್ತಿ, ಮಂಜು, ಶಿವು, ತಂಗಿಯರಾದ ಲಕ್ಷ್ಮಿ, ಗೌರ, ಗಂಗ, ಅಂಜಲಿ ಮತ್ತು ಎಲ್ಲಾ ಬಂಧುಗಳಿಗೆ.

ಗ್ರಂಥಾಲಯದ ಮಲ್ಲಿಕಾರ್ಜುನ, ನರಗಲ್ಲಪ್ಪ ಹಾಗೂ ಸಿಬ್ಬಂದಿ ವರ್ಗದವರಿಗೆ, ಸೂಕ್ತ ಸಲಹೆಗಳನ್ನು ನೀಡಿದ ಮಿತ್ರರಾದ ಜಾಜಿ ದೇವೇಂದ್ರಪ್ಪ, ಮಹೇಶ, ಸಣ್ಣ ಪಾಪಯ್ಯ, ಸೋಮೇಶ್ ಉಪ್ಪಾರ, ಓಂಪ್ರಕಾಶ್, ದೇವರಾಜ್, ಎಚ್. ಕೊಟ್ರೇಶ್, ರಾಮಣ್ಣ, ಹುಲಿಕುಂಟೆಪ್ಪ, ಉಮಾ, ಬಿ. ಭೀಮಣ್ಣ, ಮಲ್ಲಿಕಾರ್ಜುನ, ವಸಂತಪ್ಪ, ಬಸವರಾಜ, ತಿಪ್ಪಣ್ಣ, ರಮೇಶ ಮತ್ತು ನೇತ್ರಾವತಿ, ಚಂದ್ರಶೇಖರ್, ಕೃಷ್ಣ, ಹನುಮಂತ, ವಿಜಿ, ರವೀಂದ್ರ ಹಾಗೂ ನನ್ನ ಎಲ್ಲಾ ಗೆಳೆಯರಿಗೂ.

ಒಂದೆಡೆ ಸೇರಿ ಅಧ್ಯಯನ ಮುಗಿಯುವ ತನಕ, ನೋವು ನಲಿವುಗಳನ್ನು ಸಹಭಾಗಿಗಳಾಗಿ ಹಂಚಿಕೊಂಡು, ವಿಷಯದ ಬಗ್ಗೆ ಚರ್ಚೆ ನಡೆಸಿ ಸೂಕ್ತ ಸಲಹೆ ನೀಡಿರುವ ಮಹಾಬಲೇಶ್ವರ, ಆಂಜನೇಯ ಮತ್ತು ಉಪನ್ಯಾಸಕರಾದ ಕೆ.ಪಿ. ನಾಗೇಂದ್ರಸ್ವಾಮಿ ಅವರಿಗೆ.

ಫೋಟೋ ಮತ್ತು ಕ್ಯಾಮರಾ ಸಹಾಯ ಮಾಡಿದ ಬಿ.ಎಚ್. ಮಂಜುನಾಥ ದಾವಣಗೆರೆ ಮತ್ತು ಹಾಲ ಸ್ವಾಮಿಗಳಿಗೂ ಹಾಗೂ ಪ್ರತಿ ಕೆಲಸಕ್ಕೂ ಪ್ರೋತ್ಸಾಹ ಕೊಡುತ್ತಿರುವ ಎಚ್.ಎಂ. ಅಜ್ಜಯ್ಯ ಅವರಿಗೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಹಾಯ ಮಾಡಿದ ಎಸ್. ಕೊಟ್ರೇಶ್, ರಮೇಶ್, ಶಿವಕುಮಾರ್, ಮುನಿಯಪ್ಪ, ಚಂದ್ರಪ್ಪ, ರಾಮಚಂದ್ರ ಮತ್ತು ಸಿರಿಗೆರಿ ನಾಗರಾಜ್, ಶಿವನಪ್ಪಗೌಡ ಮತ್ತು ಟ್ರಸ್ಟ್‌ನವರಿಗೂ ಹಾಗೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಹನೆಯಿಂದ ವಿಷಯ ತಿಳಿಸಿದ ಎಲ್ಲಾ ವಕ್ತೃಗಳಿಗೂ.

ಪ್ರಬಂಧವನ್ನು ಅಂದವಾಗಿ ಅಕ್ಷರ ಜೋಡಣೆ ಮಾಡಿದ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾ ಯಾಜಿ, ಗಣೇಶ್ ಯಾಜಿ, ಅವರಿಗೆ.

ನನ್ನನ್ನು ಅಭಿಮಾನದಿಂದ ಕಾಣುವ ನನ್ನೂರಿನವರಿಗೂ ಮತ್ತು ನಾನಿರುವ ಊರಿನವರಿಗೂ.

ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಅಂಜಿನಪ್ಪ ದನಕಾವರ್



ಚಿಗಟೇರಿ ನಾರಪ್ಪ

ಪರಿವಿಡಿ

ಅಧ್ಯಾಯ - ೧ ೧ ರಿಂದ ೪

ಪ್ರಸ್ತಾವನೆ

೧ : ೧ ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

ಅಧ್ಯಾಯ - ೨ ಚಿಗಟೇರಿ ಇತಿಹಾಸ ೫ ರಿಂದ ೧೯

೨ : ೧ ಪದ ನಿಷ್ಪತ್ತಿ

೨ : ೨ ಭೌಗೋಳಿಕ ಪರಿಸರ

೨ : ೩ ಚಾರಿತ್ರಿಕ ಹಿನ್ನೆಲೆ

೨ : ೪ ಸಾಮಾಜಿಕ ಹಿನ್ನೆಲೆ

ಅಧ್ಯಾಯ - ೩ ನಾರಪ್ಪನ ಪರಂಪರೆ ೨೦ ರಿಂದ ೩೫

೩ : ೧ ನಾರಪ್ಪ ನಾಮ ವಿಶ್ಲೇಷಣೆ

೩ : ೨ ಧಾರ್ಮಿಕ ಹಿನ್ನೆಲೆ

೩ : ೩ ನೆಲೆಗೊಂಡ ಬಗ್ಗೆ ಇರುವ ಐತಿಹ್ಯಗಳು

೩ : ೪ ದೇವಸ್ಥಾನ ಸ್ಥಾಪನೆ

೩ : ೫ ದೇವಸ್ಥಾನದ ಪರಿಚಯ

೩ : ೬ ಮೂರ್ತಿ ಪರಿಚಯ

೩ : ೭ ವಾಸ್ತುಶಿಲ್ಪ

೩ : ೮ ನಾರಪ್ಪನ ಒಕ್ಕಲುಗಳು

೩ : ೯ ಉಡುಗೆ - ತೊಡುಗೆಗಳು

೩ : ೧೦ ಆಸ್ತಿ ಮತ್ತು ಆಡಳಿತ

ಅಧ್ಯಾಯ - ೪ ಆಚರಣೆಗಳು ೩೬ ರಿಂದ ೬೦

೪ : ೧ ಜೀವನಾವರ್ತನ ಆಚರಣೆಗಳು

೪ : ೨ ವಾರ್ಷಿಕಾವರ್ತನ ಆಚರಣೆಗಳು

೪ : ೩ ಜಾತ್ರೆಯ ವಿವರ

೪ : ೪ ಜಾತ್ರೆಯಲ್ಲಿ ಪ್ರದರ್ಶನಗೊಳ್ಳುವ ಕಲೆಗಳು

ಅಧ್ಯಾಯ - ೫ ನಾರಪ್ಪನ ಬಗೆಗಿನ ನಂಬಿಕೆ ಮತ್ತು ಹರಕೆಗಳು ೬೧ ರಿಂದ ೬೭

೫ : ೧ ಪೂಜಾ ವಿಧಾನ

೫ : ೨ ಮಡಿ - ಮೈಲಿಗೆ

ಅಧ್ಯಾಯ - ೬ ನಾರಪ್ಪ ಮತ್ತು ಇತರ ದೈವದ ಮುಖಾಮುಖಿ ೬೮ ರಿಂದ ೭೪

ಅಧ್ಯಾಯ - ೭ ನಾರಪ್ಪನ ಕುರಿತ ಸಾಹಿತ್ಯ ೭೫ ರಿಂದ ೯೯

ಅಧ್ಯಾಯ - ೮ ನಾರಪ್ಪನ ಸಾಂಸ್ಕೃತಿಕ ಸ್ಥಿತ್ಯಂತರಗಳು ೧೦೦ ರಿಂದ ೧೦೩

ಅಧ್ಯಾಯ - ೯ ಸಮಾರೋಪ ೧೦೪ ರಿಂದ ೧೦೭

ಅನುಬಂಧ - ೧ ೧೦೮ ರಿಂದ ೧೧೮

೧ : ೧ ಆಹ್ವಾನ ಪತ್ರಿಕೆ

೧ : ೨ ಇತರೇ ಹಾಡುಗಳು

೧ : ೩ ಸಾಂಸ್ಕೃತಿಕ ಪದಕೋಶ

ಅನುಬಂಧ - ೨ ೧೧೯ ರಿಂದ ೧೨೪

೨ : ೧ ಛಾಯಾಚಿತ್ರಗಳು

೨ : ೨ ವಕ್ತೃವಿವರ

೨ : ೩ ಪರಾಮರ್ಶನ ಗ್ರಂಥಗಳು

ಅಧ್ಯಾಯ - ೧

ಪ್ರಸ್ತಾವನೆ

೧. ೧ ಅಧ್ಯಯನದ ಉದ್ದೇಶ ಮಹತ್ವ ಮತ್ತು ವ್ಯಾಪ್ತಿ

ಪ್ರಸ್ತಾವನೆ

ಜಾನಪದ ಸಾಹಿತ್ಯ ನಮ್ಮ ಸಮಾಜದ ಸಂಸ್ಕೃತಿ, ಇತಿಹಾಸ, ನಂಬಿಕೆಗಳನ್ನು ಶೋಧಿಸುವ ಮಾಧ್ಯಮವಾಗಿದೆ. ಸಾಹಿತ್ಯದ ಸೆಲೆಯಾಗಿದೆ. ನಮ್ಮದು ಬದಲಾಗುತ್ತಿರುವ ಋತುಮಾನ. ಯುಗದಿಂದ ಯುಗಕ್ಕೆ ಜನಪದ ಆಚಾರ-ವಿಚಾರಗಳು ಭಿನ್ನವಾಗುತ್ತಲೇ ಮುನ್ನಡೆಯುತ್ತವೆ. ಇಂದಿನ ನಗರೀಕರಣ, ಜಾಗತೀಕರಣ, ಕೈಗಾರಿಕೀಕರಣಗಳಂತವುಗಳು ನಮ್ಮ ಸಂಸ್ಕೃತಿಯನ್ನು ಅಳಿಸಿ ಹಾಕಿ ಬೇರೊಂದು ಸಂಸ್ಕೃತಿಯನ್ನು ಬೆಳೆಸುವಲ್ಲಿ ಫಲಕಾರಿಯಾಗಿವೆ. ಇವುಗಳ ತುಳಿತಕ್ಕೆ ನಮ್ಮ ಸಂಸ್ಕೃತಿಯು ಸಂಪೂರ್ಣ ಮರೆಯಾಗುವ ಹಂತದಲ್ಲಿದೆ. ಈ ನಿಟ್ಟಿನಲ್ಲಿ ಜಾನಪದವು ತನ್ನದೇ ಹೋರಾಟವನ್ನು ನಡೆಸಿ ಸಂಸ್ಕೃತಿಯನ್ನು ಉಳಿಸುವಲ್ಲಿ ಪ್ರಯತ್ನಿಸುತ್ತದೆ ಅಥವಾ ಇವುಗಳಿಗೆ ಎದುರಾಗಿ ನಿಲ್ಲುತ್ತವೆ.

ಜನಪದ ಎನ್ನುವುದು ಇಂತಿಷ್ಟೇ ಎಂದು ಮಿತಿ ಕಟ್ಟಿದ ವಸ್ತು, ಇದಕ್ಕೆ ಎಲ್ಲೆ ಎಂಬುದಿಲ್ಲ. ಪ್ರತಿಯೊಂದು ರಂಗದಲ್ಲಿ ತನ್ನ ಪ್ರಾಬಲ್ಯತೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಬಹುದೊಡ್ಡ ಕ್ಷೇತ್ರವಾಗಿದೆ. ಇದರಲ್ಲಿ ಅಡಗಿರುವ ಜನಪರ ಆಟಗಳು, ಬಯಲಾಟ, ತೊಗಲುಗೊಂಬೆಯಾಟ, ಗ್ರಾಮಾಧ್ಯಯನ, ಗ್ರಾಮದೇವತೆ, ಗ್ರಾಮ ದೇವರು, ವಿವಾಹ ಸಂಪ್ರದಾಯಗಳು ಮತ್ತು ಜನಪದ ಪ್ರಜ್ಞೆಗೆ ಪ್ರಕೃತಿಯಲ್ಲಿ ಗೋಚರಿಸುವ ಪಶು, ಪಕ್ಷಿ, ಗಿಡ, ಮರ, ಭೂಮಿ, ಸೂರ್ಯ, ಚಂದ್ರಾದಿಗಳಲ್ಲಿ ನಮ್ಮಂತೆಯೇ ಜೀವನವಿದ್ದು ಅವು ಕೂಡ ಮಾತನಾಡಬಲ್ಲವು, ವ್ಯವಹರಿಸಬಲ್ಲವು ಎಂಬುದು ಜನಪದರಲ್ಲಿ ದಟ್ಟವಾದ ನಂಬುಗೆ ಇದೆ. ಇಂತಹ ಜನಪರ ಜನಪದವನ್ನು ಅಧ್ಯಯನ ನಡೆಸುತ್ತ ಜಾನಪದ ರಂಗವು ಎಲ್ಲ ಕ್ಷೇತ್ರದಲ್ಲಿಯೂ ವ್ಯಾಪಿಸಿ ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡಿದೆ.

೧. ೧ ಅಧ್ಯಯನದ ಉದ್ದೇಶ ಮಹತ್ವ ಮತ್ತು ವ್ಯಾಪ್ತಿ

ಜಾನಪದ ಅಧ್ಯಯನವು ಹೆಚ್ಚಾಗಿ ಶ್ರವಣಾತ್ಮಕ, ದೃಶ್ಯಾತ್ಮಕ ರೀತಿಯನ್ನೇ ಅವಲಂಬಿಸಿದೆ. ಈ ಜಾನಪದವನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಅಭ್ಯಸಿಸುವುದು ಇತ್ತೀಚಿನ ಆಕರ್ಷಣೀಯ ಎನಿಸಿದೆ.

ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಆಕಾರಗಳನ್ನು ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಲ್ಲಿ ಪುನರಚಿಸುವುದು ಇಂದು ಅನಿವಾರ್ಯವಾಗಿದೆ. ಪ್ರಸ್ತುತ ಜಗತ್ತಿನಲ್ಲಿ ಅನೇಕ ವಿಧಿ-ವಿಧಾನಗಳು ಆಧುನೀಕರಣದ ಪ್ರಭಾವಕ್ಕೊಳಗಾಗಿ ವಿವಿಧ ರೀತಿಯ ಪ್ರಕ್ರಿಯೆಗಳಿಂದ ಹಾಗೂ ವಿಜ್ಞಾನದ ಹೊಸ ಹೊಸ ರೂಪಗಳಿಂದ ತನ್ನದೇ ಆದ ಹೊಸ ಬದಲಾವಣೆಯನ್ನು ಪಡೆಯುತ್ತವೆ. ಪ್ರತಿಯೊಂದು ಸಮೂಹ ಸಮುದಾಯವು ತನ್ನ ಸ್ವಂತಿಕೆಯನ್ನು ಮರು ರೂಪಿಸಲು ಪರಂಪರಾನುಗತವಾಗಿ ಬಂದಂತಹ ಕೆಲವು ಸಾಂಸ್ಕೃತಿಕ ಮಹತ್ವಗಳ ಬಗ್ಗೆ ಅಧ್ಯಯನ ಮಾಡಬೇಕಾಗಿರುವುದು ಅತ್ಯಾವಶ್ಯಕವಾಗಿರುತ್ತದೆ.

ಗ್ರಾಮದ ದೈವಗಳಿಗೆ ಸಂಬಂಧಿಸಿದ ಹಾಗೂ ಅಲ್ಲಿನ ಜನಪದರಲ್ಲಿ ಬಹಳ ಹಿಂದಿನಿಂದ ನಡೆದುಕೊಂಡು ಬಂದ ಆಚರಣೆಗಳು ತುಂಬ ಮಹತ್ವ ಪಡೆದುಕೊಂಡಿರುತ್ತವೆ. ಪ್ರಸ್ತುತ ಕಾಲದ ಗ್ರಾಮಗಳು ನಗರೀಕರಣ, ಜಾಗತೀಕರಣಗಳಿಗೊಳಗಾಗಿ ಸಂಸ್ಕೃತಿಯಲ್ಲಿ ಬದಲಾವಣೆಗಳಾಗುತ್ತವೆ. ಇಂತಹ ಸಂಕ್ರಮಣಾವಸ್ಥೆಯ ಸಂದರ್ಭದಲ್ಲಿ ಮೂಲೆ ಗುಂಪಾಗುತ್ತಿರುವ ಗ್ರಾಮ ಪರಿಸರ ಹಾಗೂ ದೈವಗಳಿಗೆ ಸಂಬಂಧಿಸಿದ ಆಚರಣೆ ಮತ್ತು ನಂಬಿಕೆಗಳ ಕುರಿತಾಗಿ ಅಧ್ಯಯನ ಮಾಡಬೇಕಾಗಿರುವುದು ತುಂಬ ಮಹತ್ವ ಪೂರ್ಣವಾದುದಾಗಿದೆ.

ಇಂದು ಜಾನಪದ ಅಂಶಗಳ ಮೂಲಕ ಸಾಂಸ್ಕೃತಿಕವಾಗಿ ಸಂಶೋಧನೆ ಮಾಡಬೇಕಾದ ಕೆಲಸ ಬಹಳ ಆಗಬೇಕಾಗಿದೆ. ಗ್ರಾಮದ ದೈವಗಳ ಪರಿಚಯ ಅಲ್ಲಿನ ಪರಿಸರದೊಂದಿಗೆ ಇರುವ ಮನುಷ್ಯ ಸಂಬಂಧ ಹಾಗೂ ಸಾಂಸ್ಕೃತಿಕವಾಗಿ ಬದಲಾಗುತ್ತಿರುವ ಅನೇಕ ಅಂಶಗಳನ್ನು ಅಧ್ಯಯನದ ಮೂಲಕ ಬೆಳಕಿಗೆ ತರುವುದು ಇಂದು ಅಗತ್ಯವಾಗಿದೆ. ಇದುವರೆಗೆ ಗ್ರಾಮೀಣ ದೈವಗಳ ಆಚರಣೆ, ನಂಬಿಕೆ, ಹರಕೆ, ಐತಿಹ್ಯ, ಕಥೆ, ಹಾಡು, ಗಾದೆಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ನಡೆಸಿರುವ ಪ್ರಯತ್ನಗಳು ಬಹಳ ಕಡಿಮೆ. ಆದ್ದರಿಂದ ಅಂತಹ ಪ್ರಯತ್ನವನ್ನು ಪ್ರಸ್ತುತ ಪ್ರಬಂಧದಲ್ಲಿ ಮಾಡಲಾಗಿದೆ.

ಕರ್ನಾಟಕ ಸುತ್ತಿ ಬಂದರೂ ನಾರಪ್ಪ ಎಂಬ ದೈವವಿಲ್ಲ, ನಾರಪ್ಪ, ನಾರದಮುನಿ ಎಂಬುದು ಜನ ರೂಢಿಯಲ್ಲಿರುವ ಹೆಸರುಗಳು. ನಾರಪ್ಪ ಎಂದಾಗ ಇತಿಹಾಸದ ಪುರಾಣದ ನಾರದನೇ? ಎನ್ನುವ ಪ್ರಶ್ನೆ ನಮ್ಮನ್ನು ಕಾಡದೆ ಇರದು. ಆದರೆ ಜನಪದರ ಮನಸ್ಸಿನಲ್ಲಿ ದೈವವಾಗಿ ನೆಲೆಸಿರುವ ನಾರಪ್ಪನಿಗೂ ಪುರಾಣದ ನಾರದನಿಗೂ ತುಂಬ ಅಂತರವಿದೆ. ನಾರಪ್ಪ ಚಿಗಟೇರಿಯಲ್ಲಿರುವುದರಿಂದ 'ಚಿಗಟೇರಿ ನಾರಪ್ಪ' ಎಂದೇ ಹೆಸರು ಇದೆ. ಕಾಲ ಬದಲಾದಂತೆ ನಾರದ ಮುನಿ, ಶಿವನಾರದ ಮುನಿ, ಗೋವಿಂದ ಗೋವಿಂದ ... ಎಂಬ ಹೆಸರನ್ನು ಲೇಪಿಸಿದ್ದಾರೆ. ನಾರಪ್ಪನ ಪ್ರಾಚೀನತೆ ೧೦-೧೧ನೇ ಶತಮಾನವೆಂದು ಊಹಿಸುತ್ತಾರೆ. ಇದರ ಪ್ರಾಚೀನತೆಯನ್ನು ಗಮನಿಸಿದಾಗ ಜಾನಪದ ಮತ್ತು ಬುಡಕಟ್ಟಿನಲ್ಲಿ ಅಧ್ಯಯನವಾಗಿರುವ ಮಂಟೇಸ್ವಾಮಿ, ಮಲೆಮಾದೇಶ್ವರ, ಜುಂಜಪ್ಪ, ಮೈಲಾರಲಿಂಗ, ಕಾಳಿಂಗರಾಯ ಮುಂತಾದ ಸಾಂಸ್ಕೃತಿಕ ನಾಯಕರ ನೆನಪಾಗುತ್ತದೆ. ಇವರೆಲ್ಲರ ಹಿನ್ನೆಲೆಯಲ್ಲಿ ನಾರಪ್ಪನ ಬಗ್ಗೆ ಅಧ್ಯಯನ ನಡೆಸುವುದು ಸೂಕ್ತವೆನಿಸುತ್ತದೆ.

ಗ್ರಾಮೀಣ ದೈವಕ್ಕೆ ಸಾಮಾನ್ಯವಾಗಿ ಎಲ್ಲಾ ವರ್ಗದವರು ನಡೆದು ಕೊಳ್ಳುವುದರ ಜೊತೆಗೆ ತಮ್ಮ ಮನೆದೇವರನ್ನಾಗಿ ಮಾಡಿಕೊಂಡಿರುತ್ತಾರೆ. ನಾರಪ್ಪನ ವಿಶೇಷವೆಂದರೆ ಸಾಧು ವೀರಶೈವರು ಮತ್ತು ನಾಯಕ ಜನಾಂಗದವರು ಮಾತ್ರ ತಮ್ಮ ಮನೆ ದೇವರನ್ನಾಗಿ ಮಾಡಿಕೊಂಡಿರುತ್ತಾರೆ. ನಾರಪ್ಪ ದೇವರನ್ನು ಸುತ್ತ ಮುತ್ತಲಿನ ಗ್ರಾಮಗಳು ಮತ್ತು ಭಕ್ತರು 'ಅಪವಲ್ಲದ ದೇವರು' ಎಂದು ಹೇಳುತ್ತಾರೆ. ಜೊತೆಗೆ 'ನಾರುಣ್ಣು' ರೋಗವನ್ನು ವಾಸಿ ಮಾಡುವ ವೈದ್ಯನೂ ಆಗಿದ್ದಾನೆ. ಆದ್ದರಿಂದ ಜಾತ್ರೆಯಲ್ಲಿ ವಿಶೇಷವಾಗಿ ನಾರನ್ನು ಎಸೆಯುತ್ತಾರೆ.

ನಾರಪ್ಪ ದೇವರಿಗೆ ನಡೆದುಕೊಳ್ಳುವ ಭಕ್ತರು ಹೆಚ್ಚು ಶ್ರೀಮಂತರಿದ್ದು, ಪುರಾತನ ದೇವಸ್ಥಾನವನ್ನು ನವೀಕರಣಗೊಳಿಸಿದ್ದಾರೆ. ಇದರಿಂದ ಪುರಾತನ ದೇವಸ್ಥಾನ ನಶಿಸಿ ಹೋಗಿದೆ. ಅದರಂತೆ ಆಧುನಿಕ ನಾಗರೀಕತೆಯ ಹಳೆಯ ಆಚರಣೆಗಳು ನಶಿಸಿ ಹೋಗುತ್ತಿವೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಅಧ್ಯಯನ ನಡೆಸುವುದು ಸೂಕ್ತವೆನಿಸುತ್ತವೆ.

ನಾರಪ್ಪ ದೇವರಿಗೆ ಸಂಬಂಧಪಟ್ಟಂತೆ ತಾಮ್ರಪಟ, ಕಡತಗಳು, ತಾಳೆಗರಿಗಳು ಹಾಗೂ ಪುರಾತನವಾದ ವಸ್ತುಗಳು ಮೂಲಾಧಾರಗಳಾಗಿರುತ್ತವೆ. ಚಿಗಟೇರಿ ಗ್ರಾಮಕ್ಕೆ ಪುರಾತನವೆನ್ನಬಹುದಾದ ಮತ್ತು ಅತೀ ಮಹತ್ವವೆನ್ನಬಹುದಾದ ದಾಖಲೆಗಳು ಅಥವಾ ಪುರಾವೆಗಳು ದೊರೆಯುವುದು ಕಡಿಮೆ ಎನ್ನಬಹುದು.

ಇವೆಲ್ಲಕ್ಕಿಂತ ಹೆಚ್ಚಾಗಿ ಪರಂಪರಾನುಗತವಾಗಿ ಜನಪದರ ಬಾಯಿಯಿಂದ ಬಾಯಿಗೆ ಹರಿದು ಬಂದ ಕಥೆಗಳನ್ನು, ಐತಿಹ್ಯಗಳನ್ನು ಇಟ್ಟುಕೊಂಡು ವಿಮರ್ಶಿಸಿ ಸಾಂಸ್ಕೃತಿಕ ಚೌಕಟ್ಟಿನೊಳಗೆ ಹಿಡಿದಿಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಮಹತ್ವ ಮತ್ತು ವ್ಯಾಪ್ತಿ

ಚಿಗಟೇರಿ ಗ್ರಾಮದಲ್ಲಿರುವ ದೇವರಿಗೆ ಸಂಬಂಧಪಟ್ಟ ಹಾಗೂ ಅಲ್ಲಿನ ಜನಪದರಲ್ಲಿ ಮತ್ತು ಬೇರೆ ಪ್ರದೇಶದಲ್ಲಿರುವ ಭಕ್ತರಲ್ಲಿ ಬಹಳ ಹಿಂದಿನಿಂದ ಬಂದ ಆಚರಣೆಗಳು ತುಂಬಾ ಮಹತ್ವ ಪಡೆದುಕೊಂಡಿರುತ್ತವೆ. ಇಂದಿನ ಗ್ರಾಮಗಳು ಆಧುನಿಕತೆಯ ವಿವಿಧ ನೆಲೆಗಳ ಪ್ರಭಾವಕ್ಕೊಳಗಾಗಿ ಅಲ್ಲಿಯ ಸಂಸ್ಕೃತಿ ಬದಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಮೂಲೆಗುಂಪಾಗುತ್ತಿರುವ ಗ್ರಾಮದ ಪರಿಸರದ ಹಾಗೂ ಆಯಾ ದೇವರಿಗೆ ಸಂಬಂಧಿಸಿದ ಆಚರಣೆಗಳ ಕುರಿತಾಗಿ ಅಧ್ಯಯನ ಮಾಡುವ ಕಾರ್ಯ ತುಂಬಾ ಮಹತ್ವ ಪಡೆದುಕೊಳ್ಳುತ್ತದೆ. ಗ್ರಾಮ ದೈವವಾದ 'ಚಿಗಟೇರಿ ನಾರಪ್ಪ' ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕಿನ ಚಿಗಟೇರಿ ಗ್ರಾಮದಲ್ಲಿದೆ. ನಾರಪ್ಪನ ಪ್ರಚಾರವೂ ಸ್ಥಳೀಯವಾಗಿರದೆ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲಿದೆ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಯಿತು.

ಈ ವಿಷಯಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಗಳನ್ನು ಸಂಗ್ರಹಿಸಲು ಕ್ಷೇತ್ರಕಾರ್ಯದ ಅಗತ್ಯತೆ ಇರುವುದು ಮುಖ್ಯ ಎನಿಸುತ್ತದೆ. ಒಟ್ಟಾರೆ ಅಲ್ಲಿಯ ಪರಿಸರವನ್ನು ವೀಕ್ಷಿಸಿ ಹಾಗೂ ಸ್ಥಳಿಕರ ಅಭಿಪ್ರಾಯದ ಜೊತೆಗೆ ಬೇರೆ ಬೇರೆ ಜಿಲ್ಲೆಯಲ್ಲಿರುವ ಭಕ್ತರ ಅಭಿಪ್ರಾಯಗಳನ್ನು ಕ್ರೋಢೀಕರಿಸಲಾಗಿದೆ. ಅಲ್ಲದೆ ಸಂಪ್ರಬಂಧ ರಚನೆಗೆ ಪರೋಕ್ಷವಾಗಿ ನೆರವಾಗುವ ಕೆಲವು ಪುಸ್ತಕಗಳ ಸಹಾಯವನ್ನು ತೆಗೆದುಕೊಂಡಿದ್ದೇನೆ.

ಈ ಪ್ರಬಂಧವು 'ಚಿಗಟೇರಿ ನಾರಪ್ಪ'(ನಾರದಮುನಿ)ನ ಬಗ್ಗೆ ಪ್ರಾಥಮಿಕ ಮಾಹಿತಿಯನ್ನು ಕೊಡುವುದಾಗಿದೆ. ಜೊತೆಗೆ ಅಗತ್ಯವೆನಿಸಿದ ಕೆಲವು ಕಡೆಗಳಲ್ಲಿ ವಿಷಯ ವಿಶ್ಲೇಷಣೆ ಮಾಡಲಾಗಿದೆ.

ಈ ಹಿನ್ನೆಲೆಯಲ್ಲಿ ಚಿಗಟೇರಿ ನಾರಪ್ಪನ ಪರಂಪರೆ ಮತ್ತು ಅದರ ವ್ಯಾಪ್ತಿಯನ್ನು ಗುರುತಿಸುವುದು. ಹಾಗೆಯೇ ನಾರಪ್ಪನ ಆಚರಣೆಗಳು, ಸಾಹಿತ್ಯ ಮುಂತಾದ ವಲಯಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಆದ್ದರಿಂದ ನಾರಪ್ಪನ ಬಗ್ಗೆ ಅಧ್ಯಯನ ನಡೆಸುವವರಿಗೆ ಪ್ರಾಥಮಿಕ ಮಾಹಿತಿಯನ್ನು ಕೊಡುವುದರ ಜೊತೆಗೆ ಮತ್ತೆ ಕೆಲವು ಕಡೆಗಳಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆಗೊಳಪಡಿಸಲಾಗಿದೆ. ಮುಂದಿನ ಅಧ್ಯಯನಕಾರರಿಗೆ ಈ ಒಂದು ಕಿರುಪ್ರಬಂಧ ಸಹಾಯಕವಾಗಲಿ ಎಂಬುದು ನನ್ನ ಉದ್ದೇಶ ಆಗಿದೆ.

ಅಧ್ಯಾಯ - ೨

ಚಿಗಟೇರಿ ಇತಿಹಾಸ

೨. ೧ ಪದ ನಿಷ್ಪತ್ತಿ

೨. ೨ ಭೌಗೋಳಿಕ ಪರಿಸರ

೨. ೩ ಚಾರಿತ್ರಿಕ ಹಿನ್ನೆಲೆ

೨. ೪ ಸಾಮಾಜಿಕ ಹಿನ್ನೆಲೆ

೨. ೪ ೧. ಜಾತಿ

೪. ೨ ವೃತ್ತಿ

೪. ೩ ಶಿಕ್ಷಣ

ಚಿಗಟೇರಿ ಇತಿಹಾಸ

ಒಂದು ಪ್ರದೇಶದ ಇತಿಹಾಸವನ್ನು ಗುರುತಿಸಲು ಶಿಲಾ ಶಾಸನಗಳು, ತಾಮ್ರ ಶಾಸನಗಳು, ಹಸ್ತಪ್ರತಿಗಳು ಹಾಗೂ ಕಾಗದದ ಮೇಲೆ ಬರೆದ ದಾಖಲೆಗಳು ಸಹಕಾರಿಯಾಗುತ್ತವೆ. ಇವು ಇತಿಹಾಸ ರಚನೆಯಲ್ಲಿ ಬಳಕೆಗೊಳ್ಳುವ ಪ್ರಮುಖ ಆಕರ ಸಾಮಗ್ರಿಗಳು. ಇಂತಹ ಐತಿಹಾಸಿಕ ಆಕರಗಳು ಲಭ್ಯವಿಲ್ಲದಾಗ ಸ್ಥಳೀಯ ಜನಪದರು ಹೇಳುವ ಮೌಖಿಕ ಕಥೆಗಳೇ ಆ ಗ್ರಾಮದ ಇತಿಹಾಸಗಳಾಗಿ ಪರಿಣಮಿಸುತ್ತವೆ.

ಚಿಗಟೇರಿ ಗ್ರಾಮವು ಮೂಲತಃ ಶೈವ ಪಂಥದ ಧಾರ್ಮಿಕ ಕೇಂದ್ರವಾಗಿರುವ ಪುರಾವೆಗಳಿವೆ. ಯಾಕೆಂದರೆ ಚಿಗಟೇರಿ ಗ್ರಾಮದಲ್ಲಿ ಹೆಚ್ಚಾಗಿ ಶೈವ ಪಂಥದ 'ಈಶ್ವರ' ದೇವಾಲಯಗಳು ಇವೆ. ಹಾಗೆಯೇ ಪ್ರಸ್ತುತ ಸಂದರ್ಭದಲ್ಲಿಯೂ ಸಹ ಈ ದೇವಾಲಯಗಳನ್ನು ಕಾಣಬಹುದು. ಇದಲ್ಲದೆ ಬಾಗಳಿ ಮತ್ತು ಕೋಗಳಿಗಳು ಹತ್ತಿರದ ಧಾರ್ಮಿಕ ಕೇಂದ್ರಗಳಾಗಿವೆ. ಹಾಗೂ ನಾರಪ್ಪನ ದೇವಸ್ಥಾನದ ಎಡ ಭಾಗದಲ್ಲಿರುವ 'ಕಾಲ ಭೈರವ' ಮತ್ತು ಅದೇ ಗುಡಿಯ ಹಿಂದೆ ಸಿಕ್ಕಿರುವ 'ಕಾಲ ಭೈರವಿ' ಮೂರ್ತಿಯನ್ನು ಗಮನಿಸಿದಾಗ ಹಿಂದೆ ಈ ಸ್ಥಳದಲ್ಲಿ 'ಕಾಪಾಲಿಕರ' ಪಂಥವು ಇದ್ದಿರಬಹುದೇ? ಎಂಬ ಅನುಮಾನವು ಬರುತ್ತದೆ. ಭೈರವ ಮೂರ್ತಿಯನ್ನು ಕಂಡ ಶಿವರಾಮ ಕಾರಂತರು ಇದರ ಕಾಲವನ್ನು ಕ್ರಿ.ಶ. ೪-೫ನೇ ಶತಮಾನದ ಮೂರ್ತಿ ಇರಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇನ್ನೂ ಕೆಲವರು ನಾಥ ಪಂಥದವರು ಈ ಭಾಗದಲ್ಲಿದ್ದರು ಎಂದು ಸಹ ಹೇಳುತ್ತಾರೆ. ಇವುಗಳ ಬಗ್ಗೆ ಯಾವುದೇ ದಾಖಲಾತಿ ಪತ್ರಗಳಾಗಲಿ, ಶಾಸನಗಳಾಗಲಿ ದೊರೆಕಿಲ್ಲ.

ಚಿಗಟೇರಿ ಗ್ರಾಮದ ಕಾಲಮಾನ ಬದಲಾದಂತೆ ಇತಿಹಾಸ ಬದಲಾಗುತ್ತಲೇ ಬಂದಿದೆ. ಆದ್ದರಿಂದ ಸ್ಥಳೀಯರಲ್ಲಿ ಇತಿಹಾಸದ ಬಗೆಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಸ್ಥಳೀಯರ ಹೇಳಿಕೆಯ ಪ್ರಕಾರ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ, ಹೊಯ್ಸಳರ ಕಾಲದಲ್ಲಿ ಮತ್ತು ಹರಪನಹಳ್ಳಿ ಪಾಳೆಗಾರರ ಸಾಮಂತ ಶಿವನಪ್ಪ ನಾಯಕನ ಕಾಲದಲ್ಲಿ, ಚಿಗಟೇರಿಯು ಅನೇಕ ಬದಲಾವಣೆಯನ್ನು ಕಂಡಿದೆ ಎನ್ನುತ್ತಾರೆ. ಸೂಲದ ರಾಮೇಶ್ವರ, ರಾಮಲಿಂಗೇಶ್ವರ ಮತ್ತು ನಾರಪ್ಪನ ದೇವಸ್ಥಾನಗಳು ಪ್ರಾಚೀನವುಗಳಾಗಿದ್ದು ಇವುಗಳು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿರುವ ಗುಡಿಗಳು ಎಂದು ಹೇಳುತ್ತಾರೆ. ಇನ್ನು ಕೆಲವರು ನಾರಪ್ಪನ ದೇವಸ್ಥಾನದ ಆಜುಬಾಜಿರುವ ದೀಪದ ಕಂಬಗಳು ಮತ್ತು ಉಯ್ಯಾಲೆ ಕಂಬಗಳನ್ನು ನೋಡಿ ಇವೆಲ್ಲವು ವಿಜಯನಗರ ಅರಸರ ಕಾಲದ ಗುಡಿ ಇರಬಹುದು ಎಂದು ಹೇಳುತ್ತಾರೆ. ಇದೇ ಗ್ರಾಮದಲ್ಲಿ ವೀರಭದ್ರ ದೇವರ ದೇಗುಲವಿದೆ. ಇದು ಆಧುನಿಕ ಕಾಲದ್ದಾಗಿದೆ. ಈ ದೇಗುಲದ ಎದುರು ಒಂದು ಶಾಸನವಿದೆ. ಅದು ವಿಜಯನಗರದ ಶ್ರೀಕೃಷ್ಣದೇವರಾಯನ ಕಾಲದ್ದಾಗಿದೆ ಎಂದು ಹೇಳುತ್ತಾರೆ. ಆದರೆ ಅದರ ಶಿಲೆಯೆಲ್ಲ ಹಾಳಾಗಿ ಹೋಗಿದೆ.

ಚಿಗಟೇರಿಯ ಇತಿಹಾಸಕ್ಕೆ ಸಂಬಂಧಿಸಿದ ಕೆಲವು ಶಾಸನಗಳು

ಸ್ಥಳೀಯ ಇತಿಹಾಸವನ್ನು ಗುರುತಿಸಲು ಶಾಸನಗಳು ಸಹಕಾರಿಯಾಗುತ್ತವೆ. ಚಿಗಟೇರಿ ಇತಿಹಾಸವನ್ನು ತಿಳಿಸುವಲ್ಲಿ ಎರಡು ಶಾಸನಗಳು ಮುಖ್ಯವೆನಿಸುತ್ತವೆ. ಒಂದು ಕೂಡ್ಲಿಗಿ ತಾಲೂಕು ಉಚ್ಚೆನಿ ಗ್ರಾಮದಲ್ಲಿರುವ ಶ್ರೀ ಮರುಳ ಸಿದ್ದೇಶ್ವರ ಸ್ವಾಮಿ ಮಠದಲ್ಲಿರುವ ಕಂಬದ ಶಾಸನ. ಎರಡು ಚಿಗಟೇರಿ ಗ್ರಾಮದ ಊರ ಹೊರಗಿರುವ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಸಭಾಂಗಣದಲ್ಲಿಯ ವೀರಗಲ್ಲು ಶಾಸನಗಳಾಗಿವೆ. ಈ ಎರಡು ಶಾಸನಗಳು ಮಾತ್ರ ಚಿಗಟೇರಿಯ ಬಗ್ಗೆ ಬೆಳಕು ಚೆಲ್ಲುತ್ತವೆ. ಚಿಗಟೇರಿಯಲ್ಲಿ ಸಿಗುವ ಶಾಸನದಲ್ಲಿ ಸ್ಥಳನಾಮದ ಬಗ್ಗೆ ಅಸ್ಪಷ್ಟವಾಗಿದೆ. ಮತ್ತು "ಕೃಟಿತ ಶಕ ೧೧೩೨ನೇಯ ಶುಕ್ಲ ಜೇಷ್ಠ ಶು. ೫ ಆದಿವಾರಕ್ಕೆ ಸರಿಯಾದ ಕ್ರಿ.ಶ. ೧೦-೫-೧೨೦೯ ಭಾನುವಾರದಂದು ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಚಂದುರೊಡೆಯ ಪೊಂಮಯ್ಯ ಯುದ್ಧದಲ್ಲಿ ಮಡಿದಂತೆ ತಿಳಿಯುತ್ತದೆ."[೧] ಚಿಗಟೇರಿಯಲ್ಲಿ ಯುದ್ಧದಲ್ಲಿ ಮಡಿದ ವೀರರ ನೆನಪಿಗಾಗಿ ನೆಟ್ಟಿರುವ ವೀರಗಲ್ಲುಗಳನ್ನು ಕಾಣಬಹುದು. ಇಂತಹ ವೀರಗಲ್ಲುಗಳು ಚಿಗಟೇರಿಯಲ್ಲಿ ಅನೇಕ ಇವೆ. ಮತ್ತು ನಾರಪ್ಪನ ಗುಡಿಯ ಅಕ್ಕಪಕ್ಕದಲ್ಲಿಯೂ ಇವೆ. ದೇವಸ್ಥಾನದ ಮುಂದೆಯೇ ಹಾಳಾಗಿರುವ ಒಂದು ಶಾಸನವೂ ಇದೆ.

ಶಾಸನಗಳ ವಿವರ : ಸಿಕ್ಕಿರುವ ಶಾಸನಗಳ ವಿವರಗಳು ಈ ಕೆಳಗಿನಂತೆ ಹೇಳಲಾಗಿದೆ.

ವೀರಗಲ್ಲು ಶಾಸನ

೧. "ಸ್ವಸ್ತಿ ಶ್ರೀಮತು ಪ್ರತಾಪ ಚಕ್ರವರ್ತಿ ಹೋಸನಾ ವೀರಬಲ್ಲಾಳದೇವನ ರಾಜ್ಯದಲು ಸತವರುಷ ೧೧೩೨ ಸುಕ್ಲ ಸಂವಸ್ಸರದ

೨. ಜೇಷ್ಠ ಸುದ್ಧ ೫ ಆಶ್ರೀವೃತು ಚಿಕ್ಕಟೆ... ಚಂದೂರೊಡೆಯ

೩. ಪೊಂಮಯ್ಯ ... ಹಿಂದಕ್ಕಿ ಮಾಳಿಗೆ... (ಜಿತೇ) ಸಲ್ಯತೇ ಲಕ್ಷ್ಮೀಃಮಿತೇ ನಾಪಿ ಸುರಾಂಗ

೪. ನಾಷಣ ವಿಧ್ವರಿಸಿನೇಕಯ್ಕೆ ಕಾ ಚಿಂತಾಮರಣೇರಣೇ॥ ಮಂಗಳ ಮಹಾಶ್ರೀಶ್ರೀ॥"[೨]

ಇಂದಿನ ಚಿಗಟೇರಿಯು ಕ್ರಿ.ಶ.೧೨೧೦ರಲ್ಲಿ ಹೊಯ್ಸಳರ ದೊರೆ ವೀರಬಲ್ಲಾಳ ಉಚ್ಚಂಗಿ ಮತ್ತು ಬಾಗಳಿಯನ್ನು ಆಳುತ್ತಿರುವ ಸಂದರ್ಭದಲ್ಲಿ ಚಿಕ್ಕಟೇರಿಗೆ ಚಂದೂರು ಮತ್ತು ಲಿಂಗದಹಳ್ಳಿ, ಚಿತ್ರಗಿರಿ ಎಂಬ ಹಳ್ಳಿಗಳು ಸೇರ್ಪಡೆಯಾಗಿದ್ದವು. ಈಗಿನ ಕೋಟೆ ಮತ್ತು ನಾರಪ್ಪನ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶವೂ ಹಿಂದೆ ಚಂದೂರಾಗಿತ್ತು. ರಾಮಲಿಂಗೇಶ್ವರದ ದೇವಾಲಯದ ಪ್ರದೇಶವೇ ಲಿಂಗದಹಳ್ಳಿಯಾಗಿತ್ತು. ಮತ್ತು ಕರಡಿ ಗುಡ್ಡದ ಹತ್ತಿರ ಚಿತ್ರಗಿರಿ ಎಂಬ ಊರುಗಳು ಇದ್ದವು ಅವುಗಳು ಈಗ ಹಾಳಾಗಿ ಹೋಗಿವೆ ಎಂದು ಸ್ಥಳಿಕರು ಈಗಲೂ ನೆನಪಿಸಿಕೊಳ್ಳುತ್ತಾರೆ. ಜೊತೆಗೆ ಚಿಗಟೇರಿ ಗ್ರಾಮಕ್ಕೆ ಹಿಂದೆ ೯ ಗ್ರಾಮಗಳು ಸೇರಿದ್ದವು ಎಂದು ಹೇಳುತ್ತಾರೆ.

ಕಂಬ ಶಾಸನ : "ಕೂಡ್ಲಿಗಿ ತಾಲೂಕು ಉಜ್ಜೈನಿ ಗ್ರಾಮದ ಶ್ರೀ ಮರುಳ ಸಿದ್ದೇಶ್ವರ ಸ್ವಾಮಿ ಮಠದಲ್ಲಿರುವ ಕಂಬದ ಶಾಸನದ ಪ್ರಕಾರವಾಗಿ ಶ್ರೀಯುತ ಯಾದವ ನಾರಾಯಣಂ ಭುಜಬಳ ಪ್ರದ ಪ್ರತಾಪ ಚಕ್ರವರ್ತಿ ವೀರ ಮಹದೇವರಾಯ ವಿಜಯ ರಾಜ್ಯೋದಯ ಶತ ಒಂಬತ್ತನೇಯ ವಿಭವ ಸಂವತ್ಸರದ ಕಾರ್ತಿಕ ಬಹುಳ ಅಮವಾಸ್ಯೆ ಸೋಮವಾರ ಸೂರ್ಯಗ್ರಹಣದಲ್ಲೂ ಸ್ವಸ್ತಿ ಶ್ರೀ ... ಶ್ರೀವನು ಮಹಾ ಪ್ರಧಾನಂ ಸರ್ವಾಧಿಕಾರಿ ತಿಪ್ಪರಸರ ಅಳಿಯ ಚಮುಂಡರಸರ ನಾಶ್ಯಪಾಂಡ ಸರ್ವಾಧಿಕಾರಮಂ ಮಾಡುತ್ತಿದ್ದಲ್ಲಿ ಅವರ ಕೆಯಲು ಪಡಿಕೋಣೆಯಾಗಿ ಸುಂಕಾಧಿಕಾರಮಂ ಮಾಡುತ್ತಿದ್ದು ಚಿಗಟೇಜಿ ಸುಂಕದ ಚಾಉಂಡರ್ಸ ಉಜ್ಜಿನಿಯ ಸೇನಬೋವ ಗೋವಿಂದರಸನ ಮಗ ಸುಂಕದ ಭೋಗಮನು ಅಳಿಯ ಚಾಮಂಡರ್ಸರ ನಿರೂಪದಿ ಉಜ್ಜನಿಯ ಶ್ರೀ ಮಲ್ಲಿಕಾರ್ಜುನದೇವರ ಶ್ರೀ ಕಾರ್ಯಕ್ಕೆ ಬಿಟ್ಟ ಧರ್ಮಪುರವ ಗುಡುದಳು ಕನಕ ಗೋಪಯ್ಯ ವಿನಘೈ ವಹಾರವೆಂತೆಂದೆಡೆ ಸುಂಕ ಶ್ರೀ ಮಾಮಧ್ಯಂದೇವರಿಗೆ ಧಾರಾಪೂರ್ವಕವಾಗಿ ಕೊಟ್ಟರು. ಈ ಧರ್ಮವನ್ನು ಆರು ಮೀರಿದಡಂ ಮಹಾಗಣಂಗಳು ನಡೆಸುವುದು ಸ್ವದತ್ತಂಪರದತ್ತಂಯ್ಯ ಹರೇಲೆ ವಸುಂಧಿರಾ ಸಸ್ಟಿರ್ವ್ಯಾವರುಶ ಸಹಪ್ರಾಣಿಷ್ಟಾಮಾಂಜಾಯತೆ. ದೇವಗಿರಿ ಯಾದವ ಮಹಾದೇವನ ಕ್ರಿ.ಶ. ೧೨೬೮ರ ಕಾಲವನ್ನು ಸೂಚಿಸುತ್ತದೆ. ಇಂದಿನ ಕೋಟೆಯಲ್ಲಿ ಈಗಲೂ ಜನವಾಸಿಸಿರುವ ದೊಡ್ಡ ಗ್ರಾಮವೇ ಚಿಗಟೇರಿ. ಚಿಕ್ಕಟೇರಿ ಉಜ್ಜಿನಿ ಶಾಸನದ ಹೊತ್ತಿಗೆಯು ಚಿಗುಟೇರಿ ಎಂದು ಕರೆಯಿಸಿಕೊಂಡಿದೆ."[೬]

ಚಿಗಟೇರಿ ಗ್ರಾಮವು ವಿಜಯನಗರ ಅರಸರ ಕಾಲದಲ್ಲಿ ಒಂದು ಅಗ್ರಹಾರವಾಗಿತ್ತು ಮತ್ತು ಹರಪನಹಳ್ಳಿ ಪಾಳೆಗಾರರ ಕಾಲದಲ್ಲಿ ಅರ್ಧ ಅಗ್ರಹಾರವಾಗಿತ್ತು ಎಂದು ಅಭಿಪ್ರಾಯಪಡುತ್ತಾರೆ.

ವಿಜಯನಗರ ಅರಸರ ನಂತರ ಚಿಗಟೇರಿ ಕೋಟೆಯನ್ನು ಹರಪನಹಳ್ಳಿ ಪಾಳೆಗಾರರ ಸಾಮಂತ ತಳವಾರ ಅರಸ ಶಿವನಪ್ಪ ನಾಯಕ ಆಳಿದನು. ಅವನ ಕಾಲದಲ್ಲೆ ಚಿಗಟೇರಿಯಲ್ಲಿ ಅನೇಕ ಬದಲಾವಣೆಗಳುಂಟಾದವು. ಊರ ಹೊರಗಿನ ಶ್ರೀ ರಾಮಲಿಂಗೇಶ್ವರ ಗುಡಿಯನ್ನು ಕೆಡವಿ ಅಲ್ಲಿಯ ಕಲ್ಲಿನಿಂದ ಊರಲ್ಲಿ ಬಾವಿಯನ್ನು ಕಟ್ಟಿಸಿದ್ದಾನೆಂದು ಗ್ರಾಮದಲ್ಲಿರುವ ಪುರಾತನ ಬಾವಿಯೊಂದನ್ನು ತೋರಿಸಿ ಕಥೆಯನ್ನು ಹೇಳುತ್ತಾರೆ.

ದಂತ ಕಥೆಗಳು

೧೬ನೇ ಶತಮಾನದಲ್ಲಿ ಭರಮಪ್ಪ ನಾಯಕನು ಆಳಿದನು. ನಂತರ ಶಿವನಪ್ಪ ನಾಯಕ ಆಡಳಿತ ನಡೆಸಿದನು. ಶಿವನಪ್ಪ ನಾಯಕ ಮೊದಲು ಭರಮಪ್ಪ ನಾಯಕನ ಆಳ್ವಿಕೆಯಲ್ಲಿ ಸೈನ್ಯಾಧಿಪತಿಯಾಗಿದ್ದನು. ಕಾಲ ಕ್ರಮೇಣ ಚಿಗಟೇರಿ ಕೋಟೆಯನ್ನು ಅವನೇ ಆಳಿದನು. ಇದಕ್ಕೂ ಮೊದಲು ಶಿವನಪ್ಪ ಹೊಲದಲ್ಲಿ ಹಸುವಿನಿಂದ ಹೊಲವನ್ನು ಉಳಿಮೆ ಮಾಡುತ್ತಿರುವಾಗ ಸಾಕ್ಷಾತ್ ಶಿವನೇ ಪ್ರತ್ಯಕ್ಷನಾಗಿ ಬಂದು ಹಸುವಿನ ಹೊಟ್ಟೆಯೊಳಗೆ ಬಂಗಾರದ ಬಿಂದಿಗೆಯಿದೆ. ಆ ಬಿಂದಿಗೆಯು ಕಾಲ ಬಂದಾಗ ನಿನಗೆ ಸಿಗುತ್ತದೆ. ಆಗ ನೀನು ಅರಸನಾಗಿ ಮೆರೆಯುವೆ ಎಂದು ಹೇಳಿ ಅದೃಶ್ಯನಾದನು. ಶಿವನಪ್ಪ ಶಿವನ ವಾಣಿಯನ್ನು ಕೇಳಿ ಹರುಷಗೊಂಡನು. ಆಸೆ ಉಕ್ಕಿ ಹರಿಯಿತು. ಮನಸ್ಸನ್ನು ಹಿಡಿತದಲ್ಲಿಡಲು ಸಾಧ್ಯವಾಗಲಿಲ್ಲ. ಮನೆಗೆ ಬಂದವನೆ ಹಸುವನ್ನು

ಕೊಂದು ಹಸುವಿನ ಹೊಟ್ಟೆಯೊಳಗಿನ ಬಂಗಾರದ ಬಿಂದಿಗೆಯನ್ನು ತೆಗೆದುಕೊಂಡನು. ಸಮಯ ಬಂದಾಗ ಬಿಂದಿಗೆ ತಾನಾಗಿಯೇ ಶಿವನಪ್ಪನಿಗೆ ಸಿಗುತ್ತಿತ್ತು. ಹಸುವನ್ನು ಕೊಂದು ಬಂಗಾರದ ಬಿಂದಿಗೆ ತೆಗೆದುಕೊಂಡಿದ್ದರಿಂದ ಶಿವನಪ್ಪನಾಯಕ ಬಹಳ ದಿನದವರೆಗೆ ರಾಜ್ಯಭಾರ ಮಾಡಲಿಲ್ಲ. ಭರಮಪ್ಪ ನಾಯಕನ ಸೈನ್ಯದಲ್ಲಿ ಕಾರ್ಯ ನಿರ್ವಯಿಸಿದ್ದರಿಂದ ಶಿವನಪ್ಪನಿಗೆ ೮೦ ಎಕರೆ ಭೂಮಿಯನ್ನು ಭರಮಪ್ಪ ನಾಯಕನು ಉಂಬಳಿಯಾಗಿ ಕೊಟ್ಟಿರುವನು'[೪] ಎಂದು ಹೇಳುತ್ತಾರೆ.

ಶಿವನಪ್ಪನೆಂಬ ಹೆಸರಿನ ತಳವಾರನು ಒಂದು ಬಾರಿ ಚಿಗಟೇರಿ ಗೌಡರಿಂದ ಒಂದು ಓಲೆಯನ್ನು ತೆಗೆದುಕೊಂಡು ಬಂದು ಹರಪನಹಳ್ಳಿ ಅರಸರಿಗೆ ಮುಟ್ಟಿಸಿದನು. ಆಗ ಅರಸನಾದ ಮೊದಲ ಬಸವಂತನಾಯಕನು ಬಾಗಳಿ ಸಿದ್ಧನಗೌಡರ ಕೂಡ ಜೂಜಾಡುತ್ತಿದ್ದನು. ಅರಸನು ಜೂಜಾಟದಲ್ಲಿ ಸೋಲುವ ಹಂತದಲ್ಲಿದ್ದನು. ಆಗ ಅಲ್ಲಿಯೇ ಗೌಡರ ಹಿಂದುಗಡೆ ನಿಂತಿದ್ದ ಶಿವನಪ್ಪ ತಳವಾರನು ಅರಸನಿಗೆ ಸಂಜ್ಞೆ ಮಾಡಿದನು. ಇವನ ಸಂಜ್ಞೆಯನ್ನು ಅರಿತ ಅರಸ ಆಟವನ್ನು ಮುಂದುವರಿಸಿದ, ಜೂಜಾಟದಲ್ಲಿ ಗೌಡರ ಮೇಲೆ ಜಯ ಪಡೆದನು. ಅರಸನಿಗೆ ಶಿವನಪ್ಪನ ಮೇಲೆ ಹೆಚ್ಚಿಗೆ ಪ್ರೀತಿಯುಂಟಾಯಿತು. ಅವನು ತಂದ ಓಲೆಯನ್ನು ವಿವರವಾಗಿ ಓದಿಕೊಂಡನು. ಕೂಡಲೇ ಚಿಗಟೇರಿಯ ಗೌಡರಿಗೆ ಮರು ಓಲೆಯನ್ನು ಬರೆದನು. ಅಂದಿನಿಂದ ಶಿವನಪ್ಪನೇ ಚಿಗಟೇರಿ ಕೋಟೆಗೆ ಸಾಮಂತ ಅರಸನೆಂದು ಸಾರಿ ಆಜ್ಞೆಯನ್ನು ಕಳುಹಿಸಿದನು.

ಹೀಗೆ ಅರಸನಾದ ಶಿವನಪ್ಪನು ಹರಪನಹಳ್ಳಿ ಅರಸರಿಗೆ ವಿಧೇಯನಾಗಿ ಚಿಗಟೇರಿಕೋಟೆಯನ್ನು ಕೆಲವು ದಿನಗಳ ಕಾಲ ಆಳಿದನು. ಆ ಸಂದರ್ಭದಲ್ಲಿ ಚಿಗಟೇರಿಯಲ್ಲಿ ಚಿಕ್ಕೇರಿಕೆರೆ, ಹಿರೇಕೆರೆ ಎಂಬ ಎರಡು ಕೆರೆಗಳು ಇದ್ದವು. ಆಗ ಕೆರೆಗಳೆರಡು ಮಣ್ಣಿನಿಂದ ಹೂತು ಹೋಗಿದ್ದವು (ಕೆರೆಗಳನ್ನು ಈಗಲೂ ಕಾಣಬಹುದು). ಆದ್ದರಿಂದ ಶಿವನಪ್ಪ ನಾಯಕನು ಚಿಗಟೇರಿಯ ಗುಡ್ಡದ ಪಕ್ಕದಲ್ಲಿ ಒಂದು ಕೆರೆಯನ್ನು ಮತ್ತು ಊರಲ್ಲಿ ಒಂದು ಬಾವಿಯನ್ನು ನಿರ್ಮಿಸಿದನು. ಕೆರೆಯಲ್ಲಿ ಹೆಚ್ಚು ನೀರು ಸಂಗ್ರಹವಾಗಲಿಲ್ಲ. ಆಗ ತಾನು ಕಟ್ಟಿಸಿದ ಕೆರೆಗೆ ಹರಪನ ಹಳ್ಳಿ ಪಟ್ಟಣದ ಪಶ್ಚಿಮ ಭಾಗದ ಕುಂಚೂರು, ಹಲವಾಗಲು ಬಳಿ ಹರಿಯುವ ತುಂಗಭದ್ರಾ ನದಿಗೆ ಆಣೆಕಟ್ಟು, ರಚಿಸಿ ನೀರು ಒದಗಿಸಲು ಪ್ರಯತ್ನಿಸಿದನು. ತುಂಗಭದ್ರಾ ನದಿಯು ಚಿಗಟೇರಿ ಪ್ರದೇಶದ ಮಟ್ಟಕ್ಕಿಂತ ತಗ್ಗಿರುವುದರಿಂದ ಶಿವನಪ್ಪನ ಯೋಜನೆಯ ಪ್ರಯತ್ನ ವಿಫಲವಾಗಿರಬೇಕು. ಮತ್ತು ಹಲುವಾಗಲು ಬಳಿ ನದಿಗೆ ಒಡ್ಡು ಹಾಕಿ ನೀರು ಹರಿಸುವ ಶಿವನಪ್ಪನ ಪ್ರಯತ್ನದ ಕೆಲವು ಗುರುತುಗಳು ಈಗಲೂ ಕಾಣಸುತ್ತದೆ.

"ಬಾಗಳಿಯ ಹತ್ತಿರ ಕೂಲಹಳ್ಳಿ ಗ್ರಾಮದಲ್ಲಿ ಪ್ರತಿವರ್ಷವೂ ಗೋಣಿ ಬಸಪ್ಪನ ಜಾತ್ರೆ ಜರುಗುತ್ತದೆ. ಚಿಗಟೇರಿಯ ಶಿವನಪ್ಪನಾಯಕ ಮತ್ತು ಕೂಲಹಳ್ಳಿ ಗೋಣಿಬಸಪ್ಪ ಇವರಿಬ್ಬರು ಅಳಿಯ, ಮಾವ ಎಂದು ಹೇಳುತ್ತಾರೆ. ಜಾತ್ರಾ ಸಮಯದಲ್ಲಿ 'ವಿಶ್ವಕಲಾ ಯುವಕ ರೈತ ನಾಟ್ಯ ಸಂಘ ಬಾಗಳಿ'ಯವರು 'ಶ್ರೀ ಗೋಣಿಬಸವೇಶ್ವರ' ಎಂಬ ನಾಟಕವನ್ನು ಅಭಿನಯಿಸುತ್ತಾರೆ. ನಾಟಕದಲ್ಲಿ ಶಿವನಪ್ಪನ ಪಾತ್ರವನ್ನು ಕಾಣಬಹುದು. ಶಿವನಪ್ಪ ಸಾಧುಗೋಣಿ ಬಸಪ್ಪನನ್ನು ಹಿಂಸಿಸುವುದು, ಗೋಣಿಬಸಪ್ಪನು ಎಲ್ಲ ಹಿಂಸೆಗಳಿಂದ ಪಾರಾಗುವ ಸನ್ನಿವೇಶಗಳು ಈ ನಾಟಕದಲ್ಲಿ ಬರುತ್ತವೆ. ಮತ್ತು ಶಿವನಪ್ಪನ ಪಾತ್ರವನ್ನು ಅತ್ಯಂತ ಕ್ರೂರವಾಗಿ ಚಿತ್ರಿಸಿದ್ದಾರೆ."[೫]

ಶಿವನಪ್ಪ ನಾಯಕನ ವಂಶಜರು ಎಂದು ಹೇಳುವ ಒಂದು ಮನೆತನವು ಈಗಲೂ ಚಿಗಟೇರಿಯಲ್ಲಿದೆ. ಮನೆತನದ ಹೆಸರು 'ಬಂಗೇರು' ಎಂದು ಕರೆಯುತ್ತಾರೆ. ಮತ್ತು ೮೦ ಎಕರೆ ಉಂಬಳಿ ಭೂಮಿಯನ್ನು ಇವರೇ ನೋಡಿಕೊಂಡು ಹೋಗುತ್ತಿದ್ದಾರೆಂದು ಹೇಳುತ್ತಾರೆ.

ಹಿಂದೆ ಚಿಗಟೇರಿಯು ಮೂವತ್ತರ ಮುತ್ತಿಗೆಗೂ ಬಾಗಳಿಗೂ, ಹರಪನಹಳ್ಳಿ ಪಾಳೆಗಾರರ ಆಡಳಿತಕ್ಕೂ ಒಳಪಟ್ಟು ಪ್ರಸ್ತುತ ಕಾಲದಲ್ಲಿ ತನ್ನದೇ ಆದ ಹೆಸರನ್ನು ಪಡೆದುಕೊಂಡಿದೆ.

೨.೧ ಪದನಿಷ್ಪತ್ತಿ : ``ಪ್ರತಿಯೊಂದು ಗ್ರಾಮ ನಾಮಕ್ಕೂ ತನ್ನದೇ ಆದ ಐತಿಹಾಸಿಕ ಪರಂಪರೆಯಿರುತ್ತದೆ. ಅವಕ್ಕೆ ಪೂರಕ ಸಾಮಾಗ್ರಿಯಾಗಿ ಶಾಸನ ಸಾಹಿತ್ಯ ಕೃತಿಗಳು ಸಾಕ್ಷಿ ನುಡಿಯುತ್ತಿರುತ್ತವೆ. ಅಂತಹ ಪ್ರಮಾಣ ಪೂರ್ಣ ದಾಖಲೆಗಳು ಇಲ್ಲದಿರುವುದರಿಂದ ಇದ್ದರೂ ಅಸ್ಪಷ್ಟವಾದಾಗ ಗ್ರಾಮನಾಮ ಇತಿಹಾಸಕ್ಕೆ ಭಾಷಿಕ ಮತ್ತು ಜನಪದ ಐತಿಹ್ಯಗಳೇ ಪ್ರಮುಖ ಆಧಾರ ಎನಿಸುತ್ತವೆ.''[೬]

ಗ್ರಾಮದಲ್ಲಿ ಪುರಾತನದವುಗಳಾದ ಎರಡು ಕೆರೆಯನ್ನು ಕಾಣುತ್ತೇವೆ. ಒಂದು ಚಿಕ್ಕೇರಿಕೆರೆ ಮತ್ತೊಂದು ಚಿಕ್ಕಕೆರೆ ಎಂಬ ಎರಡು ಕೆರೆಗಳ ಹಿನ್ನೆಲೆಯಲ್ಲಿ ಚಿಗಟೇರಿ ಎಂಬ ಹೆಸರು ಬಂದಿರುವ ಸಾಧ್ಯತೆಗಳಿವೆ.

ಚಿಕ್ಕೇರಿ + ಕೆರೆ = ಚಿಕ್ಕೇರಿ ಕೆರೆ

ಚಿಕ್ಕ + ಕೆರಿ = ಚಿಕ್ಕಕೆರಿ

ಚಿಕ್ಕ + ಡೇರಿ = ಚಿಕ್ಕಡೇರಿ

ಚಿಕ್ಕ + ಟರ್ = ಚಿಕ್ಕಟರ್

ಚಿಕ್ಕ + ಏರಿ = ಚಿಕ್ಕೇರಿ > ಚಿಕ್ಕಕೆರೆ

ಚಿಗ + ಟ + ಏ + ರಿ

ಚಿಗಟೇರಿ

ಚಿಗ + ಏರಿ

ಟ

ಏರಿ = ಕೆರೆ. ಕೆರೆಕಟ್ಟೆ

'ಚಿಕ್ಕೇರಿ' ಕೆರೆಯಿಂದಲೇ ಚಿಕ್ಕೇರಿ, ಚಿಗ್‌ಟೇರಿ, ಚಿಗಟೇರಿಯಾಗಿ ಪರಿವರ್ತನೆಯಾಗಿರುವ ಸಂಭವವೂ ಇದೆ. ಚಿಕ್ಕಕೆರಿ, ಚಿಕ್ಕಡೇರಿ, ಚಿಕ್ಕಟರ್ ಎಂಬ ಹಿನ್ನೆಲೆಯಲ್ಲಿಯೂ ಚಿಗಟೇರಿ ಎಂಬ ಹೆಸರು ಬಂದಿರಬಹುದು. ಭಾಷಾ ತಜ್ಞರ ಪ್ರಕಾರ ಚಿಗಟೇರಿಯು ಜಲವಾಚಿ ಸ್ಥಳನಾಮವಾಗಿದೆ.

ಸ್ಥಳನಾಮ ಬಗೆಗಿರುವ ಕಥೆಗಳು

೧. "ಚಿಗಟೇರಿಯ ಸುತ್ತಮುತ್ತಲಿರುವ ಬೆಟ್ಟ ಗುಡ್ಡಗಳಿಗೆ ಚಿತ್ರಗಿರಿಯ ಸಾಲು ಎಂದು ಕರೆಯುತ್ತಿದ್ದರು. ಅದೇ ಹೆಸರಿನಿಂದಲೇ ಆ ಗ್ರಾಮಕ್ಕೆ 'ಚಿತ್ರಗಿರಿ' ಎಂಬ ಹೆಸರಿಟ್ಟರು. ಆ ಹೆಸರೇ ಮುಂದೆ ಜಗಪುರವಾಯಿತು. ಕಾಲ ಬದಲಾದಂತೆ 'ಚಿಕ್ಕಕೆರೆ'ಯಾಯಿತು. ಈಗ 'ಚಿಗಟೇರಿ'ಯಾಗಿದೆ" [೬]

೨. "ಭರಮಪ್ಪ ನಾಯಕನು ಈ ಪ್ರದೇಶದಲ್ಲಿ ಚಿಕ್ಕಡೇರಿಯನ್ನು ಹಾಕಿಕೊಂಡು ಸುತ್ತಮುತ್ತಲ ಪ್ರದೇಶವನ್ನು ಆಳುತ್ತಿದ್ದನು. ಆದ್ದರಿಂದ ಚಿಕ್ಕಡೇರಿಯೇ ಮುಂದೆ ಚಿಗಟೇರಿಯಾಗಿದೆ" [೭]

೩. "ಚಿಗಟೇರಿ ಗ್ರಾಮದ ವಯೋವೃದ್ಧರಾದ ಸರ್ವಶ್ರೀ ವೀರಸಂಗಜ್ಜ, ಕಪ್ಪಿ ಚನ್ನಬಸಪ್ಪನವರು ಗ್ರಾಮದ ಬಗೆಗೆ ಹೇಳಿದ ಮಾತುಗಳಿವು. ಹಾಲ್ಗೊಳಲು ಗ್ರಾಮದ ಸೋದರರಿಬ್ಬರು ಈ ಸ್ಥಳಕ್ಕೆ ಧಾವಿಸಿದರು. ಅವರ ಹೆಸರು ಚಿಕ್ಕ ಮತ್ತು ಟರ್ ಎಂದು. ಅವರು ಕುರುಬ ಕುಲದವರು. ಈ ಸ್ಥಳಕ್ಕೆ ಹುಗ್ಗಿ ಹೊಯ್ದು ತಮ್ಮ ಹೆಸರಿನಿಂದಲೇ ಈ ಊರನ್ನು ಸ್ಥಾಪಿಸಿದರು. ಪಕ್ಕದಲ್ಲಿ ಒಂದು ಕೆರೆಯನ್ನು ಕಟ್ಟಿಸಿದರು. ಈ ಗ್ರಾಮಕ್ಕೆ ಚಿಕ್ಕ ಮತ್ತು ಟರ್‌ರ ಹೆಸರು ಉಂಟಾಯಿತು. ಕಾಲಕಳೆದಂತೆ ಚಿಕ್ಕಟರ್ ಎಂದಾಗಿರಬೇಕು. ಇವರ ಗುರುಗಳು ಡಣನಾಯಕ ಪುರದವರು. ಈ ಕುರುಬ ಸೋದರರಿಗೆ ಗುರುಗಳು ಲಿಂಗದೀಕ್ಷೆಯನ್ನು ಕೊಟ್ಟು ಅವರನ್ನು ಲಿಂಗಾಂಗಿಗಳನ್ನಾಗಿ ಮಾಡಿದರು. ಗುರುಗಳಿಗೆ ಇವರು ಸಾಕಷ್ಟು ಭೂಮಿಯನ್ನು ಕೊಟ್ಟರು" [೮]

ಈ ಎಲ್ಲ ಹಿನ್ನೆಲೆಯಲ್ಲಿ ಸಿಕ್ಕಿರುವ ಎರಡು ಶಾಸನಗಳಲ್ಲಿ 'ಚಿಕ್ಕಟೆ....' ಮತ್ತು 'ಚಿಗಟೇಜ' ಎಂದಿದೆ.

೨. ೨ ಭೌಗೋಳಿಕ ಪರಿಸರ

ಒಂದು ದೇಶ. ಪ್ರದೇಶ, ಪಟ್ಟಣ ಹಾಗೂ ಗ್ರಾಮಗಳ ಯಾವುದೇ ವಿಷಯವನ್ನು ತಿಳಿದುಕೊಳ್ಳುವುದಕ್ಕಿಂತ ಮೊದಲು ಅಲ್ಲಿನ ಭೌಗೋಳಿಕ ಸನ್ನಿವೇಶದ ವಿವರ ತಿಳಿದುಕೊಳ್ಳುವುದು ಮುಖ್ಯ. ಇಲ್ಲವಾದಲ್ಲಿ ಚರಿತ್ರೆ ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಒಂದು ಪ್ರದೇಶ ಜನಾಂಗದ ಜೀವನ ವಿಧಾನವನ್ನು ಈ ಭೌಗೋಳಿಕ ಲಕ್ಷಣಗಳು ರೂಪಿಸುತ್ತವೆ. ಈ ಅಂಶಗಳು ಸಂಸ್ಕೃತಿಯ ಬೆಳವಣಿಗೆಗೂ ಸಹ ಕಾರಣವಾಗುತ್ತವೆ.

ಚಿಗಟೇರಿಯು ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿರುವ ದಾವಣಗೆರೆ ಜಿಲ್ಲಾ (ಹಿಂದೆ ಬಳ್ಳಾರಿ ಜಿಲ್ಲಾ) ಹರಪನಹಳ್ಳಿ ತಾಲ್ಲೂಕಿನಲ್ಲಿದೆ. ಹರಪನಹಳ್ಳಿಯ ಪೂರ್ವ ದಿಕ್ಕಿಗೆ ಸುಮಾರು ೧೪ ಕಿ.ಮೀ. ಅಂತರದಲ್ಲಿದೆ. ಮತ್ತು ಹರಪನಹಳ್ಳಿ, ಕೊಟ್ಟೂರಿಗೆ ಸಂಚರಿಸುವ ಮಾರ್ಗಮಧ್ಯವಿರುವ ಕ್ರಾಸ್‌ನಿಂದ ಸುಮಾರು ೩.೮ ಕಿ.ಮೀ. ದೂರದಲ್ಲಿರುವ ಗ್ರಾಮವಾಗಿದೆ.

"ಚಿಗಟೇರಿ ಗ್ರಾಮದ ಒಟ್ಟು ವಿಸ್ತೀರ್ಣ ೮೪೬೪,೮೩ ಎಕರೆ ಇದೆ. ಇದರಲ್ಲಿ ಗ್ರಾಮಸತ್ತ ೩೧.೪೩ ಎಕರೆ. ಖುಷ್ಕಿ ೩೪೫೫ ಎಕರೆ. ನೀರಾವರಿ ೧೮೦೦ ಎಕರೆ. ಕೆರೆಗೆ ೨೮.೬೩. ಎಕರೆ. ಹಳ್ಳ, ಬೀಳು ರಸ್ತೆ ಮುಂತಾದವಕ್ಕೆ ೬೨.೪೦ ಎಕರೆ ಭೂಮಿ ಈ ರೀತಿಯಾಗಿ ಹಂಚಿಹೋಗಿದೆ."[೧೦]

ಗ್ರಾಮದ ಸುತ್ತಮುತ್ತ ಅಷ್ಟೇನೂ ದಟ್ಟವಲ್ಲದ ಅರಣ್ಯ ಪ್ರದೇಶವೂ ಇದೆ. ಮಳೆಯ ಪ್ರಮಾಣವು ಕಡಿಮೆ ಇರುವುದರಿಂದ ನೀರಿನ ಸೌಲಭ್ಯಕ್ಕಾಗಿ ಈ ಗ್ರಾಮದಲ್ಲಿ ಶಿವನಯ್ಯನ ಕಾಲದಲ್ಲಿ ಮತ್ತು ಅದಕ್ಕೂ ಮೊದಲು ಎರಡು ಕೆರೆಗಳನ್ನು ಕಟ್ಟಿಸಿದ್ದಾರೆ.

ಮಣ್ಣಿನ ಸ್ವರೂಪದ ಬಗ್ಗೆ ಹೇಳುವುದಾದರೆ, ವ್ಯವಸಾಯಕ್ಕೆ ಯೋಗ್ಯವಾದ ಕೆಂಪು ಜೇಡಿ ಮತ್ತು ಕಪ್ಪುಜೇಡಿಮಣ್ಣಿನ ಜೊತೆಗೆ ಮಸಾರಿ ಭೂಮಿಯು ಇದೆ. ಮಳೆಯ ನೆರವಿನಿಂದ ರೈತರು ಹೆಚ್ಚಾಗಿ ಅವಲಂಬಿತರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿ ಭೂಮಿ ಅಂತರದಲ್ಲಿ ನೀರಿನ ಮಟ್ಟ ಇಳಿದು ಹೋಗಿದೆ. ತೋಡಿದ ಬಾವಿಗಳಲ್ಲಿ ನೀರೆ ಇಲ್ಲ. ಹೆಚ್ಚಾಗಿ ಕೊಳವೆ ಬಾವಿಗಳಿಂದ ಮಾತ್ರ ನೀರು ಪಡೆದು ನೀರಾವರಿ ಮಾಡಿಕೊಂಡಿರುವುದು ಕಂಡುಬರುತ್ತದೆ. ಇದರಲ್ಲಿಯೇ ರೈತರು ಈರುಳ್ಳಿಯನ್ನು ಯತೇಚ್ಛವಾಗಿ ಬೆಳೆಯುತ್ತಾರೆ. ಅಲ್ಲದೆ ಜೋಳ. ಸಜ್ಜೆ, ರಾಗಿ. ಶೇಂಗಾ, ಸೂರ್ಯಕಾಂತಿ, ನವಣೆ ಜ.ಹತ್ತಿ ಮುಂತಾದ ದವಸ ಧಾನ್ಯಗಳನ್ನು ಬೆಳೆಯುತ್ತಾರೆ. ತೋಟಗಾರಿಕೆಯ ಬೆಳೆಗಳಿಗೆ ಯೋಗ್ಯ ಮಣ್ಣಿಗೆ ಅನುಕೂಲವಿದೆ.

ಚಿಗಟೇರಿಯ ಒಂದು ಭಾಗದಲ್ಲಿ(ಸಾಲಿನಲ್ಲಿ) ಗುಡ್ಡಗಳಿವೆ. ಆ ಗುಡ್ಡಗಳಿಗೆ ಒಂದೊಂದು ಹೆಸರು ಇವೆ. ಕರಡಿಗುಡ್ಡ, ಈರಣ್ಣನಗುಡ್ಡ ಮತ್ತು ಬಿದುರುಗುಡ್ಡ ಎಂದು ಕರೆಯುತ್ತಾರೆ. ಈರಣ್ಣನ ಗುಡ್ಡಕ್ಕೆ 'ಜಾಜಿಕಲ್ಲು' ಗುಡ್ಡ ಎಂದು ಕರೆಯುತ್ತಾರೆ. ಈ ಗುಡ್ಡದಲ್ಲಿ ಮ್ಯಾಂಗನೀಸ್ ಮತ್ತು ಮೆಕ್ಕಲು ಮಣ್ಣಿನ ಚಿನ್ನದ ಅದಿರು ಗುಡ್ಡದ ದಕ್ಷಿಣ ಮತ್ತು ಆಗ್ನೇಯದಲ್ಲಿ ಮತ್ತು ಕೊಂಗನ ಹೊಸೂರು ಬಳಿ ದೊರೆಯುತ್ತದೆ. "ಬ್ರೂಸ್ ಪೇಟೆಯ ಒಬ್ಬ ವಿಜ್ಞಾನಿಯ ಪ್ರಕಾರ ಗುಡ್ಡದ ಈಶಾನ್ಯ ಇಳಿಜಾರಿನಲ್ಲಿ ಹರಿಯುವ ಕೊಂಗನ ಹೊಸುರು ನಾಲೆ ಚಿನ್ನಕ್ಕೆ ಹೆಚ್ಚು ಉಪಯುಕ್ತ' ಎಂದು ಅಭಿಪ್ರಾಯ ಪಟ್ಟಿದ್ದಾರೆ."[೧೧] ಈ ಗುಡ್ಡದ ಸಾಲೆ ಚಿಗಟೇರಿ ಗ್ರಾಮದ ಕೊರಳಿಗೆ ಸುಂದರವಾದ ಹಸಿರು ತೋರಣವನ್ನು ಹಾಕಿದಂತೆ ಭಾಸವಾಗುತ್ತವೆ.

ಜಾನಪದ ಕಲೆಗಳು ಪ್ರಾಚೀನ ಕಾಲದಿಂದಲೂ ಈ ಗ್ರಾಮದಲ್ಲಿ ಬೆಳೆದು ಬಂದಿವೆ. ಈ ಕಲೆಗಳನ್ನು ಹಿಂದುಳಿದ ವರ್ಗಗಳಲ್ಲಿ ಕಾಣುತ್ತೇವೆ. ಈ ಗ್ರಾಮದಲ್ಲಿ ಜಾನಪದ ವಿದ್ವಾಂಸರನ್ನು ಮತ್ತು ಹಾಡುಗಾರರನ್ನು, ಕಲೆಗಾರರನ್ನು ಕಾಣುತ್ತೇವೆ. ಈ ಗ್ರಾಮದ ಜನರು ಎಲ್ಲಾ ದೃಷ್ಟಿಯಿಂದ ಹಿಂದುಳಿದವರಾದರೂ ಅವರ ಬದುಕಿನ ರೀತಿ ನೀತಿಗಳು, ಆದರ್ಶ ಮೌಲ್ಯಗಳು ಯಾರಿಗೂ ಕಡಿಮೆಯಿಲ್ಲದಂತೆ ಬೆಳೆದು ಬಂದಿವೆ. ಸಾಮಾನ್ಯ ಲಕ್ಷಣಗಳಾದ ದಾರಿದ್ರ್ಯ ಮತ್ತು ಮೌಢ್ಯತೆಗಳು ಈ ಗ್ರಾಮದಲ್ಲಿಯೂ ಗೋಚರಿಸುತ್ತಿರುವುದನ್ನು ಕಾಣುತ್ತೇವೆ.

ಜಾಗತೀಕರಣ ಪ್ರಭಾವಗಳು ಎಲ್ಲಾ ಕಡೆಗಳಂತೆ ಈ ಗ್ರಾಮದಲ್ಲಿ ಕೂಡ ಆಗಿವೆ. ಈ ಗ್ರಾಮದಲ್ಲಿ ಪ್ರತಿಭಾನ್ವಿತ ವ್ಯಕ್ತಿಗಳಿರುವುದು ಕಂಡುಬರುತ್ತದೆ. ಹಾಗೂ ರಾಜ್ಯ ಮತ್ತು ವಿದೇಶಿಯ ಮಟ್ಟದಲ್ಲಿ ಇವರು ಬೆಳೆದವರಾಗಿದ್ದಾರೆ. ಹಿಂದುಳಿದ ವರ್ಗಗಳಲ್ಲಿ ಬಹಳಷ್ಟು ಸುಧಾರಣೆಗಳಾಗಬೇಕಾಗಿದೆ. ಜೊತೆಯಲ್ಲಿಯೇ ಇಂದಿನ ಜಾನಪದೀಯ ಸತ್ವಗಳು ಗ್ರಾಮೀಣ ವ್ಯವಸ್ಥೆಯಲ್ಲಿ ಕಣ್ಮರೆಯಾಗುತ್ತಿವೆ. ಶಿಷ್ಟ ಸಂಸ್ಕೃತಿಯ ಪ್ರಭಾವವು ಉಳಿದ ಸಂಸ್ಕೃತಿಗಳ ಮೇಲೆ ಪರಿಣಾಮಕಾರಿಯಾಗುತ್ತಿದೆ. ಭೂಮಿಗಳನ್ನು ಹೊಂದಿದ ಹಲವು ಬೇಸಾಯಗಾರರಿದ್ದಾರೆ. ಇಲ್ಲಿನ ಜನರು ಸರ್ಕಾರಿ ಸೌಲಭ್ಯಗಳನ್ನು ಅಲ್ಪ ಸ್ವಲ್ಪವಾಗಿ ಪಡೆದುಕೊಳ್ಳುತ್ತಿದ್ದಾರೆ.

ಈ ಗ್ರಾಮದ ಜನರ ಸಂಸ್ಕೃತಿಯು ಬಹಳ ಪ್ರಾಚೀನ ಕಾಲದಿಂದ ಬೆಳೆದು ಬಂದಿರುವುದಾಗಿದೆ. ಬುಡಕಟ್ಟು ಜನಾಂಗದವರ ಪಳೆಯುಳಿಕೆಗಳಾದ ಗಾಳಿ ದುರುಗಮ್ಮ, ಊರಮ್ಮ, ದಂಡಿದುರುಗಮ್ಮ, ಬನಶಂಕರಿ, ಬಳ್ಳಾರಿ ದುರುಗಮ್ಮ ಮುಂತಾದ ಗ್ರಾಮದೇವತೆಗಳ ಆರಾಧನೆಗಳು ಕಂಡುಬರುತ್ತವೆ. ಹಿಂದುಳಿದವರ ಧರ್ಮಾಚರಣೆ ಇಂದೂ ಗ್ರಾಮದೇವತೆಗಳ ಸುತ್ತ ಬೆಳೆದು ಬಂದಿದೆ. ಈ ಸಂಸ್ಕೃತಿಯೊಡನೆ ಚರಿತ್ರೆಯ ಕಾಲದ ಪ್ರಭಾವಗಳಾದ ಶಿವನ ಆರಾಧನೆ ಪ್ರಧಾನವಾಗಿ ಉಳಿದು ಬಂದಿದೆ. ವೈಷ್ಣವ ಮತದ ಪ್ರಭಾವ ಸ್ವಲ್ಪ ಕಡಿಮೆ ಇದೆ. ವೈಷ್ಣವ ಅಂಶವೆನ್ನಬಹುದಾದ ಆಂಜನೇಯನ ಗುಡಿಗಳು ಈ ಗ್ರಾಮದಲ್ಲಿ ಕಂಡುಬರುತ್ತವೆ. ಇದರ ಜೊತೆಗೆ ಕೃಷ್ಣ, ನಾರಪ್ಪ, ಸಾವಕ್ಕ (ಸತ್ಯಭಾಮ) ಇವರೆಲ್ಲರೂ ವೈಷ್ಣವ ಪಂಥದವರೆಂದು ತಿಳಿದು ಬರುತ್ತದೆ. ಈ ಎಲ್ಲ ದೇವರುಗಳಿಗೆ ಸಾಧು ವೀರಶೈವರೇ ನಡೆದುಕೊಳ್ಳುತ್ತಿದ್ದು ಅವರ ಆಚರಣೆಗಳೇ ಪ್ರಧಾನವಾಗಿರುತ್ತವೆ. ಇವರೊಂದಿಗೆ ನಾಯಕ ಜನಾಂಗದವರು ಪ್ರಮುಖರಾಗಿರುತ್ತಾರೆ.

'ಶಿವನಯ್ಯನ ಕೆರೆ'ಯ ಕಥೆ

ಚಿಗಟೇರಿ ಗ್ರಾಮವನ್ನು ಕೆಲವು ದಿವಸವಾದರು ಶಿವನಪ್ಪನಾಯಕ ಆಳಿದ್ದಾನೆ. ಅವನ ಕಾಲದಲ್ಲಿ ಒಂದು ಕೆರೆಯನ್ನು ಮತ್ತು ಊರೊಳಗೆ ಒಂದು ಬಾವಿಯನ್ನು ಕಟ್ಟಿಸಿದ್ದಾನೆ. ಈಗ ಎರಡರಲ್ಲೂ ನೀರಿನ ಶೇಖರಣೆಯಿಲ್ಲ ಇದ್ದರು ಕಡಿಮೆ. ಮೈದೂರು ಹಳ್ಳ ಮತ್ತು ಚಿಕ್ಕೇರಿ ಹಳ್ಳಗಳು ಗ್ರಾಮವನ್ನು ಬಳಸಿಕೊಂಡು ಹರಿದಿವೆ. ಕೆರೆಯಲ್ಲಿ ನೀರು ಶೇಖರಣೆಯಾಗದಿರುವ ಬಗ್ಗೆ ೮೦ ವರ್ಷದ ಹೊನ್ನಜ್ಜಿ, ಶಿವನಯ್ಯ ಮತ್ತು ತಂಗಿಯಾದ ಗಂಗಿ ಹೊಲಕ್ಕೆ ಹೋಗಿರುತ್ತಾರೆ. ಹಿಂದಿನಿಂದ ತಾಯಿಯು ಬುತ್ತಿಯನ್ನು ತೆಗೆದುಕೊಂಡು ಹೋದಾಗ ಶಿವನಯ್ಯನನ್ನು ಗಂಗಿ ಎಲ್ಲಿ ಎಂದು ತಾಯಿ ಕೇಳಿದಾಗ ಶಿವನಯ್ಯ ಅದೋ ನನ್ನ ಹಿಂದೆ ನಾಯಿ ಬಂದ್ಹಾಂಗ ಬರುತಾಳ ಎಂದನು. ಆಗ ಕೋಪಗೊಂಡ ಗಂಗೆ ಹಾಗೆಯೇ ಹಿಂದಕ್ಕೆ ತಿರುಗಿ ಬೇರೆ ಕಡೆ ಹೋದಳು. ಆದ್ದರಿಂದ ಶಿವನಯ್ಯನ ಕೆರೆಯಲ್ಲಿ ನೀರು ಇರುವುದಿಲ್ಲ ಎಂಬ ಐತಿಹ್ಯವನ್ನು ಹೊನ್ನಜ್ಜಿ ಪ್ರಸ್ತಾಪ ಮಾಡುತ್ತಾಳೆ.

೨.೩. ಚಾರಿತ್ರಿಕ ಹಿನ್ನೆಲೆ

ಚಾರಿತ್ರಿಕ ಎಂದರೆ ಕೇವಲ ಒಂದು ಊರಿನ ಚಾರಿತ್ರಿಕ ಅಂಶಗಳು ಮಾತ್ರ ಕಂಡುಬರುವುದಿಲ್ಲ. ಆ ಜಿಲ್ಲೆಯ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಗಮನಿಸುವುದು ಮುಖ್ಯ. ಚಿಗಟೇರಿ ಪ್ರದೇಶವು ಬಳ್ಳಾರಿ ಜಿಲ್ಲೆಯಲ್ಲಿದ್ದು, ಪ್ರಸ್ತುತ ದಾವಣಗೆರೆ

ಜಿಲ್ಲಾ ಹರಪನಹಳ್ಳಿ ತಾಲ್ಲೂಕಿನಲ್ಲಿದೆ. ಚಿಗಟೇರಿ ಗ್ರಾಮವು ಹಿಂದಿನಿಂದಲೂ ಗ್ರಾಮೀಣ ಹಳ್ಳಿಗಳಿಗೆ ಹೋಬಳಿಯ ಗ್ರಾಮವಾಗಿದೆ. ಹಿಂದೆ ಈ ಪ್ರದೇಶವು ಅನೇಕ ಅರಸರುಗಳ ಆಳ್ವಿಕೆಗೆ ಒಳಪಟ್ಟಿದೆ.

ಮೌರ್ಯರ ಕಾಲದಲ್ಲಿ ಬಳ್ಳಾರಿ ಪ್ರದೇಶ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು. ಮೌರ್ಯರ ಪ್ರಮುಖ ದೊರೆಯಾದ ಅಶೋಕನ ಶಾಸನಗಳು ಉದಯಗೊಳಂ, ನಿಟ್ಟೂರುಗಳಲ್ಲಿ ದೊರೆತಿವೆ. ಎರಡು ಶಾಸನಗಳು ಬೌದ್ಧ ಧರ್ಮವನ್ನು ಸಾರುವ ಶಾಸನಗಳಾಗಿವೆ. ಕೋಳೂರಿನ ಕ್ರಿ.ಶ.೧೧೪೭ರ ಶಾಸನವು ನಂದರು, ಮೌರ್ಯರು ಮತ್ತು ಗುಪ್ತರು ಆಳ್ವಿಕೆ ನಡೆಸಿದರೆಂದು ತಿಳಿಸುತ್ತದೆ. ಇದರಿಂದ ಬಳ್ಳಾರಿ ಪ್ರದೇಶಗಳು ಉತ್ತರ ಭಾರತದ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿಯುತ್ತದೆ. ಮೌರ್ಯರ ಸಾಮ್ರಾಜ್ಯ ಪತನದ ನಂತರ ಶಾತವಾಹನರ ಕಾಲದಲ್ಲಿ ಬಳ್ಳಾರಿ ಪ್ರದೇಶ ಅವರ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದು ಬಳ್ಳಾರಿ ಜಿಲ್ಲೆಯ "ಪುಲುಮಯಿ" ಶಾಸನದಿಂದ ಗೋಚರವಾಗುತ್ತದೆ.

ಕನ್ನಡದ ಪ್ರಥಮ ರಾಜವಂಶವೆಂದು ಪ್ರಸಿದ್ಧಿ ಪಡೆದ ಕದಂಬರು ಬಳ್ಳಾರಿ ಪ್ರದೇಶಗಳಲ್ಲಿ ಆಳ್ವಿಕೆ ಮಾಡಿದ್ದಾರೆ. ಇವರ ಬಗೆಗೆ ತಿಳಿಸುವ ಶಾಸನಗಳೆಂದರೆ ಕ್ರಿ.ಶ. ೯೮೭ ಮತ್ತು ಕ್ರಿ.ಶ.೧೨೧೨ರ ಬಾಗಳಿ ಕ್ರಿ.ಶ.೧೧೦೬ರ ಅಂಬಳಿ ಶಾಸನಗಳಾಗಿವೆ. ಆಳ್ವಿಕೆ ನಡೆಸಿದವರೆಂದರೆ ಆಯ್ತುವರ್ಮ, ಘಟ್ಟರಸ, ಭೊಲುದೇವರಸ, ಚೆಲಿ ದೇವರಸ ಮತ್ತು ನಾಚಿದೇವರೆಂಬುದು ತಿಳಿದುಬರುತ್ತದೆ.

ಬನವಾಸಿ ಕದಂಬರು ತಮ್ಮ ಸಾಮ್ರಾಜ್ಯವನ್ನು ಪಶ್ಚಿಮ ಕಡಲಿನಿಂದ ಬಳ್ಳಾರಿ ಜಿಲ್ಲೆಯ ಉಚ್ಚಂಗಿ ದುರ್ಗದವರೆಗೆ ವಿಸ್ತರಿಸಿದ್ದರು. ಉಚ್ಚಂಗಿದುರ್ಗ ಪೂರ್ವಶಾಖೆ ಕದಂಬರ ರಾಜ್ಯದ ಮುಖ್ಯ ಪಟ್ಟಣವಾಗಿತ್ತು. ಈಗಿನ ಕಾರ್ತಿಕೇಯ ಸ್ವಾಮಿ ದೇವಾಲಯ ಇರುವ ಸಂಡೂರಿನ ಪ್ರದೇಶವೂ ಕದಂಬರ ಕಾಲದಲ್ಲಿ ಪ್ರಮುಖವಾಗಿತ್ತು.

ಪಲ್ಲವರ ಬಗೆಗೆ ತಿಳಿಯಲು ಅನೇಕ ಶಾಸನಗಳು ದೊರಕಿವೆ. ಅವುಗಳಲ್ಲಿ ಕ್ರಿ.ಶ. ೧೦೧೮ ಮತ್ತು ೧೦೬೮ ಬಾಗಳಿ ೧೦೪೫ರ ಹಾವಿನಹಾಳ ಮತ್ತು ಮೋರಿಗೆರೆ ಕ್ರಿ.ಶ.೧೦೪೭ರ ಕೋಗಳಿ ಕ್ರಿ.ಶ.೧೦೫೦ರ ಶಿರಸ್ತಹಳ್ಳಿ ಶಾಸನಗಳು ಆಳಿದ ದೊರೆಗಳೆಂದರೆ ನೊಳಂಬ ಪಲ್ಲವ ಪೆರ್ಮಾಡಿ, ಜಯಸಿಂಹ, ಜಗದೇಕ ಮಲ್ಲ, ತ್ರೈಲೋಕಮಲ್ಲ, ನೊಳಂಬ ಘಟ್ಟಿದೇವ, ಪಲ್ಲವ ಪೆರ್ಮಾಡಿ, ಸಿಂಘದೇವ ಮತ್ತು ಪೆರ್ಮಾಡಿ ಜಯಸಿಂಹ ಇವರೆಲ್ಲರು ಮೇಲಿನ ಎಲ್ಲಾ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದಾರೆಂಬುದು ತಿಳಿದುಬರುತ್ತದೆ.

ಪಾಂಡ್ಯರ ಕಾಲದಲ್ಲಿ ದೊರೆತ ಶಾಸನಗಳು ಕ್ರಿ.ಶ.೧೦೭೯ರ ನೀಲಗುಂದ ಮತ್ತು ಕ್ರಿ.ಶ.೧೧೪೮ರಲ್ಲಿ ಉರುವಾಯಿ ಶಾಸನದ ಪ್ರಕಾರ ದೊರೆವಾಡಿ ನಾಡಿನ ವಿಚಾರವು ತಿಳಿದುಬರುತ್ತದೆ. ಸಂಡೂರು ಶ್ರೀ ಕಾರ್ತಿಕೇಯ ಸ್ವಾಮಿ ದೇವಾಲಯದ ಪ್ರದೇಶಕ್ಕೆ 'ದೋರವಾಡಿ' ನಾಡೆಂದು ಕರೆಯಲಾಗಿದೆ. ತ್ರಿಭುವನಮಲ್ಲ, ರಾಯಪಾಂಡ್ಯ, ಪಾಂಡ್ಯದೇವರು, ಮಲ್ಲಿಕಾ ಪಾಂಡ್ಯII, ಜಗದೇಕ ಮಲ್ಲವೀರ ಪಾಂಡ್ಯ ಮತ್ತು ಜಯ ಪಾಂಡ್ಯರ ಶಾಸನಗಳು ದೊರೆಕಿವೆ.

ತಲಕಾಡಿನ ಗಂಗರು ಬಳ್ಳಾರಿ ಜಿಲ್ಲೆಯ ಪ್ರದೇಶಗಳನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದರು. ಕ್ರಿ.ಶ. ೨೫೦ ರಿಂದ ೨೮೮ರವರೆಗೆ ದುರ್ವಿನೀತ ಮತ್ತು ಕ್ರಿ.ಶ. ೫೨೯ ರಿಂದ ೫೩೯ರವರೆಗೆ ಶ್ರೀ ಪುರುಷ ಗಂಗರ ರಾಜ್ಯವನ್ನು ಹಗರಿ ನದಿಯವರೆಗೆ ವಿಸ್ತರಿಸಿದರು. ಸಂಡೂರಿನ ಕಾರ್ತಿಕೇಯ ಸ್ವಾಮಿ ದೇವಾಲಯ ರಾಷ್ಟ್ರಕೂಟರ ೨ನೇ ಕೃಷ್ಣನ ಬೇಡಿಕೆಯ ಮೇರೆಗೆ ಅವನ ಸಾಮಂತ ಅರಸ ಕನ್ನನು ಕ್ರಿ.ಶ.೮೯೩ರಲ್ಲಿ ದತ್ತುಕೊಟ್ಟಿದ್ದು. ಸಂಡೂರು ಪಾರ್ವತಿ ದೇವಾಲಯದ ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. ೧೦೫೫ರ ಕೋಗಳಿ ಮತ್ತು ಕ್ರಿ.ಶ. ೧೦೮೭ರ ಅಂಬಳಿ ಶಾಸನಗಳು ಈ ಎರಡೂ ಶಾಸನಗಳು ದುರ್ವಿನೀತನ ಬಗೆಗೆ ತಿಳಿಸುತ್ತವೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಬಳ್ಳಾರಿ ಪ್ರದೇಶವು ದ್ವಿತೀಯ ಪುಲಿಕೇಶಿಯ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದು ಕುರುಗೋಡು ಶಾಸನದಿಂದ ತಿಳಿಯುತ್ತದೆ. ಬಾದಾಮಿ ಚಾಲುಕ್ಯರ ಆಳ್ವಿಕೆಯ ನಂತರ ರಾಷ್ಟ್ರಕೂಟರು ಆಳ್ವಿಕೆ ನಡೆಸುತ್ತಿದ್ದರು. ಕ್ರಿ.ಶ.೯೪೪-೯೫ರ ಬಾಗಳಿ ಶ್ರೀ ಕಲ್ಲೇಶ್ವರ ದೇವಾಲಯದ ಒಂದು ಶಾಸನದ ಪ್ರಕಾರ ಚಾಲುಕ್ಯರ ಸಾಮಂತ ಅರಸ ರಾಷ್ಟ್ರಕೂಟರ ಮೂರನೇ ಕೃಷ್ಣ ಕ್ರಿ.ಶ.೯೩೯ ರಿಂದ ಕ್ರಿ.ಶ. ೯೬೭ರವರೆಗೆ ಕೋಗಳಿ ೫೦೦ಕ್ಕೆ ಒಡೆಯನಾಗಿದ್ದನು. ಈ ಕೋಗಳಿ ಪ್ರದೇಶ ಅಂದಾಜು ಹರಪನಹಳ್ಳಿ ಮತ್ತು ಹಡಗಲಿ ತಾಲ್ಲೂಕು ಪ್ರದೇಶವನ್ನು ಒಳಗೊಂಡಿತ್ತು. ಕ್ರಿ.ಶ.೯೭೨-೭೩ ಭೂತುಗದೇವನು ಬೊಟ್ಟಿಗನ ಸಾಮಂತನಾಗಿ ಕೋಗಳಿಗೆ ರಾಜ್ಯಪಾಲನಾಗಿದ್ದನು.

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಬೆರಸ್ತಹಳ್ಳಿ ಗ್ರಾಮದ ಶಂಕರಸ್ವಾಮಿ ಗುಡಿಯ ಶಾಸನದ ಪ್ರಕಾರ ಕ್ರಿ.ಶ.೯೩೧ ರಿಂದ ೯೩೨ರಲ್ಲಿ ಒಬ್ಬ ಯುದ್ಧ ಭಟಪಾರ್ಡಿ ನೊಳಂಬ ಬೇರೆಯವರ ಅಕ್ರಮನಾದಿ ವಿರುದ್ಧ ಹೋರಾಡಿ ಮಡಿದನು. ಅವನ ಕುಟುಂಬಕ್ಕೆ ಕೆಲ ನೀರಾವರಿ ಮತ್ತು ಒಣ ಭೂಮಿಯನ್ನು ಅಯ್ಯಪ್ಪ ದೇವನು ಕೊಟ್ಟನೆಂದು ತಿಳಿದುಬರುತ್ತದೆ. ಈ ಪ್ರದೇಶವೆಲ್ಲ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿತ್ತು.

ಕಲ್ಯಾಣಿ ಚಾಲುಕ್ಯರ ಎರಡನೆ ತೈಲಪನು ಚಾಲುಕ್ಯರ ಆಳ್ವಿಕೆಯ ಸಾರ್ವ ಭೌಮತ್ವವನ್ನು ದಕ್ಷಿಣ ಭಾರತದಲ್ಲಿ ಪುನರುಜ್ಜೀವನಗೊಳಿಸಿದನು. ೨ನೇ ತೈಲಪ ಶಾಸನಗಳು ಜಿಲ್ಲೆಯ ಬಾಗಳಿ ಮತ್ತು ಕೋಗಳಿ ದೇವಾಲಯ ಮತ್ತು ಬಸದಿಗಳಲ್ಲಿ ದೊರಕುತ್ತವೆ. ಪ್ರಥಮ ಸೋಮೇಶ್ವರ ಚಕ್ರವರ್ತಿಯ ಪುತ್ರನಾದ ಜಯಸಿಂಹನು ಕ್ರಿ.ಶ. ೧೦೭೨ರಲ್ಲಿ ಕೋಗಳಿ ಬಲ್ಲಕುಂದೆ ನೊಳಂಬವಾಡಿಗಳ ಆಡಳಿತವನ್ನು ಮಾಡಿದಂತೆ ತಿಳಿಯುತ್ತದೆ. ಅಲ್ಲದೆ ೬ನೇ ವಿಕ್ರಮಾದಿತ್ಯನ ಹನ್ನೆರಡು ಶಾಸನಗಳು ಬಾಗಳಿಯಲ್ಲಿ ದೊರೆಯುತ್ತವೆ. ಚಿಗಟೇರಿಯಲ್ಲಿಯ ಸೂರ್ಯನಾರಾಯಣ, ನಾರಪ್ಪ, ರಾಮಲಿಂಗೇಶ್ವರ ದೇವಾಲಯಗಳು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿಯೇ ಇರುವುದು ಕಂಡುಬರುತ್ತವೆ ಮತ್ತು ಈ ಪ್ರದೇಶದಲ್ಲಿರುವ ದೇವಾಲಯಗಳ ಸ್ವರೂಪದಿಂದ ಚಿಗಟೇರಿಯ ಸುತ್ತಮುತ್ತ ಕಲ್ಯಾಣಿ ಚಾಲುಕ್ಯರು ಆಳ್ವಿಕೆ ನಡೆಸಿ, ದೇವಾಲಯಗಳನ್ನು ನಿರ್ಮಿಸಿದ್ದಾರೆ ಎನ್ನಬಹುದು.

ಹೊಯ್ಸಳರ ಕಾಲದಲ್ಲಿ ಚಿಗಟೇರಿ ಗ್ರಾಮವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿರಬೇಕು, ಇಲ್ಲವೆ ಬಾಗಳಿಗೆ ಸಮೀಪವಾದ ಪ್ರದೇಶವಾದ್ದರಿಂದ ಅಲ್ಲಿಯ ರಾಜ ಇಲ್ಲಿ ಆಳ್ವಿಕೆ ನಡೆಸಿರಬೇಕು, ಇಲ್ಲವೆ ಚಿಗಟೇರಿ ಪ್ರದೇಶದಲ್ಲಿ ಯುದ್ಧ ನಡೆದಿರಬೇಕು.

ಆದ್ದರಿಂದಲೇ ಚಿಗಟೇರಿ ಪ್ರದೇಶದಲ್ಲಿ ಹೊಯ್ಸಳರ ವೀರ ಬಲ್ಲಾಳನ ಕಾಲದ ಶಾಸನದಲ್ಲಿ ದೊರೆಯುತ್ತದೆ ಹಾಗೂ ವಿಜಯ ನಗರಕ್ಕೆ ಹತ್ತಿರದ ಪ್ರದೇಶವಾದ್ದರಿಂದ ಅವರ ಆಳ್ವಿಕೆಗೂ ಒಳಪಟ್ಟಿರುವ ಸಾಧ್ಯತೆಗಳಿವೆ. ಯಾಕೆಂದರೆ ಶ್ರೀ ಕೃಷ್ಣದೇವರಾಯನ ಕಾಲದ ಶಾಸನವು ದೊರೆಯುತ್ತವೆ ಮತ್ತು ಚಿಗಟೇರಿ ಗ್ರಾಮದಲ್ಲಿರುವ ನಾರಪ್ಪನ ದೇವಾಲಯದ ಮುಂದಿರುವ ದೀಪ ಕಂಬದಲ್ಲಿ ಕೃಷ್ಣದೇವರಾಯನ ಕಾಲದ ಅಕ್ಷರವನ್ನು ಕಾಣಬಹುದು ಮತ್ತು ದೇವಸ್ಥಾನದ ಹೊರ ಭಾಗವನ್ನು ವೀಕ್ಷಿಸಿದಾಗ ಸಂಪೂರ್ಣ ವೈಷ್ಣವ ಧರ್ಮದ ದೇವಾಲಯ ಎಂದು ಹೇಳುವುದರಲ್ಲಿ ಯಾವುದೇ ಸಂಶಯವಿಲ್ಲ.

೧೫ನೇ ಮತ್ತು ೧೬ನೇ ಶತಮಾನದಲ್ಲಿ ಚಿಗಟೇರಿ ಗ್ರಾಮವು ಹರಪನಹಳ್ಳಿ ಪಾಳೆಗಾರರ ಸಾಮಂತನಾಗಿರುವ ಶಿವನಪ್ಪ ನಾಯಕನು ಕೆಲವು ದಿನಗಳವರೆಗೆ ಆಳ್ವಿಕೆ ನಡೆಸಿ ಅನೇಕ ಸುಧಾರಣೆಯ ಕೆಲಸಗಳನ್ನು ಮಾಡಿದನು. ಬೆಣ್ಣಿಹಳ್ಳಿ, ಮುತ್ತಿಗೆ ಗ್ರಾಮಗಳನ್ನು ಗಮನಿಸಿದಾಗ ಕಲ್ಯಾಣಿ ಚಾಲುಕ್ಯರು ಆಳ್ವಿಕೆ ನಡೆಸಿದ್ದಾರೆಂಬುದು ಗೊತ್ತಾಗುತ್ತದೆ. ಈ ಎಲ್ಲ ರಾಜವಂಶಗಳ ಆಳ್ವಿಕೆಯಲ್ಲಿ ಚಿಗಟೇರಿ ಗ್ರಾಮವು ಅವರ ಆಳ್ವಿಕೆಗೆ ಸಂಬಂಧಿಸಿದ್ದಿರಬಹುದು.

೨. ೪ ಸಾಮಾಜಿಕ ಹಿನ್ನೆಲೆ

ಚಿಗಟೇರಿ ಗ್ರಾಮದಲ್ಲಿ ಎಲ್ಲ ವರ್ಗದವರು ವಾಸವಾಗಿದ್ದಾರೆ ಮತ್ತು ಅನ್ಯೋನ್ಯತೆಯಿಂದ ಜೀವನ ನಡೆಸುತ್ತಾರೆ. ಇಲ್ಲಿ ಹೆಚ್ಚಾಗಿ ಶೈವ ಧರ್ಮದವರೇ ಇದ್ದಾರೆ. ಗ್ರಾಮದಲ್ಲಿ ಅಂಗನವಾಡಿ, ಸರ್ಕಾರಿ ಶಾಲೆಗಳು, ಸಾರ್ವಜನಿಕ ಗ್ರಂಥಾಲಯ, ಸಾರ್ವಜನಿಕ ಆರೋಗ್ಯ ಕೇಂದ್ರ, ಪಶು ಚಿಕಿತ್ಸಾಲಯ, ವಿದ್ಯಾರ್ಥಿನಿಲಯ, ಕೃಷಿ ಕೇಂದ್ರ, ರೇಷ್ಮೆ ಇಲಾಖೆ, ನಾಡ ಕಛೇರಿ, ತುಂಗಭದ್ರ ಗ್ರಾಮೀಣ ಬ್ಯಾಂಕ್, ಸ್ವಸಹಾಯ ಸಂಘಗಳು, ವ್ಯವಸಾಯ ಸಹಕಾರ ಬ್ಯಾಂಕ್, ನ್ಯಾಯಬೆಲೆ ಅಂಗಡಿ ಹಿಟ್ಟಿನ ಗಿರಣಿಗಳ ಜೊತೆಗೆ ಅನೇಕ ಸರ್ಕಾರಿ ಕಛೇರಿಗಳು ಕಂಡುಬರುತ್ತವೆ. ಈ ಎಲ್ಲಾ ಅಂಗಡಿ ಮತ್ತು ಕಛೇರಿಗಳಿಂದ ಜನರು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ. ಈ ಗ್ರಾಮದಲ್ಲಿ ಮೇಲು ಕೀಳು ಎಂಬ ಭಾವನೆಯು ಸಹ ಕಂಡುಬರುತ್ತದೆ. ಪ್ರತಿಯೊಂದು ಜಾತಿಗಳಿಗೂ ಅವರದೇ ಆದ ದೈವಗಳಿವೆ. ಆದರೆ ಜಾತ್ರೆ, ಹಬ್ಬ, ಉತ್ಸವಗಳ ಸಂದರ್ಭಗಳಲ್ಲಿ ಎಲ್ಲಾ ವರ್ಗದವರು ಸೇರಿ ಭಾಗವಹಿಸುವ ಮೂಲಕ ಕಾರ್ಯ ನೆರವೇರಿಸುತ್ತಾರೆ. ಇಲ್ಲಿ ಮುಖ್ಯವಾಗಿ ಏಕತೆಯನ್ನು ಕಾಣಬಹುದಾಗಿದೆ ಮತ್ತು ಮದುವೆ ಕಾರ್ಯದಲ್ಲಿಯೂ ಎಲ್ಲಾ ವರ್ಗದವರು ಭಾಗವಹಿಸುತ್ತಾರೆ. ಹಾಗೆಯೇ ಸತ್ತ ಸಂದರ್ಭದಲ್ಲೂ ಎಲ್ಲರೂ ಸಹಭಾಗಿಗಳಾಗುವುದನ್ನು ಕಾಣಬಹುದಾಗಿದೆ.

೨.೪. ೧. ಜಾತಿ

"ಜಾನಪದ ಕೇವಲ ವೃತ್ತಿ ಅಥವಾ ಭೌಗೋಳಿಕ ಪರಿಸ್ಥಿತಿಯನ್ನನುಸರಿಸಿಯಷ್ಟೇ ಬೆಳೆಯುವುದಿಲ್ಲ. ಮತ್ತು ವೈವಿಧ್ಯಗೊಳ್ಳುವುದಿಲ್ಲ. ಅದರ ಜಾತಿಯ ಸಂಬಂಧವು ಮುಖ್ಯವಾಗಿರುತ್ತದೆ. ಕಾರಣ ಇವೆಲ್ಲ ಪರಸ್ಪರ ಅಂತರ್ ಸಂಬಂಧಿಗಳು. ಭಾರತೀಯ ಸಂದರ್ಭದಲ್ಲಂತೂ ಜಾತಿ ಬಲಿಷ್ಠವಾದ ಒಂದು ಸಾಮಾಜಿಕ ಗುಣವಾಗಿದ್ದು ಸಾಂಸ್ಕೃತಿಕವಾಗಿ ಹಲವು ಅಂಶಗಳನ್ನು

ನಿಯಂತ್ರಿಸುವ, ನಿರ್ಮಿಸುವ ವಿಶೇಷವಾಗಿದೆ. ಇಷ್ಟೆ ಅಲ್ಲದೆ ಜಾತಿಯ ಬಗೆಗೆ ಅವರವರ ಜಾತಿಗಳಲ್ಲಿರುವ ನಂಬಿಕೆ, ಐತಿಹ್ಯ, ಪುರಾಣಗಳು ಜಾನಪದ ಅಧ್ಯಯನಕ್ಕೆ ಮುಖ್ಯ ಆಕರ ಸಾಮಾಗ್ರಿ ಆಗಿರುತ್ತವೆ.''[೨]

ಗ್ರಾಮದಲ್ಲಿ ಒಟ್ಟು ೫೭೫೯ ಜನಸಂಖ್ಯೆಯಿದೆ. ಇದರಲ್ಲಿ ಅನೇಕ ವರ್ಗದವರಿದ್ದಾರೆ. ಸಾಧು ವೀರಶೈವ, ಪಂಚಮ, ಊರನಾಯಕರು, (ವಾಲ್ಮೀಕಿ) ಮ್ಯಾಸನಾಯಕರು, ಕುರುಬ, ಹರಿಜನ, ಚೆಲುವಾದಿ, ಮಡಿವಾಳರು, ನೇಕಾರರು, ಕ್ಷೌರಿಕರು, ಬಾರಿಕರು ಹೆಚ್ಚಿನದಾಗಿ ಇದ್ದಾರೆ. ಮುಸ್ಲಿಂ ಮುಂತಾದವರ ಕುಟುಂಬಗಳ ಸಂಖ್ಯೆ ಕಡಿಮೆ. ಹಿಂದೆ ಜೈನ ಮತ್ತು ಬ್ರಾಹ್ಮಣರು ಇದ್ದರು. ಸದ್ಯಕ್ಕೆ ಇವರ ವಸತಿ ಇಲ್ಲ. ಹೀಗೆ ಸಾಮಾಜಿಕ ರಚನೆ ಸಂಕೀರ್ಣವಾಗಿಯೂ ವೈವಿಧ್ಯಮಯವಾಗಿಯೂ ಇದೆ.

ಊರಿನಲ್ಲಿ ಎಲ್ಲ ಜಾತಿಗೆ ಸೇರಿದವರಿದ್ದು ಮದುವೆ, ಶವಸಂಸ್ಕಾರ ಮುಂತಾದ ಕಾರ್ಯಗಳಿಗೆ ಕೆಲವರು ಮಾತ್ರ ಭಾಗವಹಿಸುತ್ತಾರೆ. ದೇವರ ಕಾರ್ಯದಲ್ಲಿ ಎಲ್ಲರೂ ಭಾಗವಹಿಸುತ್ತಾರೆ. ಈ ಭಾಗವಹಿಸುವಿಕೆಯಲ್ಲಿಯು ಸಹ ಜಾತಿ ಮತಗಳ ಭೇದಭಾವಗಳು ಸಾಮಾನ್ಯವಾಗಿದೆ.

೨.೪.೨. ವೃತ್ತಿ

ಗ್ರಾಮೀಣರ ಬದುಕಿನಲ್ಲಿ ವ್ಯವಸಾಯವೇ ಪ್ರಧಾನ ವೃತ್ತಿಯಾಗಿರುತ್ತದೆ. ಮತ್ತು ಮಳೆಯನ್ನು ಅವಲಂಬಿಸಿರುತ್ತದೆ. ಚಿಗಟೇರಿಯ ಸುತ್ತಮುತ್ತಲ ಪ್ರದೇಶದಲ್ಲಿ ಅಂತರ ಬೇಸಾಯವು ಕಂಡುಬರುತ್ತದೆ. ದುಡಿಮೆಗೋಸ್ಕರ ಬಾವಿಗಳನ್ನು ತೋಡಿಸಿ ಅದರಿಂದ ನೀರು ಹರಿಸಿ ತೋಟಗಳನ್ನು ಕೂಡಾ ಮಾಡಿಕೊಂಡಿದ್ದರು. ಇದರಿಂದಾಗಿ ಹಿಂದಿನ ಕಾಲಕ್ಕೆ ಊರು ಸಂಪದ್ಭರಿತ ವಾಗಿತ್ತು. ಈಗ ಅಂತರ್‌ಜಲ ಮಟ್ಟ ಒಳಹೋಗಿರುವುದರಿಂದ ಬಾವಿಗಳು ಬತ್ತಿಹೋಗಿವೆ. ಇತ್ತೀಚೆಗೆ ಕೊಳವೆ ಬಾವಿಗಳು ಹೆಚ್ಚಾಗಿವೆ. ಅವುಗಳಿಗೆ ವಿದ್ಯುತ್ ಸೌಕರ್ಯದಿಂದ ಪಂಪ್‌ಸೆಟ್ಟುಗಳನ್ನು ಇಟ್ಟುಕೊಂಡಿದ್ದಾರೆ. ಇವುಗಳಿಂದ ಬೆಳೆಯನ್ನು ಬೆಳೆಯುತ್ತಾರೆ. ಆದರೆ ಪ್ರಸ್ತುತ ದಿನಗಳಲ್ಲಿ ಮಳೆಗಾಲ ಕಡಿಮೆಯಾಗಿ ಅಂತರ್ ಜಲಮಟ್ಟ ಮತ್ತಷ್ಟು ಒಳಹೋಗಿ, ಕೊಳವೆ ಬಾವಿಗಳು ಒಣಗುವ ಸಾಧ್ಯತೆಗಳಿವೆ. ಅದರಲ್ಲೂ ದಿನಕ್ಕೆ ಆರು, ಮೂರು ತಾಸಿನ ವಿದ್ಯುತ್ ಸರಬರಾಜಿನಿಂದ ರೈತರಿಗೆ ದಿಕ್ಕು ತೋಚದೆ ಕಂಗಾಲಾಗಿದ್ದಾರೆ.

ಜೀವನೋಪಾಯಕ್ಕಾಗಿ ಕೆಲವು ಜನರು ಕೂಲಿ ಕೆಲಸ, ಸಣ್ಣ ಪುಟ್ಟ ವ್ಯಾಪಾರ ಅಂಗಡಿಗಳು, ಸರ್ಕಾರದಿಂದ ಲೋನು ಪಡೆದು ತಮಗನುಕೂಲ ವಾಗುವ ಕೆಲಸವನ್ನು ಮಾಡುತ್ತ ದುಡಿಯುತ್ತಾರೆ. ವಿಶ್ವಕರ್ಮದವರು ಬಡಗಿತನವನ್ನು ಮಡಿವಾಳರು ಬಟ್ಟೆ ತೊಳೆಯುವುದನ್ನು ಕೆಲವು ಹರಿಜನರು ಚರ್ಮ ಹದಮಾಡುವುದು, ಚೆಲುವಾದಿಯರು ಸನಾಯಿ ಊದುವುದನ್ನು ಮತ್ತು ಕುರುಬರು ಡೊಳ್ಳು ಬಡಿಯುವುದನ್ನು ಇಂದಿಗೂ ತಮ್ಮ ಕಾಯಕವನ್ನಾಗಿ ಮಾಡಿಕೊಂಡಿದ್ದಾರೆ.

೨.೪.೩. ಶಿಕ್ಷಣ

ಹಿಂದಿನ ಕಾಲದಿಂದಲೂ ಚಿಗಟೇರಿ ಗ್ರಾಮದಲ್ಲಿ ಶಿಕ್ಷಣಕ್ಕೆ ಮಹತ್ವ ಕೊಟ್ಟಿರುವುದನ್ನು ಕಾಣುತ್ತೇವೆ. ಈ ಗ್ರಾಮವು

ವಿಜಯನಗರ ಕಾಲದಲ್ಲಿ ಅಗ್ರಹಾರವಾಗಿತ್ತು. ಆನಂತರ ಹರಪನಹಳ್ಳಿ ಪಾಳೆಗಾರರ ಕಾಲದಲ್ಲಿ ಅರ್ಧ ಅಗ್ರಹಾರವಾಗಿತ್ತು. ಅಗ್ರಹಾರ ಎಂದ ಮೇಲೆ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಟ್ಟ ಗ್ರಾಮವೇ ಆಗಿದೆ. ಪ್ರಸ್ತುತ ಚಿಗಟೇರಿಯಲ್ಲಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ. ಶ್ರೀ ನಾರದಮುನಿ ಪ್ರೌಢಶಾಲೆ ಮತ್ತು ವಾಣಿ ಶಾಲೆ, ಎಲ್.ಕೆ.ಜಿ, ಯು.ಕೆ.ಜಿ.ಗಳ ಜೊತೆಗೆ ಅಂಗನವಾಡಿ ಕೇಂದ್ರಗಳು ಮತ್ತು ರಾತ್ರಿ ಕಲಿಕ ಕೇಂದ್ರಗಳು ಶಿಕ್ಷಣ ಕಲಿಸುವಲ್ಲಿ ಮುಂದಾಗುತ್ತವೆ. ಶಿಕ್ಷಣದ ಬಗ್ಗೆ ಶಾಲೆಯ ವಿವರಗಳನ್ನು ಗಮನಿಸಿದಾಗ ಕೆಲವು ಮಾಹಿತಿಗಳು ದೊರಕುತ್ತವೆ.

ಶಾಲೆವಾರು ಅಂಶಗಳು

ಮಾದರಿ ಹಿರಿಯ ಪ್ರಾಥಮಿಕ ಶಾಲೆ

ವರ್ಷ	ತರಗತಿ	ಗಂಡು	ಹೆಣ್ಣು	ಒಟ್ಟು	ಶಿಕ್ಷಕರ ಸಂಖ್ಯೆ
೯೯-೨೦೦೦	೧ ರಿಂದ ೭	೩೪೨	೩೧೨	೬೫೪	೧೮
೨೦೦೦-೦೧	೧ ರಿಂದ ೭	೩೬೧	೩೧೨	೬೭೩	೧೮
೨೦೦೧-೦೨	೧ ರಿಂದ ೭	೩೮೩	೩೨೨	೭೦೫	೧೮ + ೧

ಶ್ರೀ ನಾರದ ಮುನಿ ಪ್ರೌಢಶಾಲೆ

೯೯-೨೦೦೦	೮ ರಿಂದ ೯	೧೪೭	೭೫	೨೮೨	೩+೩
೨೦೦೦-೦೧	೮ ರಿಂದ ೯	೧೪೪	೯೨	೨೩೬	೫+೩
೨೦೦೧-೦೨	೮ ರಿಂದ ೯	೧೪೦	೯೩	೨೩೩	೩+೨

ವಾಣಿ ಹಿರಿಯ ಪ್ರಾಥಮಿಕ ಶಾಲೆ

೯೯-೨೦೦೦	೧ ರಿಂದ ೭	೧೦೭	೪೫	೧೫೨	೬
೨೦೦೦-೦೧	೧ ರಿಂದ ೭	೧೨೫	೫೬	೧೮೧	೬
೦೧-೦೨	೧ ರಿಂದ ೭	೬೦	೩೬	೯೦	೧+೫

(ಶಾಲೆಯ ದಾಖಲಾತಿ ಪುಸ್ತಕದ ಪ್ರಕಾರ)

ಅಡಿಟಿಪ್ಪಣಿ

೧. ದೇವರಕೊಂಡಾರೆಡ್ಡಿ (ಸಂ) - ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - ೧ ಬಳ್ಳಾರಿ ಜಿಲ್ಲೆ, ಪುಟ. ೬೫೪.

೨. ಅದೇ ಪುಟ.

೩. ಕುಂಬಾಸ - ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ ೧೯೯೦, ಪುಟ. ೧೮-೧೯.

೪. ವಕ್ತೃ ಮುನಿಯಪ್ಪ.

೫. ಕುಂಬಾಸ - ಹರಪನಹಳ್ಳಿ ಪಾಳೆಗಾರರು ೧೯೯೬ ಪುಟ. ೪೯ - ೫೦.

೬. ಡಾ. ಅರ್ಜುನ ಯ. ಗೊಳಸಂಗಿ - ಗೊಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ ಪುಟ. ೧.

೭. ವಕ್ತೃ ನಾಗಪ್ಪ.

೮. ವಕ್ತೃ ಮುನಿಯಪ್ಪ, ಭಂಗಿ.

೯. ಕುಂಬಾಸ - ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ ೧೯೯೦, ಪುಟ. ೬೮.

೧೦. ನಾಡ ಕಛೇರಿ R.T.C. ದಾಖಲಾತಿ ಪುಸ್ತಕದಿಂದ.

೧೧. ಟಿ. ಗಿರಿಜಾ - ದಾವಣಗೆರೆ ಇದು ನಮ್ಮ ಜಿಲ್ಲೆ ಪುಟ. ೭೧೦

೧೨. ಡಾ.ಟಿ. ಗೋವಿಂದರಾಜ - ಚಿನ್ನದೇವಿ ಅಗ್ರಹಾರ ಜಾನಪದೀಯ ಅಧ್ಯಯನ ಪುಟ. ೪೬.

ಅಧ್ಯಾಯ - ೩

ನಾರಪ್ಪನ ಪರಂಪರೆ

೩. ೧ ನಾರಪ್ಪ ನಾಮ ವಿಶ್ಲೇಷಣೆ

೩. ೨ ಧಾರ್ಮಿಕ ಹಿನ್ನೆಲೆ

೩. ೩ ನೆಲೆಗೊಂಡ ಬಗ್ಗೆ ಇರುವ ಐತಿಹ್ಯಗಳು

೩. ೪ ದೇವಸ್ಥಾನ ಸ್ಥಾಪನೆ

೩. ೫ ದೇವಸ್ಥಾನ ಪರಿಚಯ

೩. ೬ ಮೂರ್ತಿ ಪರಿಚಯ

೩. ೭ ವಾಸ್ತುಶಿಲ್ಪ

೩. ೮ ನಾರಪ್ಪನ ಒಕ್ಕಲುಗಳು

೩. ೯ ಉಡುಗೆ-ತೊಡುಗೆಗಳು

೩.೧೦ ಆಸ್ತಿ ಮತ್ತು ಆಡಳಿತ

ಕರ್ನಾಟಕದ ಮಧ್ಯ ಜಿಲ್ಲೆಯಾದ ದಾವಣಗೆರೆಯ ಹರಪನಹಳ್ಳಿ ತಾಲ್ಲೂಕಿನ 'ಚಿಗಟೇರಿ ನಾರಪ್ಪ' ಚಿಗಟೇರಿಯನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡು ಮಲೆಮಾದೇಶ್ವರ, ಮಂಟೇಸ್ವಾಮಿಯಂತೆ ಭಿನ್ನವಾದ ಸ್ವರೂಪದ ಸಾಧು ಮುನಿಗಳೆಂಬ ಹೆಸರು ಪಡೆದಿದ್ದಾನೆ. ಅಪಾರ ಭಕ್ತಿ ಸಮೂಹವನ್ನು ಹೊಂದಿರುವ ನಾರಪ್ಪನ ಬಗೆಗೆ ಐತಿಹ್ಯದ ಜೀವನ ವೃತ್ತಾಂತ ಸೃಷ್ಟಿಯಾಗಿದೆ. ಸದ್ಯಕ್ಕೆ ನಾರಪ್ಪನ ವೃತ್ತಾಂತವನ್ನು "ಡಾ. ಶಿವನಪ್ಪಗೌಡ" ಕಡಬಗೇರಿ ಕೃತಿಯಿಂದ ತಿಳಿಯಬಹುದಾಗಿದೆ. ಈ ವೃತ್ತಾಂತದ ಕಥೆಯಲ್ಲಿ ಅನೇಕ ವೃತ್ತಾಂತಗಳು ಬರುತ್ತವೆ. ನಾರಪ್ಪ(ಬೈರೇಶಿ)ನು ಉತ್ತರ ದೇಶದಿಂದ ಬಂದವನು ಎಂದು ಹೇಳಿದ್ದಾರೆ. ನಾರಪ್ಪನ ಬಗ್ಗೆ ಜಾತಿ ಮತಗಳ ಸ್ಪಷ್ಟವಾದ ತಿಳುವಳಿಕೆಯಿಲ್ಲ.

ಮಂಟೇಸ್ವಾಮಿ ಮಲೆಮಾದೇಶ್ವರ ಪಂಥವನ್ನು ಒಪ್ಪಿ ಅವನಿಗೆ ಒಕ್ಕಲಾದವರನ್ನು ಕಂಸಾಳೆ ಗುಡ್ಡರು, ನೀಲಗಾರರೆಂದು ಕರೆಯುತ್ತಾರೆ. ಅದರಂತೆಯೇ ನಾರಪ್ಪನ ಒಕ್ಕಲಾಗಿ ದೀಕ್ಷೆ ಪಡೆದರೆ 'ದಾಸಪ್ಪ' ಎಂದು ಕರೆಯುತ್ತಾರೆ. ನಾರಪ್ಪನ ದಾಸಪ್ಪಗಳು ಗುಡ್ಡರಂತೆ, ನೀಲಗಾರರಂತೆ ಹಾಡುವುದಿಲ್ಲ. ದೇವರ ಹೆಸರನ್ನು ಹೆಚ್ಚು ಪ್ರಚಾರ ಮಾಡುವುದಿಲ್ಲ. ನಾರಪ್ಪನ ಪರಂಪರೆಯಲ್ಲಿ ಬಹುಮುಖ್ಯವಾಗಿ ಕಾಣುವ ಅಂಶವೆಂದರೆ ಭಕ್ತಿಯ ಆರಾಧನೆಯಿಂದ ಎಲ್ಲರನ್ನು ಗೆಲ್ಲುವುದೆ ಆಗಿದೆ. ಐತಿಹ್ಯದಲ್ಲೂ ಇವನೊಬ್ಬ ಹುಚ್ಚ ಬೈರಾಗಿ, ಯಕ್ಷಣಿಗ ಎಂದು ಹೇಳಿದ್ದಾರೆ. ಈ ಮೊದಲೇ ಹೇಳಿದಂತೆ ಇಲ್ಲಿಯ ಪ್ರತಿಯೊಂದು ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ನಾರಪ್ಪನಿಗೆ ಹೆಚ್ಚು ನಡೆದುಕೊಳ್ಳುವ ಭಕ್ತರೆಂದರೆ ವೀರಶೈವರು ಮತ್ತು ನಾಯಕರು. ವೀರಶೈವ ಧರ್ಮವನ್ನು ಪ್ರಾಚೀನ ಕಾಲದಿಂದಲೂ ಕಾಣುತ್ತೇವೆ. ಅಲ್ಲಿಯ ಸ್ಥಳೀಕರ ಅಭಿಪ್ರಾಯದ ಪ್ರಕಾರ ಈ ಭಾಗದಲ್ಲಿ ವೈದಿಕ ಬ್ರಾಹ್ಮಣರು ಇದ್ದರು. ಆದ್ದರಿಂದಲೇ ನಾರಪ್ಪ ವೈದಿಕನಾಗಿದ್ದಾನೆ, ಆದರೂ ಸಹ ಶೈವರು ಈ ದೈವಕ್ಕೆ ನಡೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ.

ನಾರಪ್ಪನ ಕೇಂದ್ರಸ್ಥಾನ ಚಿಗಟೇರಿ. ಚಿಗಟೇರಿಯ ಒಂದು ಭಾಗದಲ್ಲಿ ಅರಣ್ಯವನ್ನು ಕಾಣಬಹುದು. ಜಾತ್ರೆಯ ಸಂದರ್ಭದಲ್ಲಿ ದಾಸಪ್ಪಗಳು ಬರುತ್ತಾರೆ. ಹೊಸ ಮಡಿಕೆಯಲ್ಲಿ ವಿಶೇಷ ಎಡೆ ಮಾಡಿ ನಾರಪ್ಪನಿಗೆ ಅರ್ಪಿಸುತ್ತಾರೆ. ದಾಸಪ್ಪಗಳು ಮನೆಗಳಿಗೆ ಹೋಗಿ ಧಾರ್ಮಿಕ ಕ್ರಿಯೆಗಳನ್ನು ಮಾಡುವುದಿಲ್ಲ. ದಾಸಪ್ಪನೆಂದು ದೀಕ್ಷೆ ಪಡೆದಾಗ ಮಾತ್ರ ನಾರಪ್ಪನ ಒಕ್ಕಲು ಮನೆಗೆ ಹೋಗಿ ಭಿಕ್ಷೆ ಬೇಡಿ ತರುತ್ತಾರೆ. ಒಕ್ಕಲು ಮನೆಗಳಲ್ಲಿ ಎಮ್ಮೆ, ಹಸು ಮರಿ ಹಾಕಿದಾಗ ಧಾರ್ಮಿಕ ಕ್ರಿಯೆಗೆ ಹೋಗುತ್ತಾರೆ. ಇದು ಬಹಳ ವಿಶೇಷವಾಗಿದೆ.

ಹೀಗೆ ನಾರಪ್ಪನ ಪರಂಪರೆಯು ಕರ್ನಾಟಕದ ಮಧ್ಯ ಜಿಲ್ಲೆಗಳಲ್ಲಿ ಮಾತ್ರ ಕಂಡು ಬರುತ್ತದೆ. ಇಲ್ಲಿಯ ಇನ್ನೊಂದು ವಿಶೇಷವೆಂದರೆ ದೀಕ್ಷೆಯನ್ನು ತೆಗೆದುಕೊಂಡವರು ಭಸ್ಮಧಾರಣೆ ಮಾಡಿಕೊಂಡಿರುತ್ತಾರೆ. ಇವರು ಹೆಚ್ಚಾಗಿ ಗೋವಿಂದನನ್ನು ನೆನೆಯುತ್ತಾರೆ. ಮತ್ತು ಇವರ ಕೈಯಲ್ಲಿ ಒಂದು ಬೆತ್ತ ಮತ್ತು ದಂಡ ಘಂಟೆಗಳೆಂಬ 'ಘಂಟಿಮಣಿ' ಕೋಲು ಇರುತ್ತದೆ. ಹಿಂದೆ ಸ್ತ್ರೀಯರನ್ನು ದಾಸಿಯಾಗಿ ದೀಕ್ಷೆ ಕೊಡುವ ಪದ್ಧತಿಯು ಇತ್ತು. ಕ್ರಮೇಣ ಇದು ನಶಿಸಿಹೋಗಿದೆ. ಈಗ ಕೆಲವು ದಾಸಿಯರ ಹೆಸರುಗಳನ್ನು ಮಾತ್ರ ಹೇಳುತ್ತಾರೆ. ದಾಸಿಯರಲ್ಲಿ ಒಬ್ಬ ಹೆಂಗಸು ಮಾತ್ರ ಇದ್ದಾಳೆ. ಆ ಹೆಂಗಸನ್ನು ಪ್ರಸ್ತುತದಲ್ಲಿಯೂ ಚಿಗಟೇರಿ ಗ್ರಾಮದಲ್ಲಿ ಕಾಣಬಹುದು.

೩.೧ ನಾಮ ವಿಶ್ಲೇಷಣೆ

ಬೇರೆ ಬೇರೆ ದೇವರುಗಳ ನಾಮ ವಿಶ್ಲೇಷಣೆಗಿಂತ ನಾರಪ್ಪನ ನಾಮ ವಿಶ್ಲೇಷಣೆ ಮಾಡುವುದು ಬಹಳ ಮುಖ್ಯವೆನಿಸುತ್ತದೆ. ಯಾಕೆಂದರೆ ನಾರಪ್ಪ ಮತ್ತು ನಾರದ ಎಂಬುದು ಒಂದೇ? ಅಥವಾ ಬೇರೆ ಬೇರೆಯೇ? ಎನ್ನುವುದು ಬಹಳ ಮುಖ್ಯ. ಪುರಾಣದ ಇತಿಹಾಸದ ನಾರದನಿಗೂ ಮತ್ತು ನಾರಪ್ಪನಿಗೂ ವ್ಯತ್ಯಾಸ ಇದೆಯೆ? ಎಂಬ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಹೌದು ನಾರದನಿಗೂ, ನಾರಪ್ಪನಿಗೂ ಅಜಗಜಾಂತರ ವ್ಯತ್ಯಾಸವಿದೆ. ಚಿಗಟೇರಿ ನಾರಪ್ಪನು ಎಡಗೈಯಲ್ಲಿ ಇರುವುದನ್ನು ಅಲ್ಲಿಯ ಜನರು ಇಷ್ಟಲಿಂಗವೆಂದು ಹೇಳುತ್ತಾರೆ. ಅದು ಇಷ್ಟ ಫಲವನ್ನು ಕೊಡುತ್ತದೆ. ಮತ್ತು ಬಲಗೈಯಲ್ಲಿ ಶಂಕು ಎಂದು ಹೇಳುತ್ತಾರೆ (ಆದರೆ ಮೂಲ ವಿಗ್ರಹದಲ್ಲಿ ಶಂಕು ಕಾಣುವುದಿಲ್ಲ. ಕೇಳಿದರೆ ಮುರಿದು ಹೋಗಿದೆ ಎಂದು ಹೇಳುತ್ತಾರೆ). ಪುರಾಣದ ನಾರದನ ಇತಿಹಾಸವು ಎಲ್ಲರಿಗೂ ಗೊತ್ತಿರುವ ಕಥೆಯೆ. ಆದ್ದರಿಂದ ಇವರಿಬ್ಬರಿಗೂ ಒಬ್ಬರಿಂದೊಬ್ಬರಿಗೂ ಸಂಬಂಧವಿಲ್ಲ. ನಾರದನು ಬ್ರಹ್ಮಚಾರಿ ಚಿಗಟೇರಿ ನಾರಪ್ಪನು ಬ್ರಹ್ಮಚಾರಿ ಎಂದು ಹೇಳುತ್ತಾರೆ. ಕಾಲ ಬದಲಾದಂತೆ 'ನಾರಪ್ಪ' ಎಂಬ ಹೆಸರಿನ ಹಿಂದೆ ಮತ್ತು ಮುಂದೆ ಅನೇಕ ಹೆಸರುಗಳು ಸೇರಿಕೊಂಡಿವೆ.

ನಾರಪ್ಪ = ವೈಷ್ಣವ ಪಂಥಕ್ಕೆ ಸಂಬಂಧಿಸಿದವನು. ಇಲ್ಲಿ ಆರಾಧಿಸುವ ಭಕ್ತರು ಶೈವರು ಮತ್ತು ನಾಯಕರು.

ನಾರದ : "ಧರ್ಮವನ್ನು ಕೊಡುವವ, ಅಜ್ಞಾನವನ್ನು ತೊಲಗಿಸುವವ ಒಬ್ಬ ದೇವರ್ಷಿ. ಒಬ್ಬ ದೇವ ಗಂಧರ್ವ, ವಿಶ್ವಾಮಿತ್ರನ ಮಗ, ವೈದಿಕ ಯುಗದ ಒಬ್ಬ ದೇವರ್ಷಿ. ಈತನು ಸಪ್ತರ್ಷಿಗಳಲ್ಲಿ ಒಬ್ಬ. ಪುರಾಣಗಳಲ್ಲೂ, ಮಹಾಭಾರತದಲ್ಲೂ ಇವನ ವಿಷಯದ ಹಲವು ಕಥೆಗಳಿವೆ. ಈತನು ಬ್ರಹ್ಮನ ಮಗನೆಂದೂ ಹೇಳುವ ವಾಡಿಕೆ. ಈತನು ಮೂರು ಲೋಕ ಸಂಚರಿಸುವನು ಚಿರಂಜೀವಿಯು ಎಂದು ಹೇಳುತ್ತಾರೆ.

ಮುನಿ : ಋಷಿ, ಭಕ್ತ, ಮೌನಿ, ಸಾಧು, ಏಳರ ಸಂಖ್ಯಾ, **ಸೂಚಕ ಪದ ;** ಸಿಟ್ಟಾಗು, ಕೋಪಿಸು, ಮುನೀಶ್ವರ: ಶ್ರೇಷ್ಠ ಋಷಿ

ಗೋವಿಂದ : ಕೃಷ್ಣ, ಬೃಹಸ್ಪತಿ, ಗೋವುಗಳ ಒಡೆಯ

ನಾರು (ನಾರ್) : ವಾಸನೆ ಬರು, ಕೊಳೆತ ವಾಸನೆಕೊಡು, ತೊಗಟೆಯಲ್ಲಿರುವ ನೂಲಿನಂಥ ವಸ್ತು. ಕತ್ತ, ಜಿಗುಟ ಹುರಿಯಂತೆ ಗಟ್ಟಿಯಾದ"[೧] ಎಂಬರ್ಥ ಬರುತ್ತದೆ.

ಇತ್ತೀಚೆಗೆ ಶೈವ ಪಂಥದ ಪ್ರಾಬಲ್ಯವು ಹೆಚ್ಚಿದ್ದರಿಂದ 'ಶಿವ' ಎಂದು ಸೇರಿಸಿಕೊಂಡಿದ್ದಾರೆ. ಶಿವ = ಈಶ್ವರ, ರುದ್ರ, ಮಂಗಲಕರವಾದ, ಕಲ್ಯಾಣವುಳ್ಳ ಎಂಬ ಅರ್ಥವಿದೆ. ಇದರ ಜೊತೆಗೆ 'ಕಾಪಾಲಿ' ಎಂಬ ಅರ್ಥಗಳು ಬರುತ್ತವೆ. ಇವುಗಳೆಲ್ಲವನ್ನು ಕರೆಯುವುದರ ಜೊತೆಗೆ 'ನಾರ್ಮುನಿ' ಎಂದು ಕರೆಯುತ್ತಾರೆ. ಎಂದರೆ ನಾರನ್ನು ಮುಡಿಯುವವನು. ನಾರಿನಿಂದ ತೃಪ್ತಿಯಾಗುವನು

ಎಂದು ಹೇಳುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ **'ಶ್ರೀ ಶಿವನಾರದ ಮುನಿ ಗೋವಿಂದ'** ಎಂದು ಕರೆಯುತ್ತಾರೆ. ಹೀಗೆ ನಾರಪ್ಪನ ನಾಮ ವಿಶ್ಲೇಷಣೆಯನ್ನು ಗುರುತಿಸಬಹುದಾಗಿದೆ.

೩.೨ ಧಾರ್ಮಿಕ ಹಿನ್ನೆಲೆ

ಧರ್ಮ ಸಮಾಜದ ಅವಿಭಾಜ್ಯ ಅಂಗ. ಬೇರೆ ಬೇರೆ ಮತ ಧರ್ಮಗಳು ಅಂದಿನ ಸಮಾಜವನ್ನು ಪೋಷಿಸುತ್ತಾ ಮತ್ತು ಸಮಾಜದಿಂದ ಪೋಷಿಸಲ್ಪಡುತ್ತಾ ಬೆಳೆದು ಬಂದುದನ್ನು ಎಲ್ಲ ಕಡೆಗಳಲ್ಲೂ ನೋಡಬಹುದಾಗಿದೆ. ಧಾರ್ಮಿಕ ದೃಷ್ಟಿಯಿಂದ ಪರಿಶೀಲಿಸಿದರೆ ಈ ಪ್ರದೇಶದಲ್ಲಿ ಧಾರ್ಮಿಕ ಏಕತೆಗಿಂತ ವೈವಿಧ್ಯತೆಯಿಂದ ಕೂಡಿದ್ದಿರಬಹುದು ಎಂದು ಪ್ರಸ್ತುತ ವಕ್ತೃಗಳ ಹೇಳಿಕೆಯಲ್ಲಿ ತಿಳಿಯಬಹುದು. ಪ್ರತಿಯೊಂದು ಗ್ರಾಮಗಳಿಗೂ ಒಂದೊಂದು ಧಾರ್ಮಿಕ ಹಿನ್ನೆಲೆಯು ಇದ್ದೇ ಇರುತ್ತದೆ ಎಂಬುದು ತಿಳಿದು ಬರುತ್ತದೆ.

ಶೈವಧರ್ಮ

ಶೈವಧರ್ಮವು ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿರುವುದನ್ನು ಕಂಡಿದ್ದೇವೆ. ಮತ್ತು ಅನೇಕ ಶತಮಾನಗಳ ಹಿಂದೆ ಚಿಗಟೇರಿ ಗ್ರಾಮದಲ್ಲಿ ಶೈವ ಪಂಥದ ಪ್ರಭಾವವು ಬೀರಿರುವ ಕುರುಹುಗಳಿವೆ. ಚಿಗಟೇರಿ ಗ್ರಾಮದಲ್ಲಿ ಅನೇಕ ಈಶ್ವರ ಲಿಂಗಗಳ ದೇವಾಲಯಗಳನ್ನು ಇಂದೂ ಸಹ ಕಾಣಬಹುದು. ವೀರಶೈವ ಧರ್ಮದಲ್ಲಿ ಬರುವ ಅನೇಕ ಪಂಥಗಳಲ್ಲಿ ಇಲ್ಲಿ ಯಾವುದಾದರೊಂದು ಪಂಥದ ಪ್ರಭಾವ ಬೀರಿದೆ. ಬಾಗಳಿ ಮತ್ತು ಕೋಗಳಿ ಹತ್ತಿರದ ಧಾರ್ಮಿಕ ಕೇಂದ್ರಗಳಾಗಿವೆ.

ಕಾಪಾಲಿಕರು : "ಶೈವಧರ್ಮದ ಒಂದು ಶಾಖೆ. ವಾಮಾಚಾರ ಪದ್ಧತಿಯು ಕಾಪಾಲಿಕರದು. ಇವರು ಶ್ರೀ ಶೈಲದಲ್ಲಿದ್ದರೆಂದೂ ಕರ್ನಾಟಕದಲ್ಲಿ ಇವರು ಪ್ರಬಲರಾಗಿರಲಿಲ್ಲವೆಂದೇ ತೋರುತ್ತದೆ".[೨] ಆದಾಗ್ಯೂ ಚಿಗಟೇರಿ ಗ್ರಾಮದಲ್ಲಿ ಕೆಲವು ಕಾಪಾಲಿಕರ ವಿಗ್ರಹಗಳನ್ನು ಇಂದಿಗೂ ಕಾಣಬಹುದು. ನಾರದ ಮುನಿ ದೇವಸ್ಥಾನದ ಮುಂದಿರುವ ಭೈರವ ಮೂರ್ತಿಯನ್ನು ಕಂಡ ಶಿವರಾಮ ಕಾರಂತರು ಈ ಮೂರ್ತಿಯು ಕ್ರಿ.ಶ. ೪ ಅಥವಾ ೫ನೇ ಶತಮಾನದ ಮೂರ್ತಿಯಾಗಿರಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಹಾಗೆಯೇ ಈ ಭಾಗದಲ್ಲಿ ನಾಥ ಸಂಪ್ರದಾಯದವರು (ಕೌಳರು) ಅಥವಾ ಸಿದ್ಧ ಸಂಪ್ರದಾಯದವರು ಇದ್ದಿರಬಹುದು ಮತ್ತು ಬ್ರಾಹ್ಮಣ ಸಂಪ್ರದಾಯಗಳನ್ನು ವೀರಶೈವ ಸಂಪ್ರ ದಾಯಗಳನ್ನು ಒಟ್ಟಿಗೆ ಉಳಿಸಿಕೊಂಡಿರುವ ಬ್ರಾಹ್ಮಣರು ಇರುವ ಸಾಧ್ಯತೆ ಇದೆ. ಇಂತಹ "ವೈದಿಕರು ಬ್ರಾಹ್ಮಣರಂತೆ ಯಜ್ಞೋಪವೀತವನ್ನು ವೀರಶೈವರಂತೆ ಇಷ್ಟಲಿಂಗವನ್ನು ಧರಿಸುತ್ತಾರೆ. ಇವರು ಬ್ರಾಹ್ಮಣರಂತೆ ವೇದಗಳನ್ನು ನಂಬುತ್ತಾರೆ. ವೀರಶೈವರಂತೆ ಹೆಣವನ್ನು ಹೂಳುತ್ತಾರೆ, ಸುಡುವುದಿಲ್ಲ. ಹೀಗೆ ಇದೊಂದು ವೈದಿಕ ಮತ್ತು ವೀರಶೈವ ಧರ್ಮಗಳ ಸಮ್ಮಿಶ್ರಣವಾಗಿ ಕಾಣಿಸಿಕೊಳ್ಳುತ್ತದೆ".[೩] ಇಂತಹವರನ್ನು ಆಂಧ್ರದ ಆರಾಧ್ಯರು ಎಂದು ಕರೆಯುತ್ತಾರೆ.

ಪ್ರಾಚೀನ ಕಾಲದಿಂದಲೂ ಬಳ್ಳಾರಿ ಜಿಲ್ಲೆಯು ಶೈವ ಮತ್ತು ವೈಷ್ಣವ ಧರ್ಮದ ಸಮನ್ವಯತೆಯನ್ನು ಕಾಣುತ್ತೇವೆ. ಅದರಲ್ಲಿಯೂ ಹೆಚ್ಚಾಗಿ ವಿಜಯನಗರದ ಅರಸರ ಆಳ್ವಿಕೆಯಲ್ಲಿ ಹೆಚ್ಚು ಪ್ರಚಾರವನ್ನು ಕಾಣುತ್ತೇವೆ. ವಿಜಯನಗರದ ಅರಸರ ಕಾಲದಲ್ಲಿ ಚಿಗಟೇರಿಯು ವೈಷ್ಣವ ಧರ್ಮದ ಅಗ್ರಹಾರವಾಗಿತ್ತು ಎಂದು ಹೇಳುತ್ತಾರೆ. ಆದರೆ ಯಾವುದೇ ಕುರುಹುಗಳು ಸಿಗುವುದಿಲ್ಲ ಆದ್ದರಿಂದ ವಿಜಯನಗರ ಕಾಲದ ಧರ್ಮದ ಪ್ರಭಾವವೂ ಈ ಭಾಗದಲ್ಲಿ ಬೀರಿರಬಹುದು. ಈ ಗ್ರಾಮದಲ್ಲಿ ಸತ್ಯಭಾಮೆ, ರುಕ್ಮಿಣಿ, ಕೃಷ್ಣ ಮತ್ತು ಈಶ್ವರ, ಗಣಪತಿ, ನಾಗರ ಹಾವಿನ ಮೂರ್ತಿಗಳು ಇರುವುದರಿಂದ ವಿಜಯನಗರ ಕಾಲದ ಧರ್ಮವೂ ಪ್ರಭಾವ ಬೀರಿರುವ ಕುರುಹುಗಳಿವೆ. ಇದು ಅಲ್ಲದೆ ನಾರಪ್ಪನಿಗೆ ಗೋವಿಂದನೆಂದು ಕರೆಯುತ್ತಾರೆ. ಇದನ್ನು ಗಮನಿಸಿದಾಗ ತಿರುಪತಿ ತಿಮ್ಮಪ್ಪನಿಗೂ ಮತ್ತು ಕೆಲವು ಭಾಗದಲ್ಲಿ ಆಂಜನೇಯನಿಗೂ ಹೀಗೆ ಕರೆಯುತ್ತಾರೆ. ಕೆಲವರ ಅಭಿಪ್ರಾಯದ ಪ್ರಕಾರ ನಾರದ ಮುನಿ ವೈಷ್ಣವ ಸಂಪ್ರದಾಯ ಅಥವಾ ಭಗವಂತ ಸಂಪ್ರದಾಯದಿಂದ ಬಂದಿರಬಹುದು ಆದ್ದರಿಂದಲೇ ಗೋವಿಂದ ಎಂದು ಕರೆಯುತ್ತಾರೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಚಿಗಟೇರಿ ಗ್ರಾಮದಲ್ಲಿರುವ ದೇವಾಲಯಗಳು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿರಬಹುದು. ಈ ಹಿನ್ನೆಲೆಯಲ್ಲಿ ಚಾಲುಕ್ಯರು ಶೈವ ಧರ್ಮವನ್ನು ಅನುಸರಿಸಿಕೊಂಡು ಬಂದವರಾಗಿದ್ದಾರೆ. ಚಿಗಟೇರಿಯನ್ನು ಆಳಿದ ಶಿವನಪ್ಪ ನಾಯಕ ಹರಪನಹಳ್ಳಿ ಪಾಳೆಗಾರರಿಗೆ ವಿಧೇಯನಾಗಿ ನಡೆದುಕೊಂಡು ಪಾಳೆಗಾರರು ಅನುಸರಿಸಿದ ಧರ್ಮವನ್ನು ಅನುಸರಿಸಿ ರಬಹುದು.

ಒಟ್ಟಾರೆಯಾಗಿ ಸ್ಥಳೀಯ ಧಾರ್ಮಿಕ ಹಿನ್ನೆಲೆಯ ಬಗ್ಗೆ ಅನೇಕ ಅಭಿಪ್ರಾಯಗಳಿವೆ ಎನ್ನುವುದು ನನ್ನ ಕ್ಷೇತ್ರಕಾರ್ಯದ ಮಾಹಿತಿಗಳಿಂದ ಗೋಚರವಾಗುತ್ತದೆ.

೩.೩ ನೆಲೆಗೊಂಡಿರುವ ಬಗ್ಗೆ ಇರುವ ಐತಿಹ್ಯಗಳು

ಐತಿಹ್ಯ ಪದವನ್ನು Legend ಎಂಬುದಕ್ಕೆ ಸಂವಾದಿಯಾಗಿ ಬಳಸಲಾಗುತ್ತಿದೆ. ಲೆಜೆಂಡ್ ಮೂಲತಃ ಲ್ಯಾಟಿನ್ ಪದದಿಂದ ಬಂದಿದೆ. ಇನ್ನು ಇದಕ್ಕೆ 'Things to be Read' ಎಂಬ ಅರ್ಥವಿದೆ. ಫ್ರೆಂಚ್ ಭಾಷೆಯಲ್ಲಿ ಇದೇ ಅರ್ಥ ಉಳಿದು ಬೆಳೆದುಕೊಂಡು ಬಂದಿದೆ. ಇವು ಪ್ರಾರ್ಥನಾ ಮಂದಿರಗಳಲ್ಲಿ ಪಠಣ ಮಾಡಬಹುದಾದ ವಿಷಯಗಳಾಗಿದ್ದವು. ಐತಿಹ್ಯ ಎಂದರೆ ಕಿವಿಯಿಂದ ಕಿವಿಗೆ ಹರಿದು ಬಂದಿರುವ ಮಾತೊಂದು ಜನಪ್ರಿಯವು, ನಂಬುವಂತೆಯೂ ಇದ್ದಾಗ ಅದನ್ನು ಐತಿಹ್ಯವೆಂದು ಕರೆಯುತ್ತಾರೆ.

ನಾರಪ್ಪ ದೇವರು ಚಿಗಟೇರಿಯಲ್ಲಿ ನೆಲೆಗೊಂಡಿರುವ ಬಗ್ಗೆ ಅನೇಕ ಐತಿಹ್ಯಗಳಿವೆ. ಈ ವಿಚಾರದಲ್ಲಿಯೂ ಕೂಡಾ ಅನೇಕ ಭಿನ್ನಾಭಿಪ್ರಾಯಗಳಿವೆ. ಇಲ್ಲಿ ಹೇಳುವ ಐತಿಹ್ಯಗಳೆಲ್ಲವು ಜನಾಂಗಗಳ ಆಧಾರದ ಮೇಲೆ ಪ್ರಬಲವಾಗಿ ನೆಲೆಯೂರಿವೆ.

ಅಲ್ಲಿಯ ಸ್ಥಳೀಕರ ಅಭಿಪ್ರಾಯದಂತೆ ಹಿಂದೆ ಚಿಗಟೇರಿಯ ಗ್ರಾಮದಲ್ಲಿ ನೀರಿನ ಶುದ್ಧತೆ ಇರಲಿಲ್ಲ. ಆಗ ಸಾಮಾನ್ಯವಾಗಿ ಜನರ ಮೈಮೇಲೆ ನಾರುಣ್ಣು ರೋಗ ಕಾಣಿಸಿಕೊಳ್ಳುತ್ತಿತ್ತು. ಆ ಸಂದರ್ಭದಲ್ಲಿ ಯಾರೋ ಒಬ್ಬ ನನ್ನ ರೋಗವನ್ನು ಮಾಯ ಮಾಡಿದರೆ ನಿನಗೆ ನಾರನ್ನು ಹರಕೆಯಾಗಿ ಕೊಡುತ್ತೇನೆಂದು ಹರಕೆ ಹೊತ್ತಿರಬೇಕು. ಕಾಲಕ್ರಮೇಣ ನೀರಿನ ಶುದ್ಧತೆ ಬಂದ ನಂತರ ಅವನ ರೋಗ ಮಾಯವಾಗಿರಬೇಕು. ಆದ್ದರಿಂದ ಬೇಡಿಕೊಂಡ ಭಕ್ತ ನಾರನ್ನು ತಂದೊಪ್ಪಿಸಿದ. ಈ ಹಿನ್ನೆಲೆಯಲ್ಲಿ ಆ ದೇವರಿಗೆ 'ನಾರಪ್ಪ' ಎಂಬ ಹೆಸರು ಬಂದಿರಬೇಕು. ಮತ್ತು ನಾರಾಕುವ ಸಂಪ್ರದಾಯವೇ ಮುಂದೆ ಬೆಳೆದುಕೊಂಡು ಬಂದಿದೆ ಎಂದು ಹೇಳುತ್ತಾರೆ.

ಭಕ್ತರು ಬೆಳೆಸಿಕೊಂಡು, ಉಳಿಸಿಕೊಂಡು ಬಂದಿರುವ ಐತಿಹ್ಯಗಳು ಈ ರೀತಿಯಾಗಿರುತ್ತವೆ.

ಐತಿಹ್ಯ ೧ : "ನಾರಪ್ಪ ಚಿಗಟೇರಿ ಗ್ರಾಮದವರೇ ಆಗಿರುವ ಸಾಧ್ಯತೆಗಳಿವೆ. ಇಲ್ಲಿಯೇ ಐಕ್ಯವಾದ ಸಾಧು ಮುನಿ ಹಿಂದೆ ಮುನಿಯಪ್ಪ ಎಂಬುವನು ನಾಯಕ ಜನಾಂಗದವನಾಗಿದ್ದನು. ಆತನ ಹಸು ಪ್ರತಿನಿತ್ಯವೂ ಹುತ್ತಕ್ಕೆ ಹಾಲೆರೆದು ಬರುತ್ತಿತ್ತು. ಹುತ್ತದ ಸುತ್ತಲೂ ಇಸಿಗಿ (ಪರಿಗಿ) ಪೆಳೆಯು ಬೆಳೆದಿತ್ತು. ಹುತ್ತಕ್ಕೆ ಹಾಲೆರೆದು ಬಂದ ಹಸು ಮನೆಯಲ್ಲಿ ಹಾಲು ಕೊಡುತ್ತಿರಲಿಲ್ಲ. ಕೋಪಗೊಂಡ ಮುನಿಯಪ್ಪ ದನ ಕಾಯುವ ಹುಡುಗರನ್ನು ಬಡಿದು ದಿನಾಲು ಹಸುವಿನ ಹಾಲನ್ನು ಏನು ಮಾಡುತ್ತೀರಿ ಎಂದು ಬಯ್ಯುತ್ತಿದ್ದ. ಪ್ರತಿದಿನವೂ ಹಸುವಿನ ಓಡಾಟವನ್ನು ಗಮನಿಸಿದ್ದ ಹುಡುಗರು ನಿಮ್ಮ ಹಸು ಪ್ರತಿದಿನವೂ ಇಸಿಗಿ ಪೆಳೆಯೊಳಗೆ ಹೋಗಿ ಬರುತ್ತದೆ ಎಂದು ಹೇಳಿದರು. ಇದನ್ನು ಕೇಳಿದ ಎಲ್ಲರಿಗೂ ಆಶ್ಚರ್ಯವಾಯಿತು. ಮರುದಿನ ಬೆಳಿಗ್ಗೆ ಎಲ್ಲರು ಇದರ ಮಹತ್ವವೇನು ನೋಡಬೇಕೆಂದು ಹಸುವನ್ನು ಬಿಟ್ಟುಕೊಂಡು ಹಸುವಿನ ಹಿಂದೆ ಹೊರಟರು. ಎಂದಿನಂತೆ ಹಸು ಇಸಿಗಿ ಪೆಳೆ ಪ್ರವೇಶಿಸಿ ಹುತ್ತಕ್ಕೆ ಹಾಲನ್ನು ಸ್ವಪ್ರೇರಿತವಾಗಿ ಕರೆಯುತ್ತಿತ್ತು. ಆಶ್ಚರ್ಯಪಟ್ಟು, ನೆರೆದ ಜನರೆಲ್ಲರು ಸೇರಿ ಹುತ್ತವನ್ನು ಬಗೆದಾಗ ಅಲ್ಲಿ ಒಬ್ಬ ಸಾಧು ಮುನಿ ಕುಳಿತಿದ್ದ. ಅದೇ ಸಾಧುವೆ ಇಂದಿನ ನಾರಪ್ಪನ ಮೂರ್ತಿ. ಅನೇಕ ದಿನಗಳವರೆಗೆ ಮುನಿಯಪ್ಪನೇ ದೇವರ ಸೇವೆಯನ್ನು ಮಾಡಿದ. ನಂತರ ಸೇವೆಯನ್ನು ಬೇರೆಯವರಿಗೆ ಬದಲಾಯಿಸಲಾಯಿತು".[೪]

ಐತಿಹ್ಯ ೨ : "ಮೊದಲು ಚಿಗಟೇರಿಯ ಸುತ್ತಮುತ್ತಲು ಕಾಡು ಬೆಳೆದಿತ್ತು. ಕಾಡಿನ ಮಧ್ಯ ಬಲಿಷ್ಠವಾದ ಒಂದು ಆಲದ ಮರವಿತ್ತು. ಅದರ ಸುತ್ತಲು ಇಸಿಗಿ ಪೆಳೆಯು ದಟ್ಟವಾಗಿ ಬೆಳೆದಿತ್ತು. ಪೆಳೆಯ ಮಧ್ಯ ಒಬ್ಬ ಸಾಧು ತಪಸ್ಸು ಮಾಡುತ್ತಿದ್ದನು. ಕಾಲ ಕಳೆದಂತೆ ಸಾಧುವಿನ ಸುತ್ತಲು ಹುತ್ತ ಬೆಳೆಯಿತು. ಹೀಗಿರುವಾಗ ಊರಿನ ಬಣಕಾರನ ಹಸು ಪ್ರತಿದಿನ ಪೆಳೆಯೊಳಗೆ ನುಸುಳಿ ಹೋಗಿ ಹಾಲು ಕರೆದು ಬರುತ್ತಿತ್ತು. ಇದರಿಂದ ಮನೆಯಲ್ಲಿ ಹಸು ಹಾಲು ಕೊಡುತ್ತಿರಲಿಲ್ಲ. ದನ ಕಾಯುವವರೆ ಹೀಗೆ ಮಾಡುತ್ತಾರೆಂದು ಬಣಕಾರ ಒಂದು ದಿನ ತಾನೇ ಹಸುವನ್ನು ಕಾಯಲಿಕ್ಕೆ ಹೊರಟನು. ಸಮಯ ಕಳೆದಂತೆ ಹಸು ಆಲದ ಮರದ ಕೆಳಗಿರುವ ಇಸಿಗಿ ಪೆಳೆಯೊಳಗೆ ನುಸುಳಿ ಹೋಯಿತು. ಇದನ್ನು ಗಮನಿಸಿದ ಬಣಕಾರ ಹಸುವಿನ ಹಿಂದೆಯೇ ಓಡಿದ. ತಾನು ಪೆಳೆಯೊಳಗೆ ನುಸುಳಿ ಹೋದಾಗ ಅವನ ಕಣ್ಣಿಗೆ ಬಿದ್ದದ್ದು ಹಸು ಹುತ್ತಕ್ಕೆ ಹಾಲು ಕರೆಯುವ ದೃಶ್ಯ. ಆಗ ಆಶ್ಚರ್ಯಗೊಂಡು ಹುತ್ತವನ್ನು ಅಗಿಸಿದಾಗ ಒಳಗೆ ಸಾಧು ಇದ್ದನು. ಆತನೆ ನಾರದ ಅಥವಾ ನಾರಪ್ಪ".[೫]

ಇಂತಹ ಐತಿಹ್ಯಗಳು ಕೂಡ ಜನಾಂಗೀಯ ಆಧಾರದ ಮೇಲೆ ಸುಳಿದಾಡುತ್ತವೆ. ಮೂರ್ತಿ ಇಲ್ಲಿಯದೇ, ಮೂರ್ತಿಯಲ್ಲೂ ಹಿಂದೆ ಇದ್ದ ಶೈವ ಮತ್ತು ವೈಷ್ಣವ ಧರ್ಮದ ಸಮನ್ವಯತೆ ಕಾಪಾಡುವುದಕ್ಕೋಸ್ಕರ ರೂಪ ತಾಳಿದ್ದಾನೆ. ಆದ್ದರಿಂದಲೇ ನಾವು 'ಹರಿಹರ'ರಲ್ಲಿ ಭಿನ್ನಗಳಿಲ್ಲ ಎಂದು ಹೇಳುತ್ತೇವೆ. ಇನ್ನೂ ಕೆಲವರು ಇದು ಸ್ಥಳಾಂತರ ಮೂರ್ತಿ ಎಂದು ಹೇಳುತ್ತಾರೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗೊತ್ತಾಗಿರುವ ವಿಷಯಗಳನ್ನು ಮಾತ್ರ ಬರೆದಿರುತ್ತೇನೆ.

೩.೪ ದೇವಸ್ಥಾನ ಸ್ಥಾಪನೆ

ಚಿಗಟೇರಿ ಗ್ರಾಮದಲ್ಲಿ ಹಲವು ಸಣ್ಣ ಸಣ್ಣ ಗುಡಿಗಳಿದ್ದು ಬಹುಶಃ ಗುಡಿಗಳೆಲ್ಲವೂ ಕಲ್ಯಾಣಿ ಚಾಲುಕ್ಯರ ಕಾಲದಲ್ಲೇ ನಿರ್ಮಾಣವಾಗಿರಬಹುದು. ಈ ಗುಡಿಗಳನ್ನು ಗಮನಿಸಿದಾಗ ೧೦-೧೧ನೇ ಶತಮಾನದಲ್ಲೇ ಸ್ಥಾಪನೆಯಾಗಿರಬಹುದೆಂದು ತಿಳಿಯುತ್ತದೆ. ಊರಿನ ಹಿರಿಯ ಜಾನಪದ ಸಾಹಿತಿಗಳು ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಪ್ರಾಚೀನ ಕಾಲದಿಂದಲೂ ಪೂಜಾರಿಕೆಯನ್ನು ಮಾಡಿಕೊಂಡು ಬಂದಿದ್ದೇವೆ ಎಂದು ಹೇಳುವ ಪೂಜಾರಿಗಳ ಪ್ರಕಾರ ನಾರಪ್ಪನ ಗುಡಿಯೂ ಜಕ್ಕಣಚಾರಿ ಕಟ್ಟಡ ಇರಬಹುದು ಮತ್ತು ಗರ್ಭಗುಡಿ ಎಂಟನೇ ಶತಮಾನದ್ದು. ಮುಂದಿದ್ದ ಭಾಗವೂ ೧೧ನೇ ಶತಮಾನದ್ದು ಎಂದು ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಾರೆ. ಹಾಗೆಯೇ ವಿಜಯನಗರ ಕಾಲದಲ್ಲಿ ಸ್ಥಾಪನೆಯಾದ ಗುಡಿಯಿರಬಹುದು ಎಂದು ಹಿಂದೆ ಇದ್ದ ಶಾನಭೋಗರು ಅಭಿಪ್ರಾಯ ಪಡುತ್ತಾರೆ.

ಹಿಂದೆ ಪೂಜೆಗೆಂದು ಮಜ್ಜನ ಬಾವಿಯನ್ನು ಗುಡಿಯ ಪಕ್ಕದಲ್ಲೇ ನಿರ್ಮಿಸಿದ್ದರು. ಪ್ರತಿದಿನ ಬೆಳಿಗ್ಗೆ ಬಾವಿಯಿಂದಲೇ ನಾರಪ್ಪ ಪೂಜೆಗೆ ನೀರು ತರುತ್ತಿದ್ದರು. ಬಾವಿ ಮತ್ತು ದೇವಸ್ಥಾನ ಸ್ಥಾಪನೆಯಾದ ಯಾವುದೇ ದಾಖಲೆ, ಪುರಾವೆಗಳು ಇಲ್ಲ. ಗುಡಿಯ ಶೈಲಿಯನ್ನು ನೋಡಿದರೆ ಯಾರ ಆಳ್ವಿಕೆಯ ಕಾಲದ್ದು ಎಂದು ಊಹಿಸಬಹುದಾಗಿತ್ತು. ಆದರೆ ಪ್ರಸ್ತುತ ಸಮಯದಲ್ಲಿ ಹಳೆಯ ಗುಡಿಯನ್ನು ಒಡೆದು ಹಾಕಿ ಹೊಸ ದೇವಸ್ಥಾನವನ್ನು ನಿರ್ಮಿಸಿದ್ದಾರೆ ಮತ್ತು ಪಕ್ಕದಲ್ಲಿರುವ ಬಾವಿ, ದೇವಾಲಯದ ಸುತ್ತಲೂ ಇದ್ದ ಪೌಳಿಯನ್ನು ಒಡೆದು ಹಾಕಿದ್ದಾರೆ. ಹಳೆಯ ಗುಡಿ ಚಿಕ್ಕದಾಗಿದ್ದರೂ ಚೊಕ್ಕವಾಗಿ ನೋಡುಗರನ್ನು ಮನಸೆಳೆಯುತ್ತಿತ್ತು. ಅಂತಹ ಗುಡಿಯನ್ನು ಕೆಡವಿ ಅದರ ಕೆಲವು ಶಿಲ್ಪ ಕಲ್ಲಿನಿಂದ ಹೊಸ ಗುಡಿಯನ್ನು ನಿರ್ಮಿಸಿದ್ದಾರೆ. ಈಗಿನ ಗುಡಿಯೂ ಸುಂದರವಾಗಿದೆ.

ನನ್ನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬೇಟಿಯಾದ ಪ್ರತಿಯೊಬ್ಬರಲ್ಲಿಯೂ ಹಳೆಯ ಗುಡಿಯನ್ನು ಕೆಡವಬಾರದಾಗಿತ್ತು. ಪುರಾತನವಾದುದನ್ನೇ ಉಳಿಸಿಕೊಳ್ಳಬೇಕಿತ್ತು. ಆ ಕೆಲಸವನ್ನು ಯಾರೂ ಮಾಡಲಿಲ್ಲ ಎನ್ನುತ್ತಾ ನೀವೇಕೆ ನಾರಪ್ಪನ ವಿಷಯವನ್ನು ತೆಗೆದುಕೊಂಡಿರಿ? ಎಂದು ಪ್ರಶ್ನೆ ಕೇಳಿದವರೇ ಜಾಸ್ತಿಯಾಗಿದ್ದರು.

೩.೫ ದೇವಸ್ಥಾನ ಪರಿಚಯ

ನಾರಪ್ಪನ ದೇವಾಲಯವು ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ನಿರ್ಮಾಣವಾದುದ್ದಾಗಿದೆ. ಈ ದೇವಾಲಯದ

ಒಳಗೆ ಮತ್ತು ಹೊರಗೆ ಅಷ್ಟೊಂದು ಸೂಕ್ಷ್ಮವಾದ ಕೆತ್ತನೆಯು ಕಂಡುಬರುವುದಿಲ್ಲ. ದೇವಾಲಯವು ನೋಡುಗರನ್ನು ಆಕರ್ಷಿಸುತ್ತದೆ. ಇದರ ಸ್ವರೂಪವು ಪೂರ್ವಾ ಭಿಮುಖವಾಗಿದ್ದು, ಸುತ್ತಲೂ ಜಾಲಾಂಧ್ರ ಕಿಟಕಿಯನ್ನು ಮಾಡಲಾಗಿದೆ. ದೇವಸ್ಥಾನವನ್ನು ಪ್ರವೇಶಿಸುವ ಮುನ್ನ ಕೃಷ್ಣನ ತುಲಾಭಾರ (ಉಯ್ಯಾಲೆ) ಮಂಟಪವನ್ನು ಕಾಣಬಹುದು. ತದನಂತರ ದೇವಾಲಯದ ಸುತ್ತಲೂ ನಾಲ್ಕು ದೀಪದ ಕಂಬಗಳನ್ನು ಮತ್ತು ಎಡಭಾಗದಲ್ಲಿರುವ 'ಕಾಲ ಭೈರವನ' ಮೂರ್ತಿ (ಕಾಪಾಲಿಕ ಪಂಥದ ಮೂರ್ತಿ)ಯನ್ನು ಹಾಗೆಯೇ ಸುತ್ತಲೂ ವೀರಗಲ್ಲು ಮತ್ತು ಹಾಳಾಗಿರುವ ಶಾಸನವನ್ನು ಕಾಣಬಹುದು. ಬಲಕ್ಕೆ ಮುಂದುವರೆದರೆ ಮೂರು ನಾಲ್ಕು ವೀರಗಲ್ಲುಗಳು ಮತ್ತು ಮಜ್ಜನ ಬಾವಿಯನ್ನು ಕಾಣಬಹುದು. ದೇವಸ್ಥಾನದ ಸುತ್ತ ಪೌಳಿಯು ನಿರ್ಮಾಣವಾಗಿದೆ. ದೇವಾಲಯದ ಮುಂದೆ ಬಲಭಾಗದಲ್ಲಿ ತೇರಿನ ಗಡ್ಡೆ ನಿಲ್ಲಿಸಲು ಛಾವಣಿಯನ್ನು ನಿರ್ಮಿಸಲಾಗಿದೆ. ಇದೆಲ್ಲವನ್ನು ನೋಡಿಕೊಂಡು ದೇವಾಲಯದ ರಾಜಾಂಗಳವನ್ನು ದಾಟಿ ದೇವಸ್ಥಾನ ಪ್ರವೇಶಿಸಿದರೆ ಮೊದಲಿಗೆ ಪುರಾತನ ಕಾಲದ ದೊಡ್ಡ ಕುದುರೆ ಮತ್ತು ಮನುಷ್ಯನ ಮೂರ್ತಿಗಳು ನೋಡುಗರನ್ನು ಸ್ವಾಗತಿಸುತ್ತವೆ.

ನಂತರ ಕಿರಿದಾದ ಗರ್ಭಗುಡಿ ಆ ಗರ್ಭಗುಡಿಯೊಳಗೆ ನಾರಪ್ಪ ದೇವರ ಸುತ್ತ ಈಶ್ವರ, ಬಸವಣ್ಣ ಮತ್ತು ನಾರಪ್ಪನ ಅಜುಬಾಜು ರುಕ್ಮಿಣಿ, ಸತ್ಯಭಾಮ, ಗಣಪತಿ ಮುಂತಾದ ಮೂರ್ತಿಗಳನ್ನು ಕಾಣಬಹುದು. ಈ ದೇವಸ್ಥಾನವು ಜಕಣಾಚಾರಿಯಿಂದ ಕಟ್ಟಲ್ಪಟ್ಟಿದೆ ಎಂದು ಚಿಗಟೇರಿಯ ಗ್ರಾಮದ ನಾರಪ್ಪ ದೇವರ ಹಿರಿಯ ಪೂಜಾರಿ ಕಲ್ಲಜ್ಜನ ವಾದವಾಗಿದೆ. ದ್ವಾರ ಬಾಗಿಲು ಮತ್ತು ಗರ್ಭಗುಡಿಯ ಬಾಗಿಲಿನಲ್ಲಿ ಗದೆಯನ್ನು ಹಿಡಿದು ನಿಂತಿರುವ ಮೂರ್ತಿಗಳನ್ನು ಮತ್ತು ಬಾಗಿಲು ಮೇಲಿರುವ ಗಜಲಕ್ಷ್ಮಿಯ ಚಿತ್ರಗಳನ್ನು ಕಾಣಬಹುದು. ಇವುಗಳ ಜೊತೆಗೆ ನಗಾರಿಗಳನ್ನು ಇಲ್ಲಿ ಕಾಣಬಹುದು.

ಪ್ರಸ್ತುತ ಸಂದರ್ಭದಲ್ಲಿ ಈ ದೇವಾಲಯವು ನವೀಕೃತಗೊಂಡು ಪುರಾತನ ಕಾಲದ ಅವಶೇಷಗಳನ್ನು ಮರೆ ಮಾಡಿದ. ಮತ್ತು ಗರ್ಭಗುಡಿಯಿಂದ ಅನೇಕ ಮೂರ್ತಿಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆ. ಕೆಲವೊಂದು ಮೂರ್ತಿಗಳಿಗೆ ಆಶ್ರಯವಿಲ್ಲದಂತೆ ಬೀದಿ ಪಾಲಾಗಿವೆ. ಬೀದಿ ಪಾಲಾಗಿರುವ ಅನೇಕ ವಿಗ್ರಹಗಳನ್ನು ಹೊಸ ದೇವಸ್ಥಾನ ಸುತ್ತಮುತ್ತ ಕಾಣಬಹುದು. ಅನೇಕ ಪುರಾತನ ಕಲ್ಲುಗಳನ್ನು ಬುನಾದಿಗೆ ಹಾಕಲಾಗಿದೆ. ಉಳಿದ ಕಲ್ಲುಗಳನ್ನು ತಿಪ್ಪೆಯಲ್ಲಿ ಬಿಸಾಕಿದ್ದಾರೆ.

ಆಧುನಿಕತೆಯ ಪ್ರಭಾವ ಪ್ರಸ್ತುತ ನಾರಪ್ಪನ ದೇವಸ್ಥಾನದ ಸ್ವರೂಪದಲ್ಲಿ ಅದರ ಪ್ರಭಾವ ಬೀರುತ್ತಿದೆ. ಇದರಲ್ಲಿ ಅನೇಕ ಬದಲಾವಣೆಗಳು ಆಗಿ ಹೋಗಿವೆ ಮತ್ತು ಆಗುವ ಸಾಧ್ಯತೆಯ ಸೂಚನೆಗಳು ಕಂಡುಬರುತ್ತವೆ.

೩.೬ ಮೂರ್ತಿ ಪರಿಚಯ

ನಾರಪ್ಪನ ವಿಗ್ರಹವು ಸುಂದರವಾಗಿದ್ದು, ಸೌಮ್ಯವಾಗಿದೆ. ೨ ೧/೨ ಅಡಿ ಉದ್ದ ೨ ಅಡಿಯ ಗದ್ದಿಗೆಯ ಮೇಲೆ ಆಸೀನನಾಗಿದ್ದಾನೆ. ಕುಳಿತಿರುವ ಭಂಗಿಯನ್ನು ಕೆಲವರು 'ಹಠಯೋಗಿ ಪ್ರದೀಪಿಕೆ'ಯೊಳಗೆ ಬರುವ 'ನಾರದೇವ' ಎಂದು ಹೇಳುತ್ತಾರೆ. ಮತ್ತು 'ಹಠ ಪ್ರದೀಪಿಕೆ'ಯೊಳಗೆ ಬರುವ 'ಸಿಂಹಾಸನ' ಯೋಗ ಭಂಗಿಯ ರೀತಿಯಲ್ಲಿ ಕಾಣುತ್ತದೆ. ಈ

ಮೊದಲೇ ಹೇಳಿದಂತೆ ನಾರಪ್ಪನ ಎಡಗೈಯಲ್ಲಿ ಇಷ್ಟಲಿಂಗ(ಸುತ್ತಮುತ್ತಲ ಭಕ್ತರು ಹೇಳುವ ಮಾಹಿತಿ) ಆದರೆ ಅದು ಇಷ್ಟಫಲವನ್ನು ಮತ್ತು ಬಲಗೈಯಲ್ಲಿ ಶಂಖು(ಮೂಲ ವಿಗ್ರಹದಲ್ಲಿ ಇರುವುದಿಲ್ಲ ಕೇಳಿದಾಗ ಮುರಿದು ಹೋಗಿದೆ ಎನ್ನುತ್ತಾರೆ)ವನ್ನು, ಕೊರಳಲ್ಲಿ ಸುಂದರವಾದ ಆಭರಣಗಳನ್ನು ಮತ್ತು ಯಜ್ಞೋಪವೀತ ಕೆಲವರು ಜನಿವಾರ ಎನ್ನುತ್ತಾರೆ. ತಲೆಯ ಮೇಲೆ ಜಟೆಯಿದೆ. ಮತ್ತು ಹೊಟ್ಟೆಗೆ ಹಾವನ್ನು ಆಭರಣವಾಗಿ ಸುತ್ತಿಕೊಂಡಿದ್ದಾನೆ. ಮೂರ್ತಿಗೆ ಇರುವುದು ಎರಡೇ ಕೈಗಳು. ಮೂರ್ತಿಯ ಸ್ವರೂಪ ಧ್ಯಾನದ, ತಪಸ್ಸಿನ ರೂಪದಲ್ಲಿದೆ. ಬಾಯಿಯನ್ನು ಸ್ವಲ್ಪ ಊದಿಸಿಕೊಂಡಿದೆ; ಈ ಭಂಗಿಯನ್ನು ನೋಡಿ ಅನೇಕರು ಶಿವನ ಆರಾಧನೆಯಲ್ಲಿ ಕುಳಿತಿರುವ ಮೂರ್ತಿ ಎಂದು ಹೇಳುತ್ತಾರೆ.

"ಮೂರ್ತಿ ಬಹುಶಃ ನಾಥ ಪಂಥೀಯ ಹಠಯೋಗ ಪ್ರವರ್ತಕರಲ್ಲಿ ಒಬ್ಬರಾದ ನಾರದೇವಃನ ಮೂರ್ತಿಯೇ ಎಂದು ಗುರುತಿಸಬಹುದು.

ಶ್ರೀ ಆದಿನಾಥ ಮತ್ಸೇಂದ್ರ ಶಾಖರಾನಂದ ಭೈರವಾಃ ।

ಚಾರಂಗಿ ಮೀನಗೋರಕ್ಷವಿರೂ ಪಾಕ್ಷವಿಲೇಶ ಮಾಃ ।

ಮಂತಾನೋಭೈರವೋ ಯೋಗಿಸಿದ್ಧರ್ ಬುದ್ದಶ್ಚಕಂಥಡಿಃ ।

ಕೋರಂಟಕಃ ಸುರಾನಂದಃ ಸಿದ್ಧಪಾದಃಶ್ಚ ಚರ್ಪಟಃ

ಕಾವೇರಿ ಪೂಜ್ಯ ಪಾವಶ್ಚ ನಿತ್ಯನಾಥೋ ನಿರಂಜನಃ ।

ಕಾಪಾಲಿಬಿಂದು ನಾಥಶ್ಯ ಕಾಕ ಚಂಡಿಶ್ವರ್‌ಹ್ವಯಃ

ಅಲ್ಲಮಃ ಪ್ರಭುದೇವಶ್ಚ ಘೋಡಾಚೋಲಿಚಟಿಂಟಿಣಿಃ ।

ಭಾನುಕಿ ನಾರದೇವಶ್ಚಖಂಡಃ ಕಾಪಾಲಿಕ ಸ್ತಥಾ

ಇತ್ಯಾದಿಯೋ ಮಹಾಸಿರ್ದ್ಧಾಃ ಹಠಯೋಗ ಪ್ರಭಾವತಃ ।

ಖಂಡಯತ್ವಾ ಕಾಲದಂಡಂ ಬ್ರಹ್ಮಾಂಡೇ ವಿಚನಿಂತಿತೇ

ಹಠಯೋಗದ ಪ್ರದೀಪಿಕೆ! ಪ್ರಥಮೋಪದೇಶ ಸ್ವಾತ್ಮಾರಾಮ ಯೋಗೀಂದ್ರ ಅವರ ಅಭಿಪ್ರಾಯವೆಂಬಂತೆ ನಾರದೇವನೇ ಚಿಗಟೇರಿ ನಾರ(ಪ್ಪ) ಮುನಿಯಾಗಿರಬೇಕು. ಈಗಿರುವ ನಾರಪ್ಪ ಹೆಸರೇ ಸರಿಯಾದುದು, ಸೂಕ್ತವಾದುದು ಎಂಬ ಅಭಿಪ್ರಾಯ ಪಡುತ್ತಾರೆ.

ಮೈಲಾರ ದೇವರ ಗುಡಿಯಲ್ಲಿ ಕಂಡುಬರುವಂತೆ ಈ ದೇವಾಲಯದಲ್ಲಿಯೂ ಕುದುರೆಯ ವಿಗ್ರಹವನ್ನು ಕಾಣಬಹುದು. ಮೈಲಾರ ದೇವರಿಗೆ ಆಗಿಹುಣ್ಣಿಮೆಯಲ್ಲಿ ಗಂಗಿಮಾಳವ್ವನ ಜೊತೆಯಲ್ಲಿ ಭಕ್ತರು ಲಗ್ನಮಾಡುವರು, ಇದನ್ನು ಗಮನಿಸಿದರೆ

ಯೋಗಿಯಾದವನು ಲಗ್ನಮಾಡಿಕೊಂಡು ಗೃಹಸ್ಥನಾದಂತೆ! ಗೃಹಸ್ಥನಾದ ಮೇಲೆ ಯೋಗಿಯಾಗಿ, ಹಠಯೋಗಿಯಾಗಲಿಕ್ಕೂ ಸಾಧ್ಯವಿದೆ, ಯಾವುದೋ ದೇವರಿಗೆ ನಿರ್ಮಿಸಿದ ಗುಡಿಯಲ್ಲಿ ಯಾರೋ ಬಂದು ಕೆಲಕಾಲ ಉಳಿದು ಅವರ ಹೆಸರಿನಲ್ಲಿ ಆ ಗುಡಿಯನ್ನು ಕರೆಯುವ ಸಂಭವವೂ ಉಂಟು. ಇದೆಲ್ಲ ಪೂರ್ಣ ಪ್ರಮಾಣದ ಪುರಾವೆಗಳು ದೊರಕುವವರೆಗೆ ಸಂಶೋಧನೆ ನಡೆಸುವುದು ಅಗತ್ಯವಾಗಿದೆ".[೬]

ನಾರಪ್ಪನ ಮೂಲ ವಿಗ್ರಹವನ್ನು ಸಂಪೂರ್ಣ ವಿಶ್ಲೇಷಣೆ ಮಾಡಿದಾಗ ಹಠಯೋಗದಲ್ಲಿ ಬರುವ 'ಸಿಂಹಾಸನ' ಎಂದು ಕರೆಯುವ ಆಸನದ ಪ್ರಕಾರ ಕಾಣುತ್ತದೆ.

೩.೭ ವಾಸ್ತುಶಿಲ್ಪ

"ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ಪ್ರಸಿದ್ಧವಾದ ಅರವತ್ತು ನಾಲ್ಕು ಕಲೆಗಳಿಗೆಲ್ಲಾ 'ಶಿಲ್ಪ' ಎನ್ನುವ ಹೆಸರೇ ಅನ್ವಯವಾಗುತ್ತಿತ್ತು. ವಾಸ್ತುಶಿಲ್ಪ ಅದರಲ್ಲಿನ ಒಂದು ವಿಭಾಗವೆಂದು ಹೇಳಬಹುದು. 'ವಾಸ್ತು' ಎಂದರೆ ವಸ್ತುಗಳಿಂದ ನಿರ್ಮಿತವಾದುದು. ಇದರಲ್ಲಿ ಪ್ರತಿಯೊಂದು ವಸ್ತುವು ಒಳಗೊಳ್ಳುತ್ತವೆ. ಮುಂದೆ ಇದು ಪರಿಮಿತಿಗೊಂಡು 'ವಾಸ್ತುಶಿಲ್ಪ' ಎಂದರೆ ಕಟ್ಟಡಗಳ ನಿರ್ಮಾಣ (Architecture) ಮತ್ತು "ಶಿಲ್ಪ" ಎಂದರೆ ಮೂರ್ತಿಗಳ ನಿರ್ಮಾಣ (Sclpture) ಎಂಬ ಅರ್ಥ ಬೆಳೆದುಬಂದಿತು.

ಸಾಮಾನ್ಯವಾಗಿ ಎಲ್ಲ ಕಲೆಗಳಿಗೂ ಹೇಳುವಂತೆ ವಾಸ್ತುಶಿಲ್ಪಕ್ಕೂ ನಮ್ಮ ಶಾಸ್ತ್ರ ಗ್ರಂಥಗಳು ದೈವಿತವಾದ ಮೂಲವನ್ನೇ ಹೇಳುತ್ತವೆ. ವಾಸ್ತುಶಿಲ್ಪದ ಹುಟ್ಟನ್ನು "ಮಾನಸಾರ" ನಿರ್ದೇಶಿಸುವ ರೀತಿ ಹೀಗಿದೆ : ಬ್ರಹ್ಮನ ನಾಲ್ಕು ಮುಖಗಳಿಂದ ವಿಶ್ವಕರ್ಮ, ಯಮ, ತ್ವಷ್ಟ್ರ ಮತ್ತು ಮನು ಹುಟ್ಟಿದರು. ಇವರ ನಾಲ್ಕು ಜನ ಮಕ್ಕಳು ಕ್ರಮವಾಗಿ ಸ್ಥಪತಿ, ಸೂತ್ರಗ್ರಾಹಿ. ವರ್ಧಕಿ, ಮತ್ತು ತಕ್ಷಕ ಎಂಬುವರು. ಇವರಿಂದ ವಾಸ್ತುಕಲೆ ಬೆಳೆಯಿತು ಎನ್ನುತ್ತದೆ ಮಾನಸಾರ".[೭] ಅನೇಕ ವಿದ್ವಾಂಸರು ವಾಸ್ತುಶಿಲ್ಪವೆಂದರೇನು? ಎಂಬುದನ್ನು ಚರ್ಚಿಸಿದ್ದಾರೆ.

"ವಾಸ್ತುಶಿಲ್ಪ ಕಲೆಯ ಐತಿಹಾಸಿಕ ಅಧ್ಯಯನಕ್ಕೆ ದೊರಕುವ ವಿಶಿಷ್ಟವಾದ ಸಾಮಗ್ರಿಗಳೆಂದರೆ ದೇವಾಲಯಗಳು. ಏಕೆಂದರೆ ವಾಸದ ಮನೆಗಳಿಗಿಂತ ಹೆಚ್ಚು ಕಾಲ ಉಳಿಯುವಂತಹ ರೀತಿಯಲ್ಲಿ ಅವುಗಳನ್ನು ಕಟ್ಟಿದರು ಮತ್ತು ಉಳಿಸಿಕೊಂಡು ಬಂದರು. ಅಂದರೆ ವಾಸ್ತುಶಿಲ್ಪ ಪ್ರಧಾನವಾಗಿ ಉಳಿದು ಬೆಳೆದು ಬಂದುದು ಧಾರ್ಮಿಕ ತಳಹದಿಯ ಮೇಲೆ"[೮] ಎನ್ನಬಹುದು.

ನಾರಪ್ಪನ ದೇವಸ್ಥಾನವು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಸ್ಥಾಪನೆಯಾಗಿರಬಹುದು. ದೇವಸ್ಥಾನವನ್ನು ಹೊಡೆದಿರುವ ಕಾರಣ ಸಂಪೂರ್ಣ ವಾಸ್ತುಶಿಲ್ಪದ ಬಗ್ಗೆ ಹೇಳುವುದು ಕಷ್ಟಕರ. ಆದರೂ ಅಳಿದುಳಿದ ಕೆಲವು ವಸ್ತುಗಳ ಮೇಲೆ ವಾಸ್ತುಶಿಲ್ಪವನ್ನು ನಿರ್ಧರಿಸಬೇಕಾಗಿದೆ. ಈಗಿರುವ ಕಂಬಗಳನ್ನು ಗಮನಿಸಿದರೆ ಬಾಗಳಿ ಕಲ್ಲೇಶ್ವರ ದೇವಸ್ಥಾನದ ಕಂಬಗಳ ಸ್ವರೂಪವನ್ನು ಹೋಲುತ್ತವೆ. ಎಲ್ಲಾ ಮೂರ್ತಿಶಿಲ್ಪಗಳಿಗೂ ಗಟ್ಟಿ, ಮಿಶ್ರಿತ ಬಳಪವನ್ನು ಬಳಸಿರುತ್ತಾರೆ. ಮೇಲ್ಛಾವಣೆಯಲ್ಲಿ ಕಮಲಾಕಾರ

ಚಿತ್ರದ ಬಳಪದ ಕಲ್ಲನ್ನು ಕಾಣಬಹುದು. ಶಿಲ್ಪ ಕೆತ್ತನೆಯಲ್ಲಿ ಸೂಕ್ಷ್ಮವಾದ ಕೆತ್ತನೆಯೇ ಎಂದು ಹೇಳಬಹುದು. ದೇವಸ್ಥಾನದಲ್ಲಿ ಶಿವ ಪಾರ್ವತಿಯರ ಮೂರ್ತಿಯನ್ನು ಕಾಣಬಹುದಾಗಿದೆ.

ಪ್ರಸ್ತುತ ಕಾಲದಲ್ಲಿ ಹಳೆಯ ವಾಸ್ತುಶಿಲ್ಪವೆಲ್ಲ ಹೊಸ ದೇವಸ್ಥಾನದ ಭಾರವನ್ನು ಹೊತ್ತು ನಿಂತಿದೆ ಮತ್ತು ಉಳಿದ ವಾಸ್ತುಶಿಲ್ಪ ತಿಪ್ಪೆ ಕಸದಲ್ಲಿ ಬಿದ್ದಿರುತ್ತದೆ. ಇವುಗಳಿಗೆ ಯಾವುದೇ ರಕ್ಷಣೆ ಇಲ್ಲದೆ ಇವುಗಳನ್ನು ನೋಡಿ ಕೊಳ್ಳುವ ಹೊಣೆಗಾರಿಕೆ ಇಲ್ಲವಾಗಿದೆ.

೩.೮ ನಾರಪ್ಪನ ಒಕ್ಕಲುಗಳು

ಒಂದು ಜನವರ್ಗ ಸ್ಥೂಲವಾಗಿ ಒಂದೇ ಬಗೆಯ ಗುಣಲಕ್ಷಣಗಳನ್ನು ಹೊಂದಿದ್ದರೂ ಅದು ಹಲವಾರು ಬಗೆಯ ವೃತ್ತಿ, ಆಚಾರ, ವಿಚಾರ, ನಡವಳಿಕೆಗಳ ಸಮಷ್ಟಿಯಾಗಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಜಾತಿಗಳಲ್ಲಿ ಮತ್ತೆ ಮತ್ತೆ ಉಪಜಾತಿಗಳನ್ನು ಕಾಣುವ ಹಾಗೆ ನಾರಪ್ಪನಲ್ಲಿಯು ಹಲವು ಒಕ್ಕಲುಗಳನ್ನು ಕಾಣುತ್ತೇವೆ.

ನಾರಪ್ಪನ ಒಕ್ಕಲಿನಲ್ಲಿ ಎರಡು ಒಕ್ಕಲುಗಳನ್ನು ಕಾಣುತ್ತೇವೆ. ಅವುಗಳೆಂದರೆ ಲಿಂಗಾಯತರು ಮತ್ತು ನಾಯಕರು ನಾರಪ್ಪನ ಒಕ್ಕಲಿನಲ್ಲಿ ಸೇರಿಕೊಂಡಿದ್ದಾರೆ. ಈ ದೈವಕ್ಕೆ ನಡೆದುಕೊಳ್ಳುವವರಿಗೆ ಇಲ್ಲಿ ಜಾತಿ ಗೌಣವಾಗಿದೆ. ಈ ಒಕ್ಕಲುಗಳಲ್ಲಿ ದಾಸಪ್ಪರಾದವರು ಐದು ಇಲ್ಲವೆ ಒಂಬತ್ತು ಘಂಟೆ ಮಣಿ ಮತ್ತು ಬೆತ್ತವನ್ನು ಹಿಡಿದುಕೊಳ್ಳುತ್ತಿದ್ದು ತುಂಬ ವಿಶೇಷವೆನಿಸುತ್ತದೆ. ಇಲ್ಲಿಯ ಎಲ್ಲಾ ಜಾತಿಯವರು ಅಪಾರ ಭಕ್ತಿ-ಶ್ರದ್ಧೆ ಗೌರವಗಳಿಂದ ನಡೆದುಕೊಳ್ಳುತ್ತಾರೆ. ಮತ್ತು ಸುತ್ತಮುತ್ತಲಿನ ಹಳ್ಳಿಗರು ನಾರಪ್ಪನನ್ನು ಅಸವಲ್ಲದ ದೇವರೆಂದು ಕರೆಯುತ್ತಾರೆ.

ಒಕ್ಕಲುಗಳ ಪರಿಕಲ್ಪನೆ ಯಾವಾಗಿನಿಂದ ಬಂದಿರಬಹುದು ಎನ್ನುವುದು ಗೌಣವಾಗಿದೆ. ನಾರಪ್ಪನ ಒಕ್ಕಲಿನಲ್ಲಿ ಕೆಳವರ್ಗದವರ ಸಂಖ್ಯೆ ಕಡಿಮೆ ಎಂದು ಹೇಳಬಹುದು. ನಾರಪ್ಪನ ಒಕ್ಕಲಿನಲ್ಲಿ ನಾಯಕರು ಮಾತ್ರ ಸೇರಿಕೊಂಡಿರುವುದು ತುಂಬ ವಿಶೇಷವಾಗಿದೆ. ಈ ಒಕ್ಕಲುಗಳಲ್ಲಿಯೇ ಬೆಡಗಿನ ಒಕ್ಕಲನ್ನು ಕಾಣಬಹುದು. ಈ ಭಾಗದಲ್ಲಿ ಹೆಚ್ಚಾಗಿ ಲಿಂಗಾಯತರೆ ಇದ್ದು, ಕೆಲವು ಬೆಡಗಿನವರು, ಬೇರೆ ಬೇರೆ ದೇವರುಗಳಿಗೆ ನಡೆದುಕೊಳ್ಳುವ ಒಕ್ಕಲುಗಳಿವೆ. ಆದ್ದರಿಂದ ಇಲ್ಲಿಯ ಭಕ್ತರು ಹೆಚ್ಚಾಗಿ ಬೆಡಗಿನ ಒಕ್ಕಲಿನವರು ಎಂದು ಹೇಳುತ್ತಾರೆ. ಇಲ್ಲಿಯ ಇನ್ನೊಂದು ವಿಶೇಷವೆಂದರೆ ಒಂದೊಂದೇ ಬೆಡಗಿನವರು ಕೂಡಿ ಜಾತ್ರೆಯ ಸಂದರ್ಭದಲ್ಲಿ ಹೊಸ ಮಡಿಕೆಯಲ್ಲಿ ಎಡ ಮಾಡುವುದು ಬಹಳ ವಿಶೇಷವೆನಿಸಿರುತ್ತದೆ. ಇದನ್ನೆ ಇವರು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ.

ಇಲ್ಲಿಯ ಇನ್ನೊಂದು ವಿಶೇಷವೆಂದರೆ ಸಾವಕ್ಕನ ಒಕ್ಕಲಾಗಿ ನಾರಪ್ಪಗೆ ನಡೆದುಕೊಳ್ಳುವುದು, ಒಂದೇ ಒಂದು ಬೆಡಗಿನವರು ಮಾತ್ರ ಬೇರೆ ಬೆಡಗಿನವರಿಗಿಂತ ಕೆಲವೊಂದು ಆಚರಣೆಗಳಲ್ಲಿ ಭಿನ್ನತೆಯನ್ನು ಈ ಬೆಡಗಿನಲ್ಲಿ ಕಾಣುತ್ತೇವೆ. ಅದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿಯಲಾಯಿತು.

೧. ಲಿಂಗಾಯತರು : ಲಿಂಗಾಯತರು ನಾರಪ್ಪನ ಪರಂಪರೆಯಲ್ಲಿ ಸೇರಿಕೊಂಡಿದ್ದಾರೆ. ನಾರಪ್ಪನ ಭಕ್ತರಲ್ಲಿ ಇವರ ಸಂಖ್ಯೆ ಹೆಚ್ಚಾಗಿದೆ. ಈ ಜನಾಂಗದಲ್ಲಿಯು ದಾಸಪ್ಪನಾಗಿ ದೀಕ್ಷೆ ಪಡೆಯುವ ಪದ್ಧತಿಯಿದೆ. ದೀಕ್ಷೆ ಪಡೆದವರು ನಾರಪ್ಪನ ಬಗ್ಗೆ ಕಥೆ ಹೇಳುವುದಾಗಲಿ ಅಥವಾ ಹಾಡುವುದಾಗಲಿ ಕಂಡುಬರುವುದಿಲ್ಲ. ನಾರಪ್ಪನ ಒಕ್ಕಲಿನಲ್ಲಿ ಆಹಾರ ಪದ್ಧತಿ ಜನಾಂಗಿಕ ವಾಗಿರುತ್ತದೆ. ನಾಯಕರಲ್ಲಿ ಮಾತ್ರ ಮಾಂಸ ಮದ್ಯವನ್ನು ಸೇವಿಸುತ್ತಿರುವ ಪದ್ಧತಿ ರೂಢಿಯಲ್ಲಿದೆ. ಇವರು ಈ ಆಚರಣೆಯನ್ನು ಪ್ರತ್ಯೇಕ ಸ್ಥಳದಲ್ಲಿ ಆಚರಿಸುತ್ತಾರೆ.

ಬೇರೆ ಜನಾಂಗಕ್ಕಿಂತ ನಾರಪ್ಪನಿಗೆ ಒಕ್ಕಲಾಗಿರುವ ಮನೆಗಳಲ್ಲಿ ನಾರಪ್ಪನ ವಾರ, ಹಬ್ಬ ಹರಿದಿನ, ಜಾತ್ರೆಗಳಲ್ಲಿ ಸಂಪೂರ್ಣ ವ್ಯತ್ಯಾಸವನ್ನು ಕಾಣುತ್ತೇವೆ. ಇವರಲ್ಲಿ ಮದುವೆ ಸಂಪ್ರದಾಯವನ್ನು ಬೇರೆ ಕಾಣುತ್ತೇವೆ. ಇನ್ನುಳಿದಂತೆ ಹುಟ್ಟು, ಸಾವು ಮುಂತಾದ ಸಂದರ್ಭದಲ್ಲಿ ಇವರ ಆಚರಣೆಗಳು ಜಾತಿ ಬದ್ಧವಾಗಿರುತ್ತವೆ. ಇವರು ಸಾಮಾಜಿಕವಾಗಿ, ಆರ್ಥಿಕವಾಗಿ ಹೆಚ್ಚು ಮುಂದುವರೆದವರಾಗಿರುತ್ತಾರೆ, ಅಲ್ಲದೇ ನಾರಪ್ಪನಿಂದ ನಮಗೆ ಸಾಕಷ್ಟು ಐಶ್ವರ್ಯ ಸಂಪತ್ತು ದೊರಕಿದೆ ಮತ್ತು ನಾರಪ್ಪನಿಗೆ ನಡೆದುಕೊಳ್ಳುವವರ ಒಕ್ಕಲುಗಳಲ್ಲಿ ಯಾರು ಕಡುಬಡವರಿಲ್ಲ ಎಂದು ಪ್ರತಿಯೊಬ್ಬ ವಕ್ತೃಗಳು ಅಭಿಪ್ರಾಯ ಪಡುತ್ತಾರೆ.

೨. ನಾಯಕರು : ನಾರಪ್ಪನಲ್ಲಿ ಇನ್ನೊಂದು ವಿಶೇಷತೆಯನ್ನು ಗುರುತಿಸಬಹುದು. ನಾರಪ್ಪಗೆ ನಾಯಕರು ಒಕ್ಕಲಾಗಿದ್ದಾರೆಂದರೆ ಎಲ್ಲರೂ ಆಶ್ಚರ್ಯ ಪಡುತ್ತಾರೆ. ನಾಯಕರಲ್ಲಿ ನಾರಪ್ಪಗೆ ನಡೆದುಕೊಳ್ಳುವವರ ಸಂಖ್ಯೆ ಕಡಿಮೆ. ಈ ಜಾತಿಯಲ್ಲಿಯೂ 'ದಾಸಪ್ಪ'ನೆಂದು ದೀಕ್ಷೆ ಪಡೆಯುವ ಪದ್ಧತಿ ಇದೆ. ಹಿಂದೆ 'ದಾಸಿ'ಯನ್ನು ಬಿಡುವ ಪದ್ಧತಿಯೂ ಇತ್ತು. ಕಾಲ ಕ್ರಮೇಣ ಕಡಿಮೆಯಾಗಿದೆ. ದೀಕ್ಷೆಯನ್ನು ಪಡೆದವರು ದೇವರ ಹೆಸರನ್ನು ಪ್ರಚಾರ ಮಾಡುವುದಿಲ್ಲ. ಬೇರೆ ದೇವರುಗಳಲ್ಲಿ ಪ್ರಚಾರತೆಯನ್ನು ಹೆಚ್ಚಾಗಿ ಕಾಣುತ್ತೇವೆ.

ಬೇರೆ ಬೇರೆ ಜನಾಂಗಕ್ಕಿಂತ ನಾರಪ್ಪಗೆ ನಡೆದುಕೊಳ್ಳುವವರ ಮನೆಗಳಲ್ಲಿ ಅನೇಕ ಭಿನ್ನತೆಯನ್ನು ಗುರುತಿಸಬಹುದು. ಅದರಲ್ಲಿಯು ಹಬ್ಬ ಹರಿದಿನ ಗಳಲ್ಲಿ ಬೇರೆಯವರಿಗಿಂತ ಭಿನ್ನವಾಗಿರುತ್ತದೆ ಮತ್ತು ಮದುವೆ ಸಂದರ್ಭದಲ್ಲಿ ತಮ್ಮ ಮೇಯಾದ ಬೆಡಗಿನ ದೇವರ ಮನೆಗಳನ್ನು ಪ್ರತ್ಯೇಕವಾಗಿ ಮಾಡಿಕೊಂಡಿರುತ್ತಾರೆ. ಆಯಾ ಬೆಡಗಿನವರು ಬೆಡಗಿನ ದೇವರ ಮನೆಯ ಮುಂದೆಯೇ ಮದುವೆಯನ್ನು ಮಾಡಬೇಕು.

ನಾಯಕ ಮತ್ತು ಲಿಂಗಾಯತರಲ್ಲಿ ಕೆಲವೊಂದು ಬೆಡಗಿನವರು ಮಾತ್ರ ನಾರಪ್ಪನ ಒಕ್ಕಲಾಗಿದ್ದಾರೆ. ಆ ಬೆಡಗುಗಳಲ್ಲಿ ಕೆಲವೊಂದನ್ನು ಮಾತ್ರ ಇಲ್ಲಿ ಹೇಳಲಾಗಿದೆ.

ಶ್ಯಾವಂತ್ಲೋರು	ಹೆನೆಲ್ಲೋರು
ಕಣ್ಣಲ್ಲೋರು	ಪೂಲರ ಬೆಡಗು
ಮತ್ತೆಲ್ಲೋರು	ಮುತ್ತಿನ ಪೆಂಡೆಲ್ಲೋರು

ಕೋಚ್ಚಲ್ಲೋರು	ಪಳ್ಳೆಲ್ಲೋರು
ಕೆಂಪು ಜೆಂಡೆಲ್ಲೋರು	ಅಡ್ನೆಲ್ಲೋರು
ಬಡ್ನೆಲ್ಲೋರು	ಕಟ್ಟೆಲ್ಲೋರು
ಸಾಡ್ನೇರು	ತಂಡಸ್ಲೋರು
ಉಳ್ಳೆಲ್ಲೋರು	ಮೂರ್ತಿರು
ತುರುಬೆನೇರು	ಹಾವಿನಬೆಡಗು
ಮಳಿಲ್ಲೋರು	ಸವೆಲ್ಲೋರು
ಕಗ್ಗಲ್ಲೋರು	ಗೌಡ್ಲೋರು
ಮೊನ್ನೆಲ್ಲೋರು	

ಮುಂತಾದ ಬೆಡಗಿನವರು ನಾರಪ್ಪನ ಒಕ್ಕಲಿನವರು ಎಂದು ಹೇಳಬಹುದಾಗಿದೆ. ಮತ್ತು ಬೆಡಗಿನಲ್ಲೇ ಬೆಡಗಿನೆಸರಿನ ಸಂಘಗಳನ್ನು ಮಾಡಿಕೊಂಡು ಅನೇಕ ಕಾರ್ಯಕ್ರಮಗಳನ್ನು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಇವುಗಳ ಜೊತೆಗೆ ಅನೇಕ ವರ್ಗದವರು ಬರುತ್ತಾರೆ. ಹಬ್ಬ ಹರಿದಿನಗಳಲ್ಲಿ ಜಾತಿ ಗೌಣವಾಗಿದ್ದು ಇಲ್ಲಿ ಏಕತೆ ಸಾರುವುದನ್ನು ಕಾಣುತ್ತೇವೆ.

ಮಂಟೇಸ್ವಾಮಿ, ಮೈಲಾರಲಿಂಗ, ಮಲೇಮಹಾದೇಶ್ವರ ಮುಂತಾದ ಸಾಂಸ್ಕೃತಿಕ ನಾಯಕರು ಮೇಲ್ವರ್ಗದಿಂದ ಕೆಳವರ್ಗದವರೆಗೆ ಅನೇಕ ವರ್ಗದವರು ಒಕ್ಕಲಾಗಿರುವುದನ್ನು ಇಲ್ಲಿ ನೆನಸಿಕೊಳ್ಳಬಹುದು. ಆದರೆ ನಾರಪ್ಪ ದೈವ ಮಾತ್ರ ಎರಡು ಒಕ್ಕಲುಗಳಿಗೆ ಸೀಮಿತವಾಗಿರುತ್ತದೆ.

೩.೯ ಉಡುಗೆ ತೊಡುಗೆಗಳು

ಮನುಷ್ಯನು ಸಾಮಾಜಿಕ ಪರಿವರ್ತನೆಗೆ ಒಳಗಾದಂತೆಲ್ಲಾ ಅವನ ಪ್ರತಿಯೊಂದು ಸಮೂಹದಲ್ಲಿ ತನ್ನ ನೀತಿ ನಿಯಮಗಳು ಬದಲಾಗುವುದನ್ನು ಕಾಣುತ್ತೇವೆ. ಹಾಗೆಯೇ ಬದಲಾದಂತೆ ಅವನ ವೇಷಭೂಷಣಗಳು ಬದಲಾಯಿಸಿಕೊಳ್ಳುತ್ತಾನೆ. ಮತ್ತು ತಾನು ನಂಬಿದ ದೈವದ ಉಡುಗೆ ತೊಡುಗೆಗಳನ್ನು ಬದಲಾಯಿಸುತ್ತಾ ಹೋಗುತ್ತಾನೆ.

ಇಲ್ಲಿ ಭಕ್ತರು ನಾರಪ್ಪನಿಗೆ ಅನೇಕ ಹರಕೆಗಳನ್ನು ಒಪ್ಪಿಸುತ್ತಾರೆ. ಕಷ್ಟ ಬಂದವರು ತಮ್ಮ ಕಷ್ಟವನ್ನು ಪಾರು ಮಾಡುವುದಕ್ಕಾಗಿ ದೈವಕ್ಕೆ ಹರಕೆ ಹೊತ್ತು ಒಪ್ಪಿಸುತ್ತಾರೆ. ತಮ್ಮ ಹರಕೆಗಳನ್ನು ವಸ್ತುಗಳ ರೂಪದಲ್ಲಿ ಒಪ್ಪಿಸುತ್ತಾರೆ. ಜನರು ನಾನಾ ರೀತಿಯ ಹರಕೆ ಕಟ್ಟಿಕೊಂಡು ನಿಯತ್ತಿನಿಂದ ಹರಕೆ ತೀರಿಸುತ್ತಾರೆ. ಹರಕೆ ತೀರಿಸದಿದ್ದರೆ ಏನೆಲ್ಲಾ ಕಷ್ಟಗಳು ಬರುವವೋ ಎಂಬ ಭಯ

ಜನರನ್ನು ಆವರಿಸಿದೆ. ನಾರಪ್ಪನಿಗೆ ಅನೇಕ ರೀತಿಯ ಹರಕೆ ಹೊತ್ತವರು, ವಪ್ಪತ್ತಿನ ಆಚರಣೆ ಮಾಡಿ ಜಾತ್ರೆಯ ಸಂದರ್ಭದಲ್ಲಿ ಇಲ್ಲವೆ ತಮಗನುಕೂಲವಾದ ಸಮಯದಲ್ಲಿ ಬೆಳ್ಳಿ, ಬಂಗಾರ, ತಾಮ್ರ ಮುಂತಾದ ಸಾಮಾನುಗಳನ್ನು ತಂದೊಪ್ಪಿಸುತ್ತಾರೆ.

ಕಾಲ ಬದಲಾದಂತೆ ನಾರಪ್ಪನ ಉಡುಗೆ-ತೊಡುಗೆಗಳು ಬದಲಾಗುತ್ತ ಬಂದಿವೆ. ಹಿಂದೆ ನಾರಪ್ಪನ ಮೈ ತುಂಬ ಕೆಂಪು ಬಟ್ಟೆಯನ್ನು ಹಾಕುತ್ತಿದ್ದರು. ಮುಖಕ್ಕೆ ಬಂಗಾರದ ಕವಚವನ್ನು ಹಾಕುತ್ತಿದ್ದರು. ಪ್ರಸ್ತುತ ಕಾಲದಲ್ಲಿ ನಾರಪ್ಪನ ದೇವಸ್ಥಾನವು ಬದಲಾದಂತೆ, ನಾರಪ್ಪನ ಉಡುಗೆ-ತೊಡುಗೆಗಳು ಸಹ ಬದಲಾಗಿವೆ ಮತ್ತು ಮೈ ತುಂಬ ಬೆಳ್ಳಿ ಕವಚವನ್ನು ಧರಿಸಿದ್ದಾರೆ.

ಬಂಗಾರ : ಕಂಟಿಸರ, ಚೌಕ, ತಾಯತ, ಚತ್ರಿ ಇವುಗಳು ಮಾತ್ರ ನಾರಪ್ಪನ ಬಂಗಾರದ ಉಡುಪುಗಳಾಗಿರುತ್ತವೆ.

ಬೆಳ್ಳಿ : ಕಣ್ಣು, ಮೀಸೆ, ಗದ್ದ, ಅಣೆಚುಕ್ಕೆ, ಮುಖವಾಡ, ಎದೆ ಕವಚ, ಶಂಕು ಲಿಂಗ, ಮುಂತಾದವುಗಳು ಮಾತ್ರ ನಾರಪ್ಪನ ಬೆಳ್ಳಿ ಆಭರಣಗಳಾಗಿವೆ.

ತಾಮ್ರ : ನಾಲ್ಕು ಘಂಟೆಗಳು ಮಾತ್ರ ತಾಮ್ರದ ಸಾಮಾನುಗಳು. ಹರಕೆ ಹೊತ್ತ ಭಕ್ತರು ಸಲ್ಲಿಸಿದ ಆಭರಣದ ವಸ್ತುಗಳು ಅನೇಕ ಇರುವುದನ್ನು ನೋಡಬಹುದು.

ಪೂಜಾರಿಗಳು ಮಡಿಯಲ್ಲಿರುವಂತೆ ನಾರಪ್ಪನಿಗೆ ಮಡಿಯ ಉಡುಪುಗಳನ್ನು ರಾತ್ರಿಯ ಸಮಯದಲ್ಲಿ ಹಾಕುತ್ತಾರೆ. ಪ್ರತಿದಿನ ಬೆಳಿಗ್ಗೆ ಬೆಳ್ಳಿ ಕವಚವನ್ನು ಪೂಜೆಯಾದ ನಂತರ ಹಾಕುತ್ತಾರೆ. ರಾತ್ರಿ ಸಮಯದಲ್ಲಿ ಪೂಜೆ ಮಾಡಿ ಕಣ್ಣು, ಮೀಸೆ, ಗದ್ದ, ಅಣೆಚುಕ್ಕೆ, ಮೈ ತುಂಬ ಕೆಂಪು, ಹಳದಿ ಬಟ್ಟೆಯನ್ನು ಹಾಕುತ್ತಾರೆ. ಹಿಂದೆ ಇದೇ ರೀತಿ ಇರುವುದನ್ನು ಕ್ಷೇತ್ರ ಕಾರ್ಯದ ವಕ್ತೃವಿನಿಂದ ತಿಳಿಯಲಾಯಿತು.

೩.೧೦ ಆಸ್ತಿ ಮತ್ತು ಆಡಳಿತ

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿರುವ ದೇವರು, ದೇವತೆಗಳಿಗೆ ಆಸ್ತಿಗಳು ಇರುತ್ತವೆ. ಆ ಆಸ್ತಿಯ ಆದಾಯದಿಂದಲೆ ದೇವಸ್ಥಾನಕ್ಕೆ ಬೇಕಾಗುವ ಕಾಯಿ, ಕರ್ಪೂರ, ಎಣ್ಣೆ ಮುಂತಾದ ಖರ್ಚಿಗೆ ಬಳಸುತ್ತಾರೆ. ಇಲ್ಲವೆ ಆ ದೇವರ ಪೂಜೆ ಮಾಡುವ ಪೂಜಾರಿಗಳ ಕಡೆಗೆ ಬಿಟ್ಟು ಕೊಟ್ಟಿರುತ್ತಾರೆ. ಇಂತಹ ಪದ್ಧತಿಗಳನ್ನು ಬೇರೆ ಬೇರೆ ದೇವರುಗಳ ಆಡಳಿತದಲ್ಲಿ ಕಾಣಬಹುದು.

ನಾರಪ್ಪ ದೇವರಿಗೆ ಸಂಬಂಧಿಸಿದ ೧೬ ಎಕರೆ ಭೂಮಿ ಇತ್ತು. ಎಲ್ಲಾ ಆಸ್ತಿಯನ್ನು ನಾರಪ್ಪನ ಪೂಜೆ ಮಾಡುವ ಪೂಜಾರಿಗಳ ಕಡೆ ಕೊಟ್ಟಿದ್ದರು, ಪೂಜಾರಿಗಳ ಮನೆಗಳು ಚಿಗಟೇರಿ ಗ್ರಾಮದಲ್ಲಿ ಒಟ್ಟು ಎಂಟು ಮನೆಗಳು ಇದ್ದು ೧೬ ಎಕರೆ ಆಸ್ತಿಯನ್ನು ತಲಾ ಎಂಟು ಭಾಗಗಳನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಮತ್ತು ಅವರೇ ಆ ಆಸ್ತಿಯ ಕಂದಾಯವನ್ನು ಕಟ್ಟಿಕೊಳ್ಳುತ್ತಿದ್ದರು. ಕ್ರಮೇಣ ಆಸ್ತಿಯನ್ನು ಸರ್ಕಾರದವರು, ಆಸ್ತಿ ಇಲ್ಲದ ಬಡವರಿಗೆ ದಾನವಾಗಿ ಕೊಡಿಸಿದ್ದಾರೆ. ಈಗ ನಾರಪ್ಪನ ಹೆಸರಿನಲ್ಲಿ ಯಾವುದೇ ಆಸ್ತಿಯೂ ಇಲ್ಲ. ದೇವಸ್ಥಾನಕ್ಕೆ ಬೇಕಾದ ಖರ್ಚುಗಳನ್ನು ಭಕ್ತರೇ ನೋಡಿಕೊಂಡು

ಹೋಗುತ್ತಾರೆ. ಮತ್ತು ನಾರಪ್ಪನ ಭಕ್ತರೇ ಒಂದು ಸಂಸ್ಥೆಯನ್ನು ಮಾಡಿಕೊಂಡಿದ್ದಾರೆ. ಅದರ ಹೆಸರು 'ಶ್ರೀ ಶಿವನಾರದ ಮುನಿ ಟ್ರಸ್ಟ್' ಎಂದು. ದೇವಸ್ಥಾನಕ್ಕೆ ಬೇಕಾದ ಖರ್ಚುಗಳನ್ನು ಈ ಟ್ರಸ್ಟ್‌ನ ಮೂಲಕವೇ ನಿಭಾಯಿಸುತ್ತಾರೆ.

ಹಿಂದೆ ನಾರಪ್ಪ ದೇವರಿಗೆ ಸಂಬಂಧಿಸಿದಂತೆ ಯಾವುದೇ ಆಡಳಿತವೂ ಇರಲಿಲ್ಲ. ಕಾಲಕ್ರಮೇಣ ಭಕ್ತರ ಸಂಖ್ಯೆ ಜಾಸ್ತಿಯಾದ ದಿವಸದಿಂದ ಊರಿನವರು ಮತ್ತು ಭಕ್ತರು ಸಭೆ ಸೇರಿ ದೇವಸ್ಥಾನವನ್ನು ನೋಡಿಕೊಳ್ಳಲು ಒಂದು ಕಮಿಟಿಯನ್ನು ಮಾಡಬೇಕು ಎಂದು ತೀರ್ಮಾನಿಸಿ ದಾವಣಗೆರೆ ನಾರಪ್ಪ, ಮುನಿಯಪ್ಪ ಮತ್ತು ಕೊಂಡಜ್ಜ ಬಸಪ್ಪ, ಮುದೇನೂರು ಸಂಗಜ್ಜ ಮುಂತಾದವರು ಕೂಡಿ ಒಂದು ಸಂಸ್ಥೆಯನ್ನು ಮಾಡಿಕೊಂಡು, ಮುದೇನೂರು ಸಂಗಜ್ಜ ಅಧ್ಯಕ್ಷರಾದರು. ಕೊಂಡಜ್ಜ ಬಸಪ್ಪ ಉಪಾಧ್ಯಕ್ಷರಾದರು. ಇನ್ನುಳಿದವರು ಕಾರ್ಯದರ್ಶಿ, ಖಜಾಂಚಿ ಮುಂತಾದ ಕೆಲಸಗಳನ್ನು ವಹಿಸಿಕೊಂಡರು. ಇವರು ೧೯೫೭ ರಿಂದ ೧೯೬೭ರವರೆಗೆ ಸುಮಾರು ೧೧ ವರ್ಷಗಳ ಕಾಲ ದೇವಸ್ಥಾನದ ಆಡಳಿತವನ್ನು ನಿರ್ವಹಿಸಿಕೊಂಡು ಬಂದಿದ್ದಾರೆ.

ಪ್ರಸ್ತುತ ಕಾಲದಲ್ಲಿ ಅಣಬೇರು ರಾಜಣ್ಣನವರು ಅಧ್ಯಕ್ಷರಾಗಿದ್ದಾರೆ. ಎಲ್ಲಾ ಆಡಳಿತವನ್ನು ಇವರೇ ನೋಡಿಕೊಂಡು ಹೋಗುತ್ತಿದ್ದಾರೆ. ನಾರಪ್ಪನ ದೇವಸ್ಥಾನವು ನವೀಕೃತಗೊಳ್ಳುವುದಕ್ಕೆ ಇವರ ಆಡಳಿತವೇ ಕಾರಣವಾಗಿ ರುತ್ತದೆ. ಇವರ ಕಮಿಟಿಯ ಮೂಲಕ ಸಭೆ ಸೇರಿ ನಾರದ ಮುನಿ ದೇವಸ್ಥಾನಕ್ಕೆ ಬೇಕಾದ ಸಕಲ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಾರೆ. ನಾರದ ಮುನಿಯ ಕಾಣಿಕೆ ಪೆಟ್ಟಿಗೆಯಿಂದ ವರ್ಷಕ್ಕೆ ಬೇಕಾದಷ್ಟು ಹಣ ಸಂಗ್ರಹವಾಗುತ್ತದೆ. ಬಂದ ಹಣವನ್ನು ಬ್ಯಾಂಕಿಗೆ ಕಟ್ಟುತ್ತಾರೆ. ಮತ್ತು ಒಡವೆಗಳನ್ನು ಸಹ ಲಾಕರ್‌ನಲ್ಲಿಡುತ್ತಾರೆ. ಪ್ರಸ್ತುತ ಕಾಲದ ಜಾತ್ರೆ ಸಂದರ್ಭದಲ್ಲಿ ಹಣ ಸಂಗ್ರಹಕ್ಕಾಗಿ ವಿಶೇಷವಾದ ಕಾಣಿಕೆ ಪೆಟ್ಟಿಗೆಯನ್ನು ಮಾಡಿಸಿದ್ದಾರೆ. ಆ ಪೆಟ್ಟಿಗೆಯನ್ನು ಜಾತ್ರೆಯಲ್ಲಿ ಬಂದ ಭಕ್ತರಿಗೆ ಇಂತಿಷ್ಟು ಹಣಕ್ಕೆಂದು ಮಾರುತ್ತಾರೆ. ಅದನ್ನು ಕೊಂಡ ಭಕ್ತರು ಒಂದು ವರ್ಷದ ತನಕ ತಮಗೆ ತಿಳಿದಷ್ಟು ಪ್ರತಿ ದಿನವೂ ಹಣವನ್ನು ಹಾಕುತ್ತಾರೆ. ಜಾತ್ರೆ ಸಂದರ್ಭದಲ್ಲಿ ಅದನ್ನು ದೇವಸ್ಥಾನಕ್ಕೆ ತಂದು ಒಪ್ಪಿಸುತ್ತಾರೆ. ಈ ಯೋಜನೆಯ ಜವಬ್ದಾರಿಯನ್ನು ಆಡಳಿತ ವರ್ಗದವರು ವಹಿಸಿಕೊಂಡಿದ್ದಾರೆ.

ಪ್ರಸ್ತುತ ನಾರಪ್ಪನ ಪೂಜೆಗೆ ಪ್ರತಿದಿನ ಬೆಳಿಗ್ಗೆ ದಾವಣಗೆರೆಯಿಂದ ಹೂವಿನ ಹಾರವನ್ನು ಕಳಿಸುತ್ತಾರೆ. ಪೂಜಾರಿಗಳು ಪ್ರತಿದಿನ ಬೆಳಿಗ್ಗೆ ಜಿಗಟೇರಿ ಕ್ರಾಸ್‌ನಿಂದ ಹೂವಿನ ಹಾರವನ್ನು ತೆಗೆದುಕೊಂಡು ಹೋದ ನಂತರ ನಾರಪ್ಪನ ಪೂಜಾ ಕಾರ್ಯಗಳು ನಡೆಯುತ್ತವೆ.

ಹೊಸ ಟ್ರಸ್ಟ್‌ನ ಆಡಳಿತದಲ್ಲೂ ನಾರಪ್ಪ ದೇವರ ಆಚರಣೆಗಳು, ನಾರಪ್ಪನ ಉಡುಗೆ-ತೊಡಿಗೆ, ಆಚಾರ-ವಿಚಾರಗಳು ಆಧುನಿಕ ಸಂದರ್ಭಕ್ಕೆ ತಕ್ಕಂತ ಬದಲಾವಣೆಗಳನ್ನು ಪಡೆದುಕೊಳ್ಳತೊಡಗಿವೆ.

ಭಾವಣಿಯನ್ನು ಕೆಡವಿ ಕಟ್ಟಿಸಿದ್ದು

ಹೊಸ ದೇವಸ್ಥಾನ ಕಟ್ಟುವ ಸಂದರ್ಭದಲ್ಲಿ ಹಿಂದೆ ಇದ್ದ ಪುರಾತನ ಭಾವಣಿಯನ್ನು ಕಿತ್ತು ಬೇರೆಡೆಯಲ್ಲಿ ಹೊಸ ಭಾವಣಿಯನ್ನು ಕಟ್ಟಿಸಿದ್ದಾರೆ. ಮತ್ತು ದೇವಸ್ಥಾನದ ಸುತ್ತ ಇದ್ದ ಪುರಾತನ ಪೌಳಿಯನ್ನು ಕಿತ್ತು ಹಾಕಿದ್ದಾರೆ. ಮತ್ತು ಪುರಾತನ

ಕಾಲದಿಂದಲೂ 'ನಾರಪ್ಪನ ಪೂಜೆ'ಗೆಂದು ಮೀಸಲಾಗಿದ್ದ ಮಜ್ಜನ ಬಾವಿಯನ್ನು ಮುಚ್ಚಿದ್ದಾರೆ. ದೇವಸ್ಥಾನದ ಅನೇಕ ವಿಗ್ರಹಗಳನ್ನು ಹೊರಹಾಕಿ ಅನಾಥವಾಗಿಸಿದ್ದಾರೆ.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ, ಇಲ್ಲಿ ನಾರಪ್ಪನ ಆಸ್ತಿ ಪಾಸ್ತಿಗಳು ಛಿದ್ರವಾಗಿರುತ್ತವೆ. ನಂತರದ ಆ ಒಕ್ಕಲಿನ ಭಕ್ತರ ಸಹಕಾರದಿಂದ ನಾರಪ್ಪನ ಪರಂಪರೆ ಮುಂದುವರಿಯುತ್ತಿದೆ ಎನ್ನಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಅವನ ಆಚರಣೆ ಸಂಪ್ರದಾಯಗಳಲ್ಲಿ ಬದಲಾವಣೆಗಳನ್ನು ಪಡೆದುಕೊಳ್ಳುತ್ತಿವೆ.

ಅಡಿಟಿಪ್ಪಣಿ

೧. ಶಿವರಾಮ ಕಾರಂತರು - ಸಿರಿಗನ್ನಡ ಅರ್ಥಕೋಶ ೧೯೭೧.

೨. ಡಾ.ಎಂ. ಚಿದಾನಂದ ಮೂರ್ತಿ - ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ. ೪೫೦-೧೧೫೦) ೨೦೦೨ ಪುಟ. ೧೬೮

೩. ಅದೇ. ಪುಟ. ೧೭೮

೪. ಚಿಗಟೇರಿ ಗ್ರಾಮದ ಎಲ್ಲ ನಾಯಕ ಬಳಗದ ಅಭಿಪ್ರಾಯದಂತೆ

೫. ವಕ್ತೃ - ಶಿವಶಂಕರ ಬಾದಾಮಿ

೬. ಕುಂಬಾಸ - ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ೧೯೯೦, ಪುಟ. ೭೨

೭. ಡಾ.ಎಚ್. ತಿಪ್ಪೇರುದ್ರಸ್ವಾಮಿ - ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೨೦೦೧, ಪುಟ. ೫೨೩.

೮. ಅದೇ ಪುಟ. ೫೨೬

ಅಧ್ಯಾಯ - ೪

ಆಚರಣೆಗಳು

೪. ೧ ಜೀವನಾವರ್ತನ ಆಚರಣೆಗಳು

- ೪. ೧. ೧ ಜನನದ ಸಂದರ್ಭ
- ೪. ೧. ೨ ಋತುಮತಿ ಸಂದರ್ಭ
- ೪. ೧. ೩ ದಾಸಪ್ಪನ ಹೊರೆ ಸಂದರ್ಭ
- ೪. ೧. ೪ ಮದುವೆ ಸಂದರ್ಭ
- ೪. ೧. ೫ ಸೀಮಂತ ಸಂದರ್ಭ
- ೪. ೧. ೬ ನಾಮಕರಣ ಮತ್ತು ತೊಟ್ಟಿಲ ಸಂದರ್ಭ
- ೪. ೧. ೭ ಸಾವಿನ ಸಂದರ್ಭ

೪. ೨ ವಾರ್ಷಿಕಾವರ್ತನ ಆಚರಣೆಗಳು

- ೪. ೨. ೧ ದಿನಂ ಪ್ರತಿ
- ೪. ೨. ೨ ವಾರದ ವಿಶೇಷದಿನ
- ೪. ೨. ೩ ಅಮಾವಾಸ್ಯೆ ಮತ್ತು ಹುಣ್ಣಿಮೆ
- ೪. ೨. ೪ ಶ್ರಾವಣ ಮಾಸ
- ೪. ೨. ೫ ಕಾರ್ತಿಕೋತ್ಸವ

೪. ೩ ಜಾತ್ರೆ ವಿವರ

೪. ೪ ಜಾತ್ರೆಯಲ್ಲಿ ಪ್ರದರ್ಶನಗೊಳ್ಳುವ ಕಲೆಗಳು

ಜನಪದ ಸಂಸ್ಕೃತಿಗೆ ಆಚರಣೆಯೇ ಬೆನ್ನೆಲುಬು. ಆಚರಣೆಯಿಲ್ಲದೆ ಯಾವ ದೈವದ ಅಸ್ತಿತ್ವವೂ ಇರಲು ಸಾಧ್ಯವಿಲ್ಲ. ಆಚರಣೆಗಳು ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ವ್ಯಕ್ತಿಗಳಿಂದಲೇ ಆಗಬೇಕಾದುದು. ದೇವತೆಗೂ ಸಮಾಜಕ್ಕೂ ಇರುವ ಸಂಬಂಧ ಅಭಿನಯಗೊಳ್ಳುವ ಕ್ರಮದ ವಿವರಗಳೇ ಆಚರಣೆಗಳು ಎನ್ನಬಹುದು.

"ಸಂಪ್ರದಾಯ ಅಂಗೀಕರಿಸಿದ ಧಾರ್ಮಿಕ ಮತ್ತು ಮಾಂತ್ರಿಕ ಆಚರಣೆಗಳ ಮೊತ್ತವೇ ಆಚರಣೆ."[೧] ಜನಪದರಲ್ಲಿ ಧರ್ಮಗಳಿಗೆ ಸಂಬಂಧಪಟ್ಟ ಆಚರಣೆ, ಕರ್ಮ ವಿಧಿಗಳು ನಡೆಯುತ್ತವೆ. ನಂಬಿಕೆಯ ಸಿದ್ಧಾಂತ ಆಚರಣೆಯನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತದೆ. ಆಚರಣೆ ಹುಟ್ಟುವ ಮುನ್ನ ಅಥವಾ ನಂತರ ಪುರಾಣಗಳು ಹುಟ್ಟಿಕೊಳ್ಳುತ್ತವೆ ಎನ್ನಬಹುದು. "ಪುರಾಣ, ಕಥೆ ಮರೆತು ಹೋದ ಸಂದರ್ಭದಲ್ಲಿ ಯಾವುದೇ ಆತಂಕವಿಲ್ಲದೆ ಆಚರಣೆ ಮುಂದುವರೆಯುತ್ತಾ ಹೋಗುವುದನ್ನು ಕಾಣುತ್ತೇವೆ."[೨]

"ಆಚರಣೆಗಳು ವಿಶೇಷ ಸಂದರ್ಭದಲ್ಲಿ ಆಚರಿಸಲ್ಪಟ್ಟಾಗ ಹಬ್ಬಗಳೆನಿಸಿಕೊಳ್ಳುತ್ತವೆ."[೩] ಹಾಗೆಯೇ "ಆಚರಣೆಗಳು ಐತಿಹಾಸಿಕ ಅಂಶವೊಂದನ್ನು ನಿರ್ವಹಿಸಿ ತೋರಿಸುತ್ತವೆ. ಚರಿತ್ರೆಯ ಅನೇಕ ಸಂಗತಿಗಳು ಅಳಿದು ಹೋದರೂ ಅವು ಆಚರಣೆಯಲ್ಲಿ ಜೀವಂತವಾಗಿರುವುದು ಇದಕ್ಕೆ ಕಾರಣವಾಗಿರಬಹುದು."[೪] "ಜನಪದರಿಗೆ ಒಂದೊಂದು ಆಚರಣೆಯೂ ಜೀವಂತ, ಅರ್ಥಪೂರ್ಣ."[೫] ಪ್ರತಿಯೊಂದು ದೇವತೆ ಮತ್ತು ದೇವರಲ್ಲಿರುವ ಆಚರಣೆಗಳು ಭಿನ್ನವಾಗಿರುತ್ತವೆ.

ಮನುಷ್ಯ ಅಗೋಚರವಾದ ದೈವ ಶಕ್ತಿಗಳ ಪ್ರತ್ಯಾರ್ಥವಾಗಿ ನಡೆಸುವ ಮೂಲಾಚಾರಗಳು ಮತ್ತು ಕರ್ಮವಿಧಿಗಳನ್ನು ಆಚರಣೆಗಳೆಂದು ಕರೆಯುತ್ತಾರೆ. ಈ ಆಚರಣೆಗಳನ್ನು ಪರಂಪರಾಗತವಾಗಿ ಮುಂದುವರಿಸಿಕೊಂಡು ಬಂದಿರುವುದರಿಂದ ಇವುಗಳ ಹಿನ್ನೆಲೆಯಲ್ಲಿ ಬದಲಾದ ನಂಬಿಕೆಗಳು ಇರುತ್ತವೆ. ಆಚರಣೆಗಳು ಧರ್ಮದ ಅನುಸಾರವಾಗಿರುವುದೇ ಹೆಚ್ಚು. ಈ ಬಗೆಯ ಆಚರಣೆಗಳನ್ನು ಅನುಷ್ಠಾನಕ್ಕೆ ತಂದರೆ ತಾನು ನಂಬಿದ ಅಗೋಚರ ಅಥವಾ ಪವಿತ್ರ ವಸ್ತುಗಳಿಗೆ ತನ್ನ ಮೇಲೆ ಪ್ರೀತಿ ಉಂಟಾಗುತ್ತದೆಯೆಂದು. ಅವನ ನಂಬಿಕೆ ಮತ್ತು ಆಚರಣೆಗಳು ಒಟ್ಟೊಟ್ಟಿಗೆ ಇದ್ದರೂ ಕೂಡ ಕೆಲವು ವೇಳೆ ಗೊತ್ತಿಲ್ಲದಂತೆಯೇ ಅವೆರಡಕ್ಕೂ ಸಂಬಂಧವೇ ಇಲ್ಲದಂತಹ ಸಂದರ್ಭ ಬರುವುದುಂಟು. ಆದ್ದರಿಂದ ಇದರ ಪವಿತ್ರತೆ ಅಗೋಚರ ಶಕ್ತಿಗಳ ಬಗೆಗಿರುವ ಕಲ್ಪನೆ ಭಯಂಕರವಾಗಿರುತ್ತದೆ. ಇವುಗಳ ಕಾರಣಕ್ಕಾಗಿ ಆಚರಣೆಗಳನ್ನು ಶ್ರದ್ಧೆ, ಭಕ್ತಿಗಳಿಂದ ನಡೆಸಲಾಗುವುದು.

ಒಬ್ಬ ವ್ಯಕ್ತಿ ಇಷ್ಟಪಟ್ಟು ಒಂದು ಆಚರಣೆಯನ್ನು ಸ್ವಂತ ಮಾಡಲು ಸಾಧ್ಯವಿಲ್ಲ. ಒಂದು ಜನಾಂಗದ ಜೀವನ ವಿಧಾನದ ಬೇಡಿಕೆಯ ಅಂಶವಾಗಿ ಆಚರಣೆ ರೂಪ ಪಡೆಯುತ್ತವೆ. ಪ್ರಕೃತಿಯಲ್ಲಿ ಮತ್ತು ಮಾನವನ ದೇಹದಲ್ಲಿ ಉಂಟಾಗುವ ಬದಲಾವಣೆಯನ್ನು ಆಚರಣೆಗಳ ಮೂಲಕ ಗುರುತಿಸಲಾಗುತ್ತದೆ. ಮಾನವರ ಬುದ್ಧಿವಂತಿಕೆಗೆ ಮತ್ತು ಅವರ ಭಾವ ಪ್ರಪಂಚಕ್ಕೆ ಸಂಬಂಧಿಸಿದ ಆಚರಣೆಗಳು, ನೈಸರ್ಗಿಕ ಕ್ರಿಯೆಗಳಿಗೆ ಸಂಬಂಧಿಸಿದ ಆಚರಣೆಗಳು, ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಹಾಗೂ ಸಾಮಾಜಿಕ ರಚನೆಗಳಿಗೆ ಸಂಬಂಧಿಸಿದ ಆಚರಣೆಗಳೆಂದು ಸ್ಥೂಲವಾಗಿ ವಿಂಗಡಿಸಲ್ಪಟ್ಟು, ಮನುಷ್ಯನ ಮನಸ್ಸಿನ ಪರಿವರ್ತನೆಯ ಬಗೆ ಬಗೆಯ ವಿನ್ಯಾಸಗಳನ್ನು ಆಚರಣೆಗಳು ವ್ಯಕ್ತಗೊಳಿಸುತ್ತವೆ.

ದೈವ ಸಂಬಂಧದ ಆಚರಣೆಗಳು ಜಾನಪದ ಬದುಕಿನ ಹೆಚ್ಚು ಭಾಗವನ್ನು ಆಕ್ರಮಿಸಿದೆ. "ದಿನಕ್ಕೊಂದು ಸಾರಿ, ವಾರಕ್ಕೊಂದು ಸಾರಿ, ತಿಂಗಳಿಗೊಂದು ಸಾರಿ ಒಂದು ದೇವರ ಆರಾಧನೆ ಆಗುತ್ತದೆ. ಸಕಲ ಪೂರ್ವ ಸಿದ್ಧತೆಯೊಂದಿಗೆ ಆಗುವ ಹಬ್ಬಗಳು ಅನೇಕ ಆಚರಣೆಗಳ ಮೊತ್ತವಾಗಿದೆ."[೬]

ಪ್ರತಿ ದೇವರಿಗೆ ಆಚರಿಸುವ ಆಚರಣೆಯಲ್ಲಿ ಒಂದು ದಿನದಲ್ಲಿ ಆಚರಿಸುವ ಆಚರಣೆಗಳನ್ನು 'ದೈನಿಕಾವರ್ತನ' ಆಚರಣೆಗಳೆಂದು, ಮನುಷ್ಯನ ಹುಟ್ಟಿನಿಂದ ಸಾಯುವವರೆಗೆ ಆಚರಿಸುವ ಮತ್ತು ಮನುಷ್ಯನಿಗೆ ಸಂಬಂಧಿಸಿದಂತೆ ಮಾಡುವ ಆಚರಣೆಗಳನ್ನು 'ಜೀವನಾವರ್ತನ' ಆಚರಣೆಗಳೆಂದು ಹಾಗೂ ಒಂದು ವರ್ಷದ ಅವಧಿಯಲ್ಲಿ ಆಚರಿಸುವ ಪ್ರಮುಖ ಆಚರಣೆಗಳನ್ನು 'ವಾರ್ಷಿಕಾವರ್ತನ'ಗಳೆಂದೂ ಕರೆಯುತ್ತಾರೆ. ಈ ಆಚರಣೆಗಳನ್ನು 'ಚಿಗಟೇರಿ ನಾರಪ್ಪ'ನ ಭಕ್ತರಲ್ಲಿ ಕಾಣಬಹುದು. ಇಲ್ಲಿಯ ಆಚರಣೆಗಳು ಹೆಚ್ಚಾಗಿ ನಾರಪ್ಪನಿಗೆ ಸಂಬಂಧಿಸಿದ್ದು ಕೆಲವೊಂದು ಆಚರಣೆಗಳು ಆಯಾಯ ವರ್ಗದ ಮೇಲೆ ನಿಂತಿರುತ್ತವೆ. ಆದ್ದರಿಂದ ಈ ಕೆಳಗಿನಂತೆ ನಾರಪ್ಪನ ಆಚರಣೆಗಳನ್ನು ಗುರುತಿಸಬಹುದಾಗಿದೆ.

೪. ೧ ಜೀವನಾವರ್ತನ ಆಚರಣೆಗಳು

ಮನುಷ್ಯ ಹುಟ್ಟಿದಾಗಿನಿಂದ ಸಾವಿನವರೆಗೂ ಆಚರಿಸುವ ಆಚರಣೆಗಳನ್ನು 'ಜೀವನಾವರ್ತನ' ಆಚರಣೆಗಳು ಎಂದು ಕರೆಯುತ್ತಾರೆ. ಹುಟ್ಟು, ಮದುವೆ, ಸಾವು ಮುಂತಾದವುಗಳು ಜೀವನಾವರ್ತನ ಆಚರಣೆಗಳಲ್ಲಿ ಬಹಳ ಮುಖ್ಯ ಎನಿಸುತ್ತವೆ. ನಾರಪ್ಪನ ಭಕ್ತರಲ್ಲಿ ಕಂಡುಬರುವ ಪ್ರತಿಯೊಂದು ಆಚರಣೆಗಳು ಕೆಲವೊಂದು ಭಿನ್ನವಾಗಿರುತ್ತವೆ, ಇನ್ನುಳಿದಂತೆ ಜನಾಂಗಿಕವಾಗಿರುತ್ತವೆ.

೪.೧.೧ **ಜನನದ ಸಂದರ್ಭ** : ನಾರಪ್ಪನಿಗೆ ಲಿಂಗಾಯತರೇ ಹೆಚ್ಚಾಗಿ ನಡೆದುಕೊಳ್ಳುತ್ತಾರೆ. ಆದ್ದರಿಂದ ಲಿಂಗಾಯತ ವರ್ಗದ ಆಚರಣೆಯನ್ನು ಇಲ್ಲಿ ಹೆಚ್ಚು ಕಾಣಬಹುದು. ಮಗು ಜನಿಸಿದ ಮೂರು ದಿನದವರೆಗೆ ಯಾವುದೇ ಪೂಜೆ ಪುರಸ್ಕಾರ ಮಾಡುವಂತಿಲ್ಲ. ಅನಂತರ ಮೂರು ದಿವಸಕ್ಕೆ ಕುಡುಗೋಲು, ಗುಣಕಲ್ಲು, ಮಣಿಯನ್ನು ಸೂಲಗಿತ್ತಿಯರು ಪೂಜೆ ಮಾಡಿ ಗಂಡಾದರೆ ಉಡುದಾರವನ್ನು ಕಟ್ಟುತ್ತಾರೆ. ಹೆಣ್ಣಾದರೆ ಒಂದು ಕಾಯಿಯನ್ನು ಸೂಲಗಿತ್ತಿಯರು ತೆಗೆದುಕೊಂಡು ಹೋಗುತ್ತಾರೆ. ಇದಾದ ನಂತರ ಅಗಸರು ಬರುತ್ತಾರೆ. ಇವರು ಬಂದು ಹೋದ ನಂತರ ಹೊಲೆ ಮನೆ ತೀರಿತು ಎಂದು ಹೇಳುತ್ತಾರೆ. ಅಂದಿನಿಂದ ಮನೆಯಲ್ಲಿ ಪ್ರತಿಯೊಂದು ಕಾರ್ಯಕ್ರಮಗಳು ನಡೆಯುತ್ತವೆ. ಐದು ದಿನದಲ್ಲಿ ಹೆರಿಗೆಯಾದ ಹೆಣ್ಣನ್ನು ಗಂಗೆಗೆ ಕರೆದುಕೊಂಡು ಹೋಗಿ ಗಂಗೆ ಪೂಜೆ ಮಾಡಿಕೊಂಡು ಬರುವಾಗ ಮಣ್ಣಿನ ಕೊಡವನ್ನು ಬಾಣತಿಗೆ ಕೊಡುತ್ತಾರೆ. ಇದಕ್ಕೆ ಭಕ್ತರು 'ಬಾಣತಿಗೆ ಕೊಡ ಕೊಡುವುದು' ಎಂದು ಕರೆಯುತ್ತಾರೆ. ಈ ಕಾರ್ಯಗಳೆಲ್ಲ ಮುಗಿದ ನಂತರ ೯ ಇಲ್ಲವೆ ೧೬ ದಿನಕ್ಕೆ ನಾಮಕರಣ ಕಾರ್ಯಕ್ರಮವಿರುತ್ತದೆ. ಇದನ್ನು ಅವರ ಶಕ್ತ್ಯಾನುಸಾರ ವಿಜೃಂಭಣೆಯಿಂದ ಮಾಡುತ್ತಾರೆ. ಇನ್ನು ಕೆಲವರು ಅನುಕೂಲಕ್ಕೆ ತಕ್ಕಂತೆ ಆಚರಿಸುತ್ತಾರೆ.

ಮೊದಲಿಗೆ ಲಿಂಗಧಾರಣೆ ಮಾಡಿದ ನಂತರ ನಾಮಕರಣ ಕಾರ್ಯ ಇರುತ್ತದೆ. ಈ ಸಂದರ್ಭದಲ್ಲಿ ಧರ್ಮದ ಐನೋರು ಮತ್ತು ನಾರಪ್ಪನ ದೀಕ್ಷೆ ಪಡೆದ 'ದಾಸಪ್ಪ'ಗಳು ಇರುತ್ತಾರೆ. ಇದೇ ರೀತಿಯಲ್ಲಿ ನಾಯಕ ಜನಾಂಗದಲ್ಲಿ ನಡೆಯುವುದನ್ನು ಕಾಣಬಹುದು.

೪. ೧. ೨ **ಋತುಮತಿಯಾದ ಸಂದರ್ಭ :** ಋತುಮತಿಯಾದ ಹೆಣ್ಣು ಕುಳಿತುಕೊಳ್ಳುವ ಸ್ಥಳಕ್ಕೆ ಕೆಲವೊಂದು ಆಚರಣೆಯಲ್ಲಿ ತಮ್ಮದೇ ಆದ ಹೆಸರುಗಳನ್ನು ಕರೆದುಕೊಂಡಿರುತ್ತಾರೆ. ಹೆಸರು ಕರೆಯುವ ವಾಡಿಕೆ ನಾರಪ್ಪನ ಭಕ್ತರಲ್ಲಿ ಇಲ್ಲವಾದರೂ ಋತುಮತಿಯಾದ ಸಂದರ್ಭದಲ್ಲಿ ಐದು ಜನ ಮುತ್ತೈದೆಯರು ಸೇರಿ ಹಾಲು, ತುಪ್ಪ, ಎಳ್ಳು, ಜೀರಿಗೆಯನ್ನು ನೆತ್ತಿಯ ಮೇಲೆ ಹಾಕಿ ಮುಟ್ಟನ್ನು ಎರೆಯುತ್ತಾರೆ. ನಂತರ ಕರಿ ಕಂಬಳಿಯ ಮೇಲೆ ಕೂರಿಸಿ ಉಡಿ ತುಂಬುತ್ತಾರೆ. ಉಡಿ ತುಂಬುವ ಸಂದರ್ಭದಲ್ಲಿ ಬಂದ ಮುತ್ತೈದೆಯರು ಉಡಿ ತುಂಬಿಕೊಂಡಿರುತ್ತಾರೆ. ನಂತರ ಐದು ಅಥವಾ ಒಂಬತ್ತು ದಿನದಲ್ಲಿ ವಲಿಮನೆ ತೀರಿಸುತ್ತಾರೆ. ಆಗ ಅಕ್ಕಿ ಹುಗ್ಗಿ ಮಾಡಿ, ಗೋಮೂತ್ರ ಮತ್ತು ನಾರಪ್ಪ ದೇವರ ಪೂಜೆ ಮಾಡಿದ ಪಾದೋದಕವನ್ನು ತಂದು ಮನೆ ತುಂಬ ಸಿಂಪಡಿಸುತ್ತಾರೆ. ನಂತರ ಐನೋರರನ್ನು ಕರೆದುಕೊಂಡು ಬಂದು ಕಳಿಸಿದ ನಂತರ ದೀಕ್ಷೆ ಪಡೆದ ದಾಸಪ್ಪನನ್ನು ಕರೆಯುತ್ತಾರೆ. ದಾಸಪ್ಪ ಐನೋರು ಮನೆಗೆ ಬಂದು ಹೋದ ನಂತರ ವಲಿ ಹೋಯಿತು ಎಂದು ಊರಲ್ಲಿರುವ ಭಕ್ತರು ನಾರಪ್ಪನ ಗುಡಿಗೆ ಬಂದು ಹಣ್ಣುಕಾಯಿ ಕೊಟ್ಟು ಪೂಜೆಯನ್ನು ಮಾಡಿಸಿಕೊಂಡು ಹೋಗುತ್ತಾರೆ. ಇನ್ನು ಕೆಲವರು ತಮ್ಮ ಊರಿನ ಆಂಜನೇಯನ ಗುಡಿಗೋ, ಇಲ್ಲವೆ ಆಯಾಯ ಬೆಡಗಿನ ದೇವರ ಮನೆಗಳಿಗೊ ಹೋಗಿ ಬರುತ್ತಾರೆ.

೪. ೧. ೩ **ದಾಸಪ್ಪನ ಹೊರೆ ಸಂದರ್ಭ :** (ನಾರಪ್ಪನ ದಾಸಪ್ಪಗಳು ದೀಕ್ಷೆಯ ಬದಲಾಗಿ 'ಹೊರೆ' ಎಂದು ಕರೆಯುತ್ತಾರೆ). 'ದಾಸಪ್ಪ' ಎನ್ನುವುದು ಬಂದಾಗ ಹೆಚ್ಚು ಚರ್ಚೆ ಮಾಡಲೇಬೇಕಾಗುತ್ತದೆ. ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಭಕ್ತರು ದಾಸಪ್ಪನಾಗಿ ದೀಕ್ಷೆ ಪಡೆಯುವ ಸಂದರ್ಭವನ್ನು ಹೇಳಿರುತ್ತಾರೆ. ಹಾಗೆಯೇ ಕೆಲವು ವಿದ್ವಾಂಸರು ಚರ್ಚೆ ಮಾಡಿರುವ ಹಿನ್ನೆಲೆಯಲ್ಲಿ ಇಲ್ಲಿ ಪ್ರಸ್ತಾಪಿಸಲಾಗಿದೆ.

"ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಪ್ರಮುಖ ಸಂಪ್ರದಾಯಗಳಲ್ಲಿ ಈ ದಾಸಪ್ಪಗಳ ಸಂಪ್ರದಾಯವೂ ಒಂದು. ಈ ಸಂಪ್ರದಾಯ ಒಂದು ಪ್ರತ್ಯೇಕ ಸ್ಥಳಕ್ಕಾಗಲೀ ಅಥವಾ ಒಂದು ಜಾತಿಗಾಗಲೀ ಸೀಮಿತವಾದುದಲ್ಲ. ಕರ್ನಾಟಕದ ಎಲ್ಲಾ ಪ್ರಾಂತಗಳಲ್ಲಿ ಹಾಗೂ ಅನೇಕ ಜಾತಿಗಳ ಜನರಲ್ಲಿ ಇವರನ್ನು ಕಾಣಬಹುದು. ಇವರು ಉತ್ತರ ಕರ್ನಾಟಕದಲ್ಲಿ ಅಲ್ಲಲ್ಲಿಯೂ ಮತ್ತು ದಕ್ಷಿಣ ಕರ್ನಾಟಕದ ಬಹುತೇಕ ಸ್ಥಳಗಳಲ್ಲಿಯೂ ಕಂಡುಬರುತ್ತಾರೆ. ಆದ್ದರಿಂದ ಈ ಸಂಪ್ರದಾಯ ಒಂದು ಪ್ರಮುಖ ಹಾಗೂ ಪ್ರಸಿದ್ಧ ಸಂಪ್ರದಾಯವಾಗಿದೆ."[೬]

'ದಾಸ' ಎನ್ನುವ ಪದಕ್ಕೆ ನಾನಾ ಅರ್ಥಗಳಿವೆ. ಸೇವಕ, ಆಳು, ವಿಧೇಯ, ಭಕ್ತ, ಭಿಕ್ಷೆಯಿಂದ ಜೀವಿಸುವವ ಇತ್ಯಾದಿ. ಪ್ರಸ್ತುತ ಸಂಪ್ರದಾಯದ ದಾಸಪ್ಪಗಳು ಭಿಕ್ಷೆಯನ್ನು ಉಪವೃತ್ತಿಯಾಗುಳ್ಳ ವಿಧೇಯ ಗುಣವುಳ್ಳವರಾಗಿ ಒಂದು ನಿರ್ದಿಷ್ಟ ದೇವರ ಭಕ್ತರಾಗಿದ್ದಾರೆ. ಇವರು ನಾರಪ್ಪನ ಖಾಸಾ ಭಕ್ತರು. ಬರೀ ಭಕ್ತರಷ್ಟೇ ಅಲ್ಲ ಆ ದೇವರ ನಿಷ್ಠಾವಂತ ಸೇವಕರೂ ಹೌದು.

ಪ್ರಸ್ತುತ ಕಾಲದಲ್ಲಿ ದಾಸಪ್ಪನನ್ನು ಆಂಜನೇಯ, ತಿರುಪತಿ ತಿಮ್ಮಪ್ಪ ಮುಂತಾದ ದೇವರಲ್ಲಿ ಕಾಣುತ್ತೇವೆ. ಯಾವುದೇ ದೇವರ ದಾಸಪ್ಪನಾಗಬೇಕಾದರೂ ಆ ದೇವರ ಹಿರಿಯ ದಾಸಪ್ಪನಿಂದಲೇ ದೀಕ್ಷೆ ಪಡೆಯಬೇಕಾಗುತ್ತದೆ. ದೀಕ್ಷೆ ಪಡೆದಿರುವ ಗುರುತಿಗಾಗಿ 'ಮುದ್ರೆ' ಹಾಕಿಕೊಳ್ಳುತ್ತಾರೆ. ದೇವರ ಲಾಂಛನವನ್ನು ಸ್ವೀಕರಿಸುತ್ತಾರೆ.

ಯಾವುದೇ ದೇವರ ಹೆಸರಿನಲ್ಲಿ ದೀಕ್ಷೆ ಪಡೆಯುವ ದಾಸಪ್ಪಗಳ ಸಂಪ್ರದಾಯ ವಂಶಪಾರಂಪರ್ಯವಾಗಿ ಮುಂದುವರೆದುಕೊಂಡು ಬಂದಿರುತ್ತದೆ. ಅದರಂತೆ ನಾರಪ್ಪ ದೇವರಲ್ಲಿ ಮುಂದುವರೆದುಕೊಂಡು ಬಂದಿದೆ. ದೀಕ್ಷೆ ಪಡೆಯುವವರು ತಮ್ಮ ವಂಶಪಾರಂಪರ್ಯವಾಗಿ ಬಂದಿದ್ದರೆ ಮಾತ್ರ ದೀಕ್ಷೆಯನ್ನು ಪಡೆಯುತ್ತಾರೆ. ಒಂದು ವೇಳೆ ಮಕ್ಕಳಿಲ್ಲದಿದ್ದರೆ ದಾಸಪ್ಪನ ಅಣ್ಣನ, ತಮ್ಮನ ಮಕ್ಕಳಲ್ಲಿ ಯಾರಾದರೊಬ್ಬರಿಗೆ ದೀಕ್ಷೆಯನ್ನು ಕೊಡಬಹುದು. ಮುಖ್ಯವಾಗಿ ತಿಳಿಯಬೇಕಾದ ಅಂಶವೆಂದರೆ ನಾರಪ್ಪ ದೇವರ ಹೆಸರಿನಲ್ಲಿ ದೀಕ್ಷೆ ಪಡೆಯುವವರಿಗೆ ನಾರಪ್ಪನ ಭಕ್ತರು 'ಹೊರೆ' ಎಂದು ಕರೆಯುತ್ತಾರೆ. "ಹಾಗೆಯೇ ಮಂಟೇಸ್ವಾಮಿ ಭಕ್ತರಾದ ನೀಲಗಾರರಲ್ಲಿಯೂ ಈ ತರಹದ ದೀಕ್ಷಾ ಪದ್ಧತಿಯನ್ನು ಕಾಣಬಹುದು."[೮]

ಒಬ್ಬ ದಾಸಪ್ಪ ಮುದುಕನಾಗಿದ್ದು ಆತನೇ ತಾನು ಸಾಯುವ ಮೊದಲು ತನ್ನ ಮಗನಿಗೆ ದೀಕ್ಷೆ ಕೊಡಿಸುತ್ತಾನೆ. ಈ ದೀಕ್ಷೆ ಕೊಡುವಾಗ ಕೆಲವು ಆಚರಣೆಗಳ ಮೂಲಕ ವಿಧಿ ವಿಧಾನಗಳನ್ನು ನೆರವೇರಿಸುತ್ತಾನೆ. 'ಹೊರೆ' ಹೊತ್ತವರು ಒಂದು ವರ್ಷದೊಳಗೆ ಮದುವೆಯಾಗಬೇಕು, ವರ್ಷದೊಳಗೆ ಮದುವೆಯಾಗದಿದ್ದರೆ ಜೀವನ ಪೂರ್ತಿ ಹಾಗೆಯೇ ಇರಬೇಕಾಗುತ್ತದೆ. 'ಹೊರೆ' ಹೊರಸಿದರೆ ಅಲ್ಲಿಗೆ ಅವರ ಮದುವೆಯಾಯಿತು ಎಂತಲೇ ನಾರಪ್ಪನ ಭಕ್ತರು ತಿಳಿದುಕೊಂಡಿದ್ದಾರೆ.

ಹೊರೆ ಹೊರುವಂತಹ ಪ್ರತಿಯೊಬ್ಬ ಭಕ್ತರು ಚಿಗಟೇರಿ ಕ್ಷೇತ್ರಕ್ಕೆ ಬರುತ್ತಾರೆ. ಬೇರೆ ಊರಿನಿಂದ ಬಂದರೆ ಅವರ ಜೊತೆಗೆ ಒಬ್ಬ ದಾಸಪ್ಪನನ್ನು ಕರೆದುಕೊಂಡು ಬರುತ್ತಾರೆ. ಕರೆದುಕೊಂಡು ಬರುವ ದಾಸಪ್ಪನು ಕೂಡ ತಮ್ಮ ಬೆಡಗಿನಲ್ಲಿರುವವನೇ ಆಗಿರಬೇಕು. ಚಿಗಟೇರಿ ಗ್ರಾಮದವರೇ ಆದ ನಾಯಕರು ದೇವರ ಹಿರಿಯ ಪೂಜಾರಿಗಳಿಂದಲೇ 'ಹೊರೆ'ಯನ್ನು ಹೊರಿಸಿಕೊಳ್ಳುತ್ತಾರೆ. ಹೊರೆ ಹೊರುವುದಕ್ಕೂ ಮುನ್ನ ದೀಕ್ಷೆ ತೆಗೆದುಕೊಳ್ಳುವವರ ಮನೆಯ ಮುಂದೆ ಚಪ್ಪರ ಹಾಕುತ್ತಾರೆ. ಆ ಮನೆಯವರೆಲ್ಲ ಸ್ನಾನ ಮಾಡಿ ಮುಗಿಸುತ್ತಾರೆ. ಆ ದಿವಸ ಆ ವ್ಯಕ್ತಿಗೆ ಅರಿಶಿನ, ಸೀಗೆಕಾಯಿ ಸ್ನಾನ ಮಾಡಿಸುತ್ತಾರೆ. ಹೊಸ ಬಟ್ಟೆ ತೊಡಿಸುತ್ತಾರೆ. ಆ ಊರಿನಲ್ಲಿರುವ ಮತ್ತು ಅಕ್ಕಪಕ್ಕದಲ್ಲಿರುವ ನೆಂಟರನ್ನು ಮತ್ತು ಬೆಡಗಿನ ದಾಸಪ್ಪನನ್ನು ಕರೆದುಕೊಂಡು ಬರುತ್ತಾರೆ. ಎಲ್ಲರೂ ಮಡಿಯಿಂದ ವಾದ್ಯ ಸಮೇತವಾಗಿ ಮೆರವಣಿಗೆಯ ಮೂಲಕ ಗಂಗೆಗೆ ಹೋಗುತ್ತಾರೆ (ಕೆಲವೊಂದು ಭಾಗದಲ್ಲಿ ಇದನ್ನು ಹೊಳೆಗೆ ಹೊರಡುವುದು ಎನ್ನುತ್ತಾರೆ). ಹೀಗೆ ಹೊರಡುವ ಮುನ್ನ ಮಡಿ ಹಾಸುವ ಮಡಿವಾಳರು ಮಡಿ ಹಾಸುತ್ತಾರೆ. ಮಡಿಯ ಮೇಲೆ ಮುತ್ತೈದೆಯೊಬ್ಬಳು 'ಕಳಸದ ತಟ್ಟೆ' ಹಿಡಿದು ಮುಂದೆ ನಡೆಯುತ್ತಿರುತ್ತಾಳೆ. ಆಕೆಯ ಹಿಂದೆ ಹೊರೆ ಹೊರುವವ ನಡೆಯುತ್ತಿರುತ್ತಾನೆ. ಅವರ ಹಿಂದೆ ನೆರೆದ ಜನರು ಹಿರಿಯರು ಹೋಗುತ್ತಾರೆ. ಈ ಸಂಪ್ರದಾಯವನ್ನು ಕೇಳಿದಾಗ 'ನಮ್ಮ ಹುಡುಗ ಹೊರೆ ಹೊತ್ತರೆ ಮದುವೆಶಾಸ್ತ್ರ ಮುಗಿದ ಹಾಗೆ' ಎನ್ನುತ್ತಾರೆ. ಮೆರವಣಿಗೆಯು ಹೊಳೆಯನ್ನು ತಲುಪುತ್ತದೆ. ಅಲ್ಲಿ ಒಂದು ಕಂಬಳಿ ಹಾಸುತ್ತಾರೆ. ಕಂಬಳಿಯ ಮೇಲೆ ಕಳಸವಿಟ್ಟು ಹತ್ತಾರು ಜೋಡಿ ವೀಳ್ಯದೆಲೆ, ಅಡಿಕೆಯನ್ನು ಇಡುತ್ತಾರೆ. ಬಾಳೆಹಣ್ಣು, ತೆಂಗಿನಕಾಯಿ, ಕೇರಳ್ಳು, ನಿಂಬೆಹಣ್ಣು, ಒಣ ಕೊಬ್ಬರಿ ಮತ್ತು ದಾಸಪ್ಪನಾಗುವವನಿಗೆ ಕೊಡಬೇಕಾದ

ಒಂದು 'ಬೆತ್ತ' ಮತ್ತು ಐದು ಇಲ್ಲವೆ ಒಂಬತ್ತು ಘಂಟೆಯನ್ನು ಕಟ್ಟಿದ ಕೋಲು ಇದನ್ನು ಇವರು 'ಘಂಟೆ ಮಣಿ' ಎಂದು ಕರೆಯುತ್ತಾರೆ. ಇವೆಲ್ಲವುಗಳನ್ನು ಇಟ್ಟು ಪೂಜೆಯನ್ನು ಮಾಡುತ್ತಾರೆ. ಈ ವಿಧಿ ವಿಧಾನಗಳನ್ನು ಕೆಲವರು ತಮ್ಮ ಊರುಗಳಲ್ಲಿ ಮಾಡಿಕೊಂಡು ಬರುತ್ತಾರೆ. ಘಂಟೆ ಮಣಿಯ ಕೋಲನ್ನು ಗಂಧದ ಕಟ್ಟಿಗೆಯಿಂದ ಮಾಡಿಸಿರುತ್ತಾರೆ.

ಹೀಗೆ ಗಂಗೆ ಪೂಜೆ ಮುಗಿದ ನಂತರ ನೇರವಾಗಿ ದೇವಸ್ಥಾನಕ್ಕೆ ಬರುತ್ತಾರೆ. ದೇವಸ್ಥಾನದಲ್ಲಿ ನಾರಪ್ಪನ ಪೂಜಾರಿಗಳು ದೇವರ ಪೂಜೆ ಮಾಡಿದ ನಂತರ ತಮ್ಮ ಜೊತೆಗೆ ಕರೆತಂದ ಬೆಡಗಿನ ಪೂಜಾರಿಯಿಂದ ಮುದ್ರೆ ಹಾಕಿಸುತ್ತಾರೆ. ನಾರಪ್ಪನ ದಾಸಪ್ಪಗಳಿಗೆ ಹಾಕುವ ಮುದ್ರೆ 'ಮಲ್ಲಿಗೆ ಹೂವಿನ ಮುದ್ರೆ'ಯಾಗಿರುತ್ತದೆ. ಮುದ್ರೆಯನ್ನು ಹಾಕುವಾಗ ದಾಸಪ್ಪ ಇಬ್ಬರ ಮೈ ತುಂಬ ಮಡಿಯ ಬಟ್ಟೆಯನ್ನು ಹಾಕಿಕೊಂಡು ಹುಡುಗನ ಭುಜ, ಹಣೆ ಮುಂತಾದ ಭಾಗದಲ್ಲಿ ಮಲ್ಲಿಗೆ ಹೂವಿನ ಮುದ್ರೆಯನ್ನು ಹಾಕುತ್ತಾರೆ. ಈ ಸಂದರ್ಭದಲ್ಲಿ ಮುದ್ರೆ ಹಾಕುವವರಿಗೂ ಮತ್ತು ದೇವಸ್ಥಾನ ಪೂಜಾರಿಗಳಿಗೂ ಹೊಸಬಟ್ಟೆಯನ್ನು ಕೊಡಬೇಕು. ಇಲ್ಲಿಗೆ ಮುದ್ರೆ ಹಾಕುವ ಕಾರ್ಯಕ್ರಮವು ಮುಗಿಯುತ್ತದೆ.

ಇದಾದ ಮೇಲೆ ಮುದ್ರೆ ಹಾಕಿಸಿಕೊಂಡವರು ಮನೆಗೆ ಹೋಗಿ ತಮ್ಮ ಒಕ್ಕಲಿನ ಮನೆಗಳಿಗೆ 'ಮನೆ ಭಿಕ್ಷೆ'ಕ್ಕೆ ಹೋಗುತ್ತಾರೆ. ಇವರು ಕೆಲವೇ ಕೆಲವು ಮನೆಗಳಲ್ಲಿ ಘಂಟೆ ಬಾರಿಸಿ ಜೋಳಿಗೆ ಒಡ್ಡಿ ಭಿಕ್ಷೆ ಹಾಕಿಸಿಕೊಂಡು ಮನೆಗೆ ಬರುತ್ತಾರೆ. ಇವರು ಬೇಡಿದ ಪ್ರತಿ ಮನೆ ಮುಂದೆಯು ನಾರದ ಮುನಿ ಗೋವಿಂದಾ ಗೋ....ವಿಂದಾ ಎಂದು ನಾರಪ್ಪನ ನಾಮಸ್ಮರಣೆ ಮಾಡುತ್ತಾರೆ. ಭಿಕ್ಷೆ ಮಾಡಿ ತಂದ ದವಸ ಧಾನ್ಯಗಳನ್ನು ಒಂದು ಕಡೆ ಸೇರಿಸಿ ಅಂದು ರಾತ್ರಿಗೆ ಪ್ರಸಾದ ಮಾಡುತ್ತಾರೆ. ಮಾಡಿದ ಪ್ರಸಾದವನ್ನು ತಮ್ಮ ಮನೆಯವರೇ ಸ್ವೀಕರಿಸುತ್ತಾರೆ. ಮನೆಯ ಹಿರಿಯರು ಅವನಿಗೆ ಹೇಗೆ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಬುದ್ಧಿವಾದವನ್ನು ಹೇಳುತ್ತಾರೆ. ಇಲ್ಲಿಗೆ ಹೊರೆ ಹೊರಿಸುವ ಕಾರ್ಯಕ್ರಮ ಮುಗಿಯುತ್ತದೆ.

ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕಾಗುತ್ತದೆ. ಕೆಲವೊಂದು ದೇವರುಗಳ ದಾಸಪ್ಪಗಳು ತಮ್ಮ ದೇವರುಗಳ ವಸ್ತುಗಳಾದ 'ಪಿರುಮಾಳು' ಅರುಗೆ, ಬಾಂಕಿ, ಜಾಗಟೆ, ಜೋನಾಸಿ, ಪಂಚಪಾತ್ರೆ, ಗಂಟೆ, ಧೂಪುಂಡಿಗೆ ಮುಂತಾದ ವಸ್ತುಗಳನ್ನು ತಮ್ಮ ವಸ್ತುಗಳಾಗಿಸಿಕೊಂಡರೆ ನಾರಪ್ಪನ ದಾಸಪ್ಪಗಳು 'ಬೆತ್ತ' ಮತ್ತು 'ಘಂಟೆ ಮಣಿ' ಕೋಲನ್ನು ಹಿಡಿದುಕೊಂಡು ಭಸ್ಮಧಾರಣೆ ಮಾಡಿಕೊಂಡಿರುತ್ತಾರೆ. ಇದು ಈ ಕ್ಷೇತ್ರದಲ್ಲಿ ತುಂಬ ಭಿನ್ನವೆನಿಸುತ್ತದೆ ಮತ್ತು ಗೋವಿಂದನೆಂದು ಬಳಸುವುದು ವಿಚಿತ್ರವೆನಿಸುತ್ತದೆ.

ಬೇರೆ ದಾಸಪ್ಪಗಳ ಹಾಗೆ ಭಿಕ್ಷೆ ಬೇಡುವುದಿಲ್ಲ, ಸಾಹಿತ್ಯ ರಚಿಸುವವರಲ್ಲ ಹಾಗೆಯೇ ಹಾಡುವವರಲ್ಲ. ಆದರೆ ಮಕ್ಕಳು ಹುಟ್ಟಿದಾಗ, ನಾಮಕರಣ ಮಾಡುವಾಗ, ಮದುವೆಯ ಸಂದರ್ಭದಲ್ಲಿ, ಊರಲ್ಲಿ ತಮ್ಮ ಒಕ್ಕಲು ಮನೆಯಲ್ಲಿ ಎಮ್ಮೆ, ಹಸುಗಳು ಮರಿ ಹಾಕಿದಾಗ ಈ ಎಲ್ಲ ಸಂದರ್ಭದಲ್ಲಿಯೂ ಮುಖ್ಯವಾಗಿ ದಾಸಪ್ಪಗಳು ಭಾಗವಹಿಸುತ್ತಾರೆ.

ಹಿಂದೆ ನಾರಪ್ಪನಿಗೆ ದಾಸಿಯನ್ನು (ದಾಸಮ್ಮನನ್ನು) ಬಿಡುವ ಪದ್ಧತಿ ಇತ್ತು. ಆಧುನೀಕರಣಗೊಂಡಂತೆ ಈ ಪದ್ಧತಿಯನ್ನು ರದ್ದು ಮಾಡಲಾಗಿದೆ. ಈ ದಾಸಿಯರು ನಾಯಕ ಜನಾಂಗದವರಲ್ಲಿ ಮಾತ್ರ ಕಂಡುಬರುತ್ತಾರೆ. ಆದರೆ ಲಿಂಗಾಯತ ಜನಾಂಗದಲ್ಲಿ

ಯಾವುದೇ ವಿಷಯವನ್ನು ಹೇಳಿರುವುದಿಲ್ಲ. ಪ್ರಸ್ತುತ ಕಾಲದಲ್ಲಿ ಒಬ್ಬ ದಾಸಿ ಮಾತ್ರ ಇದ್ದಾಳೆ. ಜೋಗಮ್ಮ ಪದ್ಧತಿಗಿಂತ ನಾರಪ್ಪನ ದಾಸಿಯರು ಭಿನ್ನವಾಗಿ ಕಂಡುಬರುತ್ತಾರೆ. ನಾರಪ್ಪನ ದಾಸಿಯರ ಕೈಯಲ್ಲಿ ಒಂದು ಬೆತ್ತವನ್ನು ಮಾತ್ರ ಕೊಟ್ಟಿರುತ್ತಾರೆ. ಇವರು ದೀಕ್ಷೆ ಪಡೆದ ನಂತರ ಮದುವೆಯಾಗುವುದಿಲ್ಲ. ಜೀವನ ಪೂರ್ತಿ ನಾರಪ್ಪನೇ ತನ್ನ ಗಂಡನೆಂದು ಭಾವಿಸಿಕೊಳ್ಳುತ್ತಾರೆ. ಹೀಗೆ ಬೇರೆ ಬೇರೆ ಒಕ್ಕಲುಗಳಲ್ಲಿ ನೀಡುವ ದೀಕ್ಷೆಗಿಂತಲೂ ನಾರಪ್ಪನ ಒಕ್ಕಲಿನಲ್ಲಿ ಕೊಡುವ ದೀಕ್ಷೆ ವಿಶಿಷ್ಟವಾಗಿದೆ.

ವಿಧಿ ನಿಷೇಧಗಳು : ದೀಕ್ಷೆ ಪಡೆದುಕೊಂಡ ದಾಸಪ್ಪಗಳು ಅವರದೇ ಆದ ವಿಧಿ ನಿಷೇಧಗಳನ್ನು ಮಾಡಿಕೊಂಡಿರುತ್ತಾರೆ. ನಾರಪ್ಪನ ದಾಸಪ್ಪಗಳಲ್ಲಿ ಕೆಲವೊಂದು ನಿಷೇಧಗಳನ್ನು ಕಾಣಬಹುದಾಗಿದೆ.

* ಊರಲ್ಲಿ ಶ್ರಮವಾದಾಗ ಊಟ ಮಾಡುವುದಿಲ್ಲ. ಶ್ರಮ ಹೋದ ಮೇಲೆ ಸ್ನಾನ ಮಾಡಿ ಊಟ ಮಾಡುತ್ತಾರೆ.
* ಕಾಲಿಗೆ ಚಪ್ಪಲಿ ಹಾಕುವುದಿಲ್ಲ
* ಧೂಮಪಾನ ಮದ್ಯಸೇವನೆ ನಿಷೇಧ ಮಾಡಲಾಗಿದೆ.
* ಅವಾಚ್ಯ ನುಡಿಗಳನ್ನು ಹಾಡುವಂತಿಲ್ಲ
* ಊಟ ಮಾಡುವಾಗ ದೀಪ ಆರಿದರೆ ಊಟ ಮಾಡುವುದಿಲ್ಲ
* ಪ್ರತಿ ವರ್ಷ ದೇವಸ್ಥಾನಕ್ಕೆ ನಡೆದುಕೊಂಡೇ ಬರಬೇಕು. ವಾಹನಗಳಲ್ಲಿ ಬರುವಹಾಗಿಲ್ಲ
* ನಾರಪ್ಪನನ್ನು ದಿನಕ್ಕೆ ಎರಡು ಬಾರಿ ಪೂಜಿಸುತ್ತಾರೆ
* ಬೇರೆಯವರ ಎಂಜಲು ತಿನ್ನುವಂತಿಲ್ಲ
* ಬೇರೆ ದಾಸಪ್ಪಗಳ ಹಾಗೆ ಸಾಹಿತ್ಯ ರಚಿಸುವುದಿಲ್ಲ, ಹಾಡುವುದಿಲ್ಲ
* ಹೆಚ್ಚಾಗಿ ಭಿಕ್ಷೆ ಬೇಡುವುದಿಲ್ಲ
* ಸುಳ್ಳು ಹೇಳುವಂತಿಲ್ಲ

ಹೀಗೆ ನಾರಪ್ಪನ ದೀಕ್ಷೆ ಪಡೆದ ದಾಸಪ್ಪ ಒಕ್ಕಲುಗಳಲ್ಲಿ ಈ ತರಹದ ವಿಧಿ ನಿಷೇಧಗಳನ್ನು ಬೇರೆ ಒಕ್ಕಲುಗಳಿಗಿಂತ ಭಿನ್ನವಾಗಿರುವುದನ್ನು ಕಾಣಬಹುದಾಗಿದೆ.

೪.೧.೪ ಮದುವೆ ಸಂದರ್ಭ : ಬೇರೆ ದೈವದ ಭಕ್ತರ ಮದುವೆಗಿಂತ ನಾರಪ್ಪ ದೇವರಿಗೆ ನಡೆದುಕೊಳ್ಳುವ ಭಕ್ತರಲ್ಲಿ

ಭಿನ್ನವಾದ ಆಚರಣೆಯನ್ನು ಕಾಣಬಹುದು. ಸಂಪ್ರದಾಯದ ಪ್ರಕಾರ ಮೊದಲು 'ಅಕ್ಕಿ ಪೂಜೆ' ಮಾಡುತ್ತಾರೆ. ಇವರಲ್ಲಿಯೇ ಕೆಲವೊಂದು ಬೆಡಗಿನವರು ದೇವರನ್ನು ಮಾಡಿ ಎಲ್ಲ ವರ್ಗದವರಿಗೂ ಊಟ ಹಾಕುತ್ತಾರೆ. ಮರುದಿನ ಬೆಳಿಗ್ಗೆ ನಾರಪ್ಪನಿಗೆ ನಡೆದುಕೊಳ್ಳುವ ಒಕ್ಕಲಿನವರು ದೂರದ ಊರಿನಲ್ಲಿದ್ದವರು ತಮ್ಮ ಸುತ್ತಮುತ್ತಲಿನಲ್ಲಿರುವ ದಾಸಪ್ಪನ ಮನೆಗೆ ಹೋಗಿ ಹರಿನೀರನ್ನು ಹಾಕಿಸಿಕೊಂಡರೆ, ಇನ್ನೂ ಕೆಲವರು ಚಿಗಟೇರಿ ಕ್ಷೇತ್ರಕ್ಕೆ ಬಂದು ಗಿರಿಯಲ್ಲೆ ಹರಿನೀರನ್ನು ಹಾಕಿಸಿಕೊಂಡು ಹೋಗುತ್ತಾರೆ.

ಆ ದಿನವೇ ಚಪ್ಪರ(ಹಂದರ)ವನ್ನು ಹಾಕಿ ಹಂದರ ಪೂಜೆ ಮಾಡುತ್ತಾರೆ. ಹೆಣ್ಣಿನ ಮನೆಯಾದರೆ ಶ್ಯಾವಿಗಿ ಮಣೆಯನ್ನು ಪೂಜೆ ಮಾಡಿ 'ಹಿರಿಯರನ್ನು ಮಾಡಿ' ನಂತರ 'ಇಳೆ' ಹೊಡೆಯುತ್ತಾರೆ. ಗಂಡಿನ ಮನೆಯಲ್ಲಿ 'ಹಿರಿಯರನ್ನು ಮಾಡಿ' ಊಟ ಹಾಕಿಸುತ್ತಾರೆ. ಹರಿನೀರನ್ನು ಹಾಕಿಸಿಕೊಂಡು ಬಂದ ನಂತರ ಮನೆಯಲ್ಲಿ ಮದುಮಕ್ಕಳನ್ನು ಮಾಡುತ್ತಾರೆ. ಕೆಲವೊಂದು ವರ್ಗದಲ್ಲಿ ಊರ ದೇವರಾದ ಹನುಮಂತ ದೇವರ ಗುಡಿಯಲ್ಲಿ ಮೊದಲು ಐನೋರರಿಗೆ ಅರಿಶಿಣ ಹಚ್ಚಿ ನಂತರ ಮದುವೆಯಾಗುವ ಹುಡುಗನಿಗೆ ಅರಿಶಿಣ ಹಚ್ಚಿ ಮದುಮಕ್ಕಳನ್ನು ಮಾಡುವುದು ರೂಢಿಯಲ್ಲಿದೆ. ನಂತರ ಮನೆಗೆ ಬಂದು, ಒಳಗೆ ಒಳಕಲ್ಲು ಪೂಜೆ ಮತ್ತು ಬೀಸುವಕಲ್ಲು ಪೂಜೆಯನ್ನು ಶಾಸ್ತ್ರವಾಗಿ ಪೂಜೆ ಮಾಡುತ್ತಾ ಜೊತೆಗೆ ಸೋಭಾನವನ್ನು ಹೇಳುತ್ತಾರೆ.

ಹರಿನೀರಿನ ಪದ್ಧತಿ : ಹರಿನೀರು ಹಾಕಿಸುವ ಪದ್ಧತಿಯು ಎಲ್ಲಾ ಜನಾಂಗದಲ್ಲಿ ನಡೆಯುತ್ತದೆ ನಿಜ. ಆದರೆ ನಾರಪ್ಪ ದೈವಕ್ಕೆ ನಡೆದುಕೊಳ್ಳುವ ಭಕ್ತರ ಒಕ್ಕಲುಗಳಲ್ಲಿ ವೈವಿಧ್ಯವಾಗಿದೆ. ಲಿಂಗಾಯತ ಮತ್ತು ನಾಯಕ ಜನಾಂಗದಲ್ಲಿ ತಮ್ಮದೇ ಆದ ಬೆಡಗಿನ ದೇವರ ಮನೆಗಳನ್ನು ಮಾಡಿಕೊಂಡಿರುತ್ತಾರೆ. ಆ ಮನೆಯಲ್ಲಿಯೇ ಹರಿನೀರನ್ನು ಹಾಕಿಸಿಕೊಂಡು ಬರಬೇಕು. ಈ ತರಹದ ದೇವರು ಮನೆಗಳಿಲ್ಲದವರು ನೇರವಾಗಿ ಚಿಗಟೇರಿ ನಾರಪ್ಪನ ಗಿರಿಗೆ ಬರುತ್ತಾರೆ. ದಾಸಪ್ಪನ ಮನೆಯಲ್ಲಿ ಹರಿನೀರು ಹಾಕಿಸಿಕೊಂಡು ಬರಬೇಕಾದರೆ ಮೊದಲು ಹಣ್ಣು ಕಾಯಿ ಮುಂತಾದ ವಸ್ತುಗಳನ್ನು ಕೊಟ್ಟು ಬರುತ್ತಾರೆ. ನಂತರ ದಾಸಪ್ಪನ ಮನೆಯಲ್ಲಿ ನೆಲ ಸಾರಿಸಿ, ಸ್ನಾನ ಮಾಡಿ ಮಡಿಯುಟ್ಟು ದೇವರ ಪೂಜೆ ಮಾಡುತ್ತಾರೆ. ಪೂಜೆಗೆ ಬಳಸಿದ ನೀರನ್ನೆ ದಾಸಪ್ಪಗಳು ಹರಿನೀರು ಎನ್ನುತ್ತಾರೆ. ಹಣ್ಣು ಕಾಯಿ ಕೊಟ್ಟು ಹೋದ ಮದುವೆ ಮನೆಯವರು ಐದು ಜನ ಮುತ್ತೈದೆಯರನ್ನು ಕಳಸದ ಜೊತೆಯಲ್ಲಿ ಕರೆದುಕೊಂಡು ಬಂದು ದಾಸಪ್ಪನ ಮನೆಯಲ್ಲಿ ಅರಿಶಿನ ಹಚ್ಚುವ ಕಾರ್ಯ ನಡೆಯುತ್ತದೆ. ಅರಿಶಿಣ ಹಚ್ಚುವುದನ್ನು ಮೊದಲು ಯಾರ ಹೆಸರಿಗೆ ಬಲತ್ಕಾರ ಬಂದಿದೆ ಎಂದು ಕೇಳಿಸಿರುತ್ತಾರೆ. ಅವರೇ ಅರಿಶಿಣವನ್ನು ಹಚ್ಚುತ್ತಾರೆ. ಅರಿಶಿಣ ಹಚ್ಚಿದ ನಂತರ ಕೂರಿಸಿ ಸಾಸ್ಕಿ ಇಟ್ಟು ಕಳಸ ಬೆಳಗುತ್ತಾರೆ. ದಾಸಪ್ಪ ಪೂಜೆ ಮಾಡಿದ ನೀರಿನ ಜೊತೆಗೆ ಅವರ ಮನೆಯಲ್ಲಿಯೇ ಸ್ನಾನ ಮಾಡಿ ಮತ್ತೊಮ್ಮೆ ಕೂಡಿಸಿ ಗಂಧ, ವಿಭೂತಿ ಹಚ್ಚಿ ಕಳಸ ಬೆಳಗುತ್ತಾರೆ. ಈ ಕಾರ್ಯ ಮುಗಿದ ನಂತರ ದಾಸಪ್ಪನ ಮನೆಯಲ್ಲಿಯೇ ದೇವರ ಹೆಸರಿನಲ್ಲಿ ತಯಾರಿಸಿದ ಅಕ್ಕಿ ಹುಗ್ಗಿ ಪ್ರಸಾದವನ್ನು ಅಲ್ಲಿಗೆ ಬಂದವರೆಲ್ಲಾ ಸ್ವೀಕರಿಸಿಕೊಂಡು ಮದುವೆಯ ಮನೆಗೆ ಹಿಂದಿರುಗುತ್ತಾರೆ. ಇದನ್ನು ನಾರಪ್ಪನ ಒಕ್ಕಲಿನವರು ಹರಿನೀರಿನ ಪದ್ಧತಿ ಎಂದು ಕರೆಯುತ್ತಾರೆ.

ಹರಿನೀರು ಕಾರ್ಯ ಮುಗಿದ ನಂತರ ಆ ದಿನ ರಾತ್ರಿ ಇಳೆ ಮಾಡುವ ಕಾರ್ಯವಿರುತ್ತದೆ. ಕೆಲವೊಂದು ಭಾಗದಲ್ಲಿ ಇಳೆ ದಿವಸ ಅಕ್ಕಿಯ ಜೊತೆ ಹೊಸ ಮಡಿಕೆಯೊಂದನ್ನು ಇಟ್ಟು ಪೂಜೆ ಮಾಡುತ್ತಾರೆ. ಇಳೆ ಆದ ನಂತರ 'ಕೊರೂಟ'ವನ್ನು ಊಟ ಮಾಡಿಸುತ್ತಾರೆ. ಇದಾದ ಮರುದಿನ ಬೆಳಿಗ್ಗೆ ಮಾಂಗಲ್ಯಧಾರಣೆ ಕಾರ್ಯಕ್ರಮವಿರುತ್ತದೆ. ಮದುವೆ ಮನೆಗೆ ಹರುಣಿ, ಬಾಸಿಂಗ, ಹತ್ತಿ, ಹಾಲಂಬ ಎಲ್ಲವನ್ನು ತರುತ್ತಾರೆ.

ತಾಳಿಯ ದಿವಸ ಮೊದಲು ಹೊಳೆಗೆ ವಾದ್ಯ ಸಮೇತವಾಗಿ ಹೋಗುತ್ತಾರೆ. ಈ ವಿಧಾನವನ್ನು ತಂಡಸ್ಲೋರು ಬೆಡಗಿನಲ್ಲಿ ಮಾತ್ರ ವಿಶೇಷವಾಗಿ ಕಾಣುತ್ತೇವೆ. ಈ ಬೆಡಗಿನವರು ಹೊಳೆಗೋಗಿ ಬರುವಾಗ ಕೆಲವೊಂದು ವಿಧಾನಗಳನ್ನು ಅನುಸರಿಸುತ್ತಾರೆ. ಇವರು ಮೊದಲು ಚೆಲವಾದಿಯವರನ್ನು ವಾದ್ಯ ಸಮೇತ ಮುಂದೆ ಕಳುಹಿಸುತ್ತಾರೆ. ಅವರ ಹಿಂದೆ ಮಡಿವಾಳರು ಮಡಿಯನ್ನು ಹಾಕುತ್ತಾರೆ. ಮಡಿಯ ಮೇಲೆ, ಐನೋರು, ನಾರಪ್ಪನ ಹೊರೆ ಹೊತ್ತಿರುವ ದಾಸಪ್ಪ, ಕಳಸ ಹಿಡಿದ ಮುತ್ತೈದೆಯರು, ಭಂಡಾರದ ತಟ್ಟೆಯವರು, ಕೇಲೊತ್ತ ಹಿರಿಯರು ಅವರ ಹಿಂದೆ ಮದುಮಕ್ಕಳು ಬರುತ್ತಾರೆ. ಬರುವಾಗ ಭಂಡಾರವನ್ನು ಎಲ್ಲರೂ ಹಚ್ಚಿಕೊಂಡು ಬರುತ್ತಾರೆ. ಭಂಡಾರ ಹಚ್ಚುವುದೇ ನಾರಪ್ಪನ ಒಕ್ಕಲಲ್ಲಿ ರೂಢಿಯಲ್ಲಿರುವ ಒಂದು ವಿಶೇಷ ಪದ್ಧತಿ. ಇವೆಲ್ಲದರ ಜೊತೆಗೆ ನಾಲ್ಕು ಕೊಡ ನೀರನ್ನು ತರುತ್ತಾರೆ.

ಶ್ಯಾವಕ್ಕನ ಮಾಡುವುದು : ಹೊಳೆಗೆ ಹೋಗಿ ಬಂದ ನಂತರ ತಂಡಸ್ಲೋರು ಬೆಡಗಿನವರು 'ಶ್ಯಾವಕ್ಕ' ಎಂದು ಹತ್ತಿ, ಹಾಲ್‌ಗಂಬಗಳ ತುಂಡುಗಳಿಗೆ ಹೊಸ ಸೀರೆ, ಕುಪ್ಪಸ ಉಡಿಸಿ ನೆಲಕ್ಕೆ ಮೂರು ರೀತಿಯ ರಂಗೋಲಿ ಹಾಕಿ ಅದರ ಮೇಲೆ ಮಡಿ ಹಾಸಿ ಅವುಗಳನ್ನು ಅದರ ಮೇಲಿಟ್ಟು ''ಶ್ಯಾವಕ್ಕ' ಎಂದು ಪೂಜೆ ಮಾಡಿ ಎಡೆಯನ್ನು ಕೊಡುತ್ತಾರೆ. ಈ ಪದ್ಧತಿಯನ್ನು ಈ ಬೆಡಗಿನವರೆ ಮಾಡುತ್ತಾರೆ. ಮತ್ತು ಕೆಲವೊಂದು ಆಚರಣೆಯಲ್ಲಿ ಭಂಡಾರವನ್ನು ಬಳಸುತ್ತಾರೆ.

ದಂಡ ಕಟ್ಟುವುದು : ''ಹೊಳೆಗೆ ಹೋದ ಸಂದರ್ಭದಲ್ಲಿ ತಂಡಸ್ಲೋರು ಬೆಡಗಿನ ಹುಡುಗಿಯನ್ನು ಬೇರೆ ಬೆಡಗಿನ ಹುಡುಗನು ಮದುವೆಯಾಗಲು ಒಪ್ಪಿ ಹೊಳೆಗೆ ಹೋದಾಗ ಅಳಿಯನ (ಹುಡುಗನ) ಕೈಯನ್ನು 'ಬಡಮುರಗಿ' ಕಟ್ಟಿ ಅವರ ಕೈಯಿಂದ ದಂಡವನ್ನು ಕಟ್ಟಿಸಿಕೊಳ್ಳುತ್ತಾರೆ. ಯಾಕೆಂದರೆ ನಾರಪ್ಪ ಮದುವೆಯಾಗುವುದು ತಂಡಸ್ಲೋರು ಬೆಡಗಿನಲ್ಲಿ, ಆದ್ದರಿಂದ ಆ ಬೆಡಗಿನಲ್ಲಿ ತಾನು ಮದುವೆಯಾದ ತಪ್ಪಿಗೆ ದಂಡವನ್ನು ಕಟ್ಟಬೇಕು.''[5] ಈ ಭಾವನೆ ಈ ಬೆಡಗಿನಲ್ಲಿ ಬಲವಾಗಿ ಉಳಿದುಕೊಂಡು ಬಂದಿದೆ. ಈ ಆಚರಣೆಗಳನ್ನು ಸಿರಿಗೇರಿ ಗ್ರಾಮದಲ್ಲಿ ಕಾಣಬಹುದು.

ಈ ರೀತಿಯ ಎಲ್ಲಾ ಕಾರ್ಯಕ್ರಮಗಳು ಮುಗಿದ ನಂತರ ಹಂದರಕ್ಕೆ ಬರುತ್ತಾರೆ. ಹೊಳೆಗೆ ಹೋದ ಸಂದರ್ಭದಲ್ಲಿ ತಂದ ನಾಲ್ಕು ಕೊಡ ನೀರನ್ನು 'ಸುರಿಗೆ'ಗೆ ಬಳಸುತ್ತಾರೆ. ಆ ಸಂದರ್ಭದಲ್ಲಿ ಒಳಗೆ ಒಳಕಲ್ಲು, ಬೀಸುಕಲ್ಲುಗಳ ಪೂಜೆ ಮಾಡುತ್ತಾರೆ. ನಂತರ ಮದುಮಕ್ಕಳಿಗೆ ಸುರಿಗೆ ನೀರನ್ನು ಹಾಕಿ, ಹೆಣ್ಣಿಗೆ ಅಡಿಕೆ, ಎಲೆ, ಹಣ್ಣು, ಗಂಡಿಗೆ ಅಡಿಕೆ, ಎಲೆ, ಕಾಯಿಯನ್ನು ಕೊಡುತ್ತಾರೆ. ಈ ಸಂದರ್ಭದಲ್ಲಿ ಹೊಸ ಬಟ್ಟೆಯನ್ನು ಕೊಡುತ್ತಾರೆ. ನಂತರ ಕಳಸದ ನೀರನ್ನು ಹಾಕಿ ಸುರಿಗೆಗೆ ಬಳಸಿದ ದಾರವನ್ನು ಕಂಕಣಕ್ಕೆ ಬಳಸುತ್ತಾರೆ.

ಬಾಸಿಂಗವನ್ನು ಊರ ದೇವರ ದೇವಸ್ಥಾನಕ್ಕೆ ಹೋಗಿ ಕಟ್ಟಿಕ್ಕೊಂಡು ಬರುತ್ತಾರೆ. ಹೆಣ್ಣಿಗೆ ಮನೆಯಲ್ಲಿಯೇ ಹಾಕುತ್ತಾರೆ. ಇಬ್ಬರನ್ನು ಹಂದರಕ್ಕೆ ಕರೆತಂದು ಸಂಪ್ರದಾಯದ ಪ್ರಕಾರ ತಾಳಿಯನ್ನು ಕಟ್ಟಿಸುತ್ತಾರೆ. ಮೆರವಣಿಗೆಯ ಸಂದರ್ಭದಲ್ಲಿ ಗುಡಿಗಳಿಗೆ ಹೋಗುತ್ತಾರೆ. ಬೇರೆ ಊರಿನವರು ಆಗಿದ್ದರೆ ನಾರಪ್ಪನ ಗುಡಿಗೆ ಮದುವೆ ಸಂಪ್ರದಾಯಗಳನ್ನು ಮುಗಿಸಿಕೊಂಡು ಬಂದು ವಿಶೇಷವಾದ ಪೂಜೆ ಸಲ್ಲಿಸಿ ಹೋಗುತ್ತಾರೆ.

೪.೧.೫ ಸೀಮಂತ ಸಂದರ್ಭ : ಆಯಾಯ ವರ್ಗದ ಪ್ರಕಾರವೇ ನಡೆಯುತ್ತದೆ. ಆದರೆ ಪೂಜಾ ವಿಧಾನ ಬೇರೆ ಇರುತ್ತದೆ. ಸ್ನಾನ ಮಾಡಿ ದೇವರ ಗುಡಿಗೆ ಹೋಗಿ ಹಣ್ಣು ಕಾಯಿ ಮಾಡಿಸಿಕೊಂಡು ಬರುತ್ತಾರೆ. ನಂತರ ಮನೆಯಲ್ಲಿಯೂ ಪೂಜೆ ಮಾಡಿ, ಸ್ತ್ರೀಯನ್ನು ಕೂರಿಸಿ ಹೊಸ ಬಟ್ಟೆಯನ್ನು ಕೊಡುತ್ತಾರೆ. ಮತ್ತು ಹಸಿರು ಬಳೆಯನ್ನು ಹಾಕುತ್ತಾರೆ. ಈ ಸಮಯದಲ್ಲಿ ಕೆಲವರು ಉಡುಗೊರೆಯನ್ನು ಕೊಡುತ್ತಾರೆ. ಇದಾದ ಮೇಲೆ ಸ್ತ್ರೀಯನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಪೂಜೆ ಮಾಡಿಸಿಕೊಂಡು ಬರುತ್ತಾರೆ. ಈ ಕಾರ್ಯಕ್ರಮವನ್ನು ನಾರಪ್ಪನ ಭಕ್ತರು ವಿಜೃಂಭಣೆಯಿಂದಲೇ ಮಾಡುತ್ತಾರೆ.

೪.೧.೬ ನಾಮಕರಣ ಮತ್ತು ತೊಟ್ಟಿಲ ಸಂದರ್ಭ : ನಾರಪ್ಪನ ಒಕ್ಕಲಲ್ಲಿ ಮೊದಲು ಹುಟ್ಟಿದ ಹಿರಿಯ ಮಗನಿಗೆ ಅಥವಾ ಮಗಳಿಗೆ ನಾರಪ್ಪ, ನಾರಮ್ಮ ಎಂದೇ ಹೆಸರು ಕರೆಯುತ್ತಾರೆ. ಚೊಚ್ಚಲ ಹೆರಿಗೆಯ ತೊಟ್ಟಿಲು ಸಂದರ್ಭದಲ್ಲಿ ಮೊದಲು ಮನೆಯಲ್ಲಿ ಪೂಜೆ ಮಾಡಿ ನಂತರ ಗಂಗೆಗೆ ಹೋಗಿ ಮನೆಗೆ ಬಂದಾಗ ಬಾಗಿಲಿಗೆ ಮೊಳೆ ಬಡಿದುಕೊಂಡು ಕೇಲೊತ್ತವರನ್ನು ಒಳಗೆ ಕರೆದುಕೊಳ್ಳುತ್ತಾರೆ. ಬೇರೆ ಊರಿನಿಂದ ತೊಟ್ಟಿಲನ್ನು ತಂದವರು ಮೊದಲು ನಾರಪ್ಪನ ಗುಡಿಗೆ ಹೋಗುತ್ತಾರೆ. ಅಲ್ಲಿ ಕೈ ಮುಗಿದು ಹಣ್ಣು ಕಾಯಿ ಪೂಜೆ ಮಾಡಿಸಿ ಮನೆಗೆ ಬರುತ್ತಾರೆ. ಮನೆಯಲ್ಲಿ ತೊಟ್ಟಿಲು ಕಟ್ಟಿ, ಒಂಬತ್ತು ತೆರನಾದ ಗುಗ್ಗರಿ ಮಾಡಿ ಒಂದು ಗಂಟನ್ನು ಕಟ್ಟಿ ಮಗುವಿನ ಮೇಲೆ ಇಟ್ಟಿರುತ್ತಾರೆ. ಆಗ ಕೂಸಿನ ಅತ್ತೆಯಾದವರು ಬಂದು ಗುಗ್ಗರಿಯ ಗಂಟನ್ನು ಕಚ್ಚಿ ನಾಮಕರಣ ಮಾಡಬೇಕು. ಅತ್ತೆ ಪ್ರೀತಿಯಿಂದ ಹಾಸ್ಯಮಯವಾಗಿ, ನಾರ್ಗ, ಮುನಿಯ, ಗೋವಿಂದ ಎಂದು ಹೆಸರು ಕರೆಯುತ್ತಾರೆ. ಮೊದಲು ಹುಟ್ಟಿದ ಮಗನಿಗೆ ಮಾತ್ರ ನಾರಪ್ಪನ ಹೆಸರೇ ಇಡುತ್ತಾರೆ. ನಾಮಕರಣದ ಶಾಸ್ತ್ರ ಮುಗಿದ ನಂತರ ತಾಯಿ ಮಗುವನ್ನು ಗುಡಿಗೆ ಕರೆದುಕೊಂಡು ಹೋಗಿ ನಾರಪ್ಪನ ಮುಂದೆ ಅಡ್ಡಹಾಕಿಕೊಂಡು ಬರುತ್ತಾರೆ.

ನಾರಪ್ಪನ ಒಕ್ಕಲುಗಳಲ್ಲಿರುವ ಹೆಸರುಗಳು

ಗಂಡು	ಹೆಣ್ಣು
ನಾರಪ್ಪ	ನಾರಮ್ಮ
ಮುನಿಯಪ್ಪ	ಮುನಿಯಮ್ಮ
ಗೋವಿಂದ	ಸಾವಕ್ಕ
ದಾಸಪ್ಪ	ಶ್ಯಾವಕ್ಕ, ಸಾವಕ್ಕ

ಸಣ್ಣ ನಾರಪ್ಪ ಆಂಜನೇಯ

ದೊಡ್ಡ ನಾರಪ್ಪ ಹನುಮಂತ

ಕೃಷ್ಣ ಇತ್ಯಾದಿ, ಇತ್ಯಾದಿ

ಇವೇ ಹೆಸರುಗಳ ಮುಂದೆ 'ದೊಡ್ಡ' ಮತ್ತು 'ಸಣ್ಣ' ಸೇರಿಸಿಕೊಂಡು ಬಹುತೇಕ ಹೆಸರುಗಳು ಇಂದಿಗೂ ನಾರಪ್ಪನ ಒಕ್ಕಲುಗಳಲ್ಲಿ ಇರುವುದನ್ನು ಕಾಣಬಹುದು.

೪.೧.೭ ಸಾವಿನ ಸಂದರ್ಭ : ಶವಸಂಸ್ಕಾರ ವಿಧಿಗಳು ನಮ್ಮ ಭಾರತದಲ್ಲಿ ಬಹಳ ವಿಶಿಷ್ಟವಾದ ಸ್ಥಾನ ಪಡೆಯುತ್ತವೆ. ಯಾವ ಒಬ್ಬ ವ್ಯಕ್ತಿ ಸತ್ತರೂ ಅವನನ್ನು ಮಣ್ಣು ಸೇರಿಸುವ ಇಲ್ಲವೆ ಸುಡುವ ವಿಧಾನದಿಂದ ಹಿಡಿದು ಅದರ ಆಚೆಗ ಕರ್ಮಾಧಿ ಕೆಲಸಗಳನ್ನು ಮಾಡುವಲ್ಲಿ ವಿವಿಧ ಪ್ರದೇಶಗಳಲ್ಲಿ ವಿವಿಧ ಆಚರಣೆಗಳು ಕಂಡುಬರುವುದನ್ನು ಗಮನಿಸಿದ್ದೇವೆ. ಅದರಂತೆ ನಾರಪ್ಪನ ಒಕ್ಕಲುಗಳಲ್ಲಿ ದಾಸಪ್ಪನ ಶವಸಂಸ್ಕಾರವೂ ಒಂದು ವಿಶಿಷ್ಟ ರೀತಿಯಲ್ಲಿಯೇ ನಡೆಯುತ್ತದೆ.

ದಾಸಪ್ಪ ಸತ್ತ ದಿನ ಅಥವಾ ನಾರಪ್ಪನ ಒಕ್ಕಲುಗಳು ಸತ್ತಾಗ ಒಕ್ಕಲಿನ ಹಿರಿಯರು ಸೇರಿ 'ಚಟ್ಟ' ಕಟ್ಟಿ ಅದರ ಮೇಲೆ ಒಂದು ಮಂಟಪ ಕಟ್ಟುತ್ತಾರೆ. ವಿಧ ವಿಧವಾದ ಹೂಗಳಿಂದ ಅಲಂಕರಿಸುತ್ತಾರೆ. ಮತ್ತು ಧರಿಸುತ್ತಿದ್ದ ವಸ್ತ್ರವನ್ನು ತಂದು ಆ ಮಂಟಪಕ್ಕೆ ಹೊದಿಸುತ್ತಾರೆ.

ಸತ್ತ ಹೆಣಕ್ಕೆ ಸ್ನಾನ ಮಾಡಿಸಿ, ಭಸ್ಮಧಾರಣೆ ಮಾಡಿ, ಪೂಜೆ ಮಾಡುತ್ತಾರೆ. ನಂತರ ಚಟ್ಟದ ಮೇಲಿನ ಮಂಟಪಕ್ಕೆ ಹೆಣವನ್ನು ಕೂರಿಸುತ್ತಾರೆ. ನಂತರ ನಾಲ್ಕು ಜನ ಹೊತ್ತು ಮೆರವಣಿಗೆ ಮಾಡುತ್ತ ಊರ ಹೊರಗೆ ಹೋಗಿ ಕೆಲವು ಭಾಗದಲ್ಲಿ ಮಣ್ಣು ಮಾಡುತ್ತಾರೆ, ಕೆಲವು ಭಾಗದಲ್ಲಿ ಸುಡುತ್ತಾರೆ. ನಂತರ ಹಳ್ಳಕ್ಕೊ, ಕೆರೆಗಳಿಗೊ ಹೋಗಿ ನೀರು ಹಾಕಿಕೊಂಡು ಮನೆಗೆ ಬಂದು ಎಣ್ಣೆ ಊದುಬತ್ತಿಯಿಂದ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿ ಬರುತ್ತಾರೆ. ಸತ್ತವರ ಮನೆಯಲ್ಲಿ ಅಡುಗೆ ಮಾಡುವಂತಿಲ್ಲ. ಅಕ್ಕಪಕ್ಕದ ಮನೆಯವರಿಂದ ಊಟದ ವ್ಯವಸ್ಥೆ ಇರುತ್ತದೆ. ನಂತರ ಮಾಡಬೇಕಾದ ಎಲ್ಲ ಕರ್ಮಗಳನ್ನು ಮಾಡಿ ಮುಗಿಸುತ್ತಾರೆ. ದಾಸಪ್ಪ ಸತ್ತಾಗ ಆತನಿಗೆ ಸಂಬಂಧಪಟ್ಟ ಬೆತ್ತ ಮತ್ತು ಘಂಟೆಗಳನ್ನು ಮನೆಯವರು ಹೊರದೆ ಇದ್ದಾಗ ಹಳ್ಳಕ್ಕೊ. ಬಾವಿಗೊ ಅಥವಾ ಗಿರಿಗೊ ಮುಟ್ಟಿಸಿ ಬರುತ್ತಾರೆ. .

ಹೀಗೆ ಹುಟ್ಟಿದಾಗಿನಿಂದ ಸಾಯುವವರೆಗಿನ ಆಚರಣೆಗಳನ್ನು ನಾರಪ್ಪನ ಒಕ್ಕಲಿನವರು 'ಜೀವನಾವರ್ತನ' ಆಚರಣೆಗಳೆಂದು ಆಚರಿಸುತ್ತಾರೆ. ಈ ಆಚರಣೆಗಳು ಎಲ್ಲ ಒಕ್ಕಲುಗಳಲ್ಲಿ ಕಂಡುಬಂದರೂ ಇಲ್ಲಿ ಸ್ವಲ್ಪ ಮಟ್ಟಿಗಾದರು ಭಿನ್ನವಾಗಿರುತ್ತವೆ. ಚಿಗಟೇರಿ ನಾರಪ್ಪನಿಗೆ ಬೇರೆ ಬೇರೆ ಊರುಗಳಲ್ಲಿ ಹೆಚ್ಚಿನ ಒಕ್ಕಲಿನವರು ಸಿಗುತ್ತಾರೆ. ಅವರು ತಮ್ಮ ಮನೆಗಳಲ್ಲಿಯೇ ನಾರಪ್ಪನ ಪೂಜೆಯನ್ನು ಮಾಡುತ್ತಾರೆ. ಚಿಗಟೇರಿ ಗ್ರಾಮದಲ್ಲಿ ಮಾತ್ರ ಪ್ರತಿಯೊಂದು ಜನಾಂಗದವರು ಕೂಡ 'ನಾರಪ್ಪ' ದೇವರಿಗೆ 'ಅಸವಲ್ಲದ' ದೇವರು ಎಂದೇ ಭಯ ಪಡುತ್ತಾರೆ.

೪.೨ ವಾರ್ಷಿಕಾವರ್ತನ ಆಚರಣೆಗಳು

ಒಂದು ದಿನದಿಂದ ವರ್ಷದ ತನಕ ಪ್ರತಿ ಹಂತದಲ್ಲಿ ನಡೆಯುವ ಆಚರಣೆಗಳನ್ನು 'ವಾರ್ಷಿಕವರ್ತನ' ಆಚರಣೆಗಳು ಎಂದು ಕರೆಯುತ್ತೇವೆ. ಉದಾ : ಹಬ್ಬ, ತೇರು, ಜಾತ್ರೆ, ಹುಣ್ಣಿಮೆ, ಅಮವಾಸ್ಯೆಗಳು ಮುಂತಾದವುಗಳು. ಇಲ್ಲಿ ನಾರಪ್ಪನು ತನ್ನದೇ ಆದ ವಾರ್ಷಿಕಾವರ್ತನ ಆಚರಣೆಗಳನ್ನು ಬೆಳೆಸಿಕೊಂಡು ಬಂದಿದ್ದಾನೆ.

೪. ೨. ೧ ದಿನಂ ಪ್ರತಿ : ಪ್ರತಿದಿನ ನಡೆಯುವ ಆಚರಣೆಗಳನ್ನು 'ದೈನಿಕಾವರ್ತನ' ಎಂದು ಕರೆಯುತ್ತೇವೆ. 'ಚಿಗಟೇರಿ ನಾರಪ್ಪ'ನಿಗೆ ದಿನಕ್ಕೆ ಎರಡು ಬಾರಿ ಪೂಜೆ ಮಾಡುತ್ತಾರೆ. ಚಿಗಟೇರಿ ಗ್ರಾಮದಲ್ಲಿ ನಾರಪ್ಪನೇ ಪ್ರಮುಖ ದೇವರಾಗಿದ್ದು ಎರಡು ಭಾರಿ ವಿಶೇಷ ಪೂಜೆ ನಡೆಯುತ್ತದೆ. ಪೂಜೆ ಮಾಡುವ ಪೂಜಾರಿಗಳು ಮಡಿಯಿಂದಲೇ ಇರುತ್ತಾರೆ. ಪ್ರಾತಃಕಾಲ ೭ ಘಂಟೆಗೆ ಅನೇಕ ಮಂತ್ರಗಳಿಂದ ಪೂಜೆ ನಡೆಯುತ್ತದೆ. ನಂತರ 'ಶಿವ ನಾರದ ಮುನಿ ಗೋವಿಂದ ಗೋ...ವಿಂದ' ಎಂದು ಹೇಳುತ್ತಾರೆ. ಆನಂತರ ಜಾಗಟೆ ಬಡಿಯುತ್ತಾರೆ. ಹೊರಗಡೆ ಒಬ್ಬರು ಶಂಖ ಊದುತ್ತಾರೆ ಮತ್ತು ನಗಾರಿಯನ್ನು ಬಡಿಯುತ್ತಾರೆ. ಈ ಪದ್ಧತಿ ಸಂಧ್ಯಾಕಾಲದ ಪೂಜೆಯಲ್ಲಿಯು ನಡೆಯುತ್ತದೆ.

೪. ೨. ೨ ವಾರದ ವಿಶೇಷ ದಿನ : ಪ್ರತಿಯೊಂದು ದೇವರಿಗೆ ಒಂದೊಂದು ವಾರವನ್ನು ಭಕ್ತರು ಗುರುತು ಮಾಡಿಕೊಂಡಿರುತ್ತಾರೆ. ಉದಾಹರಣೆಗೆ ಆಂಜನೇಯ, ತಿರುಪತಿ ತಿಮ್ಮಪ್ಪನಿಗೆ ಶನಿವಾರವನ್ನು ಮತ್ತು ಬಸವಣ್ಣಗೆ ಸೋಮವಾರ, ಹೆಣ್ಣು ದೇವರಿಗೆ ಮಂಗಳವಾರ, ಶುಕ್ರವಾರ ಈ ರೀತಿಯಾದ ವಾರಗಳನ್ನು ಗುರುತು ಮಾಡಿಕೊಂಡಿದ್ದಾರೆ. ಹಾಗೆಯೇ ನಾರಪ್ಪ ದೇವರಿಗೂ ಕೂಡ ವಾರದ ವಿಶೇಷ ದಿನವೆಂದು ಶನಿವಾರವನ್ನು ಗುರುತು ಮಾಡಿಕೊಂಡಿದ್ದಾರೆ. ಶನಿವಾರ ದಿವಸ ಮುಸು, ಮುಸು ಮುಂಜಾನೆಯಲ್ಲಿ ಎದ್ದು ದೇವಸ್ಥಾನವನ್ನು ತೊಳೆದು ಪೂಜಾರಿಗಳು ಸ್ನಾನ ಮಾಡಿ, ಮಡಿಯುಟ್ಟು ಪೂಜೆಗೆ ಬೇಕಾದ ಪತ್ರಿಗಳನ್ನು ತೆಗೆದುಕೊಂಡು ಜೊತೆಗೆ ಮಡಿನೀರನ್ನು ತೆಗೆದುಕೊಂಡು ಅನೇಕ ಮಂತ್ರಗಳನ್ನು ಹೇಳುತ್ತಾರೆ. ಗರ್ಭಗುಡಿ ಪ್ರವೇಶಿಸಿ ಬಾಗಿಲನ್ನು ಹಾಕಿಕೊಂಡು ನಾರಪ್ಪಗೆ ಹಾಕಿರುವ ವಸ್ತ್ರಗಳನ್ನು ಕಳಚಿ ಸ್ನಾನ ಮಾಡಿಸಿ, ನಂತರ ಅಭಿಷೇಕವನ್ನು ಮಾಡಿಸಿ ಪುನಃ ವಸ್ತ್ರಗಳನ್ನು ತೊಡಿಸುತ್ತಾರೆ. ಆನಂತರ ಬಾಗಿಲನ್ನು ತೆಗೆಯುತ್ತಾರೆ.

ಅದೇ ರೀತಿಯಾಗಿ ಪ್ರತಿ ಶನಿವಾರ ನಾರಪ್ಪನ ಒಕ್ಕಲಿನವರು ಯಾರ‍್ಯಾರು ಇರುತ್ತಾರೋ ಅವರೆಲ್ಲ ಅಂದು ಕೆಲವು ನಿಯಮಕ್ಕೊಳಪಡುತ್ತಾರೆ. ಇದನ್ನು ಒಕ್ಕಲುಗಳಲ್ಲಿ ಈಗಲೂ ಕಾಣುವುದುಂಟು. ಬೆಳಿಗ್ಗೆ ಏಳುತ್ತಿದ್ದ ಹಾಗೇ ಮನೆಯನ್ನು ಗುಡಿಸಿ, ಸಾರಿಸಿ, ಸ್ವಚ್ಛ ಮಾಡಿ ಮನೆ ಮುಂದೆ ರಂಗೋಲಿ ಹಾಕುತ್ತಾರೆ. ನಂತರ ಸ್ನಾನ ಮಾಡಿ ಪೊಡುಗ, ಪಾತ್ರೆಗಳನ್ನು ತೊಳೆದು ಪವಿತ್ರವಾದ ನೀರನ್ನು ತಂದು ನಾರಪ್ಪಗೆ ವಿಶೇಷವಾದ ಪ್ರಸಾದವನ್ನು ಮಾಡುತ್ತಾರೆ.

ಪ್ರತಿ ಒಕ್ಕಲಿನವರಲ್ಲಿ ಪುರುಷರೇ ಪೂಜೆ ಮಾಡುವುದನ್ನು ಕಾಣುತ್ತೇವೆ. ತಯಾರಿಸಿದ ಪ್ರಸಾದವನ್ನು ಮಣ್ಣಿನ ಕುಡಿಕೆ(ಬಟ್ಟಲು)ಯಲ್ಲಿ ಆ ಕುಡಿಕೆಯ ಮಧ್ಯೆ ಲಿಂಗವಿರುತ್ತದೆ. ಅದರಲ್ಲಿ ಅಕ್ಕಿ, ಬಾಳೆಹಣ್ಣು, ಬಾರೋ ಸಕ್ಕರೆ ಹಾಕಿ ಮಾಡಿದ

ಪ್ರಸಾದವನ್ನು ನೈವೇದ್ಯ ಮಾಡುತ್ತಾರೆ. ಮಾಡುವಾಗ 'ಶಿವನಾರದ ಮುನಿ ಗೋವಿಂದ ಗೋ...ವಿಂದ' ಎಂದು ನಾರಪ್ಪನನ್ನು ಸ್ಮರಿಸುತ್ತಾರೆ. ಭಕ್ತರು ಸಾಮಾನ್ಯವಾಗಿ ಹಿರಿಯರು ಇಲ್ಲವೇ ಹರಕೆ ಮಾಡಿಕೊಂಡವರು ಏನೂ ತಿನ್ನದೆ ಹಾಗೇ ಹಸಿದು ಇರುತ್ತಾರೆ. ಇದನ್ನು ಭಕ್ತರು 'ವಾರ ಮಾಡುವುದು' ಎನ್ನುತ್ತಾರೆ. ಇನ್ನೂ ಕೆಲವರು ಇದನ್ನು 'ವಪ್ಪತ್ತು' ಮಾಡುತ್ತಾರೆ ಎನ್ನುವರು.

ಈ ಎಲ್ಲಾ ಆಚರಣೆಗಳನ್ನು ನಾರಪ್ಪನ ಒಕ್ಕಲಿನವರು ಮಾಡುತ್ತಾರೆ. ಆ ದಿವಸ ದಾಸಪ್ಪ ಮಾತ್ರ ಯಾವುದೇ ಮನೆಗೆ ಭಿಕ್ಷೆ ಬೇಡಲು ಹೋಗುವುದಿಲ್ಲ. ಮನೆಯಲ್ಲಿಯೇ ಎರಡು ಬಾರಿ ಪೂಜೆಯನ್ನು ಮಾಡುತ್ತಾನೆ.

೪. ೨. ೩ ಅಮಾವಾಸ್ಯೆ ಮತ್ತು ಹುಣ್ಣಿಮೆ : ನಾರಪ್ಪ ದೇವರಿಗೆ ಅಮಾವಾಸ್ಯೆ ದಿವಸ ವಿಶೇಷವಾದ ಪಂಚಾಭಿಷೇಕ ಮತ್ತು ರುದ್ರಾಭಿಷೇಕದಿಂದ ಪೂಜೆ ಮಾಡುತ್ತಾರೆ. ನಾಡಿನಲ್ಲಿರುವ ಅನೇಕ ಭಕ್ತರು ಆ ದಿವಸ ಹಣ್ಣು ಕಾಯಿಯನ್ನು ಮಾಡಿಸಿಕೊಂಡು ಹೋಗುತ್ತಾರೆ. ಬಂದ ಭಕ್ತರು ಪೂಜಾರಿಗಳ ಮನೆಯಲ್ಲಿ ಹೊಸ ಮಡಿಕೆಯಲ್ಲಿ ಎಡೆ ಮಾಡಿಸಿ ದೇವರಿಗೆ ಅರ್ಪಿಸಿ ಮತ್ತು ಮನೆಯ ಬಾಗಿಲಿಗೆ ಕಟ್ಟಲು ಅಂತರ್‌ಕಾಯನ್ನು ಮಾಡಿಸಿಕೊಂಡು ಹೋಗುತ್ತಾರೆ. ಅಮಾವಾಸ್ಯೆ ದಿವಸ ಅನೇಕ ವಾಹನಗಳು ಬಂದು ಪೂಜೆ ಮಾಡಿಸಿಕೊಂಡು ನಿಂಬೆ ಹಣ್ಣನ್ನು ವಾಹನಕ್ಕೆ ಕಟ್ಟಿಸಿಕೊಂಡು ಹೋಗುತ್ತಾರೆ. ಒಕ್ಕಲಿನವರು ಅಮಾವಾಸ್ಯೆ ದಿವಸ ಆರ್ಥಿಕವಾದ ಯಾವುದೇ ವ್ಯವಹಾರವನ್ನು ಮಾಡುವುದಿಲ್ಲದಿರುವುದನ್ನು ಗುರುತಿಸಬಹುದಾಗಿದೆ,

ಹುಣ್ಣಿಮೆ : ನಾರಪ್ಪನ ಒಕ್ಕಲುಗಳಲ್ಲಿ ಮತ್ತು ಚಿಗಟೇರಿ ಗ್ರಾಮದಲ್ಲಿ ವರ್ಷಕ್ಕೊಮ್ಮೆ ಬರುವ ಭರತ ಹುಣ್ಣಿಮೆಯನ್ನು ವಿಶೇಷವಾಗಿ ಆಚರಣೆ ಮಾಡುತ್ತಾರೆ. ವಿಶೇಷವಾಗಿ ಚಿಗಟೇರಿಯಲ್ಲಿ ಮಾತ್ರ ಭರತ ಹುಣ್ಣಿಮೆಯ ಒಂಭತ್ತು ದಿವಸಕ್ಕೆ ಮುಂಚಿತವಾಗಿ ಪಶ್ಚಿಮ ದಿಕ್ಕಿಗಿರುವ ಬನ್ನಿ ವೃಕ್ಷದವರೆಗೆ ಹೋಗಿ ನಾರಪ್ಪ ದೇವರಿಗೆ ಬೀಳ್ಕೊಟ್ಟು, ಕಾಡಿಗೆ ಕಳುಹಿಸಿ ಬರುತ್ತಾರೆ. ಅಂದಿನಿಂದ ನಾರಪ್ಪ ದೇವರು ಬೇಟೆಯಾಡಲು ಕಾಡಿಗೆ ಹೋಗುತ್ತಾರೆ, ಒಂಭತ್ತು ದಿವಸದವರೆಗೆ ನಾರಪ್ಪ, ಕಾಡು, ಗುಡ್ಡ, ಬೆಟ್ಟ ಸುತ್ತಿ ಬೇಟೆಯಾಡುತ್ತಾನೆಂಬ ನಂಬಿಕೆ ಚಿಗಟೇರಿ ಗ್ರಾಮದ ಭಕ್ತರಲ್ಲಿದೆ. ಆದರೆ ದೇವರ ಹೆಸರಿನಲ್ಲಿ ಯಾವುದೇ ಪ್ರಾಣಿಬಲಿಗಳು ನಡೆಯುವುದಿಲ್ಲ. ಒಂಭತ್ತು ದಿವಸ ಆದನಂತರ ಪುನಃ ವಾದ್ಯ ಸಮೇತವಾಗಿ ನಾರಪ್ಪನನ್ನು ಕರೆದುಕೊಂಡು ಬರಲು ಹೋಗುತ್ತಾರೆ. ಹೋಗುವ ಮುನ್ನ ಮನೆಯಿಂದ 'ಹುಳಿ ಗುಗ್ಗರಿ'ಯನ್ನು ಹೊಸ ಮಡಿಯಲ್ಲೇ ಮಾಡಿ, ಒಂದು ಪುಟ್ಟಿ(ಬಿದಿರಿನ)ಯಲ್ಲಿ ತುಂಬಿಕೊಂಡು ಪಲ್ಲಕ್ಕಿಯಲ್ಲಿ ಇಟ್ಟು ಹಿಂದೆ ಹೋಗಿದ್ದ ಬನ್ನಿಮರಕ್ಕೆ ಹೋಗಿ, ದೇವರ ಕಾಲು ತೊಳೆಯುತ್ತಾನೆ. ಯಾಕೆಂದರೆ ಒಂಭತ್ತು ದಿವಸ ನಾರಪ್ಪ ಕಾಡೆಲ್ಲ ಸುತ್ತಿ ಸುಳಿದು, ಕಾಲೆಲ್ಲ ಧೂಳಾಗಿರುತ್ತವೆ ಎಂಬ ನಂಬಿಕೆ ಜನಪದರಲ್ಲಿದೆ.

ಕಾಲು ತೊಳೆದು ಪೂಜೆ ಮಾಡಿ, ತೆಗೆದುಕೊಂಡು ಹೋಗಿದ್ದ ಹುಳಿ ಗುಗ್ಗರಿಯನ್ನು ಎಲ್ಲರೂ ಸ್ವೀಕರಿಸಿ ನಾರದ ಮುನಿ ಗೋವಿಂದ ಗೋ...ವಿಂದ ಎನ್ನುತ್ತಾ ದೇವರನ್ನು ಮರಳಿ ದೇವಸ್ಥಾನಕ್ಕೆ ಕರೆದುಕೊಂಡು ಬರುತ್ತಾರೆ. ಆಗ ದೇವಸ್ಥಾನದ

ಹತ್ತಿರ ಜೋಳದಿಂದ ಮಾಡಿದ ಬಾನದ ಹುಂಡಿ ಮಾಡಿಟ್ಟುಕೊಂಡಿರುತ್ತಾರೆ ಅದನ್ನು ಅಲ್ಲಿ ಸೇರಿದ ಎಲ್ಲಾ ಭಕ್ತರಿಗೂ ಹಂಚುತ್ತಾರೆ. ಆ ಜೋಳದ ಬಾನವನ್ನು ಮನೆಗೆ ತೆಗೆದುಕೊಂಡು ಹೋಗಿ, ಮನೆಯ ಎಲ್ಲ ಸದಸ್ಯರು ಸ್ವೀಕರಿಸಿ, ಮತ್ತೊಂದಿಷ್ಟನ್ನು ಪ್ರಾಣಿಗಳಿಗೆ ಕೊಡುತ್ತಾರೆ. ಇದರಿಂದ ನಮಗಾಗಲಿ ಅಥವಾ ಪ್ರಾಣಿಗಳಿಗಾಗಲಿ ಯಾವುದೇ ಕಾಯಿಲೆ ಬರುವುದಿಲ್ಲ ಎಂಬ ನಂಬಿಕೆ ಚಿಗಟೇರಿ ನಾರದ ಮುನಿಯ ಭಕ್ತರಲ್ಲಿ ಕಾಣಬಹುದಾಗಿದೆ.

ಮತ್ತೊಂದು ಹುಣ್ಣಿಮೆಯಾದ "ನೂಲುಹುಣ್ಣಿಮೆ"ಯಲ್ಲಿ ವಿಶೇಷ ಪೂಜೆ ನಡೆಸಿ ದೇವರಿಗೆ ನೂಲು ದಾರವನ್ನು ಕಟ್ಟುತ್ತಾರೆ. ಹೀಗೆ ನಾರಪ್ಪನಿಗೆ ಅಮಾವಾಸ್ಯೆ ಮತ್ತು ಹುಣ್ಣಿಮೆಗಳಲ್ಲಿ ವಿಶೇಷವಾದ ಪೂಜೆ ಮತ್ತು ಆಚರಣೆಗಳು ವಿಧಿವತ್ತಾಗಿ ನಡೆದುಕೊಂಡು ಬಂದಿರುತ್ತವೆ.

೪. ೨. ೪ **ಶ್ರಾವಣ ಮಾಸದಲ್ಲಿ :** ಶ್ರಾವಣ ಮಾಸದಲ್ಲಿ ನಾರಪ್ಪನ ಒಕ್ಕಲಿನವರಿಗೆ ದೊಡ್ಡ ಹಬ್ಬವಿದ್ದಂತೆ. ಅದರಲ್ಲೂ ಶ್ರಾವಣ ಶನಿವಾರದ ಮೊದಲ ದಿನ ವಿಶೇಷವಾದ ಆಚರಣೆಯ ಜೊತೆಗೆ ವಿಶೇಷವಾದ ಊಟವನ್ನು ಮಾಡುತ್ತಾರೆ. ಆ ಒಕ್ಕಲಿನವರು ಶ್ರಾವಣ ಮಾಸದ ಶನಿವಾರಗಳಲ್ಲಿ 'ವಪ್ಪತ್ತು' ಮಾಡುವುದು ಯತೇಚ್ಛವಾಗಿರುತ್ತದೆ. ನಾಯಕ ಜನಾಂಗದಲ್ಲಿ ಮಾಂಸವನ್ನೇ ನಿಷೇಧಿಸಿರುತ್ತಾರೆ. ಮನೆಗಳಲ್ಲಿ ಶ್ರಾವಣ ಮಾಸ ಕೊನೆಗಾಣುವ ತನಕ ಪ್ರತಿನಿತ್ಯ ನೆಲ ಸಾರಿಸಿ ಪೂಜೆ ಮಾಡದೆ ಊಟವೇ ಮಾಡುವಂತಿಲ್ಲ.

ಶ್ರಾವಣ ಮಾಸದಲ್ಲಿ ನಾರಪ್ಪನಿಗೆ ನೆಡೆದುಕೊಳ್ಳುವ ಆ ವರ್ಗದವರು ಹೆಚ್ಚಾಗಿ ಮಡಿಯನ್ನು ಪಾಲಿಸುತ್ತಾರೆ ಮತ್ತು ದೇವಸ್ಥಾನದ ಪೂಜಾರಿಗಳು ಶ್ರಾವಣ ಮಾಸ ಮುಗಿಯುವವರೆಗೂ ಮಡಿ ಬಟ್ಟೆ ಬಿಟ್ಟು, ಬೇರೆ ಯಾವ ಬಟ್ಟೆಯನ್ನು ಹಾಕಿಕೊಳ್ಳುವುದಿಲ್ಲ. ಹಾಗೂ ಹರಕೆ ಮಾಡಿಕೊಳ್ಳುವ ಭಕ್ತ ಸಮೂಹ, ಯಾವುದೇ ವರ್ಗವಿರಲಿ ಹರಕೆ ಮಾಡಿಕೊಂಡ ನಂತರ ಅವರು ವಪ್ಪತ್ತು ಮಾಡಬೇಕು.

೪. ೨. ೫ **ಕಾರ್ತಿಕೋತ್ಸವ :** ಚಿಗಟೇರಿ ಗ್ರಾಮದಲ್ಲಿ ಪ್ರಮುಖ ದೇವರೆಂದರೆ 'ಶ್ರೀ ಶಿವನಾರದಮುನಿ' ದೈವ ಮಾತ್ರ. ಪ್ರತಿವರ್ಷದ ಕಾರ್ತಿಕೋತ್ಸವವು ನಾರಪ್ಪನ ಕಾರ್ತಿಕೋತ್ಸವವೇ ಮೊದಲು ನಡೆಯುತ್ತದೆ. ನಂತರ ಇತರೇ ದೇವರುಗಳ ಕಾರ್ತಿಕೋತ್ಸವ ನಡೆಯುತ್ತದೆ. ಪ್ರತಿವರ್ಷದ ಡಿಸೆಂಬರ್ ತಿಂಗಳಲ್ಲಿ "ಕಾರ್ತಿಕಮಾಸ" ಆರಂಭಗೊಳ್ಳುತ್ತದೆ. ಒಂದು ತಿಂಗಳು ಸಂಪೂರ್ಣ ದೇವಸ್ಥಾನದ ಮುಂದೆ ಇರುವ ನಾಲ್ಕು ದೀಪ ಕಂಬದ ಮೇಲೆ ಎಣ್ಣೆ ಹಾಕಿ ದೀಪವನ್ನು ಹಚ್ಚುತ್ತಾರೆ. ಹರಕೆ ಮಾಡಿಕೊಂಡ ಭಕ್ತರು ಒಂದೊಂದು ದಿನ ಎಣ್ಣೆ ಹಾಕಿ ದೀಪ ಹಚ್ಚಿ ಹೋಗುತ್ತಾರೆ. ಕಾರ್ತಿಕೋತ್ಸವದ ಕೊನೆಯ ದಿನವನ್ನು "ದೀಪೋತ್ಸವದ ದಿನ" ಎಂದು ಕರೆಯುತ್ತಾರೆ. ಆ ದಿನ ೨೦೦ ರಿಂದ ೨೫೦ ಪ್ರಣತಿಯನ್ನು ಇಟ್ಟು, ಎಣ್ಣೆ ಬತ್ತಿಯನ್ನು ಹಾಕಿ ದೀಪವನ್ನು ಹಚ್ಚುತ್ತಾರೆ. ಕಾರ್ತಿಕೋತ್ಸವಕ್ಕೆ ಗ್ರಾಮದ ಜನರು ಮತ್ತು ಅನೇಕ ಭಾಗಗಳಿಂದ ಬಂದ ಭಕ್ತರು, ನೆಂಟರಿಷ್ಟರು ಜಮಾಯಿಸಿರುತ್ತಾರೆ. ಇದಾದ ಒಂದು ವಾರಕ್ಕೆ "ಮರಿಕಾರ್ತಿಕ" ಇರುತ್ತದೆ. ಅಂದು ೧೦೧ ಪ್ರಣತಿಯನ್ನಿಟ್ಟು, ದೀಪ ಹಚ್ಚಿ ಮಹಾಮಂಗಳಾರತಿಯ ಮುಖಾಂತರ ಕಾರ್ತಿಕೋತ್ಸವದ ಎಲ್ಲಾ ಕಾರ್ಯಕ್ರಮಗಳು ಮುಗಿಯುತ್ತವೆ.

೪.೩ ಜಾತ್ರೆ ವಿವರ

'ಜಾತ್ರೆ' ಎನ್ನುವ ಪದ ನಿಘಂಟುಗಳ ಪ್ರಕಾರ ಜಾತ್ರೆ ಅಂದರೆ 'ಯಾತ್ರೆ'ಯ ತದ್ಭವ ರೂಪವಾಗಿದೆ. ಮನುಷ್ಯ ಪ್ರಾಣಿಯು ಈ ಸೃಷ್ಟಿಯಲ್ಲಿ ಬದಲಾಗುವ ಸನ್ನಿವೇಶಗಳಾದ ಹಗಲು, ರಾತ್ರಿ, ಬಿಸಿಲು, ಗಾಳಿ, ಮಳೆ ಆಗುವುದನ್ನು ಗಮನಿಸಿ ಕಣ್ಣಿಗೆ ಕಾಣದ ಯಾವುದೋ ಅಗೋಚರವಾದ ಶಕ್ತಿ ಇದೆ ಎಂದು ಭಾವಿಸಿ ಕೆಲವೊಮ್ಮೆ ಭೀತಿಗೊಳಗಾದರೆ ಮತ್ತೊಮ್ಮೆ ಭಕ್ತಿಯಿಂದ ತಲೆ ಬಾಗಿಸತೊಡಗಿದ್ದಾನೆ. ಮನುಷ್ಯನ ಈ ಭೀತಿಯ ನಿವಾರಣೆಗಾಗಿ ದೇವರ ಕಲ್ಪನೆಯನ್ನು ತಂದುಕೊಂಡನು. ನಂತರ ಧಾರ್ಮಿಕ ಭಕ್ತಿಯಿಂದ ತಲೆಬಾಗತೊಡಗಿದ, ನಂತರ ಭೀತಿಯ ನಿವಾರಣೆಗಾಗಿ ದೇವರ ಕಲ್ಪನೆ ತಂದುಕೊಂಡು ಧಾರ್ಮಿಕ ಭಾವನೆಯಲ್ಲಿ ಗುಂಪು ಗುಂಪಾಗಿ ಸೇರಿ ದೇವರನ್ನು ಆರಾಧಿಸಲು ಮುಂದಾಗುತ್ತಾನೆ, ನಂತರ ವರ್ಷಕ್ಕೊಂದರಂತೆ ವಿಶೇಷ ಉತ್ಸವ ಮಾಡಲು ಅನುವಾದಾಗ 'ಜಾತ್ರೆ' ಎಂಬುದು ಹುಟ್ಟಿಕೊಂಡಿತು ಎನ್ನಬಹುದು.

'ಜಾತ್ರೆ' ಎಂಬುದು ವರ್ಷಕ್ಕೊಮ್ಮೆ ನಿಗಧಿಯಾದ ಅವಧಿಗಳಲ್ಲಿ, ಗೊತ್ತಾದ ಸ್ಥಳದಲ್ಲಿ ಒಂದು ದಿನ ಇಲ್ಲವೆ ಎರಡು ಮೂರು ದಿನ ನಡೆಸುವ ಉತ್ಸವವಾಗಿದೆ. ಈ ಜಾತ್ರೆಗಳು ಹೆಚ್ಚಾಗಿ ಪ್ರಸಿದ್ಧ ತೀರ್ಥಕ್ಷೇತ್ರದಲ್ಲಿ ನಡೆದಿರಬಹುದು ನಂತರ ಸ್ಥಳೀಯವಾಗಿರುವ ಸಾಧ್ಯತೆಗಳು ಇವೆ.

ಜಾತ್ರೆಗಳು ನಮ್ಮ ನಾಡಿನಲ್ಲಿ ಜರುಗುವ ಸ್ಥಳದ ಹೆಸರಿನಿಂದ ಅಥವಾ ಅಲ್ಲಿಯ ದೈವದ ಕಲ್ಪನೆಯಿಂದ ಜನಪ್ರಿಯವಾಗಿರುವುದುಂಟು. ಜಾತ್ರೆಗಳು ಸಮಸ್ತ ಸಾಮಾಜಿಕ ಪರಂಪರೆಯ ಅಭಿವ್ಯಕ್ತಿಯಾಗಿರುವ ಜಾನಪದರ ಅನೇಕ ಅಂಶಗಳನ್ನು ಒಳಗೊಂಡಿರುತ್ತದೆ. ಮತ್ತು ಜಾನಪದರ ಅನೇಕ ಪರಂಪರೆಯ ಅಂಶಗಳನ್ನು ಒಳಗೊಂಡಿರುತ್ತದೆ. ಜಾತ್ರೆಯ ಹೆಸರಿನಲ್ಲಿ ನಡೆಯುವ ಸಂಕೀರ್ಣ ಸ್ವರೂಪದ ಚಟುವಟಿಕೆಗಳಲ್ಲಿ ಸಾಮೂಹಿಕವಾಗಿ ನಡೆಯುವಂಥಹವು ಯಾವುದೋ ಒಂದು ನಿಗಧಿಯಾದ ವೇಳೆಯಲ್ಲಿ ಜನರೆಲ್ಲಾ ಸೇರಿ ದೇವರನ್ನು ಆರಾಧಿಸುವುದಕ್ಕೆ 'ಜಾತ್ರೆ' ಎಂದು ಕರೆಯುತ್ತಾರೆ. ದೇವರ ಆರಾಧನೆಯ ಹಿನ್ನೆಲೆಯಲ್ಲಿ ಜನ ಒಂದು ಕಡೆ ಸೇರುವಂತಾಗುತ್ತದೆ. ಇದರೊಂದಿಗೆ ಉಳಿದ ವ್ಯಾಪಾರ, ವ್ಯವಹಾರವನ್ನು ನಡೆಸಿಕೊಳ್ಳಲು ಅನುಕೂಲವಾಗಿರುತ್ತದೆ ಮತ್ತು ಬಂಧು ಬಳಗದವರು ಒಂದೆಡೆ ಸೇರಿ ಕೌಟುಂಬಿಕ ಸಂಬಂಧದ ವಿಷಯಗಳನ್ನು ಕುರಿತು ಮಾತುಕತೆಗಳು ನಡೆಯುವುದಕ್ಕೆ ಇಂಥ ವ್ಯವಸ್ಥೆಗಳು ಸಹಾಯಕಾರಿಯಾಗುವುದರಿಂದ ಸೌಹಾರ್ದ ಕೊಂಡಿಗಳಾಗಿರುತ್ತವೆ.

"ಪ್ರತಿನಿತ್ಯವೂ ಪ್ರತಿಕ್ಷಣವೂ ನಿಸರ್ಗದ ಮಡಿಲಲ್ಲಿ ನಿರಂತರವಾಗಿ ಶ್ರಮವಹಿಸಿ ದುಡಿಯುವ ಜನತೆ ಆ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ನೆಮ್ಮದಿಯ ಉಸಿರು ಬಿಡಲು ಹಬ್ಬ, ಉತ್ಸವ, ತೇರು, ಜಾತ್ರೆ ಮೊದಲಾದ ಸಾಮೂಹಿಕ ಆಚರಣೆಗಳನ್ನು ಕಂಡುಕೊಂಡು ಸಂತೋಷದ ಜೀವನವನ್ನು ನಡೆಸುತ್ತಾರೆ ಎಂಬ ಉದ್ದೇಶವಿದೆ. ಈ ವಿಧಿಗಳೆಲ್ಲ ಜಾನಪದ ಭಾಗವೇ ಆಗಿರುವುದರಿಂದ ಅವುಗಳನ್ನು ವೈಯಕ್ತಿಕ ಕಾಳಜಿಗಿಂತ ಸಮಷ್ಟಿಯ ಹಿತಾಸಕ್ತಿಯ ಕಡೆಗೆ ಒಲವು ಮೂಡಿತು. ಸಮಾಜದ ಹಿತರಕ್ಷಣೆಯೇ ಇವುಗಳ ಮುಖ್ಯ ಉದ್ದೇಶವಾಯಿತು. ಇಂಥ ಉದ್ದೇಶ ಮತ್ತು ಅಭಿವ್ಯಕ್ತಿಸುವ ಹಲವು ಆಚರಣೆಗಳಲ್ಲಿ ಜಾತ್ರೆಗಳು ತುಂಬಾ ಪ್ರಮುಖ ಪಾತ್ರ ವಹಿಸುತ್ತವೆ."[೧೦]

"ಜಾತ್ರೆಗಳು ಮತದ ದೃಷ್ಟಿಯಿಂದಲ್ಲದೆ ಸಮಾಜದ ದೃಷ್ಟಿಯಿಂದಲೂ ಮುಖ್ಯವಾಗಿವೆ ಎನ್ನುವ ಹಾಗೆ ಈ ಜಾತ್ರೆಯಲ್ಲಿ ಎಲ್ಲ ಜಾತಿಯವರೂ ಒಟ್ಟಾಗಿ ಸೇರಿ ಭಾವನಾತ್ಮಕ ಏಕತೆಯನ್ನು ಹೊಂದಿರುತ್ತಾರೆ. ವರ್ಷವಿಡಿ ಕೆಲಸ ಮಾಡಿದ ಜನಪದರು ತಮ್ಮ ನೆಂಟರಿಷ್ಟರೊಡಗೂಡಿ ಸುಖವಾಗಿ ಕಾಲ ಕಳೆಯುವ ಉದ್ದೇಶವು ಇರುತ್ತದೆ."[೧೧]

ಅನೇಕರ ದೃಷ್ಟಿಯಲ್ಲಿ ಹಳ್ಳಿಗಳಲ್ಲಿ ಜಾತ್ರೆ ಎಂದರೆ ಇಡೀ ಗ್ರಾಮದ ಹಬ್ಬವಾಗಿರುತ್ತದೆ. ಬಂಧು ಬಳಗದವರನ್ನು ಆಹ್ವಾನಿಸುವುದು, ಊರು ಕೇರಿಗಳನ್ನು ಹತ್ತಿರ ತಂದು ಒಂದು ಮಾಡುವುದು, ಇದೇ ಸಂದರ್ಭದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಅನೇಕ ಧರ್ಮಗಳ ಸಂಗಮವು ಈ ಜಾತ್ರೆಯಲ್ಲಿ ಕಂಡುಬರುವುದರಿಂದ ಜಾತಿಯ ಸಮಸ್ಯೆಗಳು ಕಂಡು ಬರುವುದಿಲ್ಲ. ಇಲ್ಲಿಯ ಜನರಲ್ಲಿ ಸಂಪತ್ತು ನಾಶವಾಗಿರುವುದಿಲ್ಲ. 'ಧರ್ಮವೇ ನಿಜವಾದ ಸಂಪತ್ತು' ಎಂದು ಭಾವಿಸಿಕೊಂಡಿರುತ್ತಾರೆ. ಮತ್ತು ಯಾವುದೇ ಒಂದು ಜಾತಿಗೆ ಸಂಬಂಧಿಸಿದಂತೆ ಜಾತ್ರೆ ನಡೆಯುತ್ತಿರುವಾಗಲೂ ಎಲ್ಲ ವರ್ಗದವರು ಭಾಗವಹಿಸಿ ಅದು ತಮ್ಮ ದೈವವೇ ಎಂದು ಭಾಗವಹಿಸುವ ಜನತೆ ಗ್ರಾಮೀಣರು. ಹೀಗೆ ಆಚರಿಸುವ ಜಾತ್ರೆಗಳಲ್ಲಿ ಎಲ್ಲರಲ್ಲೂ ಭಾವನಾತ್ಮಕ ಏಕತೆ ಇರುವುದನ್ನು ಕಾಣುತ್ತೇವೆ.

ಚಿಗಟೇರಿ ಗ್ರಾಮದಲ್ಲಿ ಪುರಾತನ ಕಾಲದಿಂದಲೂ 'ಜಾತ್ರೆ' ನಡೆದುಕೊಂಡು ಬಂದಿದೆ. ನಾರಪ್ಪನ ಒಕ್ಕಲಲ್ಲಿರುವ ಭಕ್ತರು ಹೆಚ್ಚಾಗಿ ದೂರದ ಊರುಗಳಲ್ಲಿ ಇದ್ದಾರೆ. ಅವುಗಳಲ್ಲಿ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲಿದ್ದಾರೆ. ನಾರಪ್ಪನ ಜಾತ್ರೆಗೆ ದೂರದ ಊರುಗಳಿಂದ ಜನರು ಕಾಲ್ನಡಿಗೆಯಿಂದ ಬರುತ್ತಾರೆ. ಇನ್ನು ಕೆಲವರು ಬಂಡಿ, ಟ್ರ್ಯಾಕ್ಟರ್, ಬಸ್ಸುಗಳಲ್ಲಿ ಬರುತ್ತಾರೆ. ಜಾತ್ರೆಗೆ ಬಂದ ಭಕ್ತರು ಹರಕೆ ತೀರಿಸುವುದು. ಕೆಲವರು ದಾಸೋಹವನ್ನು ಮಾಡುವ ಪದ್ಧತಿ ಇಂದಿಗೂ ಚಿಗಟೇರಿ ಗ್ರಾಮದಲ್ಲಿ ಕಾಣಬಹುದಾಗಿದೆ.

ನಾರಪ್ಪನ ಜಾತ್ರೆಯ ಸಂದರ್ಭದಲ್ಲಿ ಜರುಗುವ ಕಾರ್ಯಕ್ರಮಗಳು

೨೬-೪-೦೨ ರಂದು ಸಣ್ಣ ಉಚ್ಚಯ್ಯ

೨೭-೪-೦೨ ರಂದು ಸಣ್ಣ ಉಚ್ಚಯ್ಯ

೨೮-೪-೦೨ ರಂದು ಸಣ್ಣ ಉಚ್ಚಯ್ಯ

೨೯-೪-೦೨ ರಂದು ಸಣ್ಣ ಉಚ್ಚಯ್ಯ

೩೦-೪-೦೨ ರಂದು ದೊಡ್ಡ ರಥೋತ್ಸವ

೦೧-೫-೦೨ ರಂದು ಎಡೆ ಮಾಡುವುದು, ಓಕಳಿ ನಂತರ ಮದುವೆ ಕಾರ್ಯಕ್ರಮಗಳು ಇರುತ್ತವೆ. ಈ ರೀತಿಯಾಗಿ ಆರು ದಿನಗಳ ಕಾಲ ಕ್ರಮಬದ್ಧವಾಗಿ ನಾರಪ್ಪನ ಜಾತ್ರೆಯು ಜರುಗುತ್ತದೆ. ಜಾತ್ರೆಯ ಸಂಪೂರ್ಣ ವಿಷಯ ತಿಳಿಯುವ ಮೊದಲು ಉತ್ಸವ ಮೂರ್ತಿಯ ಬಗ್ಗೆ ತಿಳಿಯುವುದು ಅವಶ್ಯಕ.

ಉತ್ಸವ ಮೂರ್ತಿ ಪರಿಚಯ : 'ಚಿಗಟೇರಿ ನಾರಪ್ಪ'ನ ಆಚರಣೆಯ ಇನ್ನೊಂದು ವಿಶೇಷತೆಯೆಂದರೆ ನಾರಪ್ಪನ ಹೆಸರಿನಲ್ಲಿ ಕೃಷ್ಣನ ಮೂರ್ತಿಯನ್ನು ಉತ್ಸವಕ್ಕೆ ತರುವುದು ಬಹಳ ವಿಶಿಷ್ಟವಾಗಿದೆ. ಗುಡಿಯಲ್ಲಿ ಹೆಸರಿಗೆ ಮಾತ್ರ ನಾರಪ್ಪ ಇದ್ದು ಪ್ರತಿ ಆಚರಣೆಯಲ್ಲಿ ಮತ್ತು ಉತ್ಸವಗಳಲ್ಲಿ ಪಲ್ಲಕ್ಕಿಯ ಜೊತೆ ಕೃಷ್ಣನನ್ನು ಹೊರಡಿಸುತ್ತಾರೆ.

ನಾರಪ್ಪನ ವಿಗ್ರಹವು ಕುಳಿತುಕೊಂಡಿದೆ. ಉತ್ಸವ ಮೂರ್ತಿಯಾದ ಕೃಷ್ಣನ ಮೂರ್ತಿಯು ನಿಂತುಕೊಂಡು ಒಂದು ಕೈಯಲ್ಲಿ ಅಭಯ ಹಸ್ತವನ್ನು ಕೊಟ್ಟು, ಮತ್ತೊಂದು ಕೈಯಲ್ಲಿ ಲಿಂಗವು ಇದೆ. ಆದರೆ ಎರಡು ಮೂರ್ತಿಗಳ ಸೊಂಟದಲ್ಲಿ ಹಾವಿರುವುದನ್ನು ಕಾಣಬಹುದು. ನಾರಪ್ಪನು ಎಡಗೈಯಲ್ಲಿ ಇಷ್ಟ ಫಲವನ್ನು ಹಿಡಿದರೆ ಕೃಷ್ಣನ ವಿಗ್ರಹವು ಎಡಗೈಯಲ್ಲಿ ಲಿಂಗವಿದೆ. ನಾರಪ್ಪನಿಗೆ ತಲೆಯಲ್ಲಿ ಜಟೆಯಿದೆ. ಕೃಷ್ಣನಿಗೆ ಕಿರೀಟವಿದೆ. ಪ್ರತಿವರ್ಷದ ತೇರು ಉಚ್ಚಯ್ಯ ಓಕಳಿ ಮತ್ತು ಮದುವೆ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸುವುದು ಕೃಷ್ಣನೇ ಎಂದು ಹೇಳಬಹುದು.

ನಿಂತಿರುವ ಕೃಷ್ಣನ ವಿಗ್ರಹವು ೧ ೧/೨ ಅಡಿ ಎತ್ತರ ೨ ಅಡಿ ಅಗಲ ಪ್ರಭಾವಳಿ ಇದ್ದು ಬಲಗೈಯನ್ನು ಅಭಯ ಹಸ್ತಕ್ಕೆ ಎಡಗೈಯನ್ನು ಲಿಂಗಕ್ಕೆ ಬಳಸಿದ್ದಾನೆ. ಮತ್ತು ಸೊಂಟಕ್ಕೆ ಹಾವು ಸುತ್ತಿಕೊಂಡಿದೆ. ಇದೇ ಕೃಷ್ಣನ ಮೂರ್ತಿಯು ನಾಲ್ಕು ದಿನದ ಉಚ್ಚಯ್ಯದಲ್ಲಿ ಭಾಗವಹಿಸುತ್ತದೆ.

ಉಚ್ಚಯ್ಯ : ರಾತ್ರಿ ಸಮಯದಲ್ಲಿ ಎಳೆಯುವುದನ್ನು ಉಚ್ಚಯ್ಯ ಎಂದು ಕರೆಯುತ್ತಾರೆ. ಉಚ್ಚಯ್ಯವನ್ನು ಮೂಲ ರಥೋತ್ಸವ ಜರುಗುವ ಮೊದಲು ನಾಲ್ಕು ದಿವಸ ನಾರಪ್ಪನ ಗುಡಿಯಿಂದ ಎದುರುಗಿರುವ ಪಾದಗಟ್ಟೆ ಆಂಜನೇಯನ ದೇವಸ್ಥಾನದ ಹತ್ತಿರ ಹೋಗಿ ಹಣ್ಣು ಕಾಯಿ ಮಾಡಿಸಿಕೊಂಡು ವಾಪಸ್ಸು ಬರುತ್ತಾರೆ. ಪಾದಗಟ್ಟೆ ಆಂಜನೇಯನನ್ನು ಅಲ್ಲಿಯ ಸ್ಥಳೀಕರು ತೇರು ಹನುಮಪ್ಪ ಎಂದು ಕರೆಯುತ್ತಾರೆ. ಈ ರೀತಿಯಾಗಿ ಮೂರು ದಿವಸ ಉಚ್ಚಯ್ಯವನ್ನು ಆಂಜನೇಯನ ಗುಡಿಗೂ, ಕೊನೆಯ ನಾಲ್ಕನೇ ದಿನ ಹೊಂಡದ ಹತ್ತಿರವಿರುವ ಬೀದಿ ಬಸವಣ್ಣನ ದೇವಸ್ಥಾನಕ್ಕೆ ಉಚ್ಚಯ್ಯವನ್ನು ಎಳೆದುಕೊಂಡು ಬರುತ್ತಾರೆ. ಅಲ್ಲಿಯು ಹಣ್ಣುಕಾಯಿ ಮಾಡಿಸಿಕೊಂಡು ಪುನಃ ತೇರಿನ ಗಡ್ಡಿಯ ಹತ್ತಿರ ಉಚ್ಚಯ್ಯವನ್ನು ನಿಲ್ಲಿಸುತ್ತಾರೆ. ಉಚ್ಚಯ್ಯವನ್ನು ಎರಡು ಗಾಲಿಯಿಂದ ತಯಾರು ಮಾಡಿರುತ್ತಾರೆ.

ತೇರು : "'ತೇರು' ಎನ್ನುವುದು ಈಗ ಗ್ರಾಮೀಣರ ಸಾಮಾನ್ಯ ಪದವಾಗಿದೆ. ತೇರಿಗೆ ಬಂಡಿ, ಕುರ್ಜು, ವಾಹನ ಎಂಬ ಹೆಸರುಗಳಿವೆ. ತೇರು ದ್ರಾವಿಡ ಶಬ್ದ. ಇದಕ್ಕೆ ತಮಿಳು, ತೆಲುಗು, ಮಲಯಾಳಂ, ತುಳು ಭಾಷೆಗಳಲ್ಲಿ ಜಾತಿ ಪದಗಳಿವೆ. ತೇರಿನ ವಿವರಗಳಲ್ಲಿ ಚಕ್ರ, ಅಲಂಕಾರ ಭಾಗ, ಶಿಖರ, ಕಲಶಗಳಿದ್ದು, ಗೋಪುರಾಕಾರದ ಶೈಲಿಯ ರಥ ವಿಜಯನಗರ ಕಾಲದಿಂದೀಚೆಗೆ ಬಳಕೆಗೆ ಬಂದಿರಬೇಕೆಂದು ಹಂಪನಾರವರ ವಾದವಾಗಿದೆ. ಆದರೆ ಈ ಅಭಿಪ್ರಾಯ ಸರಿ ಎಂದು ತೋರುವುದಿಲ್ಲ. ಬಡಗರಲ್ಲಿ ತೇರಿನ ವಿಷಯ ಬಂದಾಗ ಇದರ ಪ್ರಸ್ತಾಪವಾಗಲಿದೆ. ರಥಕ್ಕೆ 'ಕುರ್ಜು' ಎಂಬ ಪದವೂ ಇದೆ. 'ರಾಜರ', 'ವಿಗ್ರಹ', ವಧುವರರು ಕೂರುವ ಮಂಟಪ, ಅಟ್ಟಳೆ, ರಾಶಿ, ಗುಡೆ, ಒಟ್ಟಿಲು ಎಂಬರ್ಥಗಳಿವೆ. ಇದು ದ್ರಾವಿಡ ಪದವೆ 'ರಥವೆಂದರೆ ಸಾಮಾನ್ಯವಾಗಿ ನಾವು ಏರಿ ಹೋಗುವ ವಾಹನ ಆದರೆ ಪದದ ಮೂಲಾರ್ಥ ಆಟವಾಡುವುದು, ಸಂತೋಷ ಪಡುವುದು ಎಂದಾಗುತ್ತದೆ."[೨]

"ಜಾತ್ರೆಗಳಲ್ಲಿ ಎಳೆಯಲಾಗುವ ತೇರು ವಲಸೆಗಾರರ ಪೆಟ್ಟಿಗೆ ದೇವರನ್ನು (ಸತ್ತ ಹಿರಿಯರು) ಒಯ್ಯುವ ಕ್ರಿಯೆಯನ್ನು ಧ್ವನಿಸುತ್ತದೆ. ಮೊದಲು ಮೂಲ ದೇವತೆಯನ್ನು ಕೊಂಡೊಯ್ಯಲಾಗುತ್ತಿತ್ತು, ಸ್ಥಾವರಗೊಂಡು ಬೆಳೆಯಿತು. ಈ ಹಂತದಲ್ಲಿ ತೇರು ವೈಭವೋಪೇತವಾಗಿ ಪರಿಷ್ಕರಣಗೊಂಡಿತು."[೧೩]

"ಜನಪದರ ಆರಾಧ್ಯ ದೇವತೆ ಅಥವಾ ದೇವರ ಉತ್ಸವ ಮೂರ್ತಿಯ ರೂಪದಲ್ಲಿ ಹಳ್ಳಿಯಲ್ಲಿ ಸಂಚರಿಸುವುದರಿಂದ ಚಿಕ್ಕವರು, ವಯೋವೃದ್ಧರು, ಅಶಕ್ತರು ಅನಾರೋಗ್ಯವಂತರಿಗೆ ದೇವರ ದರ್ಶನಕ್ಕಾಗಿ ದೇವಾಲಯಕ್ಕೆ ಹೋಗುವುದು ಆಗದೇ ಇರುವುದರಿಂದ ವರ್ಷಕ್ಕೊಮ್ಮೆಯಾದರೂ ದೇವರ ದರ್ಶನ ಪಡೆಯುದಕ್ಕಾಗಿ ಹಳ್ಳಿಯ ಒಳಗೆ ದೇವರು ಸುತ್ತಾಡಿದರೆ ಹಳ್ಳಿಗರಿಗೆ ಒಳ್ಳೆಯದಾಗುವುದು ಎನ್ನುವ ಪ್ರಾಚೀನರ ಕಲ್ಪನೆಯಿಂದ ರಥೋತ್ಸವದ ವ್ಯವಸ್ಥೆ ಉಂಟಾಯಿತು. ತೇರು ನಾಲ್ಕು ಗಾಲಿ ಜೋಡಿಸಿದ ದೇವಾಲಯದಂತೆ ಇರುವುದು. ದೇವಾಲಯದ ವಿವಿಧ ಭಾಗಗಳನ್ನು ಅದರಲ್ಲಿ ಗುರುತಿಸಬಹುದು. ದೇವಾಲಯದ ಗೋಪುರದಂತೆ ಎತ್ತರಿಸಿ ಆದರಲ್ಲಿ ಪಾತಾಕೆ ಪಟಗಳನ್ನು ಅಲಂಕರಿಸಿರುವುದುಂಟು. ಒಳಗೆ ಕಂಬಗಳನ್ನು ರಚಿಸುವರು. ಮೇಲೆ ಕಂಚು ಅಥವಾ ಹಿತ್ತಾಳೆ ಕಳಸವನ್ನು ಶೃಂಗರಿಸಿರುವರು. ಗಾಲಿಗಳು ಕಟ್ಟಿಗೆ ಕಲ್ಲುಗಳಿಂದ ರಚಿಸಿರುತ್ತವೆ. ತೇರುಗಳನ್ನು ಕಂಚು. ಹಿತ್ತಾಳೆ, ಬೆಳ್ಳಿ, ಬಂಗಾರದಿಂದಲೂ ರಚಿಸಿರುವರು. ಇವುಗಳ ಗಾತ್ರ ಚಿಕ್ಕದಾಗಿರುವುದು."[೧೪]

ರಥೋತ್ಸವ : ಚಿಗಟೇರಿ ನಾರಪ್ಪನ ರಥೋತ್ಸವವೂ ಅನಾದಿ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈ ರಥೋತ್ಸವ ಎಂದಿನಿಂದ ಪ್ರಾರಂಭವಾಯಿತು. ಎಂಬುದರ ಬಗ್ಗೆ ಮಾಹಿತಿ ಸಿಗುವುದಿಲ್ಲ. ಯಾವ ಸಂದರ್ಭದಲ್ಲಾದರೂ ರಥದ ಸಾಮಾನುಗಳು ಮುರಿದಾಗ ಇಲ್ಲವೆ ಕಳೆದು ಹೋದಾಗ ಅವುಗಳನ್ನು ಭಕ್ತರೆ ಬದಲಾಯಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಈಗಿರುವ ರಥವೇ ಮೂಲವಾದದ್ದು. ಗದ್ದೆಯ ನಿರ್ಮಾಣ ಕಟ್ಟಿಗೆಯಿಂದ ನಿರ್ಮಾಣವಾಗಿದೆ. ರಥೋತ್ಸವದ ಸಂದರ್ಭದಲ್ಲಿ ರಥದ ಅಂಕಣಗಳನ್ನು ನಾರಪ್ಪನ ಪೂಜಾರಿಗಳೆ ಕಟ್ಟುತ್ತಾರೆ ಮತ್ತು ರಥೋತ್ಸವವನ್ನು ಪಟಗಳಿಂದ ಸಿಂಗರಿಸುತ್ತಾರೆ. ಈ ರಥೋತ್ಸವಕ್ಕೆ ಆರು ಗಾಲಿಗಳಿವೆ. ಹಂಪಿ ಹುಣ್ಣಿಮೆಯಾದ ಮೇಲೆ ಬರುವ 'ಮೂಲಾ ನಕ್ಷತ್ರ'ದ ಸಮಯದಲ್ಲಿ ರಥೋತ್ಸವವು ಬಹಳ ವಿಜೃಂಭಣೆಯಿಂದ ಜರುಗುತ್ತವೆ. ಈ ರಥೋತ್ಸವಕ್ಕೆ ಸುತ್ತಮುತ್ತಲಿನ ಗ್ರಾಮಗಳಿಂದ ಪ್ರತಿವರ್ಗದ ಜನರು ಬಂದು ಸೇರುತ್ತಾರೆ. ರಥೋತ್ಸವಕ್ಕೆ ಮತ್ತು ಗದ್ದೆಯಲ್ಲಿ 'ಕುಕ್ಕಡಮ್ಮ' ಎಂಬ ಮೂರ್ತಿ ಇದೆ ಅದಕ್ಕೂ ಹಣ್ಣು ಕಾಯಿಯಿಂದ ಪೂಜಿಸಿ ಕಾಣಿಕೆ ಸಲ್ಲಿಸುತ್ತಾರೆ ಮತ್ತು ನಾರನ್ನು ಜನರು ಕಾಣಿಕೆಯಾಗಿ ಹಾಕುತ್ತಾರೆ. 'ಕುಕ್ಕಡಮ್ಮ'ಗೆ ಊರಲ್ಲಿ ಸಣ್ಣ ಮಕ್ಕಳಿಗೆ ಅಮ್ಮ ಕಾಣಿಸಿಕೊಂಡಾಗ ಮಂಗಳವಾರ ಮತ್ತು ಶುಕ್ರವಾರ ಮತ್ತು ಪಂಚಮಿ ದಿವಸ ಹೂವು ಹಣ್ಣು ಕೊಡುತ್ತಾರೆ.

ರಥೋತ್ಸವದ ದಿನ ಮೊದಲಿಗೆ ಪಲ್ಲಕ್ಕಿಯನ್ನು ಮಂಗಳ ವಾದ್ಯಗಳೊಂದಿಗೆ ಉತ್ಸವ ಮೂರ್ತಿಯಾದ ಕೃಷ್ಣನನ್ನು ಹೊರಡಿಸುತ್ತಾರೆ. ಪಲ್ಲಕ್ಕಿ ಹೊರಟು ಬರುವಾಗ ಭಕ್ತರು ನಾರನ್ನು ಮತ್ತು ಬಾಳೆಹಣ್ಣುಗಳನ್ನು ಎಸೆಯುತ್ತಾರೆ. ರಥದ ಹತ್ತಿರಕ್ಕೆ ಬಂದು ರಥವನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿ ರಥಕ್ಕೆ ಹಾಕಿರುವ ಏಣಿಯಿಂದ ಪೂಜಾರಿಗಳು ಉತ್ಸವ ಮೂರ್ತಿ ಹಿಡಿದುಕೊಂಡು ರಥೋತ್ಸವವನ್ನು ಏರುತ್ತಾರೆ. ನಂತರ 'ಮೂಲಾ ನಕ್ಷತ್ರ' ಬಂದ ತಕ್ಷಣ ರಥೋತ್ಸವವನ್ನು ಸಾಗಿಸಲು ನೆರೆದ

ಭಕ್ತರಿಗೆ ಹೇಳುತ್ತಾರೆ. ರಥ ಪೂರ್ವದಿಕ್ಕಿನತ್ತ ಸಾಗುತ್ತದೆ. ಆಗ ಜನರು ನಾಲ್ಕು ಗಾಲಿಗಳಿಗೂ ಕಾಯಿಯನ್ನು ಒಡೆಯುತ್ತಾರೆ. ಮಧ್ಯದಲ್ಲಿ ಎರಡು ಗಾಲಿಗಳಿವೆ. ಅವುಗಳಿಗೆ ಕಾಯಿ ಒಡೆಯುವುದಿಲ್ಲ, ರಥ ಸಾಗುವಾಗ ಜನರು ಯತೇಚ್ಛವಾಗಿ ಬಾಳೆಹಣ್ಣು ಮತ್ತು 'ನಾರ'ನ್ನು ರಥದ ಮೇಲೆ ಎಸೆಯುತ್ತಾರೆ. ಹಾಗೆಯೇ ಎಲ್ಲ ಜನಾಂಗದವರು ಸೇರಿ ರಥವನ್ನು ಎಳೆಯುತ್ತಾರೆ. ರಥದ ಹತ್ತಿರ ಜನರ ನೂಕು ನೂಗ್ಗಲು ತಪ್ಪಿಸಲು ಪೋಲೀಸರು ನಿಂತಿರುತ್ತಾರೆ. ರಥವು ನಿಧಾನವಾಗಿ ಚಲಿಸುತ್ತಾ ಪಾದಗಟ್ಟೆ ಆಂಜನೇಯ ಅಥವಾ ತೇರು ಹನುಮಪ್ಪನ ಗುಡಿಯ ಹತ್ತಿರ ಹೋಗಿ ಅಲ್ಲಿ ರಥವನ್ನು ಸ್ವಲ್ಪ ಹೊತ್ತು ನಿಲ್ಲಿಸಿ ಹನುಮಪ್ಪನನ್ನು ಪೂಜೆ ಮಾಡಿ ಬಂದ ನಂತರ ರಥದ ಮಿಣಿಯನ್ನು ಪಶ್ಚಿಮಾಭಿಮುಖವಾಗಿ ತರುತ್ತಾರೆ. ನಂತರ ರಥವನ್ನು ಮೂಲ ಸ್ಥಳದತ್ತ ಎಳೆಯುತ್ತಾರೆ. ರಥ ಸಾಗುವಾಗ 'ಯದ್ದ'ವನ್ನು ಹಾಕುತ್ತಾರೆ. 'ಯದ್ದ' ಹಾಕುವ ಮುನ್ನ 'ಯದ್ದ' ಹಾಕುವ ಮನುಷ್ಯರು ಸತ್ತ ಉದಾಹರಣೆಗಳು ಇವೆ. ರಥವನ್ನು ದೇವಸ್ಥಾನದ ಮುಂದೆಯೇ ನಿಲ್ಲಿಸುತ್ತಾರೆ, ನಂತರ ಉತ್ಸವ ಮೂರ್ತಿಯನ್ನು ಗರ್ಭಗುಡಿಗೆ ವಾದ್ಯ ಸಮೇತ ತೆಗೆದುಕೊಂಡು ಹೋಗುತ್ತಾರೆ. ವಾದ್ಯಗಳ ಜೊತೆಗೆ ನಂದಿಕೋಲು ಕುಣಿತವನ್ನು ಕುಣಿಯುತ್ತಾರೆ. ರಥೋತ್ಸವಕ್ಕೆ ಸುತ್ತಮುತ್ತಲ ಹಳ್ಳಿಗಳಿಂದ ಮತ್ತು ಅನೇಕ ಭಾಗಗಳಿಂದ ಜಾತಿ ಮತದ ಬೇಧವಿಲ್ಲದೆ ಜನರು ಬಂದು ಸೇರುತ್ತಾರೆ. ರಥೋತ್ಸವಕ್ಕೆ ಸುಮಾರು ಎಂಟರಿಂದ ಹತ್ತು ಸಾವಿರ ಜನರ ಪರಿದಿಯೇ ಬಂದಿರುತ್ತಾರೆ.

ರಥೋತ್ಸವದ ಸಂದರ್ಭದಲ್ಲಿ ಸೇವೆ ಸಲ್ಲಿಸುವ ವರ್ಗಗಳು

(ಹಚ್ಚು) ಗಡ್ಡೆಯನ್ನು ಹೊರ ಹಾಕುವುದರಿಂದ ಹಿಡಿದು ಎಲ್ಲಾ ಕಾರ್ಯಗಳು ಮುಗಿದ ನಂತರ (ಹಚ್ಚ) ಗಡ್ಡೆಯನ್ನು ಒಳಸೇರಿಸುವವರಿಗೂ ಚಿಗಟೇರಿ ಗ್ರಾಮದಲ್ಲಿರುವ ಕೆಲವೊಂದು ಜಾತಿಯವರು ಮುಖ್ಯವಾಗಿ ಭಾಗವಹಿಸಬೇಕಾಗುತ್ತದೆ. ಇಲ್ಲಿ ಸೇರುವ ಜಾತಿಗಳು ನಾಯಕರನ್ನು ಹೊರತು ಪಡಿಸಿ ಯಾರು ನಾರಪ್ಪನ ಒಕ್ಕಲುಗಳಾಗಿಲ್ಲ ಎಂಬುದು ತಿಳಿದುಬರುತ್ತದೆ.

ಹರಿಜನರು : ಗಡ್ಡೆಯನ್ನು ಹೊರ ಹಾಕಬೇಕಾದಾಗ ಹರಿಜನರಿಗೆ ಹೇಳುತ್ತಾರೆ. ಅವರು ಸ್ನಾನ ಮಾಡಿ ಹಲಗೆ ಬಡಿಯುತ್ತ ಬಂದು ಗಡ್ಡೆಯನ್ನು ಹೊರ ಹಾಕುತ್ತಾರೆ. ಮತ್ತು ದೇವಸ್ಥಾನದ ಸುತ್ತಮುತ್ತಲ ಪ್ರದೇಶವನ್ನು ಇವರು 'ರಾಜಾಂಗಳ' ಎಂದು ಕರೆಯುತ್ತಾರೆ. ಅಂಗಳವನ್ನು ಸ್ವಚ್ಛವಾಗಿ ಗುಡಿಸುತ್ತಾರೆ. ರಥೋತ್ಸವ ಸಾಗುವ ಸಂದರ್ಭದಲ್ಲಿ ಗಾಲಿಗಳಿಗೆ ಯದ್ದವನ್ನು ಇವರೇ ಹಾಕುತ್ತಾರೆ. ಮತ್ತು ಮಿಣಿ ತರುವುದು, ಕಟ್ಟುವುದು, ಏಣಿ ಹಾಕಿ ತೆಗೆಯುವುದು ಮುಂತಾದ ಕೆಲಸವನ್ನು ಇವರು ಮಾಡುತ್ತಾರೆ. ರಥೋತ್ಸವ ಗಾಲಿಗೊಡೆದ ಎರಡು ಗಾಲಿಯ ಕೊಬ್ಬರಿಯನ್ನು ಇವರ ಭಾಗಕ್ಕೆ ಕೊಡುತ್ತಾರೆ. ರಥೋತ್ಸವದ ಸಂದರ್ಭದಲ್ಲಿ ಹಲಗೆಯನ್ನು ಬಡಿಯುತ್ತಾರೆ. ಈ ಸಂದರ್ಭವನ್ನು ಬಿಟ್ಟರೆ ಬೇರಾವ ಸಂದರ್ಭದಲ್ಲೂ ನಾರಪ್ಪನಿಗೆ ಸಂಬಂಧಿಸಿದ ಯಾವ ವಸ್ತುವನ್ನು ಮುಟ್ಟುವುದಿಲ್ಲ. ಇವರ ಮುಖಾಂತರವೇ ಗಡ್ಡೆಯನ್ನು ಒಳಹಾಕಿಸುತ್ತಾರೆ.

ನಾಯಕರು : ನಾಯಕರ ಒಕ್ಕಲಿನವರು ನಾರಪ್ಪನ ಪರಂಪರೆಯಲ್ಲಿ ಕಂಡು ಬರುತ್ತಾರೆ. ಇವರು ನಾರಪ್ಪನ ಕಾರ್ಯಗಳಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ನಾಯಕರು ಗಡ್ಡೆ ಹೊರ ಹಾಕುವ ಸಂದರ್ಭದಲ್ಲಿ ಭಾಗವಹಿಸುತ್ತಾರೆ. ಉತ್ಸವ ಮೂರ್ತಿ ಪಲ್ಲಕ್ಕಿಯನ್ನು ಇವರೆ ಹೊರುವುದು. ಹಬ್ಬ, ಹರಿದಿನ, ಜಾತ್ರೆಯಲ್ಲಿ ಮೊದಲು ಇವರೆ ಹೊರಬೇಕು ನಂತರ ಬೇರೆ ಯಾರಾದರು

ಹೊರಬಹುದು. ಈ ಪದ್ಧತಿಯು ಈಗಲೂ ಇದೆ. ಈ ಪದ್ಧತಿ ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದೆ ಎಂದು ಹೇಳುತ್ತಾರೆ.

ಕುರುಬರು : ಇವರು ನಾರಪ್ಪನ ದೈವಕ್ಕೆ ಸೇವೆಸಲ್ಲಿಸುವವರಾಗಿದ್ದಾರೆ. ಈ ವರ್ಗದವರು ನಾರಪ್ಪನಿಗೆ ತಮ್ಮದೇ ಆದ ಸೇವೆಯನ್ನು ಸಲ್ಲಿಸುತ್ತ ಬಂದಿರುತ್ತಾರೆ. ಇವರು ಪ್ರತಿವರ್ಷ ಗಡ್ಡೆಗೆ ತೈಲವನ್ನು ಹಚ್ಚುತ್ತಾ ಬಂದಿದ್ದಾರೆ ಮತ್ತು ನಾರಪ್ಪನ ಹಬ್ಬ ಜಾತ್ರೆಗಳಲ್ಲಿ ತಮ್ಮ ಡೊಳ್ಳುಗಳನ್ನು ಬಡಿಯುತ್ತಾರೆ.

ಚೆಲವಾದಿ : ಇವರು ನಾರಪ್ಪನಿಗೆ ಸೇವೆಸಲ್ಲಿಸುವವರಲ್ಲಿ ಬಹಳ ಮುಖ್ಯರಾದವರಾಗಿದ್ದಾರೆ. ಯಾವುದೇ ಕಾರ್ಯದಲ್ಲಿ ಇವರು ಇರಲೇ ಬೇಕಾಗುತ್ತದೆ. ಜಾತ್ರೆ ಸಂದರ್ಭದಲ್ಲಿ ಓಕಳಿ ಮತ್ತು ಮದುವೆ ಕಾರ್ಯದಲ್ಲಿ ತಮ್ಮ ವಾದ್ಯಗಳನ್ನು ನುಡಿಸುತ್ತಾ ಬಂದಿದ್ದಾರೆ. ನಾರಪ್ಪನ ಪ್ರತಿ ಕಾರ್ಯದಲ್ಲಿ ಇವರು ಭಾಗವಹಿಸುವುದನ್ನು ನೋಡಬಹುದಾಗಿದೆ.

ಬಡಿಗೇರರು : ನಾರಪ್ಪನಿಗೆ ನಡೆದುಕೊಳ್ಳುವ ವರ್ಗದಲ್ಲಿ ಬಡಿಗೇರರು ಒಬ್ಬರು. ಇವರು ತೇರಿನ ಅರ್ಚಕರು. ಪ್ರತಿವರ್ಷ ಎರಡು ಬಾರಿ ಪೂಜೆ ಮಾಡಿ ಎಡೆ ಹಾಕುವ ಪದ್ಧತಿ ಇವರಲ್ಲಿದೆ. ರಥೋತ್ಸವಕ್ಕೆ ಸಂಬಂಧಪಟ್ಟ ಕೆಲಸವನ್ನು ಇವರೆ ಮಾಡುತ್ತಾರೆ. ಗಡ್ಡೆಯನ್ನು ಹೊರಹಾಕುವ ಮುನ್ನ ಮತ್ತು ಮುಖ್ಯ ರಥೋತ್ಸವದ ದಿನ ಇವರೆ ಎಡೆ ಹಾಕುತ್ತಾರೆ. ರಥೋತ್ಸವದ ದಿನ ಇವರ ಮನೆಗೆ ವಾದ್ಯ ಸಮೇತವಾಗಿ ಹೋಗಿ ಎಡೆಯನ್ನು ತರುತ್ತಾರೆ. ಎಡೆಯನ್ನು ಹೊಸ ಮಡಿಕೆಯಲ್ಲಿ ಮಾಡುತ್ತಾರೆ. ಇವರಲ್ಲಿ ಈ ರೀತಿಯ ಆಚರಣೆ ತುಂಬಾ ವಿಶೇಷವೆನಿಸುತ್ತದೆ.

ಮಡಿವಾಳರು : ಈ ವರ್ಗದವರು ನಾರಪ್ಪನ ರಥೋತ್ಸವದ ಸಂದರ್ಭದಲ್ಲಿ ದೇವರ ಮುಂದೆ ಮಡಿಬಟ್ಟೆಯನ್ನು ಹಾಕಿ ತೆಗೆಯುತ್ತಾರೆ. ಇವರು ನಾರಪ್ಪನ ಯಾವುದೇ ಕಾರ್ಯಗಳು ನಡೆಯುವಲ್ಲಿ ಭಾಗವಹಿಸುವುದನ್ನು ಕಾಣುತ್ತೇವೆ.

ಬಾರಿಕರು : ಇವರು ನಾರಪ್ಪ ದೈವಕ್ಕೆ ಹಿಂದೆ ಸೇವೆ ಸಲ್ಲಿಸುವವರಾಗಿದ್ದರು. ಇವರು ಹಿಂದೆ ಬೆಳಕಿನ ಸೌಲಭ್ಯ ಇಲ್ಲದಾಗ ನಾರಪ್ಪನ ರಾತ್ರಿಯ ಕಾರ್ಯಗಳಲ್ಲಿ ಈ ವರ್ಗದವರು ಬೆಳಕಿನ ಸೌಲಭ್ಯವನ್ನು ಒದಗಿಸುತ್ತಿದ್ದರು. ಕಾಲ ಬದಲಾದಂತೆ ಕೆಲವು ವ್ಯತ್ಯಾಸಗಳುಂಟಾಗಿ ಇವರ ಸೇವೆ ಕಡಿಮೆಯಾಗಿದೆ.

ಪಂಚಮ ಶಾಲಿ : ನಾರಪ್ಪನ ಪೂಜೆಯನ್ನು ಮಾಡುವವರು ಇವರೇ ಆಗಿದ್ದಾರೆ. ಪೂಜಾರಿಕೆಯು ಪುರಾತನ ಕಾಲದಿಂದ ಬಂದಿದೆ. ಪ್ರತಿವರ್ಷ ರಥೋತ್ಸವವನ್ನು ಕಟ್ಟಿ ಅಲಂಕರಿಸುತ್ತಾರೆ ಮತ್ತು ಜಾತ್ರೆಯಲ್ಲಿ ಉತ್ಸವ ಮೂರ್ತಿಯ ಹಿಂದೆಯೇ ಇರುತ್ತಾರೆ.

ಹೀಗೆ ಪ್ರತಿವರ್ಗದವರು ಒಂದೊಂದು ಕೆಲಸವನ್ನು ಹಂಚಿಕೊಂಡು ನಾರಪ್ಪನಿಗೆ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸುತ್ತ ಬಂದಿರುತ್ತಾರೆ. ಇದಕ್ಕೆ ಇವರು ಯಾವುದೇ ಸಂಭಾವನೆಯನ್ನು ತೆಗೆದುಕೊಳ್ಳುವುದಿಲ್ಲ. ಹರಿಜನರು ಮತ್ತು ನಾಯಕರು

ಆಯಾವನ್ನು (ದವಸಧಾನ್ಯ) ಹಂಚಿಕೊಳ್ಳುತ್ತಾರೆ. ಇದು ಪುರಾತನ ಕಾಲದಿಂದಲೂ ಈ ಕ್ಷೇತ್ರದಲ್ಲಿ ಮುಂದುವರೆದುಕೊಂಡು ಬಂದಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅವಲೋಕಿಸಲಾಯಿತು.

ಎಡೆ ಮಾಡುವುದು : ರಥೋತ್ಸವ ಆದ ಮರುದಿವಸ ಈ ಕಾರ್ಯಕ್ರಮ ಏರ್ಪಡುತ್ತದೆ. ಹೀಗೆ ಎಡೆ ಮಾಡುವ ಪದ್ಧತಿಯು ಬೇರೆ ಯಾವ ಕ್ಷೇತ್ರದಲ್ಲಿಯೂ ಕಂಡುಬರುವುದಿಲ್ಲ. ಎಡೆ ಮಾಡುವ ದಿವಸ ನಾರಪ್ಪನಿಗೆ ಒಕ್ಕಲಾಗಿರುವ ಎಲ್ಲಾ ಬೆಡಗಿನವರು ಒಂದೆಡೆ ಸೇರಿರುತ್ತಾರೆ. ನಾರಪ್ಪನ ಗುಡಿಯ ಸುತ್ತಮುತ್ತ ಒಲೆಯನ್ನು ತಯಾರು ಮಾಡುತ್ತಾರೆ. ನೆಲ ಸಾರಿಸಿ, ಪೂಜೆ ಮಾಡುತ್ತಾರೆ. ಒಲೆಯ ಸುತ್ತ ಕಟ್ಟಿಗೆಗಳನ್ನು ಹಾಕಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಒಂದೊಂದೇ ಬೆಡಗಿನವರು ತಂದಿರುವ ಮೀಸಲು ಅಕ್ಕಿಯನ್ನು ಒಂದೆಡೆ ಕೂಡಿಸಿ, ಬೇರೆ ಬೇರೆ ಬೆಡಗಿನವರೇ ಬೇರೆ ಬೇರೆ ಹೊಸ ಮಡಿಕೆಗಳನ್ನು ತರುತ್ತಾರೆ. ಅಕ್ಕಿ, ಬೇಳೆ, ಬೆಲ್ಲ, ಬಾರೋ ಸಕ್ಕರೆ, ಬಾಳೆ ಹಣ್ಣು ಮುಂತಾದವುಗಳನ್ನು ಮಡಿಕೆಯೊಳಗೆ ಹಾಕಿ ಒಲೆಯನ್ನು ಹಚ್ಚಿ ಪ್ರಸಾದವನ್ನು ತಯಾರಿಸುತ್ತಾರೆ. ಇಲ್ಲಿ ಒಂದು ಬೆಡಗಿನವರು ಇನ್ನೊಂದು ಬೆಡಗಿನವರ ಮೀಸಲೊಳಗೆ ಸೇರಿಸಿದರೆ ಯಾವುದೇ ಕಾರಣಕ್ಕೆ ಪ್ರಸಾದ ಬೇಯ್ಯುವುದಿಲ್ಲ ಎಂಬ ಪ್ರತೀತಿ ಇದೆ. ಎಡೆ ಮಾಡುವವರು ಸ್ತ್ರೀಯರಾದರೆ ಬಾಯಿಗೂ, ಮೂಗಿಗೂ ವಸ್ತ್ರವನ್ನು ಕಟ್ಟಿಕೊಂಡು ಎಡೆ ಮಾಡುತ್ತಾರೆ. ಉಸಿರು ಬಡಿದರೆ ಇಲ್ಲವೆ ಊದಿದರೆ ಒಲೆ ಮೇಲಿರುವ ಮಡಿಕೆ ತಾನಾಗಿಯೇ ಮಲ್ಲಿಗೆ ಹೂವಿನಂತೆ ಅರಳಿಕೊಳ್ಳುತ್ತದೆ ಎಂಬ ನಂಬಿಕೆ ಇದೆ. ಎಡೆ ಮಾಡುವ ಸಂದರ್ಭದಲ್ಲಿ ಮುಟ್ಟಾದವರು ಬಂದರು ಸಹ ಮಡಿಕೆ ಕೆಡುತ್ತದೆ ಎನ್ನುತ್ತಾರೆ. ಇದು ಅಲ್ಲದೆ ಬೇರೆಯವರು ಬಂದು ಮಡಿಕೆ ಬಾಯಿ ತೆಗೆದು ನೋಡಿದರೆ ಪ್ರಸಾದ ಆಗುವುದಿಲ್ಲ. ಎಷ್ಟೇ ಬೆಂಕಿ ಹಾಕಿದರು ನೀರಿಗೆ ನೀರು, ಅಕ್ಕಿಗೆ ಅಕ್ಕಿಯೇ ಬೇರೆ ಇರುತ್ತದೆ ಎಂಬ ನಂಬಿಕೆ ಇದೆ.

ಪವಾಡ : ಎಡೆ ಮಾಡುವ ಸಂಪ್ರದಾಯವನ್ನು ಗಮನಿಸಿದರೆ ನಾರಪ್ಪನ ಪವಾಡವೇ, ಮತ್ತು ನಾರಪ್ಪನು ಪವಾಡ ಪುರುಷನೇ ಎನಿಸಿಕೊಳ್ಳುತ್ತಾನೆ. ಒಂದೇ ಬೆಡಗಿನವರು ಕೂಡಿ ಅವರ ಮೀಸಲು ಅಕ್ಕಿಯಿಂದ ಎಡೆಯನ್ನು ಮಾಡುತ್ತಾರೆ. ಪ್ರಸಾದವನ್ನು ತಯಾರಿಸಿದ ನಂತರ ಸುಡು ಸುಡುವ ಮಡಿಕೆಯನ್ನು ಒಂದು ಬಾಳೆ ಎಲೆಯ ಮೇಲೆ ಹೆಗಲ ಮೇಲೆ ಹೊತ್ತುಕೊಂಡು ಶ್ರೀ ಶಿವನಾರದ ಮುನಿ ಗೋವಿಂದಾ ಗೋ...ವಿಂದ ಎಂದು ಹೇಳುತ್ತಾ ಭಾವ ಪರವಶರಾಗಿ ದೇವರ ಸನ್ನಿಧಿಗೆ ಬರುತ್ತಾರೆ. ಎಡೆ ಹೊರುವವರು ಕಟ್ಟುನಿಟ್ಟಿನಿಂದ ಇರಬೇಕು. ಒಮ್ಮೆ ಸ್ನಾನ ಮಾಡಿದರೂ ಕೂಡ ಎಡೆ ಹೊರುವ ಮುನ್ನ ಮತ್ತೊಮ್ಮೆ ಸ್ನಾನ ಮಾಡಿ ಮಡಿಯುಟ್ಟು ಎಡೆಯನ್ನು ಹೊರಬೇಕು. ಎಡೆಯನ್ನು ದಾಸಪ್ಪರಾದವರು ಇಲ್ಲವೆ, ಹರಕೆ ಮಾಡಿಕೊಂಡವರು ಮಾತ್ರ ಹೊರುತ್ತಾರೆ. ಎಡೆ ಹೊರುವ ಮುನ್ನ ಮೂತ್ರ ವಿಸರ್ಜನೆ ಮಾಡಿ ಬಂದು ಇಲ್ಲವೆ ತುಳಿದು ಬಂದು ಎಡೆಯನ್ನು ಹೊತ್ತರೆ ಹೆಗಲು ಸಂಪೂರ್ಣ ಸುಡುತ್ತವೆ ಎಂಬ ನಂಬಿಕೆ ಇದೆ. ಸುಡುವ ಮಡಿಕೆ ಹೊರುವುದನ್ನು ಗಮನಿಸಿದರೆ ನಾರಪ್ಪನು ಒಬ್ಬ ಪವಾಡ ಪುರುಷನೇ ಎಂದು ಹೇಳುವುದರಲ್ಲಿ ಯಾವುದೆ ಸಂಶಯವಿಲ್ಲ ಎನ್ನಬಹುದು.

ಓಕಳಿ : ಎಡೆಯ ಕಾರ್ಯಕ್ರಮ ಮುಗಿದ ನಂತರ ಸಂಜೆ ನಾಲ್ಕು ಘಂಟೆಗೆ ಓಕಳಿ ಇರುತ್ತದೆ. ಈ ಕಾರ್ಯದಲ್ಲಿ ಭಾಗವಹಿಸುವವರು ನಾಯಕ ಜನಾಂಗದವರು. ಇವರು ಮೊದಲು 'ಓಕಳಿಗುಣಿ'ಯನ್ನು ಸುಣ್ಣದಿಂದ ಬಳಿದು ಎರಡು ಕಂಬಗಳಿಗೆ ತೆಂಗಿನ ಗರಿಗಳನ್ನು ಕಟ್ಟುತ್ತಾರೆ. ಮೇಲಿನ ಅಡ್ಡ ಕಂಬಕ್ಕೆ ತೆಂಗಿನಕಾಯಿಯನ್ನು ಕಟ್ಟುತ್ತಾರೆ. ನಾಯಕರೆ 'ಓಕಳಿಗುಣಿ' ತುಂಬ

ನೀರನ್ನು ಹಾಕಿಕೊಳ್ಳುತ್ತಾರೆ. 'ಓಕಳಿಗುಣಿ' ದೇವಸ್ಥಾನದ ಹತ್ತಿರವೇ ಇದೆ. ದೇವಸ್ಥಾನದಿಂದ ಉತ್ಸವ ಮೂರ್ತಿಯನ್ನು ವಾದ್ಯಗಳೊಂದಿಗೆ ಹೊತ್ತು ತಂದು 'ಓಕಳಿ ಗುಣಿ'ಯನ್ನು ಮೂರು ಬಾರಿ ಸುತ್ತಿ, ಒಂದು ಕಟ್ಟೆಯ ಮೇಲೆ ಇಟ್ಟ ನಂತರ ಕಾಯಿಯನ್ನು ಹರಿಯುತ್ತಾರೆ. ನಾಯಕರನ್ನು ಬಿಟ್ಟರೆ ಬೇರೆ ಯಾರು ಭಾಗವಹಿಸುವಂತಿಲ್ಲ. ಓಕಳಿಯನ್ನು ನೋಡಲು ಸುತ್ತ ಮುತ್ತಲ ಅನೇಕ ಭಕ್ತರು ಅಲ್ಲಿಗೆ ಬಂದಿರುತ್ತಾರೆ. ಕಾಯಿ ಹರಿದ ನಂತರ ಉತ್ಸವ ಮೂರ್ತಿಯನ್ನು ಹೊತ್ತುಕೊಂಡು ಗಂಗೆಗೆ ಹೋಗಿ ಪೂಜೆ ಮಾಡಿ ಸ್ನಾನ ಮಾಡಿಸಿಕೊಂಡು ವಾಪಸ್ಸು ದೇವಸ್ಥಾನಕ್ಕೆ ಬರುತ್ತಾರೆ.

ಮದುವೆ ಕಾರ್ಯ : ಓಕಳಿಯ ಕಾರ್ಯ ಮುಗಿದ ನಂತರ ರಾತ್ರಿ ಸಮಯದಲ್ಲಿ ಮದುವೆ ಕಾರ್ಯ ನಡೆಯುತ್ತದೆ. ಈ ಮದುವೆ ಕಾರ್ಯವು ಉತ್ಸವ ಮೂರ್ತಿಯಾದ ಕೃಷ್ಣನಿಗೂ ಮತ್ತು ಸಾವಕ್ಕ (ಶ್ಯಾವಕ್ಕ)ನಿಗೂ ನಡೆಯುತ್ತದೆ. ನಾರಪ್ಪ ದೇವಸ್ಥಾನದಿಂದ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ, ಸಾವಕ್ಕನ ಗುಡಿಯ ಹತ್ತಿರ ತರುತ್ತಾರೆ. ದೇವಸ್ಥಾನದ ಮುಂದೆ ಇಳಿಸಿ ಮಾತುಕತೆ ನಡೆಸುತ್ತಾರೆ. ನಾರಪ್ಪನನ್ನು ಹೆಣ್ಣಿನ ಕಡೆಯವರು ಹುಡುಗ ಕಪ್ಪಗಿದ್ದಾನೆ ಎಂದು ಹೇಳುತ್ತಾರೆ. ನಾರಪ್ಪ ಸಿಟ್ಟಿಗೆದ್ದು ಈ ಮದುವೆ ನನಗೆ ಬೇಡವೆಂದು ಕೋಪಗೊಂಡು ವಾಪಸ್ಸು ಬರಲು ತಯಾರಾಗುತ್ತಾನೆ. ಮತ್ತೆ ಎಲ್ಲರೂ ತಡೆದು ಮಾತುಕತೆ ಮುಗಿಸಿ, ಹಣ್ಣುಕಾಯಿ ಇಟ್ಟು ಉಡಿ ತುಂಬುತ್ತಾರೆ. ಆನಂತರ ಸಂಪ್ರದಾಯಬದ್ಧವಾಗಿ ಮದುವೆ ಶಾಸ್ತ್ರವನ್ನು ಮುಗಿಸುತ್ತಾರೆ. ಹೆಣ್ಣಿನ ಕಡೆಯವರಾಗಿ ಸಿರಿಗೇರಿ ತಂಡಸ್ಲೋರು ಬೆಡಗಿನವರು ಎಲ್ಲ ಕಾರ್ಯವನ್ನು ಮುಗಿಸಿಕೊಡುತ್ತಾರೆ. ಹೊಸ ತಾಳಿ, ಹೆಣ್ಣು ಗಂಡಿಗೂ ಹೊಸ ಬಟ್ಟೆಯನ್ನು ತಂದಿರುತ್ತಾರೆ. ಉತ್ಸವ ಮೂರ್ತಿಯನ್ನು ದೇವಸ್ಥಾನದ ಹತ್ತಿರ ತಂದು ಮಹಾಮಂಗಳಾರತಿಯೊಂದಿಗೆ ಉತ್ಸವ ಮೂರ್ತಿಯನ್ನು ಗುಡಿ ತುಂಬಿಸುತ್ತಾರೆ. ಇಲ್ಲಿಗೆ ಜಾತ್ರೆಯ ಕಾರ್ಯಗಳು ಮುಗಿಯುತ್ತವೆ. ಈ ರೀತಿ ಬಹುತೇಕ ಸುತ್ತಮುತ್ತಲ ಹಳ್ಳಿಯ ಜನರು ಮತ್ತು ಒಕ್ಕಲಿನವರು ನಾರಪ್ಪನಿಗೂ ಸಾವಕ್ಕನಿಗೂ ಮದುವೆಯಾಗುವುದು ಎಂದು ತಿಳಿದುಕೊಂಡು ಈ ಕಾರ್ಯಕ್ಕೆ ಬರುವಾಗ ತಮ್ಮ ಜೊತೆಗಾರರನ್ನು ನಾರಪ್ಪ ಸಾವಕ್ಕನ ಮದುವೆಗೆ ಹೋಗೋಣ ಬಾ ಎಂದು ಕರೆಯುವುದು ಮತ್ತು ಸುತ್ತಮುತ್ತಲ ಹಳ್ಳಿಗರ ಬಾಯಲ್ಲಿ ರೂಢಿಗತವಾಗಿರುವುದು ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿಯಲಾಯಿತು.

೪.೪. ಜಾತ್ರೆಯಲ್ಲಿ ಪ್ರದರ್ಶನಗೊಳ್ಳುವ ಕಲೆಗಳು

ಜಾತ್ರೆಗಳು ಇದ್ದಲ್ಲಿ ಪ್ರದರ್ಶನ ಕಲೆಗಳಿರುವುದು ಸರ್ವೇಸಾಮಾನ್ಯವಾಗಿದೆ. ಪ್ರತಿಯೊಂದು ಜಾತ್ರೆಯಲ್ಲಿ ಒಂದೊಂದು ರೀತಿಯ ಪ್ರದರ್ಶನ ಕಲೆಗಳನ್ನು ಕಾಣಬಹುದು. ಪ್ರದರ್ಶನ ಕಲೆಗಳು ಹಿಂದಿನ ಕಾಲದಿಂದಲೂ ಜಾತ್ರೆಗಳಲ್ಲಿ ರಾತ್ರಿಯ ಸಮಯವನ್ನು ಕಳೆಯುವುದಕ್ಕೆ ಕೆಲವೊಂದು ಪ್ರದರ್ಶನ ಕಲೆಗಳನ್ನು ಏರ್ಪಡಿಸುತ್ತಿದ್ದರು. ಬಯಲಾಟ, ಸಣ್ಣಾಟ, ದೊಡ್ಡಾಟ, ಹಲಗೆ ಕುಣಿತ, ನಂದಿಕುಣಿತ ಮುಂತಾದ ಕಲೆಗಳನ್ನು ಹೆಣ್ಣುಗಂಡುಗಳ ಪಾತ್ರಗಳ ಮೂಲಕ ಸಂಭಾಷಣೆಯನ್ನಿಟ್ಟು ಪ್ರೇಕ್ಷಕರಿಗೆ ಮನರಂಜನೆಯನ್ನುಂಟು ಮಾಡುತ್ತಿದ್ದರು. ಕಾಲ ಬದಲಾಗಿ ಆಧುನಿಕಗೊಂಡು ಜಾತ್ರೆಗಳು ಸಂಕೀರ್ಣವಾಗಿ ಅಲ್ಲಿ ನಡೆಯುವ ಪ್ರದರ್ಶನ ಕಲೆಗಳು ಮಾಯವಾಗತೊಡಗಿವೆ.

ದೂರದರ್ಶನದಂತಹ ಮಾಧ್ಯಮ ವೇಗವಾಗಿ ಬೆಳೆದು ಎಲ್ಲ ಕಡೆಯೂ ಪ್ರಸರಿಸಿ ಮನೆಯಲ್ಲಿಯೇ ಕುಳಿತು ನೋಡುವ ಭಾಗ್ಯವನ್ನು ಕಲ್ಪಿಸಿಕೊಟ್ಟಿದ್ದರಿಂದ ಕ್ರಮೇಣ ಜಾತ್ರೆಗೆ ಬರುವ ಭಕ್ತರ ಸಂಖ್ಯೆ ಕಡಿಮೆಯಾಗಿದೆ. ಈ ಸಂದರ್ಭದಲ್ಲಿ ಪ್ರದರ್ಶನ ಕಲೆಗಳೂ ಕೂಡ ಕಡಿಮೆಯಾಗತೊಡಗಿದವು. ಪ್ರಸ್ತುತ ಸಂದರ್ಬದಲ್ಲಿಯೂ ಕೆಲವೊಂದು ಜಾತ್ರೆಗಳಲ್ಲಿ ಈಗಲು ಪ್ರದರ್ಶನಕಲೆಗಳನ್ನು ನೋಡಬಹುದು. ಚಿಗಟೇರಿ ಗ್ರಾಮದಲ್ಲಿ ನಾರಪ್ಪನ ಜಾತ್ರೆ ನಡೆದಾಗ ಅನೇಕ ಪ್ರದರ್ಶನ ಕಲೆಗಳು ಪ್ರದರ್ಶನ ಗೊಳ್ಳುವುದನ್ನು ಕಾಣಲಾಗಿದೆ.

ಬಯಲಾಟ :ಬಯಲಲ್ಲಿ ಆಡುವ ಆಟವನ್ನು ಬಯಲಾಟವೆಂದು ಕರೆಯುತ್ತಾರೆ. ಬಯಲಾಟವು ಇಡೀ ರಾತ್ರಿ ನಡೆಯುವ ಸಂಪ್ರದಾಯಗಳ ಕಲೆಯಾಗಿದೆ. ಈ ಕಲೆಯು ನೋಡುಗರಿಗೆ ಬೇಸರ ಬಾರದಂತೆ ವಿವಿಧ ಬಗೆಯ ಸನ್ನಿವೇಶಗಳಲ್ಲಿ ನೋಡುಗರನ್ನು ರೋಮಾಂಚನಗೊಳಿಸುತ್ತವೆ. ಒಂದರ ಕೊರತೆಯನ್ನು ಇನ್ನೊಂದು ತುಂಬಿಕೊಡುವುದರ ಮೂಲಕ ಕಲೆಯು ಪರಿಪೂರ್ಣತೆಗೆ ಕಾರಣವಾಗಿದೆ.

ಬಯಲಾಟಗಳಲ್ಲಿ ಹೆಚ್ಚಾಗಿ ಕುಣಿಯುವ ಪಾತ್ರಗಳನ್ನು ಕಾಣುತ್ತೇವೆ. ಈ ಆಟಗಳಿಗೆ ಹಲವು ಭಾಗದಲ್ಲಿ ಸಂಗೀತಕ್ಕೆ ಹಲಗೆಯನ್ನು ಉಪಯೋಗಿಸುತ್ತಾರೆ. ಈ ಆಟಗಳಲ್ಲಿ ಭಯಾನಕ, ದುಃಖ, ಹಾಸ್ಯ ಮುಂತಾದ ರೂಪದ ಪಾತ್ರಗಳನ್ನು ಕಾಣಬಹುದು. ಹಿಂದೆ ನಾರಪ್ಪನ ಜಾತ್ರೆಯಲ್ಲಿ ಪ್ರತಿವರ್ಷಕ್ಕೊಮ್ಮೆ ಬಯಲಾಟವನ್ನು ಆಡುತ್ತಿದ್ದರು. ಇದಕ್ಕೆ ಅನೇಕ ದಿನಗಳವರೆಗೆ ಶ್ರಮವಹಿಸಿ ಕಲಿತು ಜಾತ್ರೆಯಲ್ಲಿ ತಾವು ಕಲಿತ ಕಲೆಯನ್ನು ಪ್ರದರ್ಶನ ಮಾಡುತ್ತಿದ್ದರು. ಹೆಣ್ಣಿನ ಪಾತ್ರಗಳನ್ನು ಗಂಡಸರೇ ಮಾಡುತ್ತಿದ್ದರು. ಜಾತ್ರೆಯಲ್ಲಿ ಬಂದ ಜನರಿಗೆ ರಂಜನೆ ಕೊಡುತ್ತಿದ್ದರು. ಕ್ರಮೇಣ ಈ ಆಟವು ಕಡಿಮೆಯಾಗಿರುವುದನ್ನು ಕಾಣಬಹುದಾಗಿದೆ.

ನಾಟಕ : ಪ್ರದರ್ಶನ ನೀಡುವ ಕಲೆಗಳಲ್ಲಿ ನಾಟಕವು ಒಂದಾಗಿದೆ. ನಾಟಕಗಳನ್ನು ಹಬ್ಬ, ಜಾತ್ರೆಗಳ ಸಂದರ್ಭದಲ್ಲಿ ಪ್ರದರ್ಶನ ಮಾಡುತ್ತಾರೆ. ಕಲೆ, ಸಂಗೀತ, ನೃತ್ಯಗಳು ಮಾನವನ ಅಭಿವ್ಯಕ್ತಿರೂಪಗಳು. ನಾಗರೀಕತೆಯನ್ನು ಹೊಂದಿದಂತೆಲ್ಲಾ ಮಾನವನು ಹಲವಾರು ರೀತಿಯ ಮನರಂಜನೆಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾನೆ. ಮನರಂಜನೆಯಲ್ಲಿ ಹಲವಾರು ರೀತಿಯ ಕಲೆಗಳನ್ನು ಪ್ರದರ್ಶಿಸುತ್ತಾರೆ. ಅಂತಹ ಅಭಿವ್ಯಕ್ತಿಯಲ್ಲಿ ನಾಟಕವೂ ಕೂಡಾ ಒಂದಾಗಿವೆ.

ನಾರಪ್ಪನ ಒಕ್ಕಲುಗಳಲ್ಲಿ 'ಬೆಳ್ಳೇಲ್ಲೋರು' ಬೆಡಗಿನವರು ಕಡಬಗೇರಿ ಗ್ರಾಮದಲ್ಲಿ ಹೆಚ್ಚಾಗಿದ್ದಾರೆ, ಅದೇ ಊರಿನವರಾದ ಡಾ.ಎ. ಶಿವನಗೌಡ ಎಂಬುವರು ಚಿಗಟೇರಿ ನಾರಪ್ಪಗೆ ಸಂಬಂಧಿಸಿದ 'ಶ್ರೀ ಕ್ಷೇತ್ರ ಚಿಗಟೇರಿಯ ಶ್ರೀ ಶಿವನಾರುಸ್ವಾಮಿ ಮಹಾತ್ಮೆ' ಎಂಬ ನಾಟಕವನ್ನು ರಚಿಸಿದ್ದಾರೆ. ಅದೇ ಗ್ರಾಮದವರೇ ಈ ನಾಟಕವನ್ನು ಕಲಿತು ನಾರಪ್ಪನ ಜಾತ್ರೆಯಲ್ಲಿ ಹತ್ತು ಸಲ ಪ್ರದರ್ಶನ ಮಾಡಿದ್ದಾರೆ. ಇದರಲ್ಲಿಯ ಹೆಣ್ಣುಮಕ್ಕಳ ಪಾತ್ರವನ್ನು ಆ ಗ್ರಾಮದ ಗಂಡಸರು ಪ್ರದರ್ಶಿಸಿರುವುದನ್ನು ಕಾಣುತ್ತೇವೆ.

ಈ ನಾಟಕದಲ್ಲಿ ನಾರಪ್ಪ ಶತ್ರುಗಳ ಕಾಟಕ್ಕೆ ಬೇಸತ್ತು ಉತ್ತರ ಭಾರತದಿಂದ ದಕ್ಷಿಣಕ್ಕೆ ಪ್ರಯಾಣ ಬೆಳೆಸಿದ ಸಾಮಾನ್ಯ ವ್ಯಕ್ತಿ ನಾರಪ್ಪನಾಗಿರುತ್ತಾನೆ. ಈತನ ಜೊತೆಗೆ ದ್ಯಾಮಲಾಂಬ, ಸಾವಕ್ಕ, ಚಿಕ್ಕ ಭೈರವ, ನಾಡಗೌಡ ಮುಂತಾದವರು ಬಂದು ದಕ್ಷಿಣದಲ್ಲಿ ನೆಲೆಸಿರುವುದು ಮತ್ತು ಆತನು ತೋರಿಸಿದ ಅನೇಕ ಪವಾಡಗಳನ್ನು ಮತ್ತು ನಾರುಣ್ಣು ರೋಗವನ್ನು ವಾಸಿಮಾಡುವ ಅನೇಕ ದೃಶ್ಯಗಳನ್ನು ಈ ನಾಟಕದಲ್ಲಿ ನೋಡಬಹುದು.

ನಂದಿಕೋಲು : ಕಲೆ, ಸಂಗೀತ, ನೃತ್ಯ ಮುಂತಾದವುಗಳಂತೆ ನಂದಿಕೋಲು ಕುಣಿತವು ಒಂದಾಗಿದೆ. ನಾರಪ್ಪನ ಜಾತ್ರೆಯಲ್ಲಿ ನಂದಿಕೋಲು ಕುಣಿತವಿರುತ್ತದೆ. ಪ್ರತಿವರ್ಷ ಸುಮಾರು ೧೮-೨೦ ಅಡಿ ಉದ್ದದ ಬಿದರಿನ ಕೋಲುಗಳಿಗೆ ಮೇಲೆ ಕೆಂಪು ವಸ್ತುವನ್ನು ಕಟ್ಟಿಕೊಂಡಿರುತ್ತಾರೆ. ಜಾತ್ರೆಗೆ ಬಂದ ಭಕ್ತರೇ ಎರಡು ದಿವಸ ನಾನಾ ಭಂಗಿಯಲ್ಲಿ ನಂದಿಕೋಲು ಕುಣಿತವನ್ನು ಪ್ರದರ್ಶಿಸುತ್ತಾರೆ. ಇವರ ಕುಣಿತಕ್ಕೆ ಸಹಾಯಕರಾಗಿ ಬಡಿಯುವವರು ಸಹಕರಿಸುತ್ತಾರೆ.

ಜಾತ್ರೆಯಲ್ಲಿ ಡೊಳ್ಳು ಕುಣಿತವನ್ನು ಕಾಣಬಹುದು. ಅದೇ ಊರಿನ ಕುರುಬ ಜನಾಂಗದವರು ಡೊಳ್ಳು ಕುಣಿತವನ್ನು ಪ್ರದರ್ಶನ ಮಾಡುತ್ತಾರೆ ಮತ್ತು ಅದೇ ಊರಿನ ಹರಿಜನ ಕೇರಿಯವರು 'ಹಲಗೆ ಕುಣಿತ'ವನ್ನು ಪ್ರದರ್ಶಿಸುತ್ತಾರೆ. ಸರ್ಕಸ್ ಒಮ್ಮೊಮ್ಮೆ ಕಂಪನಿ ನಾಟಕದವರು ತಮ್ಮ ಪ್ರದರ್ಶನವನ್ನು ಪ್ರದರ್ಶಿಸುತ್ತಿದ್ದಾರೆ.

ಒಟ್ಟಿನಲ್ಲಿ ನಾರಪ್ಪನ ಜಾತ್ರೆಗಳ ಸಂದರ್ಭದಲ್ಲಿ ಮಾತ್ರ ಈ ರೀತಿಯ ಪ್ರದರ್ಶನ ಕಲೆಗಳನ್ನು ನೋಡಬಹುದಾಗಿದೆ. ಹೀಗೆ ನಾರಪ್ಪನಿಗೆ ಬೇರೆ ಬೇರೆ ಸಂದರ್ಭದಲ್ಲಿ ಆ ದೈವದ ಒಕ್ಕಲಿನವರು ಆಚರಿಸುವ ಆಚರಣೆ ಸಂಪ್ರದಾಯದ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಡಿಟಿಪ್ಪಣಿ

೧. ಸಿದ್ದಲಿಂಗಯ್ಯ- ಗ್ರಾಮದೇವತೆಗಳು, ೧೯೯೭ ಪುಟ. ೭೧

೨. ಅದೇ ಪುಟ

೩. ಸಿದ್ದಲಿಂಗಯ್ಯ - ಗ್ರಾಮದೇವತೆಗಳು, ೧೯೭೭ ಪುಟ. ೭೨

೪. ಅದೇ ಪುಟ.

೫. ಅದೇ ಪುಟ.

೬. ಸಿದ್ದಲಿಂಗಯ್ಯ - ಜನಪದ ಆರಾಧನೆಗಳು ಮತ್ತು ಆಚರಣೆಗಳು

೭. ಹಿ.ಚಿ. ಬೋರಲಿಂಗಯ್ಯ (ಸಂ) ದಾಸಪ್ಪ ಜೋಗಪ್ಪ, ೧೯೮೧ ಪುಟ. ೧೭

೮. ಸಿ.ಟಿ. ಗುರುಪ್ರಸಾದ್ - ನೀಲಗಾರರು : ಒಂದು ಧಾರ್ಮಿಕ ಸಮುದಾಯ ಅಧ್ಯಯನ ಪಿ.ಹೆಚ್.ಡಿ. ಅಪ್ರಕಟಿತ ಪ್ರಬಂಧ ೨೦೦೨ ಪುಟ. ೮೪.

೯. ವಕ್ತೃ - ನಂಜಪ್ಪ ಸಿರಿಗೆರೆ

೧೦. ಮಂಜುನಾಥ ಬೇವಿನಕಟ್ಟಿ - ಮಲಿಯಮ್ಮ .... ಉದೋ ಉದೋ ಪುಟ. ೨೨.

೧೧. ಅದೇ ಪುಟ.

೧೨. ಎಸ್.ಎಸ್. ಹಿರೇಮಠ - ಜಾತ್ರೆಗಳು, ೧೯೭೩, ಪುಟ. ೪೯.

೧೩. ಎಸ್.ಎಸ್. ಹಿರೇಮಠ - ಜಾತ್ರೆಗಳು, ಪುಟ. ೪೮.

೧೪. ಕುಂಬಾಸ - ಬಳ್ಳಾರಿ ಜಿಲ್ಲಾ ವಾಸ್ತು ಶಿಲ್ಪದಲ್ಲಿ ಕಂಬ ಮತ್ತು ತೇರು ಒಂದು ಅಧ್ಯಯನ, ಸೂರ್ಯಕಾಂತಿ ಸ್ಮರಣ ಸಂಚಿಕೆ, ಪುಟ. ೪೮.

ಅಧ್ಯಾಯ - ೫

ನಾರಪ್ಪನ ಬಗೆಗಿನ ನಂಬಿಕೆ ಮತ್ತು ಹರಕೆಗಳು

೫. ೧ ನಾರಪ್ಪನ ಪೂಜಾ ವಿಧಾನ

೪. ೨ ಮಡಿ - ಮೈಲಿಗೆ

ನಂಬಿಕೆಗಳು

ಮಾನವನ ಮನಸ್ಸಿನ ಭಾವನೆಯಿಂದ ಅನೇಕ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. 'ನಂಬಿಕೆ' ಎಂಬುದು ನಾಮಪದವಾಗಿದ್ದು 'ನಂಬು' ಎನ್ನುವ ಧಾತುವಿಗೆ 'ಇಕೆ' ಎಂಬ ಪ್ರತ್ಯಯವು ಸೇರಿ ''ನಂಬಿಕೆ' ಎಂಬ ಪದವಾಗಿದೆ. ಮಾನವ ಯಾವುದೇ ಒಂದು ವಸ್ತುವಿನ, ವಿಷಯದ, ಇತ್ಯಾದಿ ಇತ್ಯಾದಿಗಳ ಮೇಲೆ ವಿಶ್ವಾಸವನ್ನಿಟ್ಟು ವಸ್ತುವಿನ ವಷಯದ ಬಗ್ಗೆ ಹೇಳುವ ವಿಶ್ವಾಸದ ಮಾತುಗಳನ್ನು ನಂಬಿಕೆ ಎಂದು ಕರೆಯುತ್ತೇವೆ. ನಂಬಿಕೆ ಎನ್ನುವುದು ಇಂದು ನಿನ್ನೆಯದಲ್ಲ. ಪುರಾತನದಿಂದಲೂ ವಂಶಪಾರಂಪರ್ಯವಾಗಿ ಬಂದಿರುವ ಪ್ರಬಲವಾದ ಶಕ್ತಿಯಾಗಿದೆ. ಮಾನವ ನಂಬಿಕೆ ಇಲ್ಲದೆ ಭೂಮಿಯ ಮೇಲೆ ಬದುಕಿ ಬಾಳಲು ಸಾಧ್ಯವಿಲ್ಲ. ಜನಪದರ ಪ್ರತಿಯೊಂದು ಹಂತದಲ್ಲಿಯೂ ಒಂದೊಂದು ನಂಬಿಕೆಗಳನ್ನು ಕಾಣುತ್ತೇವೆ. ನಂಬಿಕೆಗಳೇ ನಮ್ಮ ಜನಪದರ ಜೀವನ ಕ್ರಮವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿವೆ.

''ನಂಬಿಕೆಗಳು ಜನರ ಜೀವನದಲ್ಲಿ ನಡೆದಾಡುವ ನಾಣ್ಯಗಳಿದ್ದಂತೆ. ಜನತೆಯ ಜೀವನಾನುಭವದ ಮೂಸೆಯಿಂದ ಮೂಡಿ ಬಂದು, ಬದುಕಿನಲ್ಲಿ ಬೆರೆತು ಪರಿಣಾಮಕಾರಿಯಾಗಿ ತಮ್ಮ ಪ್ರಭಾವ ಬೀರಿ ನಂಬಿಕೆಗಳು ಇಂದಿಗೂ ಜೀವಂತವಾಗಿವೆ. ಆದಿಯಿಂದಲೂ ಮಾನವನ ಬದುಕಿನಲ್ಲಿ ಇವು ಎಷ್ಟು ಮುಖ್ಯ ಎಂಬುದಕ್ಕೆ ನಂಬಿಕೆಗಳ ಬಗ್ಗೆ ಇವರ ನಾಣ್ಣುಡಿಗಳನ್ನು ನೋಡಿದರೆ ಗೊತ್ತಾಗುತ್ತದೆ. 'ನಂಬಿಕೆ ಬೆಟ್ಟವನ್ನಾದರೂ ಕದಲಿಸಬಲ್ಲದು''[೧]

''ಪುನರಾವರ್ತನೆ ಮತ್ತು ಸಾಮೂಹಿಕ ವೀಕ್ಷಣೆಯಿಂದ ಸಾಂಪ್ರದಾಯಿಕವಾಗಿ ಒಪ್ಪಿತವಾಗಿರುವ ಭೂತ, ವರ್ತಮಾನ, ಭವಿಷ್ಯತ್ ಕಾಲಗಳಿಗೆ ಸಂಬಂಧಿಸಿದಂತೆ ಕಾರ್ಯಕಾರಣ ಸಂಬಂಧವನ್ನ ಸೂಚಿಸುವ ಕಲ್ಪನೆಯನ್ನು ನಂಬಿಕೆ ಎಂದು ಕರೆಯುತ್ತಾರೆ''.[೨]

ಜನಪದರಿಗೆ ನಂಬಿಕೆಗಳೇ ಬೆನ್ನೆಲುಬುಗಳಾಗಿರುತ್ತವೆ. ಪ್ರತಿಯೊಬ್ಬ ಮನುಷ್ಯನಲ್ಲಿ ನಂಬಿಕೆಗಳು ಭಯ, ಭಾವಾತ್ಮಕತೆ, ವಿಶ್ವಾಸದ ಭರವಸೆಗಳು, ಎಂದೋ ನಡೆದಿರುವ ಘಟನೆಗಳು, ಕಲ್ಪನೆಯ ಕನಸುಗಳು ಹೀಗೆ ಅನೇಕಾನೇಕ ವಸ್ತುಗಳಿಂದ ಹುಟ್ಟಿಕೊಂಡಿರಬಹುದು. ಈ ತರಹದಲ್ಲಿ ಹುಟ್ಟಿ ಪ್ರಬಲವಾಗಿ ಬೆಳೆದುಕೊಂಡಿರುವ ನಂಬಿಕೆಗಳು ಸಮಾಜದಲ್ಲಿ ವ್ಯಕ್ತಿಗತವಾಗಿ, ಸಾಮೂಹಿಕವಾಗಿ ಬೆರೆತು ಬಹಳ ಮಹತ್ವವನ್ನು ಪಡೆದುಕೊಂಡಿವೆ.

ಸಮಾಜದಲ್ಲಿರುವ ನಂಬಿಕೆಗಳು ಒಂದೇ ರೀತಿಯಾಗಿ ಇರಲು ಸಾಧ್ಯವಿಲ್ಲ. ಜಾತಿ, ಮತ, ಧರ್ಮಗಳ ಹಿನ್ನೆಲೆಗಳಲ್ಲಿ ಹುಟ್ಟಿಕೊಂಡು ಹೆಮ್ಮರವಾಗಿ ಬೆಳೆದಿವೆ ಮತ್ತು ಭೂಮಿಯ ಮೇಲೆ ತಾನು ನಂಬಿ ಆರಾಧಿಸುವ ದೇವತೆಗಳ ಹಿನ್ನೆಲೆಯಲ್ಲಿಯೂ ಅನೇಕಾನೇಕ ನಂಬಿಕೆಗಳು ಉದ್ಭವವಾಗಿರುವುದನ್ನು ಕಾಣುತ್ತೇವೆ. ಆ ಪ್ರಕಾರವಾಗಿ ನಂಬುತ್ತೇವೆ.

ಪ್ರಸ್ತುತ ಕಾಲದಲ್ಲಿ ಒಂದೊಂದು ಪ್ರದೇಶದ ದೇವರುಗಳಲ್ಲಿ ಅಲ್ಪಸ್ವಲ್ಪ ಭಿನ್ನವಾಗಿರುವ ನಂಬಿಕೆಗಳನ್ನು ಕಾಣುತ್ತೇವೆ. ಆ ಭಿನ್ನತೆಯನ್ನು ನಾವು ಚಿಗಟೇರಿ ನಾರಪ್ಪನಲ್ಲಿ ಕಾಣಬಹುದಾಗಿದೆ.

* ನಾರಪ್ಪನ ಭಕ್ತರೆಲ್ಲರು ಶ್ರೀಮಂತರೇ ಎಂಬ ನಂಬಿಕೆ ಅವರಲ್ಲಿದೆ
* ದೇವರನ್ನು ಗಂಡಸರೇ ಪೂಜೆ ಮಾಡಬೇಕು
* ಹೊಸ ಮಡಿಕೆಯಲ್ಲಿ ಎಡೆ ಮಾಡಬೇಕು
* ಪ್ರಸಾದ ಮಾಡುವ ಒಲೆಯನ್ನು ಊದಬಾರದು
* ಉಸಿರು ಬಡಿಯದ ಹಾಗೆ ಬಾಯಿಗೆ ಅರಿವೆಯನ್ನು ಕಟ್ಟಿಕೊಳ್ಳಬೇಕು
* ತಯಾರಾದ ಪ್ರಸಾದದ ಇಡೀ ಮಡಿಕೆಯನ್ನು ನಾರಪ್ಪನಿಗೆ ನೈವೇದ್ಯ ಮಾಡಬೇಕು
* ಪ್ರಸಾದವನ್ನು ಪೂಜಾರಿಗಳ ಮನೆಯಲ್ಲಾಗಲೀ ಅಥವಾ ಗುಡಿಯ ಆವರಣದಲ್ಲಾಗಲೀ ತಯಾರಿಸಬೇಕು
* ನಾರಪ್ಪನಿಗೆ ಸಂಬಂಧಿಸಿದ ವಸ್ತುವನ್ನು ಮುಟ್ಟಬಾರದು
* ಹರಕೆಯನ್ನು ತೀರಿಸಬೇಕು
* ನಾರುಹುಣ್ಣು ರೋಗವನ್ನು ನಿವಾರಿಸುತ್ತಾನೆ
* ಎಮ್ಮೆ, ಹಸು ಕರು ಹಾಕಿದಾಗ ಮೊದಲ ಅಡುಗೆ ನಾರಪ್ಪನಿಗೆ ಮೀಸಲು
* ನಾರಪ್ಪನನ್ನು ಬೈದರೆ ಮೈತುಂಬ ನಾರುಣ್ಣು ರೋಗವು ಬರುತ್ತದೆ
* ನಾರನ್ನು ಎಸೆಯಬೇಕು
* ಮಕ್ಕಳ ಭಾಗ್ಯವನ್ನು ಕರುಣಿಸುತ್ತಾನೆ
* ಕಷ್ಟ ಪರಿಪಾಲನೆ ಮಾಡುತ್ತಾನೆ
* ಎಡೆ ಮಾಡಿದ ಮತ್ತು ಮಾಡುವಾಗ ಮುಟ್ಟಾದವರು ಬಂದರೆ ಅಥವಾ ಮೂತ್ರ ವಿಸರ್ಜನೆ ಮಾಡಿ ಎಡೆ ಮಾಡಿದರೆ ಒಲೆ ಮೇಲಿರುವ ಮಡಿಕೆ ತನ್ನಷ್ಟಕ್ಕೆ ತಾನೆ ಅರಳಿಕೊಳ್ಳುತ್ತದೆ

ಹೀಗೆ ಭಿನ್ನ ವಿಭಿನ್ನವಾದ ನಂಬಿಕೆಗಳನ್ನು ಅಲ್ಲಿಯ ಭಕ್ತರು ನಾರಪ್ಪನ ಬಗೆಗೆ ಇಟ್ಟುಕೊಂಡಿದ್ದಾರೆ. ಶ್ರದ್ಧೆ, ಭಯ, ಭಕ್ತಿ, ವಿನಯದಿಂದ ದಿನ ನಿತ್ಯ ಪೂಜಿಸುತ್ತಾರೆ. ನಾರಪ್ಪನನ್ನು ನಂಬಿದರೆ ಕೈ ಬಿಡುವ ದೇವನಲ್ಲ. ಬಂದ ಕಷ್ಟವನ್ನೆಲ್ಲ ಪರಿಹರಿಸುತ್ತಾನೆ, ಕಳೆಯುತ್ತಾನೆ. ಪರಿಹಾರ ಮಾಡುತ್ತಾನೆ ಎಂಬುದು ನಾರಪ್ಪನ ಭಕ್ತರು ಗಾಢವಾಗಿ ನಾರಪ್ಪನನ್ನು ನಂಬಿಕೊಂಡು ಬಂದಿರುವುದನ್ನು ಇಂದಿಗೂ ಕಾಣುತ್ತೇವೆ.

ಹರಕೆಗಳು

ಜನಪದದಲ್ಲಿ ನಂಬಿಕೆಯ ಹಿಂದೆಯೇ ಹರಕೆಗಳು ಇರುತ್ತವೆ. ನಂಬಿಕೆ ಮತ್ತು ಹರಕೆಗಳು ನಾಣ್ಯದ ಎರಡು ಮುಖಗಳಿದ್ದಂತೆಯೇ. ಹರಕೆಯನ್ನು ಇನ್ನೊಂದು ಅರ್ಥದಲ್ಲಿ ಮುಡಿಪು, ದೇವರಿಗೆ ಮಾಡುವ ಸೇವೆಯ ನಿರ್ಧಾರಗಳೆಂದು ಹೇಳಬಹುದು. ಹರಕೆಯನ್ನು ವಸ್ತುವಿನ ರೂಪದಲ್ಲೋ, ಹಣದ ರೂಪದಲ್ಲಿಯೋ ಅಥವಾ ಸೇವೆಯ ರೂಪದಲ್ಲಾದರೂ ಭಕ್ತರು ಹರಕೆಯನ್ನು ಮುಟ್ಟಿಸುತ್ತಾರೆ. ಹರಕೆಗಳನ್ನು ತಾನು ಮಾಡಿಕೊಂಡ ಕಾರ್ಯ ಯಶಸ್ವಿಯಾದಾಗ ಕಷ್ಟವನ್ನು ದೇವರೇ ಪರಿಹರಿಸಿದ ಎಂದು ಹರಕೆಗಳನ್ನು ಒಪ್ಪಿಸುತ್ತಾರೆ. ಸಾಮಾನ್ಯವಾಗಿ ಹರಕೆಗಳು ಎಲ್ಲಾ ಪ್ರದೇಶಗಳಲ್ಲೂ ಏಕಮುಖವಾಗಿರುತ್ತವೆ ಎನ್ನಬಹುದು. ಪ್ರಸ್ತುತ ನಾರಪ್ಪನಲ್ಲಿ ಭಕ್ತರು ಮಾಡಿಕೊಳ್ಳುವ ಹರಕೆಗಳು ಹೀಗಿವೆ.

* ತೆಂಗಿನ ಕಾಯಿ ಒಡೆಯುವುದು
* ದೀಡು ನಮಸ್ಕಾರ ಹಾಕುವುದು
* ದೀಡು ನಮಸ್ಕಾರ ಹಾಕುವುದು
* ಬೆಳ್ಳಿ ಮತ್ತು ಬಂಗಾರದ ಸಾಮಾನುಗಳನ್ನು ಒಪ್ಪಿಸುತ್ತೇನೆ
* ಪಪ್ಪತ್ತು ಮಾಡುತ್ತಾನೆ
* ಮೀಸಲು ಕಟ್ಟುವುದು
* ಅಭಿಷೇಕ ಮಾಡಿಸುವುದು
* ಹಣವನ್ನು ಕಾಣಿಕೆಯಾಗಿ ಡಬ್ಬಿಗೆ ಹಾಕುವುದು
* ಕಾರ್ತಿಕ ಹಚ್ಚುವುದು
* ತೇರಿನಲ್ಲಿ ನಾರು ಹಾಕುವುದು

* ಉತ್ಸವ ಸಂದರ್ಭದಲ್ಲಿ ಪಲ್ಲಕ್ಕಿ ಹೊರುತ್ತೇನೆ

* ಹೂವಿನ ಹಾರವನ್ನು ಹಾಕುವುದು

* ಊರಿನಿಂದ ಗಿರಿಯವರೆಗೆ ಕಾಲ್ನಡಿಗೆಯಲ್ಲಿ ಬರುವುದು

* ಅಂದುಕೊಂಡ ದಿನದಂದು ಕ್ಷೇತ್ರಕ್ಕೆ ಬರುವುದು

ಹೀಗೆ ನಾನಾ ರೀತಿಯ ಹರಕೆಗಳನ್ನು ವಯುಕ್ತಿಕ, ಸಾಮೂಹಿಕ, ಕೌಟುಂಬಿಕ ಮುಂತಾದ ಹರಕೆಗಳ ವಿಧಾನಗಳನ್ನು ಕಾಣುತ್ತೇವೆ. ತಮ್ಮ ಕೆಲಸವಾದರೆ ಭಯಭಕ್ತಿಯಿಂದ ಹರಕೆಗಳನ್ನು ಪೂರೈಸುತ್ತಾರೆ. ವ್ಯಕ್ತಿಗಳಿಗೆ ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ ಕಷ್ಟ ಬಂದರು ಸಹಿಸಿಕೊಳ್ಳುವುದರೊಂದಿಗೆ, ನಾರಪ್ಪನ ಸೇವೆಯನ್ನು ಮಾಡುತ್ತಾರೆ. ತಾನಂದುಕೊಂಡ ಹರಕೆ ಏನೇ ಆಗಿದ್ದರೂ ಎಷ್ಟೆ ಆಗಿದ್ದರೂ ಉಪವಾಸ, ವನವಾಸ ಮಾಡಿಯಾದರು ಹರಕೆಯನ್ನು ತಂದು ಭಯ ಭಕ್ತಿಯಿಂದ ಅರ್ಪಿಸುತ್ತಾರೆ.

ನಾರಪ್ಪನು ಸ್ಥಳೀಯರಲ್ಲಿ ಮತ್ತು ಭಕ್ತರಲ್ಲಿ 'ಅಸವಲ್ಲದ' ದೇವರಾಗಿದ್ದಾನೆ. ತುಂಬ ಭಯದ ವಾತಾವರಣದಲ್ಲಿ ಬೇರೆ ದೇವರ ಭಕ್ತರಿಗೆ ನಾರಪ್ಪ ದೇವರನ್ನು ಪರಿಚಯಮಾಡಿಕೊಡುತ್ತಾರೆ. ಸುತ್ತ ಮುತ್ತಲೂ ನಾರುಣ್ಣು ರೋಗದವರಿದ್ದರೆ ನಾರಪ್ಪನ ಜಾತ್ರೆಗೆ ಬಂದು ನಾರನ್ನು ಹಾಕಿದ ಕೆಲವೇ ದಿನಗಳಲ್ಲಿ ಮಾಯವಾಗಿರುವ ಉದಾಹರಣೆಗಳು ಇವೆ. ಇದರಿಂದ ಭಕ್ತರು ನಾರಪ್ಪಗೆ ಹೆಚ್ಚಾಗಿ ನಡೆದುಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ನಾರಪ್ಪನ ಪ್ರಚಾರ ಜಾಸ್ತಿಯಾಗಿದೆ. ದಿನದಿಂದ ದಿನಕ್ಕೆ ಭಕ್ತರ ಸಂಖ್ಯೆ ಜಾಸ್ತಿಯಾಗತೊಡಗಿದೆ. ಇದೆಲ್ಲವೂ ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಕಂಡುಬಂದಿರುತ್ತದೆ.

೫. ೧ ನಾರಪ್ಪನ ಪೂಜಾವಿಧಾನ

ಪ್ರತಿನಿತ್ಯ ನಾರಪ್ಪ ದೇವರಿಗೆ ಪ್ರಾತಃಕಾಲ ಮತ್ತು ಸಂಧ್ಯಾ ಕಾಲದಲ್ಲಿ ಪೂಜೆ ನಡೆಯುತ್ತದೆ. ಹಿಂದೆ ದೇವಸ್ಥಾನದ ಪಕ್ಕದಲ್ಲೇ ಪುರಾತನ ಕಾಲದ ಮಜ್ಜನ ಬಾವಿಯಿಂದ ನಾರಪ್ಪನ ಜಳಕಕ್ಕೆ ನೀರನ್ನು ಮತ್ತು ಬಿಲ್ಪತ್ರೆ, ಅರಕಿಪತ್ರೆ, ಗಂಧದಪತ್ರೆ, ಕರಿಕೆ, ಲೆಕ್ಕಿಪತ್ರೆ, ತುಂಬೆಹೂವು, ಉತ್ರಾಣಿಪತ್ರೆ, ಬನ್ನಿಪತ್ರೆ, ಮಲ್ಲಿಗೆ ಹೂವು, ಶಾವಂತಿಗೆ, ಸುಂಗಧರಾಜ, ಗುಲಾಬಿ ಮುಂತಾದ ಪತ್ರೆ ಮತ್ತು ಹೂಗಳಿಂದ ಅಲಂಕರಿಸಿ ಪೂಜೆಮ್ಮಾಡುತ್ತಾರೆ. ಸಂಧ್ಯಾಕಾಲದಲ್ಲಿ ಯಾವುದೇ ಅಲಂಕಾರವಿಲ್ಲದೆ ವಿಭೂತಿ, ಗಂಧ ಮುಂತಾದವುಗಳಿಂದ ಪೂಜೆಯನ್ನು ಸಲ್ಲಿಸುತ್ತಾರೆ.

ಪ್ರತಿ ಪೂಜೆಯ ಸಮಯದಲ್ಲಿ ಗರ್ಭಗುಡಿಯ ಬಾಗಿಲನ್ನು ಹಾಕಿಕೊಂಡು ಪೂಜೆಯನ್ನು ಮಾಡುತ್ತಾರೆ. ಯಾಕೆಂದರೆ ಮೈಲಿಗೆಯವರ ದೃಷ್ಟಿ ದೇವರ ಮೇಲೆ ಬೀಳಬಾರದು. ಹೀಗೆ ಬಿದ್ದರೆ ದೇವರು ನಮಗೆ ಒಳ್ಳೆಯದನ್ನು ಮಾಡುವುದಿಲ್ಲ ಎಂಬ ನಂಬಿಕೆಗಳು ಅಲ್ಲಿಯ ಪೂಜಾರಿಗಳಲ್ಲಿದೆ. ಪೂಜೆ ಮಾಡಿ ಘಂಟೆ ಬಾರಿಸುವಾಗ, ಒಬ್ಬ ವ್ಯಕ್ತಿ ಹೊರಗಡೆಯಿಂದ ಶಂಖವನ್ನು

ಊದುತ್ತಾನೆ. ನಂತರ ಜಾಗಟೆಯನ್ನು, ನಗಾರಿಯನ್ನು ಬಾರಿಸುತ್ತಾರೆ. ಇದರಿಂದ ಸುತ್ತ ಮುತ್ತಲಿರುವ ಜನರಿಗೆ ನಾರಪ್ಪನ ಪೂಜೆ ನೆಡೆಯುತ್ತದೆ ಎಂದು ಗೊತ್ತಾಗುತ್ತದೆ. ಇಲ್ಲಿ ಮುಖ್ಯವಾಗಿ ಶನಿವಾರ ಮತ್ತು ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ವಿಶೇಷವಾದ ಪೂಜೆ ನೆಡೆಯುತ್ತದೆ.

೫. ೨ ಮಡಿ - ಮೈಲಿಗೆ

ಇವತ್ತಿನ ಸಂದರ್ಭದಲ್ಲಿ ನಾರಪ್ಪನನ್ನು ಪೂಜಿಸುವವರು 'ಪಂಚಮ ಶಾಲಿ'ಯವರು. ಅವರು ಸಂಸ್ಕೃತ ಮಂತ್ರಗಳ ಮೂಲಕ ನಾರಪ್ಪನನ್ನು ಆರಾಧಿಸುತ್ತಾರೆ ಮತ್ತು ಇಂಥ ಆಚರಣೆಗೆ ಬೇಕಾದ ಪುರಾಣಕಥೆಗಳನ್ನು ಹಿನ್ನೆಲೆಯಾಗಿ ಹೇಳುತ್ತಾರೆ. ಪೂಜಾರಿಗಳು ದಿನನಿತ್ಯ ಎರಡು ಬಾರಿ ಸ್ನಾನಮಾಡಿ ಮಡಿಯಿಂದ ಪೂಜೆ ಮಾಡುತ್ತಾರೆ ಮತ್ತು ಯಾವುದೇ ಭಕ್ತರು ಗುಡಿಯೊಳಗೆ ಹೋಗಬೇಕಾದರೂ ಸ್ನಾನ ಮಾಡಿಯೇ ಹೋಗಬೇಕು. ಇಲ್ಲವಾದರೆ ಗುಡಿಯೊಳಗೆ ಪ್ರವೇಶವಿರುವುದಿಲ್ಲ, ಪೂಜಾರಿಗಳು ತಮ್ಮ ಪೂಜಾ ದಿನಗಳಲ್ಲಿ ಸಂಭೋಗವನ್ನು ನಿಷೇಧಿಸಿರುತ್ತಾರೆ. ಅವರಿಗೆ ಗುಡಿಯೇ ಮನೆಯಾಗಿರುತ್ತದೆ.

ಜಾತ್ರೆ, ಹುಣ್ಣಿಮೆ, ಶನಿವಾರ, ಅಮವಾಸ್ಯೆಗಳಲ್ಲಿ ದೇವಸ್ಥಾನಕ್ಕೆ ಬರುವ ಭಕ್ತರು ಮಡಿಯಿಂದಲೇ ಬರುವ ಪದ್ಧತಿಯಿದೆ. ಜಾತ್ರೆಯಲ್ಲಿ ಎಡೆಮಾಡುವ ಸಂದರ್ಭದಲ್ಲಾಗಲಿ ಮತ್ತು ಕಾರ್ತಿಕದ ದಿವಸ ತಮ್ಮ ಮನೆಯಲ್ಲಿ ಎಡೆಮಾಡುವ ಸಂದರ್ಭದಲ್ಲಿ ನಾರಪ್ಪನ ಭಕ್ತರೇ ಆಗಿರಬೇಕೆಂಬುದು ಇಲ್ಲಿಯ ನಿಯಮ. ಒಂದು ವೇಳೆ ಹೆಣ್ಣು ಮಕ್ಕಳು ಎಡೆ ಮಾಡಿದರೆ ಅವರ ಬಾಯಿಗೂ, ಮೂಗಿಗೂ ವಸ್ತುವನ್ನು ಕಟ್ಟಿಕೊಂಡು ಎಡೆಮಾಡಬೇಕು. ಎಡೆ ತಯಾರು ಮಾಡುವ ಮುನ್ನ ಮೊದಲು ಸ್ನಾನಮಾಡಿ ಮಡಿಯಿಂದ ಬಂದು ನೆಲವನ್ನು ಸಾರಣೆ ಮಾಡಿ ನಂತರ ಹೊಸ ಮಡಿಕೆ ಒಲೆಯನ್ನು ಪೂಜೆ ಮಾಡಬೇಕು, ನಂತರ ಬೆಂಕಿ ಹಾಕುವುದು. ಪ್ರಸಾದಕ್ಕೆ ತಂದಿರುವ ಅಕ್ಕಿ, ಹಣ್ಣು, ಬಾರೋಸಕ್ಕರೆ, (ಕೆಲವರು ಬೆಲ್ಲ) ಮುಂತಾದವುಗಳನ್ನು ಮಡಿ ವಸ್ತ್ರದಲ್ಲಿಯೇ ತಂದಿರುತ್ತಾರೆ.

ಎಡೆ ಮಾಡುವ ಸಂದರ್ಭದಲ್ಲಿ ಬೇರೆ ಯಾರೂ ಪ್ರವೇಶಿಸುವುದಿಲ್ಲ. ಒಲೆ ಊದುವ ಹಾಗಿಲ್ಲ. ಬೇರೆ ಯಾರು ಮಡಿಕೆಯ ಬಾಯಿ ತೆಗೆದು ನೋಡುವಂತಿಲ್ಲ. ತಯಾರಾದ ಪ್ರಸಾದವನ್ನು ನೈವೇದ್ಯಕ್ಕೆ ಹೊಯ್ಯುವ ಮುನ್ನ ಮತ್ತೊಮ್ಮೆ ಸ್ನಾನ ಮಾಡಿ, ಮಡಿ ಬಟ್ಟೆಯುಟ್ಟು ನೈವೇದ್ಯದ ಮಡಿಕೆಯನ್ನು ಹೆಗಲಮೇಲೆ ಹೊತ್ತೊಯ್ಯಬೇಕು, ಹಾಗೆಯೇ ಪಂಚೆಯನ್ನು ಹಾಕಿಕೊಂಡಿರುತ್ತಾರೆ. ಅಂಗಿಯನ್ನು ಹಾಕಿಕೊಂಡಿರುವುದಿಲ್ಲ. ಈ ಪದ್ಧತಿಯನ್ನು ಜಾತ್ರೆಯ ಸಂದರ್ಭದಲ್ಲಿ ಕಾಣಬಹುದು.

ಕೆಲವು ನೀಷೇಧಗಳು

* ಹೆಣ್ಣು ಮಕ್ಕಳು ನಾರಪ್ಪನ ಪೂಜೆ ಮಾಡುವಂತಿಲ್ಲ
* ಮುಟ್ಟಾದ ಹಾಗೂ ಋತುಮತಿಯಾದ ಹೆಣ್ಣು ಮಕ್ಕಳು ಕ್ಷೇತ್ರಕ್ಕೆ ಬರುವ ಹಾಗಿಲ್ಲ

* ಎಡೆಯ ಸಂದರ್ಭದಲ್ಲಿ ಒಲೆಯನ್ನು ಊದುವಹಾಗಿಲ್ಲ
* ಕೆಲವು ಭಕ್ತರು ಗಂಡ ಹೆಂಡರು ಕೂಡಿ ಕ್ಷೇತ್ರಕ್ಕೆ ಬರುವಂತಿಲ್ಲ
* ಹೆಣ್ಣು ದೇವರ ಮನೆಯಲ್ಲಿ ಸಂಬಂಧವನ್ನು ಬೆಳಸುವುದಿಲ್ಲ
* ನಾಯಕ ಜನಾಂಗದಲ್ಲಿ ಕರಿದಾರ, ಕರಿಕಂಬಳಿ ಉಪಯೋಗಿಸುವಂತಿಲ್ಲ
* ತಡಿಯನ್ನು ಹಾಸುವುದಿಲ್ಲ
* ಕೆಲವರು ಮಾಂಸವನ್ನು ನಿಷೇಧಿಸಿದ್ದಾರೆ

ಈ ರೀತಿಯ ಕಟ್ಟು, ಕಟ್ಟಳೆಗಳನ್ನು ಮುರಿದರೆ ದೇವರು ನಮ್ಮನ್ನು ಯಾವುದಾದರು ದೊಡ್ಡ ಗಂಡಾಂತರಕ್ಕೆ ಸಿಲುಕಿಸುತ್ತಾನೆಂಬ ಭಯ ಪ್ರತಿಯೊಬ್ಬ ಭಕ್ತರಲ್ಲಿ ಇವತ್ತಿಗೂ ಅಡಗಿದೆ ಮತ್ತು ಬಲವಾದ ನಂಬಿಕೆ ಕೂಡ ಇವರಲ್ಲಿದೆ.

ಹೀಗೆ ನಾರಪ್ಪನ ಪೂಜಾರಿಗಳು ಸದಾ ಮಡಿಯಲ್ಲಿದ್ದು ಯಾವ ಕಾರಣಕ್ಕೂ ಮೈಲಿಗೆಯಾಗಿರಕೂಡದೆಂಬ ನಂಬಿಕೆ ಕಟ್ಟುನಿಟ್ಟಾಗಿ ಆಚರಣೆಯಲ್ಲಿ ಬಂದಿದೆ. ನಾರಪ್ಪನು ಯಾವ ಕಾರಣಕ್ಕೂ ಮೈಲಿಗೆ ಆದವರನ್ನು ಹತ್ತಿರ ಸೇರಿಸಿಕೊಳ್ಳುವುದಿಲ್ಲ. ಈ ಕಾರಣಕ್ಕೆ ಭಕ್ತರು ಮತ್ತು ಪೂಜಾರಿಗಳು ಯಾವ ಊರಿನಲ್ಲೇ ಇರಲಿ ಅವರು ಆ ಊರಿನ ಇತರ ಜನರಿಗಿಂತ ಭಿನ್ನವಾಗಿರಬೇಕು ಮತ್ತು ಸದಾ ತಮ್ಮ ಮಡಿಯನ್ನು ಕಾಪಾಡಿಕೊಂಡಿರಬೇಕು. ನಾರಪ್ಪನ ಮಡಿಯ ಕಲ್ಪನೆ ಇತರ ದೈವಗಳ ಹಾಗೆ ಕಂಡುಬರುವ ಮಡಿಯ ಕಲ್ಪನೆಗಿಂತ ಸ್ವಲ್ಪ ಬೇರೆಯಾಗಿ ಕಂಡುಬರುತ್ತದೆ.

ಅಡಿ ಟಿಪ್ಪಣೆ

೧. ಮಂಜುನಾಥ ಬೇವಿನಕಟ್ಟಿ - ಜನಪದ ಸಂಸ್ಕೃತಿ, ೧೯೯೯. ಪುಟ.೨೩

೨. ಗ್ರಾಮದೇವತೆ - ಡಾ.ಸಿದ್ದಲಿಂಗಯ್ಯ ಪುಟ. ೭೧

ಅಧ್ಯಾಯ - ೬

ನಾರಪ್ಪ ಮತ್ತು ಇತರ ದೈವಗಳ ಮುಖಾಮುಖಿ

೬. ೧ ಕೃಷ್ಣ ಮತ್ತು ನಾರಪ್ಪ

೬. ೨ ಸಾವಕ್ಕ ಮತ್ತು ನಾರಪ್ಪ

೬. ೩ ಆಂಜನೇಯ ಮತ್ತು ನಾರಪ್ಪ

೬. ೪ ಶೂಲದ ರಾಮೇಶ್ವರ ಮತ್ತು ನಾರಪ್ಪ

೬. ೫ ಮಾರಿಕಾಂಬ ಮತ್ತು ನಾರಪ್ಪ

೬. ೬ ಬನಶಂಕರಿ ಮತ್ತು ನಾರಪ್ಪ

೬. ೭ ಈರಣ್ಣ ಮತ್ತು ನಾರಪ್ಪ

೬. ೮ ದುರುಗಮ್ಮ ಮತ್ತು ನಾರಪ್ಪ

೬. ೯ ಇತರೇ ದೈವಗಳು

ಚಿಗಟೇರಿ ಗ್ರಾಮವು ದೇವಾಲಯಗಳ ಬೀಡು. ಸುಮಾರು ಹದಿನಾರು ದೇವಾಲಯಗಳನ್ನು ಕಾಣಬಹುದು. ಗ್ರಾಮದಲ್ಲಿ ಒಂದೊಂದು ಜಾತಿಯವರು ಒಂದೊಂದು ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಚಿಗಟೇರಿಯಲ್ಲಿ ಎಲ್ಲ ದೈವಕ್ಕಿಂತಲೂ ನಾರದ ಮುನಿಯ ದೇವಾಲಯವೇ ಪ್ರಮುಖವಾದ ದೇವಾಲಯವಾಗಿದೆ. ಇಲ್ಲಿಯ ಜನಪದರು ದೇವರುಗಳ ಸಂಬಂಧವನ್ನು ಕಟ್ಟಿರುವುದು ಹಿಂದಿನ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ದೇವರುಗಳ ಸಂಬಂಧ ಉಳಿದುಕೊಂಡು ಬಂದಿದ್ದರೆ ಅದು ಕೆಳವರ್ಗದವರಿಂದಲೇ ಎನ್ನಬಹುದು.

೬. ೧ ಕೃಷ್ಣ ಮತ್ತು ನಾರಪ್ಪ

ಕೃಷ್ಣನ ವಿಗ್ರಹವು, ಮೂಲ ನಾರದ ಮುನಿಯ ದೇವಾಲಯದಲ್ಲಿದೆ. ಕೃಷ್ಣನ ವಿಗ್ರಹವನ್ನು ಪೂಜಾರಿಕೆಯ ಜಗಳದಲ್ಲಿ ಪುರೋಹಿತರು ದೇವಾಲಯಕ್ಕೆ ತಂದರು. ನಾರಪ್ಪನ ವಿಗ್ರಹದ ಜೊತೆ ಕೃಷ್ಣನ ವಿಗ್ರಹವನ್ನು ಇಟ್ಟು ಪುರೋಹಿತರು ಎರಡು ಮೂರ್ತಿಗಳನ್ನು ಪೂಜೆ ಮಾಡುತ್ತಿದ್ದರು. ಇದಕ್ಕೂ ಮೊದಲು ನಾರಪ್ಪನನ್ನು ಮುನಿಯಪ್ಪ ಎನ್ನುವವ ಪೂಜೆ ಮಾಡುತ್ತಿದ್ದನು. ಒಂದು ದಿನ ಮುನಿಯಪ್ಪ ಕೃಷ್ಣನ ವಿಗ್ರಹವನ್ನು ಹೊರ ಹಾಕಲು ತಯಾರಾದನು. ಅಂದು ರಾತ್ರಿ ನಾರಪ್ಪ, ಮುನಿಯಪ್ಪನ ಕನಸಿನಲ್ಲಿ ಬಂದು ಮುನಿಯಪ್ಪ ಕೃಷ್ಣನ ವಿಗ್ರಹವನ್ನು ಹೊರ ಹಾಕಬೇಡ, ನಮ್ಮಿಬ್ಬರಲ್ಲಿ ಜಗಳವಿಲ್ಲ, ನಾವಿಬ್ಬರು ಒಂದೇ ಆದ್ದರಿಂದ ಇಬ್ಬರನ್ನು ಪೂಜೆ ಮಾಡು. ಪ್ರತಿ ಉತ್ಸವದಲ್ಲಿ ಕೃಷ್ಣನೇ ಭಾಗವಹಿಸುತ್ತಾನೆಂದು ಹೇಳಿ ಮಾಯವಾದನು. ಅಂದಿನಿಂದ ಮುನಿಯಪ್ಪ ಎರಡು ವಿಗ್ರಹವನ್ನು ಪೂಜೆ ಮಾಡುತ್ತ ಬಂದನು. ಕೃಷ್ಣನು ನಾರಪ್ಪನ ಪ್ರತಿ ಕಾರ್ಯದಲ್ಲಿ ಭಾಗವಹಿಸಿಕೊಂಡು ಬಂದನು.[೧] ಗರ್ಭಗುಡಿಯಲ್ಲಿ ಪ್ರತಿನಿತ್ಯವೂ ಪೂಜೆ ನಡೆಯುತ್ತ ಬಂದಿದೆ. ಭಕ್ತರು ಜಾತ್ರೆ ಸಂದರ್ಭದಲ್ಲಿ ಪಲ್ಲಕ್ಕಿಗೆ ನಾರನ್ನು ಮತ್ತು ಹಣ್ಣನ್ನು ಹಾಕುತ್ತಾರೆ. ನಾರಪ್ಪನಿಗೆ ಹಣ್ಣುಕಾಯಿ ಕರ್ಪೂರ ಅಕ್ಕಿ ಮುಂತಾದ ಮೀಸಲು ತರುತ್ತಾರೆ. ಮೀಸಲು ಅಕ್ಕಿಯನ್ನು ಪ್ರತ್ಯೇಕವಾಗಿ ಎಡೆ ಮಾಡಿ ಅರ್ಪಿಸುತ್ತಾರೆ. ಎರಡು ಮೂರ್ತಿಗಳು ಒಂದೇ ಗುಡಿಯಲ್ಲಿರುವುದರಿಂದ ಭಕ್ತರು ಹರಿಹರರಲ್ಲಿ ಭೇದ ಭಾವವಿಲ್ಲ ಎಂದು ಹೇಳುತ್ತಾರೆ ಮತ್ತು ಆರಾಧಿಸುತ್ತಾರೆ.

೬.೨ ಸಾವಕ್ಕ ಮತ್ತು ನಾರಪ್ಪ

ನಾರಪ್ಪನ ತಂಗಿ ಸಾವಕ್ಕ ಎಂದು ತಿಳಿಯಲಾಗಿದೆ. ಸಿರಿಗೇರಿಯ ತಂಡಸ್ಲೋರು ಬೆಡಗಿನವರು, ಸಾವಕ್ಕನ ಆಪ್ತರು, ಕೆಲವು ಭಕ್ತರು, ನಾರಪ್ಪನಿಗೂ ಸಾವಕ್ಕನಿಗೂ ಮದುವೆಯಾಗುತ್ತದೆ ಎನ್ನುತ್ತಾರೆ. ಸಾವಕ್ಕನಿಗೆ ಪ್ರತಿನಿತ್ಯ ಪೂಜೆಗಳು ನಡೆಯುತ್ತವೆ. ನಾರಪ್ಪನನ್ನು ಪೂಜೆ ಮಾಡುವ ಪೂಜಾರಿಗಳೇ ಸಾವಕ್ಕನನ್ನು ಪೂಜೆ ಮಾಡುವುದು. ನಾರಪ್ಪನ ಗುಡಿಗೆ ಬಂದ ಭಕ್ತರು ಸಾವಕ್ಕನ ಗುಡಿಗೂ ಹೋಗಿ ಹಣ್ಣು ಕಾಯಿ ಕೊಟ್ಟು ಪೂಜೆ ಮಾಡಿಸಿಕೊಂಡು ಬರುತ್ತಾರೆ. ಕಾರ್ತಿಕೋತ್ಸವದ ಸಮಯದಲ್ಲಿ ಸಾವಕ್ಕನ ಗುಡಿಯ ಮುಂದೆ ಕಾರ್ತಿಕವನ್ನು ಹಚ್ಚುತ್ತಾರೆ.

ಸಾವಕ್ಕನ ದೇವಸ್ಥಾನವು ಚಿಕ್ಕದಾಗಿದೆ. ಸಾವಕ್ಕನನ್ನು ಸತ್ಯಭಾಮ ಎಂದು ಕರೆಯುತ್ತಾರೆ. ಸಾವಕ್ಕ ಕೃಷ್ಣನ ಹೆಂಡತಿಯೆಂದು ಹೇಳುತ್ತಾರೆ. ಓಕಳಿಯಾದ ನಂತರ ಉತ್ಸವ ಮೂರ್ತಿ ಕೃಷ್ಣ ಮತ್ತು ಸಾವಕ್ಕನಿಗೂ ವಿಜೃಂಭಣೆಯಿಂದ ಮದುವೆ ಮಾಡುತ್ತಾರೆ. ತಂಡಸ್ಗೋರು ಬೆಡಗಿನವರು ಸಾವಕ್ಕನಿಗೆ ತಾಳಿ, ಹೊಸ ಬಟ್ಟೆಗಳು ಹಾಗೆಯೇ ಕೃಷ್ಣನಿಗೂ ಹೊಸ ಬಟ್ಟೆಗಳನ್ನು ತಂದಿರುತ್ತಾರೆ. ಹಿಂದೆ ನಾರಪ್ಪನು ಇವರಿಬ್ಬರ ಮದುವೆ ಮಾಡಿ ದೇವಸ್ಥಾನದ ಮುಂದಿರುವ ಉಯ್ಯಾಲೆ ಕಂಬಕ್ಕೆ ಚೈನು ಕಟ್ಟಿ ಉಯ್ಯಾಲೆಯನ್ನು ಆಡಿಸುತ್ತಿದ್ದನು ಎಂದು ಹೇಳುತ್ತಾರೆ. ಹೀಗೆ ಇಲ್ಲಿಯ ಭಕ್ತರು ಸಾವಕ್ಕನನ್ನು ನಾರಪ್ಪನ ತಂಗಿ ಎಂತಲೂ ಮತ್ತು ಹಿಂದೆ ಸಿರಿಗೆರೆ ಗ್ರಾಮದಿಂದ ಅನೇಕ ಭಕ್ತರ ದೊಡ್ಡ ಗುಂಪೊಂದು ನಾರಪ್ಪನ ಜಾತ್ರೆಗೆ ಬಂದಿದ್ದರು. ಆ ಗುಂಪಿನಲ್ಲಿ ಸಾವಕ್ಕನು ಇದ್ದಳು. ಸಾವಕ್ಕ ನಾರಪ್ಪನ ವೈಭೋಗದ ಜಾತ್ರೆಯನ್ನು ಕಂಡು ಬೆರಗಾಗಿ ಅಲ್ಲಿಯೇ ಒಂದು ಕಂಬಕ್ಕೆ ವರಗಿಕೊಂಡಳು. ಹಾಗೂ ಅಲ್ಲಿಯೇ ಐಕ್ಯಳಾದಳು. ಆದ್ದರಿಂದ ಸಿರಿಗೆರೆ ಗ್ರಾಮದ ಭಕ್ತರು ನಮ್ಮ ಮಗಳನ್ನು ನಾರಪ್ಪನಿಗೆ ಕೊಟ್ಟು, ಮದುವೆ ಮಾಡಿ ಕೊಟ್ಟೆವು ಎಂದೂ ಹೇಳುತ್ತಾರೆ. ಈ ರೀತಿಯ ನಾನಾ ಮುಖದಲ್ಲಿ ನಾರಪ್ಪನಿಗೂ ಸಾವಕ್ಕನಿಗೂ ಸಂಬಂಧವನ್ನು ಕಟ್ಟಲಾಗಿದೆ.

೬. ೩ ಆಂಜನೇಯ (ತೇರು ಹನುಮಪ್ಪ) ಮತ್ತು ನಾರಪ್ಪ

ಊರುಗಳನ್ನು ಕಾಯಲು ಬಂದವನೇ ಆಂಜನೇಯ. ಆಂಜನೇಯನಿರದ ಹಳ್ಳಿಯಿಲ್ಲ ಪ್ರತಿಯೊಂದು ಹಳ್ಳಿಯಲ್ಲಿ ಆಂಜನೇಯನನ್ನು ಕಾಣಬಹುದು. ನಾರಪ್ಪನ ಎದುರುಗಡೆಯೇ ಆಂಜನೇಯನ ಗುಡಿಯಿದೆ. ಪ್ರತಿದಿನವೂ, ಪ್ರತಿ ಶನಿವಾರವೂ ನಾರಪ್ಪನ ಪೂಜಾರಿಗಳೇ ಆಂಜನೇಯನನ್ನು ಪೂಜಿಸುತ್ತಾರೆ. ಜಾತ್ರೆ, ಅಮವಾಸ್ಯೆಯಲ್ಲಿ ಬಂದ ಭಕ್ತರು ಆಂಜನೇಯನಿಗೆ ಪೂಜೆ ಮಾಡಿಸುತ್ತಾರೆ. ಮೂರು ದಿನದ ಉಚ್ಚಯ್ಯದಲ್ಲಿ ಆಂಜನೇಯನ ದೇವಸ್ಥಾನಕ್ಕೆ ಹೋಗಿ ಆಂಜನೇಯನನ್ನು ಪೂಜೆ ಮಾಡಿಕೊಂಡು ಮೂಲ ಸ್ಥಳಕ್ಕೆ ಉಚ್ಚಯ್ಯವನ್ನು ಎಳೆದು ತರುತ್ತಾರೆ. ರಥೋತ್ಸವದ ದಿನ ಬಂದ ಭಕ್ತರೆಲ್ಲರೂ ಆಂಜನೇಯನಿಗೆ ಮಾಲು ಮಾಡಿಸುತ್ತಾರೆ. ರಥೋತ್ಸವವನ್ನು ಎಳೆದುಕೊಂಡು ಹೋದಾಗ ಆ ದಿನವು ಆಂಜನೇಯನಿಗೆ ಪೂಜೆ ಮಾಡಿಸಿಕೊಂಡು, ಸ್ವಲ್ಪ ಹೊತ್ತು ನಿಲ್ಲಿಸಿ ನಂತರ ರಥೋತ್ಸವದ ಮೂಲ ಸ್ಥಳಕ್ಕೆ ಎಳೆದು ತರುತ್ತಾರೆ. ಆಂಜನೇಯನ ಬಗ್ಗೆ ಪ್ರತಿಯೊಬ್ಬರು ಭಯ ಭಕ್ತಿಯಿಂದ ಜಾತಿ ಮತವಿಲ್ಲದೆ ಆರಾಧಿಸುತ್ತಾರೆ.

೬. ೪ ಶೂಲದ ರಾಮೇಶ್ವರ ಮತ್ತು ನಾರಪ್ಪ

ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದ್ದ ದೇವಸ್ಥಾನವು ಬಿದ್ದು ಹೋಗಿದೆ. ಅಲ್ಲಿಯ ವಿಗ್ರಹವನ್ನು ತಂದು ಕೋಟೆಯೊಳಗೆ ದೇವಸ್ಥಾನವನ್ನು ಕಟ್ಟಿಸಿದ್ದಾರೆ. ಇದರ ಪೂಜಾರಿಗಳು ನಾಯಕರು. ಪ್ರತಿದಿನವು ಪೂಜೆ ಮಾಡುತ್ತಾರೆ. ಈ ದೈವದ ವಾರ ಭಾನುವಾರ. ಚಿಗಟೇರಿಯಲ್ಲಿ ನಾರಪ್ಪನ ಯಾವುದೇ ಕಾರ್ಯ ನಡೆಯಲಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಮಾಡುತ್ತಾರೆ. ಹಣ್ಣು ಕಾಯಿ ಮಾಡಿಸುತ್ತಾರೆ. ಮೂಲ ವಿಗ್ರಹವು ಕುದುರೆಯ ಮೇಲೆ ಕುಳಿತಿದೆ. ಬಲಗೈಗಳಲ್ಲಿ ತ್ರಿಶೂಲ ವಜ್ರಾಯುಧವನ್ನು, ಎಡಗೈಗಳಲ್ಲಿ ಶಂಖು, ಕುದುರೆ ಲಗಾಮನ್ನು ಹಿಡಿದಿದೆ.

೬. ೫ ಮಾರಿಕಾಂಬ ಮತ್ತು ನಾರಪ್ಪ

ಜನಪದರು ಗಂಡು ಮತ್ತು ಹೆಣ್ಣು ದೇವತೆಗಳನ್ನು ಅಣ್ಣ ತಂಗಿಯೆಂದೇ ಭಾವಿಸಿರುತ್ತಾರೆ. ಮಾರಿಕಾಂಭ ದೇವಸ್ಥಾನವು ನಾರಪ್ಪನ ಗುಡಿಯ ಹತ್ತಿರದಲ್ಲೆ ಇದೆ. ಬೆಳ್ಳಿ ಮುಖದ ಮೂರ್ತಿಯಿಂದ ಮುಖವನ್ನು ಮಾಡಿಸಿದ್ದಾರೆ. ಈ ದೇವತೆಯನ್ನು ಮ್ಯಾಸ ನಾಯಕರು ಆರಾಧಿಸುತ್ತಾರೆ. ನಾರಪ್ಪನ ಜಾತ್ರೆಯ ಮತ್ತು ಕಾರ್ತಿಕದಲ್ಲಿ ವಿಶೇಷ ಪೂಜೆ ನಡೆಸುತ್ತಾರೆ. ಪ್ರತಿವರ್ಷದ ಕಡೆ ಶ್ರಾವಣದಲ್ಲಿ ಕುರಿಗಳನ್ನು ಬಲಿಕೊಟ್ಟು ಮಾರಮ್ಮನ ಹಬ್ಬ ಮಾಡುತ್ತಾರೆ. ನಾರಪ್ಪನ ಕಾರ್ತಿಕ ಆದ ನಂತರ ಹುಣ್ಣಿಮೆ ದಿವಸ ಕಾರ್ತಿಕೋತ್ಸವವನ್ನು ಆಚರಿಸುತ್ತಾರೆ.

ಮಾರಿಹಬ್ಬದ ದಿವಸ 'ಉಗರ ಹಳ್ಳ'ಕ್ಕೆ ಗಂಗೆಗೆಂದು ಹೋಗಿ ಬರುತ್ತಾರೆ. ಈ ದೇವತೆಗೆ ವಿಶೇಷದಿನಗಳಲ್ಲಿ ಹಾಲು ತುಪ್ಪ ಬಾಳೆಹಣ್ಣಿನಿಂದ ಮಾಡಿದ ಪಂಚಾಭಿಷೇಕದಿಂದ ಪೂಜೆಯನ್ನು ಸಲ್ಲಿಸುತ್ತಾರೆ. ಮಂಗಳವಾರ ಈ ದೇವಿಯ ವಾರವಾಗಿರುತ್ತದೆ.

೬. ೬ ಬನಶಂಕರಿ ಮತ್ತು ನಾರಪ್ಪ

ಬನಶಂಕರಿ ದೇವಿಯನ್ನು ನೇಕಾರರು ಪೂಜಿಸಿ ಆರಾಧಿಸುತ್ತಾರೆ. ಈ ದೇವಸ್ಥಾನವು ೧೯ನೇ ಶತಮಾನದಾಗಿದ್ದು ೧೯೪೬ರಲ್ಲಿ ನವೀಕೃತಗೊಂಡಿದೆ. ಪ್ರತಿವರ್ಷ ಜನವರಿ ೧೪ ಮತ್ತು ೧೫ ರಂದು ಜಾತ್ರೆಯು ನಡೆಯುತ್ತದೆ. ತೇರಿನ ಉತ್ಸವ ಸಾಗುತ್ತದೆ. ಮರುದಿನ ಓಕಳಿ ನಡೆಯುತ್ತದೆ. ನಾರಪ್ಪನ ತೇರಿನ ದಿವಸ ಈ ದೇವರಿಗೆ ವಿಶೇಷವಾದ ಪೂಜೆಯನ್ನು ಮಾಡುತ್ತಾರೆ. ಎಡೆ ಕೊಟ್ಟು, ಹಣ್ಣು ಕಾಯಿ ಮಾಡಿಸಿಕೊಂಡು ಹೋಗುತ್ತಾರೆ. ಬೇರೆ ಒಕ್ಕಲಿನವರು ನಾರಪ್ಪನ ಗುಡಿಗೆ ಬರುವುದಿಲ್ಲ. ಆದ್ದರಿಂದ ಬನಶಂಕರಿಗೆ ಎಡೆಕೊಟ್ಟು, ನಾರಪ್ಪನಿಗೆ ಹಣ್ಣು ಕಾಯಿ ತರುತ್ತಾರೆ.

೬. ೭ ಈರಣ್ಣ ಅಥವಾ ವೀರಭದ್ರ ಮತ್ತು ನಾರಪ್ಪ

ಚಿಗಟೇರಿ ಗ್ರಾಮದಲ್ಲಿ ಎರಡನೇ ಪ್ರಮುಖ ದೇವರೆಂದರೆ ಈರಣ್ಣ. ಇದು ಸುಮಾರು ೬೦-೭೦ ವರ್ಷಗಳಲ್ಲಿ ಸ್ಥಾಪನೆಯಾದ ದೇವಸ್ಥಾನವಾಗಿದೆ. ಈ ಗ್ರಾಮದಲ್ಲಿ ಅನೇಕ ಜನರು ಈ ದೇವರಿಗೆ ನಡೆದುಕೊಳ್ಳುತ್ತಾರೆ. ಈ ದೇವರ ಪೂಜೆಯನ್ನು ನಾರಪ್ಪನ ಪೂಜಾರಿಗಳೇ ಪೂಜೆ ಮಾಡುತ್ತಾರೆ. ನಾರಪ್ಪನ ಜಾತ್ರೆ ಸಮಯದಲ್ಲಿ ಈರಣ್ಣನಿಗೆ ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಮತ್ತು ಭಕ್ತರು ಹಣ್ಣುಕಾಯಿಯನ್ನು ಮಾಡಿಸುತ್ತಾರೆ. ಚಿಗಟೇರಿ ಗ್ರಾಮದಲ್ಲಿ ಜಾತ್ರೆ ನಡೆಯುವಾಗ ಜನರೆಲ್ಲರೂ ತಮ್ಮ ಮನೆಯಲ್ಲಿ ಮಾಡಿದ ಹೋಳಿಗೆ, ಹುಗ್ಗಿಯನ್ನು ಎಡೆಗೆ ತಂದು ಹಣ್ಣು ಕಾಯಿಯ ಮಾಲನ್ನು ಮಾಡಿಸಿಕೊಂಡು ಹೋಗುತ್ತಾರೆ. ವಸುಲು ಹುಣ್ಣಿಮೆಯ ಮುಂದೆ ಅಥವಾ ಹಿಂದೆ ಕಾರ್ತಿಕೋತ್ಸವ ಕಾರ್ಯಕ್ರಮವಿರುತ್ತದೆ. ಇದಾದ ಮರುದಿನ ಬೆಳಿಗ್ಗೆ 'ಅಗ್ನಿ' ತುಳಿಯುವ ಕಾರ್ಯದಲ್ಲಿ ಅನೇಕ ಭಕ್ತರು ಅಗ್ನಿಯನ್ನು ತುಳಿಯುತ್ತಾರೆ. ಈರಣ್ಣನನ್ನು ಎರಡು ಸಲ ಮಾತ್ರ ಹೊರ ಹೊರಡಿಸುತ್ತಾರೆ. ಅದರಲ್ಲಿ ಈರಣ್ಣನ ಗುಡ್ಡಕ್ಕೆ ಮತ್ತು ಶಿವನಯ್ಯನ ಕೆರೆಗೆ ಹೋಗಿ ಬರುತ್ತಾರೆ.

೬.೮ ದುರುಗಮ್ಮ ಮತ್ತು ನಾರಪ್ಪ

ಜಾನಪದ ಸಂಸ್ಕೃತಿಯು ಉಳಿದಿರುವುದು ನಿಜವಾಗಿಯೂ ಕೆಳವರ್ಗದ ಜನರಲ್ಲಿ. ದುರುಗಮ್ಮ ಮತ್ತು ಚಾರಿ ದುರುಗಮ್ಮ ಕೇರಿಯ ಜನರ ಆರಾಧ್ಯ ದೇವತೆಗಳಾಗಿದ್ದಾರೆ. ದುರುಗಮ್ಮನ ಗರ್ಭಗುಡಿಯಲ್ಲಿ ದುರುಗಮ್ಮ, ಮರಿಯಮ್ಮ, ಶಂಕ್ರಮ್ಮ ಎಂಬ ಮೂರು ಮೂರ್ತಿಗಳಿವೆ. ಈ ದೇವರುಗಳಿಗೆ ಪ್ರತಿನಿತ್ಯವು ಪೂಜೆ ನಡೆಯುತ್ತದೆ.

ಪ್ರತಿ ಕಾರ್ತಿಕೋತ್ಸವದ ರಾತ್ರಿ ಭಜನೆ ಮತ್ತು ಕೋಲಾಟದ ಕಲೆಗಳಿರುತ್ತವೆ. ನಾರಪ್ಪನ ಜಾತ್ರೆಯ ದಿವಸ ಇವರು ಸಹ ಮಡಿಯಿಂದ ದುರುಗಮ್ಮನನ್ನು ಪೂಜೆ ಮಾಡಿ ಹಣ್ಣು ಕಾಯಿ ಮೀಸಲು ಮಾಡುತ್ತಾರೆ. ದುರುಗಮ್ಮನ ಪಲ್ಲಕ್ಕಿ ಊರೊಳಗೆ ಬಂದಾಗ ನಾರಪ್ಪನ ಗುಡಿಯ ಮುಂದೆ ಪಲ್ಲಕ್ಕಿಯನ್ನು ನಿಲ್ಲಿಸಿ ನಾರಪ್ಪನಿಗೆ ಪೂಜೆ ಮಾಡಿಸಿಕೊಂಡು ಬರುತ್ತಾರೆ. ಇವರು ನಾರಪ್ಪ ಮತ್ತು ದುರುಗಮ್ಮ ಅಣ್ಣ-ತಂಗಿ ಎಂದೇ ಭಾವಿಸಿದ್ದಾರೆ.

೬. ೯ ಇತರೇ ದೈವಗಳು

ಮೈಲಾರಲಿಂಗೇಶ್ವರ : ಮೈಲಾರಲಿಂಗೇಶ್ವರ ದೇವಸ್ಥಾನವು ಪುರಾತನವಾಗಿದ್ದು, ಉತ್ತರಾಭಿಮುಖವಾಗಿದೆ. ಗರ್ಭಗುಡಿಯೊಳಗೆ ಮೈಲಾರಲಿಂಗ ಮತ್ತು ಗಂಗಮಾಳಮ್ಮನ ಮೂರ್ತಿಗಳಿವೆ. ಗರ್ಭಗುಡಿಯ ಮುಂದೆ ನಾಲ್ಕು ಪಾದಗಳಿವೆ. ಆ ಪಾದಗಳ ಸುತ್ತ ನಾಗರ ಹಾವು ಸುತ್ತಿಕೊಂಡಿದೆ. ಈ ದೇವರಿಗೆ ಪ್ರತಿವರ್ಷ ನಾರಪ್ಪನ ಕಾರ್ತಿಕೋತ್ಸವದ ನಂತರ ಕಾರ್ತಿಕೋತ್ಸವ ಜರುಗುತ್ತದೆ.

ಆಂಜನೇಯ : ಈ ದೇವಸ್ಥಾನವು ದಕ್ಷಿಣಾಭಿಮುಖವಾಗಿದ್ದು ಮೈಲಾರಲಿಂಗನ ಗುಡಿಯ ಎದುರುಗಡೆ ಈ ದೇವಸ್ಥಾನವಿದೆ. ಇಲ್ಲಿ ಬಹು ದೊಡ್ಡ ಆಂಜನೇಯನ ಮೂರ್ತಿ ಇದೆ. ಈ ದೇವಾಲಯವು ಪುರಾತನವಾಗಿದೆ. ಊರಲ್ಲಿರುವ ಆಂಜನೇಯ ಮೂರ್ತಿಯು ಪಾಳೆಗಾರರ ಕಾಲದಲ್ಲಿ ಸ್ಥಾಪನೆಯಾಗಿರಬಹುದೆಂದು ಊಹೆ ಮಾಡುತ್ತಾರೆ. ಎರಡು ದೇವರಿಗೂ ಡಿಸೆಂಬರ್ ತಿಂಗಳಲ್ಲಿ ವಿಜೃಂಭಣೆಯಿಂದ ಕಾರ್ತಿಕೋತ್ಸವವನ್ನು ಮಾಡುತ್ತಾರೆ. ಆಂಜನೇಯನ ಪ್ರತಿ ಕಾರ್ಯದಲ್ಲಿ ಊರಿನ ಎಲ್ಲ ಜನರು ಭಾಗವಹಿಸುತ್ತಾರೆ ಹಾಗೂ ನಡೆದುಕೊಳ್ಳುತ್ತಾರೆ.

ಚಾರಿ ದುರುಗಮ್ಮ : ಇದು ದುರುಗಮ್ಮನ ದೇವಸ್ಥಾನದ ಮುಂಭಾಗದಲ್ಲೇ ಇದೆ. ಗರ್ಭಗುಡಿಯೊಳಗೆ ಕೇಲಿನ ಮೇಲೆ ಕಂಚಿನ ಮುಖವಿದ್ದು, ಇದನ್ನೆ ದೇವರೆಂದು ಆರಾಧಿಸುತ್ತಾರೆ. ಪ್ರತಿ ಮೂರು ವರ್ಷಕ್ಕೆ ಜನವರಿ ತಿಂಗಳಲ್ಲಿ ಬ್ಯಾಟಿ ಹಬ್ಬವನ್ನು ಆಚರಣೆ ಮಾಡುತ್ತಾರೆ. ಗಂಗೆಗೆಂದು ಚಾರ್ಯಮ್ಮ ಚಿಕ್ಕೇರಿ ಹಳ್ಳಕ್ಕೆ ಕರೆದುಕೊಂಡು ಹೋಗಿ ಬರುತ್ತಾರೆ. ಈ ದೇವರಿಗೂ ಪ್ರತಿ ಹಬ್ಬದಲ್ಲೂ ಭಜನೆ, ಕೋಲಾಟ, ಸೋಬಾನ ಪದ ಮುಂತಾದ ಕಾರ್ಯಕ್ರಮಗಳನ್ನು ಮಾಡುತ್ತಾರೆ. ದೇವರ ಹಬ್ಬ ಎರಡು ದಿವಸ ಮಾತ್ರ ಇರುತ್ತದೆ. ಮಂಗಳವಾರವು ಈ ದೇವರ ವಾರವಾಗಿರುತ್ತದೆ. ಕೇರಿಯ ಹರಿಜನರು ಮಾತ್ರ ಚಾರಿ ದುರುಗಮ್ಮನಿಗೆ ಸೇವೆ ಸಲ್ಲಿಸುತ್ತಾರೆ. ಚಾರ್ಯಮ್ಮ ಸಿಂಗಟಾಲೂರಿನಿಂದ ಬಂದಿದ್ದಾಳೆ ಎಂಬ ಕಲ್ಪನೆಯನ್ನು ಭಕ್ತರು ದಟ್ಟವಾಗಿ ನಂಬಿದ್ದಾರೆಂಬುದು

ತಿಳಿದು ಬಂದಿದೆ. ಪಂಚಮಿ ಮತ್ತು ಸುಗ್ಗಿಯ ಕಾಲದಲ್ಲಿ ಚಾರ್ಯಮ್ಮನನ್ನು ಚಿಗಟೇರಿಯ ತುಂಬ ಸುತ್ತಿಸಿಕೊಂಡು ಬರುತ್ತಾರೆ. ಈ ಸಂದರ್ಭದಲ್ಲಿ ಪಲ್ಲಕ್ಕಿಯ ಮುಂದೆ ಹಲಗೆಯವರು ಹಿಂದೆ ಸೋಬಾನೆ ಹೇಳುವ ಹೆಂಗಸರು ಇರುತ್ತಾರೆ.

ಊರಮ್ಮ : ಈ ದೇವಾಲಯವು ಚಿಗಟೇರಿ ಕೋಟೆಯ ಮಧ್ಯಭಾಗದಲ್ಲಿರುವ ದೇವಾಲಯವಾಗಿರುತ್ತದೆ. ಊರಮ್ಮ ಕೋಟೆಯ ಜನಕ್ಕೆಲ್ಲ ಆದಿಶಕ್ತಿಯಾಗಿದ್ದಾಳೆ. ಪ್ರತಿವರ್ಷವು ಕಾರ್ತಿಕೋತ್ಸವವಿರುತ್ತದೆ. ಮತ್ತು ಪಂಚಮಿಯ ದಿನ ಭಕ್ತರು ಹಣ್ಣು ಹೂವು ಕೊಟ್ಟು ಹೋಗುತ್ತಾರೆ. ಮತ್ತು ಸಣ್ಣ ಮಕ್ಕಳಿಗೆ ಕಾಯಿಲೆಗಳು ಕಾಣಿಸಿಕೊಂಡಾಗ ಊರಮ್ಮನಿಗೆ ಪೂಜೆ ಮಾಡಿಸುವ ಪದ್ಧತಿ ಬೆಳೆದು ಬಂದಿದೆ.

ಗಾಳಿ ದುರುಗಮ್ಮ : ಇದು ಊರ ಹೊರಗೆ ಹರಿಜನರ ಕೇರಿಯ ಮುಂದೆ ಈ ದೇವತೆ ನೆಲೆಸಿದ್ದಾಳೆ. ಈ ದೇವಾಲಯವು ಉತ್ತಾರಾಭಿಮುಖವಾಗಿದೆ. ಈ ದೇವಸ್ಥಾನವು ಪುರಾತನವಾಗಿದೆ. ಗಾಳಿ ದುರುಗಮ್ಮನಿಗೂ ಸಹ ಕಾರ್ತಿಕೋತ್ಸವ ಮತ್ತು ಪಂಚಮಿಯ ದಿವಸ ಹೂವು, ಹಣ್ಣು ಕೊಡುತ್ತಾರೆ. ಪ್ರತಿವರ್ಷ ಸುನೇವು ಮಾಡುತ್ತಾರೆ.

ರಾಮಲಿಂಗೇಶ್ವರ ದೇವಸ್ಥಾನ : ಈ ದೇವಾಲಯವು ಸಂಪೂರ್ಣ ಊರ ಹೊರಗಡೆ ಇದೆ. ಇದು ಪೂರ್ವಾ ಭಿಮುಖವಾಗಿದ್ದು ಗರ್ಭಗುಡಿಯೊಳಗೆ ಬಹು ದೊಡ್ಡ ಲಿಂಗವಿದೆ. ಗರ್ಭಗುಡಿಗೆ ನಾಲ್ಕು ಕಂಬಗಳಿದ್ದು ಸುತ್ತ ಐದ್ಯೆದು ಕಲ್ಲಿನಿಂದ ನಿರ್ಮಾಣವಾಗಿದೆ. ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವ ದೇಗುಲವಾಗಿದ್ದು, ಎಡಭಾಗದಲ್ಲಿ ಗಗ್ಗರವಿದೆ. ಲಿಂಗದ ಎದುರು ದೊಡ್ಡದಾದ ಬಸವನ ವಿಗ್ರಹವಿದೆ. ಹಿಂದೆ ಇದು ಬಹು ದೊಡ್ಡ ದೇಗುಲವಾಗಿತ್ತು. ಶಿವನಯ್ಯನ ಕಾಲದಲ್ಲಿ ಬಸವನ ವಿಗ್ರಹದ ಮೇಲಿರುವ ಛಾವಣಿಯನ್ನು ಕೆಡವಿ ಚಿಗಟೇರಿ ಗ್ರಾಮದ ಒಳಗೆ ಬಾವಿಯನ್ನು ಕಟ್ಟಿಸಿದ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವುದನ್ನು ತಿಳಿಯಲಾಗಿದೆ.

ಗರ್ಭಗುಡಿಯ ಬಾಗಿಲಲ್ಲಿ ಮತ್ತು ಹೊರಬಾಗಿಲು ಮೇಲೆ ಗಜಲಕ್ಷ್ಮಿಯ ಚಿತ್ರಗಳಿವೆ. ಬಾಗಿಲ ಎಡ, ಬಲಕ್ಕೆ ಜಯ ವಿಜಯರ ವಿಗ್ರಹಗಳಿವೆ. ಹೊರಗಡೆ ನವಗ್ರಹವಿರುವ ಕಲ್ಲಿದೆ. ಅನೇಕ ಸರ್ಪಗಳ ವಿಗ್ರಹಗಳಿವೆ. ಇತ್ತೀಚಿನ ದಿನಗಳಲ್ಲಿ ನಾರಪ್ಪ ದೇವರು ದಸರಾ ಹಬ್ಬದ ದಿವಸ ಬನ್ನಿ ಮುಡಿಯಲಿಕ್ಕೆ ಇದೇ ದೇವಾಲಯಕ್ಕೆ ಬರುತ್ತಾರೆ.

ಮಲ್ಲಿಕಾರ್ಜುನ ಲಿಂಗ : ಇದು ಸಣ್ಣ ಗುಡಿಯಾಗಿದ್ದು, ಗರ್ಭಗುಡಿಯೊಳಗೆ ಮಲ್ಲಿಕಾರ್ಜುನನ ಲಿಂಗವಿದೆ. ನಾರಪ್ಪನ ಗುಡಿಯ ಹಿಂದೆ ಇದ್ದು ದಕ್ಷಿಣ ದಿಕ್ಕಿಗೆ ಇದೆ. ಇದು ಕೂಡ ಚಾಲುಕ್ಯರ ಕಾಲದ ದೇವಾಲಯವಾಗಿದೆ.

ಈಶ್ವರ ಲಿಂಗ : ಈ ದೇವಾಲಯವು ಪುರಾತನವಾದುದಾಗಿದೆ. ಇಲ್ಲಿ ಗರ್ಭಗುಡಿಯೊಳಗೆ ಎರಡು ಲಿಂಗ, ಎರಡು ನಂದಿಗಳು ಇವೆ. ಪ್ರತಿವರ್ಷ ಕಾರ್ತಿಕವನ್ನು ಹಚ್ಚುತ್ತಾರೆ. ಇದು ಕೋಟೆಯಲ್ಲಿದ್ದು, ಪೂರ್ವಾಭಿಮುಖವಾಗಿದೆ.

ಬೀದಿ ಬಸವಣ್ಣ : ಈ ದೇವಾಲಯವು ಉತ್ತರಾಭಿಮುಖವಾಗಿದ್ದು ೬೦ ವರ್ಷದ ಹಿಂದಿನ ದೇಗುಲವಾಗಿದೆ. ಈ ದೇಗುಲದಲ್ಲಿ ಎರಡು ನಾಗಪ್ಪನ ವಿಗ್ರಹಗಳು ಇವೆ. ಇದು ರಸ್ತೆ ಪಕ್ಕದಲ್ಲೇ ಇರುವುದರಿಂದ ಬೀದಿ ಬಸವಣ್ಣ ಎಂದು ಕರೆಯುತ್ತಾರೆ.

ಪ್ರತಿವರ್ಷ ಕಾರ್ತಿಕೋತ್ಸವ ನಡೆಯುತ್ತದೆ. ನಾರಪ್ಪನ ಜಾತ್ರೆಯ ಕಾರ್ಯದ ವೇಳೆಯಲ್ಲಿ ನಾಲ್ಕು ದಿನದ ಉತ್ಸವದ ಕೊನೆಯ ದಿನ ಉಚ್ಚಯ್ಯವನ್ನು ಬೀದಿ ಬಸವಣ್ಣನ ದೇಗುಲದ ಹತ್ತಿರಕ್ಕೆ ಎಳೆದುಕೊಂಡು ಬಂದು, ಬಸವಣ್ಣಗೆ ಪೂಜೆ ಮಾಡಿಕೊಂಡು ವಾಪಸ್ಸು ಹೋಗುತ್ತಾರೆ.

ಬೀರೇಶ್ವರ : ಈ ದೈವವು ಕುರುಬ ಜನಾಂಗದ ಆರಾಧ್ಯ ದೈವವಾಗಿದೆ. ಪ್ರತಿವರ್ಷವೂ ಕಾರ್ತಿಕೋತ್ಸವ ನಡೆಯುತ್ತದೆ. ಮತ್ತು ಪ್ರತಿನಿತ್ಯ ಪೂಜೆ ಪುನಸ್ಕಾರಗಳು ನಡೆಯುತ್ತವೆ.

ಬಳ್ಳಾರಿ ದುರುಗಮ್ಮ : ಈ ದೇವಸ್ಥಾನವು ಬಂಡೆಯಲ್ಲಿ ಒಡಮೂಡಿದ್ದಾಳೆಂದು ಭಾವಿಸಿಕೊಂಡಿದ್ದಾರೆ. ಈ ದೇವರನ್ನು ಚೆಲವಾದಿ ಜನಾಂಗದವರು ಆರಾಧಿಸುತ್ತಾರೆ. ಈ ದೇವರಿಗೆ ಪ್ರತಿವರ್ಷ ಕಾರ್ತಿಕವನ್ನು ಹಚ್ಚುತ್ತಾರೆ. ಮತ್ತು ಹಬ್ಬ ಹುಣ್ಣಿಮೆಗಳಲ್ಲಿ ಈ ಜನಾಂಗದವರೆ ಪೂಜೆಮಾಡುತ್ತ ಬಂದಿರುವುದನ್ನು ಗಮನಿಸಲಾಗಿದೆ.

ಹೀಗೆ ಈ ಮೇಲಿನ ವಿಷಯಗಳ ಆಧಾರದಿಂದ ನಾರಪ್ಪ ದೇವರಿಗೂ ಮತ್ತು ಇತರ ದೈವಗಳಿಗೂ ಯಾವುದಾದರೂ ಒಂದು ಸಂದರ್ಭದಲ್ಲಿ ಎಲ್ಲಾ ದೈವಗಳು ಮುಖಾ ಮುಖಿಯಾಗುವುದನ್ನು, ಕ್ಷೇತ್ರಕಾರ್ಯದ ಮೂಲಕ ಅರಿಯಲಾಯಿತು. ಹೀಗಾಗಿ ಮಾಹಿತಿ ಆಧಾರಿತ ವಿಷಯಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಒಟ್ಟಿನಲ್ಲಿ ನಾರಪ್ಪನಿಗೂ ಇತರ ದೇವರಿಗೂ ಒಂದಿಲ್ಲೊಂದು ಸಂಬಂಧವಿದೆ ಎಂಬುದು ಸ್ಪಷ್ಟವಾಗುತ್ತದೆ.

ಅಧ್ಯಾಯ - ೭

ನಾರಪ್ಪನ ಕುರಿತ ಸಾಹಿತ್ಯ

೭. ೧ ಗಾದೆಗಳು

೭. ೨ ಐತಿಹ್ಯಗಳು

೭. ೩ ಕೃತಿಗಳು

೭.೪ ಹಾಡುಗಳು

ಒಂದು ವಿಷಯಕ್ಕೆ ಸಂಬಂಧಿಸಿದ ಸ್ಥಳೀಯ ಜನರ ಬಾಯಿಂದ ತಿಳಿಯುವ ಹಾಡು, ಗಾದೆ, ಕಥೆ, ಐತಿಹ್ಯ ಮುಂತಾದವುಗಳನ್ನು ಸಾಹಿತ್ಯ ಎಂದು ಕರೆಯುತ್ತೇವೆ. ಇಂತವುಗಳಿಂದ ಗ್ರಾಮೀಣ ದೇವತೆಗಳ ಚರಿತ್ರೆಯನ್ನು ಸ್ಥಳೀಕರು ಕಟ್ಟಿಕೊಂಡಿರುತ್ತಾರೆ. ಹೀಗೆ ಕಟ್ಟಿಕೊಂಡ ಸಾಹಿತ್ಯದ ನಂಬಿಕೆಯಿಂದಲೇ ದೇವತೆಯ ಚರಿತ್ರೆಯನ್ನು ಬೆಳೆಸುತ್ತಾರೆ. ಸಾಹಿತ್ಯವನ್ನು ಭಿನ್ನ ಭಿನ್ನವಾಗಿ ಕಟ್ಟಿಕೊಂಡು ಭಿನ್ನಭಿನ್ನವಾಗಿ ಹೇಳುತ್ತಾರೆ. ಹೀಗೆ ಪ್ರದೇಶದಿಂದ ಪ್ರದೇಶಕ್ಕೆ ದೇವತೆಗಳಿಂದ ದೇವತೆಗಳಿಗೆ ವಿಧ ವಿಧವಾದ ಸಾಹಿತ್ಯವನ್ನು ಕಾಣಬಹುದು.

ಚಿಗಟೇರಿ ನಾರಪ್ಪನಿಗೂ ತನ್ನದೇ ಆದ ಸಾಹಿತ್ಯವನ್ನು ಬೆಳೆಸಿಕೊಂಡು ಬಂದಿದೆ. ಭಕ್ತ ಸಮೂಹ ಕೂಡ ನಾರಪ್ಪನ ಸಾಹಿತ್ಯವನ್ನು ಉಳಿಸಿಕೊಂಡು ಬಂದಿದ್ದಾರೆ. ಈ ದೈವದ ಬಗ್ಗೆ ತಮ್ಮದೇ ಆದ ನಂಬಿಕೆಗಳನ್ನು ಬೆಳೆಸಿಕೊಂಡಿದ್ದಾರೆ.

೭. ೧ ಗಾದೆಗಳು

'ಊಟಕ್ಕೆ ಉಪ್ಪಿನಕಾಯಿ ಹೇಗೋ, ಹಾಗೆ ಮಾತಿಗೆ ಗಾದೆ ಅವಶ್ಯಕ' ಜನಪದರ ಮಾತುಗಳಲ್ಲಿ ಗಾದೆಗಳೇ ಮುಖ್ಯವಾಗುತ್ತವೆ. ಸಾಹಿತ್ಯದ ಪ್ರಕಾರಗಳಲ್ಲಿ ಗಾದೆಯೂ ಒಂದು ವಿಶಿಷ್ಟ ಕಲಾ ವರ್ಗಕ್ಕೆ ಸೇರಿದುದೆ ಆಗಿದೆ. ಮನುಷ್ಯನ ಅನುಭವದ ಸೆಲೆಯೇ ಈ ಗಾದೆ ಎನ್ನಬಹುದು. ಸಾಹಿತ್ಯ ಪ್ರಕಾರಗಳಾದ ಒಗಟು, ಕಥೆ, ಗೀತೆ, ಲಾವಣಿ, ಐತಿಹ್ಯ ಇವೆಲ್ಲಕ್ಕಿಂತಲೂ ಹೆಚ್ಚು ಜನಪ್ರಿಯವಾದುದು ಗಾದೆ ಆಗಿದೆ. ಅನುಭವದ ಸಾಂದ್ರತೆಗೆ ವಸ್ತು ವೈವಿಧ್ಯತೆಗೆ ಸಂಸ್ಕೃತಿ ಸಂಪನ್ನತೆಗೆ ವಿಚಾರ ವೈಭವಕ್ಕೆ ಹೆಸರಾದಂತಿದೆ. ಗಾದೆಯೂ ಜನಸಾಮಾನ್ಯರ ಬದುಕು ಭಾಷೆಗಳಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡಿರುವುದು ಮಾತ್ರವಲ್ಲದೆ ಅದಕ್ಕೆ ಶಕ್ತಿಯನ್ನು, ಸಂಪನ್ನತೆಯನ್ನು ತಂದುಕೊಟ್ಟಿದೆ. ಜನಪದರ ಬದುಕಿನಲ್ಲಿ ಅಗತ್ಯವಾಗಿ ಗಾದೆಗಳು ಬೇಕು. ಯಾವುದೇ ಸಂದರ್ಭದಲ್ಲಿ ಮಾತಾಡಿದರೂ ಗಾದೆಗಳಿಂದಲೇ ಪ್ರಾರಂಭಿಸುತ್ತಾರೆ. ಗಾದೆ ಜನಸಾಮಾನ್ಯರ ಸೃಷ್ಟಿ, ಹೇಗೋ ಹಾಗೆಯೇ ಅವರ ಮಾತಿಗೆ ಗಾದೆಯು ಅತಿ ಅವಶ್ಯಕ ಎನಿಸುತ್ತದೆ. ಹಿರಿಯರ ಅನುಭವದ ಪ್ರಕಾರ 'ವೇದ ಸುಳ್ಳಾದರು ಗಾದೆ ಸುಳ್ಳಾಗದು' ಎಂಬುದನ್ನು ಅನುಭವದಿಂದ ಹೇಳಿದ್ದಾರೆ. ಸಮಾಜದಲ್ಲಿ ಅನೇಕ ಬಗೆಯ ಗಾದೆಗಳನ್ನು ಕಾಣುತ್ತೇವೆ. ಜನಪದರ ಪ್ರತಿಯೊಂದು ಮಾತಿಗೂ ಗಾದೆಗಳ ಬಳಕೆಯನ್ನು ಗಮನಿಸಬಹುದು.

ನಾರಪ್ಪನಿಗೆ ಸಂಬಂಧಿಸಿದ ಹೆಚ್ಚು ಗಾದೆಗಳು ಎಲ್ಲೆಂದರಲ್ಲಿ ಸಿಗುವ ಗಾದೆಯಲ್ಲ. ಇದು ಎಲ್ಲರ ಮನಸ್ಸನ್ನು ಆಶ್ಚರ್ಯ ಪಡಿಸುತ್ತದೆ. ನಾರಪ್ಪನ ಬಗ್ಗೆ ಸಿಕ್ಕಿರುವ ಗಾದೆಗಳು ಎರಡೇ ಎರಡು. ನಾಮದ ಹಿನ್ನೆಲೆಯಲ್ಲಿ ಭಕ್ತರು ಅನೇಕ ಗಾದೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಅವುಗಳನ್ನು ಇಲ್ಲಿ ಪ್ರಸ್ತಾಪಿಸಿಲ್ಲ.

* ಚಿಗಟೇರಿಯಂಥ ಊರಿಲ್ಲ
  ನಾರಪ್ಪ ಎಂಬ ದೇವರಿಲ್ಲ
* ಒಲಿದರೆ ನಾರಪ್ಪ
  ಮುನಿದರೆ ಭೀಮಪ್ಪ

ಈ ತರಹದ ಗಾದೆಗಳು ಅನೇಕ ಭಕ್ತರ ಬಾಯಿಯಲ್ಲಿ ಚಾಲ್ತಿಯಲ್ಲಿದೆ. ಹಾಗೆಯೇ ನಂಬಿಕೊಂಡಿದ್ದಾರೆ.

೭. ೨ ಐತಿಹ್ಯಗಳು

"ಐತಿಹ್ಯ ಪದವನ್ನು Legend ಎಂಬುದಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ. ಲೆಜೆಂಡ್ ಮೂಲತಃ ಲ್ಯಾಟಿನ್ ಪದವಾಗಿದೆ. ಇಲ್ಲಿ ಇದಕ್ಕೆ 'Things to be Read' ಎಂಬ ಅರ್ಥವಿದೆ. ಫ್ರೆಂಚ್ ಭಾಷೆಯಲ್ಲಿ ಇದೆ ಅರ್ಥ ಉಳಿದು ಬೆಳೆದುಕೊಂಡು ಬಂದಿದೆ. ಇವು ಪ್ರಾರ್ಥನಾ ಮಂದಿರಗಳಲ್ಲಿ ಪಠಣ ಮಾಡಬಹುದಾದ ವಿಷಯಗಳಾಗಿದ್ದವು. ಚಾರಿತ್ರಿಕವಾಗಿ ಈ ಲೆಜೆಂಡ್ ಪದದ ಅರ್ಥ ಒಂದೇ ರೀತಿಯಾಗಿ ಉಳಿದಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಜಾನಪದ ಅಧ್ಯಯನ ಬೆಳೆದು ಬಂದಂತೆ ಅದರ ಅರ್ಥದಲ್ಲಿ ವ್ಯತ್ಯಾಸವಾಗತೊಡಗಿತು. ೧೯-೨೦ನೇ ಶತಮಾನದ ಹೊತ್ತಿಗೆ ಲೆಜೆಂಡ್ ಪದವು 'ಪರಂಪರೆಯಿಂದ ಬಂದದ್ದು' ಎಂಬ ವಿಶಾಲಾರ್ಥದಲ್ಲಿ ಬಳಕೆಯಾಗಿರಬೇಕು".

"ಕಿವಿಯಿಂದ ಕಿವಿಗೆ ಹರಿದು ಬಂದಿರುವ ಮತ್ತೊಂದು ಜನಪ್ರಿಯವೂ, ನಂಬುವಂತೆಯೂ ಇದ್ದಾಗ ಅದನ್ನು ಜನರು ಐತಿಹ್ಯವೆಂದು ಕರೆಯುತ್ತಾರೆ. ಸತ್ಯದ ಶೋಧಕ್ಕೆ ಇದು ಒಂದು ಪ್ರಯಾಣವಾಗಿದೆ. ಐತಿಹ್ಯಕ್ಕೆ ಸಂಭಾವ್ಯ ಅಂಶಗಳು ಮೇಲಿಂದ ಮೇಲೆ ಸೇರುತ್ತಿದ್ದು ಇದರ ಮೂಲ ಸತ್ಯ ಪೂರ್ತಿ ನಾಶವಾಗುವುದಿಲ್ಲ. ಐತಿಹ್ಯದ ನಿರೂಪಕ ಕೊಡುವ ಭೌತಿಕ ಆಧಾರವು ಕಣ್ಣೆದುರಲ್ಲಿ ಇರುತ್ತವೆ. ಆ ಆಧಾರಕ್ಕೂ, ನಿರೂಪಣೆಗೂ, ವೈಜ್ಞಾನಿಕ ಸಂಬಂಧ ಇರುವುದಿಲ್ಲ. ಸುಸಂಬದ್ಧ ತರ್ಕ ಮಾತ್ರ ಇರುತ್ತದೆ".[೨]

ಮೂಲಾಧಾರಗಳು ಸಿಗದಿದ್ದಾಗ ಸ್ಥಳೀಯ ಚರಿತ್ರೆಯು ಐತಿಹ್ಯದ ಮೊರೆ ಹೋಗುವ ಅನಿವಾರ್ಯತೆ ಇದೆ. ಐತಿಹ್ಯಗಳನ್ನು ಸಂಪೂರ್ಣ ಸತ್ಯವೆಂದು ಹೇಳಲಾಗದು, ಸುಳ್ಳು ಎಂದು ಹೇಳಲಾಗದು. ಎರಡರ ಮಧ್ಯೆ ಇರುವುದೇ 'ಐತಿಹ್ಯ' ಎಂದು ಹೇಳಬಹುದು.

ಉತ್ತರ ಭಾರತದಿಂದ ಶತ್ರುಗಳ ಕಾಟಕ್ಕೆ ಬೇಸತ್ತು ದಕ್ಷಿಣದ ಕಡೆ ಪಯಣ ಬೆಳೆಸಿದ ಸಾಮಾನ್ಯ ವ್ಯಕ್ತಿ ಭೈರಪ್ಪ ಆಗಿದ್ದಾನೆ. ಸಿರಿಗೇರಿ, ಹುಲ್ಲೂರು, ಜಾಮಕೊಂಡ ಭಾಗದಲ್ಲಿ ನಾರಪ್ಪನ ಇನ್ನೊಂದು ಹೆಸರು ಭೈರಪ್ಪ ಎಂಬುದಿದೆ. ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದ ಕಾಲ ೧೧೬೧ ಎಂದು ಹೇಳುತ್ತಾರೆ. ಶ್ರೀ ನಾರಮ್ಮುನಿ (ತಂಡಸ್ಲೋರ) ಚಿಗಟೇರಿ ಕ್ಷೇತ್ರದಲ್ಲೂ ಶ್ರೀ ದ್ಯಾಮಲಾಂಬ (ಸಾವಂತ್ಲೋರ) ಗುಂಟನೂರಿನಲ್ಲೂ ಶ್ರೀ ದೇವಿ ಹೊಸೂರಮ್ಮ (ಅಡಿಕೆಲೇರು) ಕೃಷ್ಣ ನದಿ ಸಮೀಪವೂ ಉತ್ಸವಾಂಬ ಉಚ್ಚಂಗಿ ದುರ್ಗದಲ್ಲೂ ನೆಲೆಸಿದ್ದಾರೆ. ಈ ದೊಡ್ಡ ಗುಂಪೆ ಉತ್ತರದಿಂದ ದಕ್ಷಿಣ ಭಾಗಕ್ಕೆ ಪಯಣ ಬೆಳೆಸಿದ್ದಾರೆ ಎಂಬುದು ತಿಳಿಯುತ್ತದೆ.

ಹಿಂದೆ ಬಿಜಾಪುರವನ್ನೊಳಗೊಂಡ ವಿಶಾಲವಾದ ಪ್ರದೇಶವು ಷಾಹಿ ರಾಜ್ಯಗಳಾಗಿ ವಿಂಗಡಿಸಲ್ಪಟ್ಟಿದ್ದವು. ಈ ಷಾಹಿ ರಾಜ್ಯಗಳಿಗೆ ಇನ್ನೂ ಹಲವಾರು ಪ್ರದೇಶಗಳೂ ಸೇರಿಕೊಂಡು ವಿದರ್ಭಪುರವೆಂಬ ದೊಡ್ಡ ಸಾಮ್ರಾಜ್ಯವಾಗಿತ್ತು. ಈ ಪ್ರದೇಶವನ್ನು ಶೂರನಾದ ನಾಡಗೌಡರು ಎಂದರೆ ಪಾಳೆಯಗಾರರು ಆಳುತ್ತಿದ್ದರು. ಅವರು ೧೦೮ ಪಾಳ್ಯಗಳನ್ನಾಗಿ ವಿಭಾಗಿಸಿಕೊಂಡು ಒಂದೊಂದು

ಪಾಳ್ಯಕ್ಕೆ ಒಬ್ಬೊಬ್ಬ ನಾಡಗೌಡನನ್ನು ನೇಮಿಸಿಕೊಂಡು ಆಳುತ್ತಾ ಬಂದರು. ಒಂದೊಂದು ಪಾಳ್ಯಗಳಲ್ಲಿ ಸುಮಾರು ನೂರು, ಇನ್ನೂರು ಗ್ರಾಮಗಳು ಇದ್ದವು. ಈ ರೀತಿಯ ಪಾಳ್ಯೆಗಾರರ ಸಂಖ್ಯೆ ೩೪೦ ಇತ್ತು. ಈ ಪಾಳ್ಯ ಬಣಗಳ ಮುಖ್ಯಸ್ಥರ ಹೆಸರೇ ಬೆಡಗುಗಳಾಗಿ ರೂಪಗೊಂಡವು. ಈ ಬೆಡಗುಗಳೇ ಒಂದೊಂದು ಗುಂಪಿನಲ್ಲಿ ಒಂದೊಂದು ಊರಿನಲ್ಲಿ ನೆಲೆಸಿರುವುದನ್ನು ನಮ್ಮ ಸಮಾಜದಲ್ಲಿ ಇಂದಿಗೂ ಗುರುತಿಸಬಹುದು.

ಬೆಡಗಿನ ಪಾಳೆಗಾರರೆಲ್ಲ ಒಟ್ಟಾಗಿ ಸೇರಿ ಒಬ್ಬ ಅಧ್ಯಕ್ಷರನ್ನು ಆಯ್ಕೆ ಮಾಡಿ, ಆತನ ಆಜ್ಞೆಯ ಮೇರೆಗೆ ಪ್ರಜಾ ಪರಿಪಾಲನೆ ಮಾಡುತ್ತಾ ಮತ್ತು ಪ್ರತಿವರ್ಷವೂ ಒಬ್ಬೊಬ್ಬ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅವರ ಮಾರ್ಗದರ್ಶನದಲ್ಲಿ ವ್ಯವಸಾಯ ಇನ್ನಿತರ ಕೆಲಸಗಳಲ್ಲಿ ದುಡಿದು ಐಶ್ವರ್ಯವಂತರಾಗಿ, ಶ್ರೀಮಂತರಾಗಿ ತಮ್ಮ ರಕ್ಷಣೆಗೆ ಸೈನ್ಯವನ್ನು ಕಟ್ಟಿಕೊಂಡು ನೆಮ್ಮದಿಯ ಜೀವನವನ್ನು ಕಳೆಯುತ್ತಿದ್ದರು.

ಈ ಪಾಳ್ಯೆಗಳಿಗೆ ರಾಜ ಸಿದ್ದಲಿಂಗನಗೌಡ ಅಧ್ಯಕ್ಷರಾದ ಸಮಯದಲ್ಲಿ ಈತನ ತಮ್ಮನಾದ ಮಲ್ಲನಗೌಡನ ಮಗಳು ಸುವರ್ಣಾದೇವಿಯನ್ನು ದೆಹಲಿಯ ರಾಜನಾದ ಸುರತಳನ ಬೇಡಿಕೆಯಂತೆ ಆತನಿಗೆ ಕೊಟ್ಟು ಮದುವೆ ಮಾಡಿದ್ದರು. ಕೆಲವು ದಿನಗಳಲ್ಲಿ ಸುವರ್ಣಾದೇವಿಯು ಗಂಡುಮಗನಿಗೆ ಜನ್ಮವಿತ್ತಳು. ನಾಮಕರಣಕ್ಕೆ ಪಾಳೆಗಾರರ ಅಧ್ಯಕ್ಷರನ್ನು ಕರೆಸಿಕೊಂಡು ಸನ್ಮಾಸಿದ್ದು ಉಂಟು. ಒಮ್ಮೆ ಸುರತಳ ರಾಜನು ದುಷ್ಟರ ಹೇಳಿಕೆಯನ್ನು ಪಾಲಿಸಿ ರಾಜ್ಯ ವಿಸ್ತರಣೆಯ ಆಸೆಗೊಳಪಟ್ಟು ನೆಂಟರಿಷ್ಟರನ್ನು ಲೆಕ್ಕಿಸದೆಯೇ ಯುದ್ಧ ಮಾಡಿದನು. ಇದರಿಂದ ದುಃಖಿತಳಾದ ಸುವರ್ಣಾದೇವಿಯು ಅಗ್ನಿಗಾಹುತಿಯಾದಳು. ನಾಡಗೌಡರು ದುಃಖದಲ್ಲಿರುವಾಗಲೇ ಗೋವಿಂದ ಗೌಡರ ಮಗಳಾದ, ಸೌಂದರ್ಯವತಿಯಾದ ದ್ಯಾಮಲಾಂಬಳನ್ನು ರಾಣಿಯನ್ನಾಗಿ ಮಾಡಿಕೊಳ್ಳಲು ಒಪ್ಪಿಸಲು ತನ್ನ ಭಟರನ್ನು ಕಳುಹಿಸಿದನು. ಸುರತಳನ ನಡತೆಗೆ ಒಪ್ಪದ ಕಾರಣಕ್ಕಾಗಿ ಇಬ್ಬರ ನಡುವೆ ದೊಡ್ಡ ಯುದ್ಧವೇ ನಡೆಯಿತು. ಯುದ್ಧದಲ್ಲಿ ಅನೇಕ ನಾಡಗೌಡರ ಹತ್ಯಾಕಾಂಡವೇ ನಡೆದುಹೋಯಿತು. ಆ ಯುದ್ಧದಲ್ಲಿ ನಾರಸ್ಮನಿಯ ವಂಶಜರೂ ಸೇರಿಕೊಂಡಿದ್ದರು. ಇಂತಹ ಅನೀತಿಯುತ ರಾಜ್ಯದಲ್ಲಿ ಇರುವುದೇ ಬೇಡವೆಂದು ತಮ್ಮ ಜೊತೆಗಿದ್ದ ಆನೆ, ಕುದುರೆ, ಒಂಟೆ, ಬಂಧು ಬಳಗ, ಎತ್ತು, ಗಾಡಿ, ಮಕ್ಕಳು, ಆಂಜನೇಯ, ಶ್ರೀ ಕೃಷ್ಣ ಮುಂತಾದ ಲಿಂಗಮೂರ್ತಿಗಳೊಡನೆ ಅಶಾಂತಿಯ ವಾತಾವರಣವನ್ನು ತ್ಯಜಿಸಿ ದಕ್ಷಿಣಕ್ಕೆ ತಮ್ಮ ಪ್ರಯಾಣವನ್ನು ಬೆಳೆಸಿದರು.

ಪ್ರಯಾಣ ಹೊರಟ ದೊಡ್ಡ ಗುಂಪಿನಲ್ಲಿ ಶ್ಯಾವಂತ್ಲೋರ ವಂಶದ ನಾಡಗೌಡರಲ್ಲೊಬ್ಬರಾದ ಗೋವಿಂದಗೌಡರ ಮಗಳು ಸುಂದರವತಿಯಾದ ದ್ಯಾಮಲಾಂಬ ಹಾಗೂ ತಂಡಸ್ಲೋರ ಬೆಡಗಿನ ನಿಮ್ಮೀರಾಯರ ಮನೆತನದ ನಾರಸ್ಮನಿ ಹಾಗೂ ಅವನ ತಮ್ಮ ಚಿಕ್ಕ ಭೈರಮೂರ್ತಿ, ತಂಗಿಯಾದ ಸಾವಕ್ಕ, ಉತ್ಸವಾಂಬ, ಹೊಸೂರಮ್ಮ ಮತ್ತು ಇವರೆಲ್ಲರ ಗುರುಗಳಾದ ವಟಸಿದ್ದರು ಮುಂತಾದವರು ಸೇರಿದ್ದರು. ಈ ದೊಡ್ಡ ಗುಂಪು ಗೋದಾವರಿ ನದಿಯನ್ನು ದಾಟಿ ಮುಂದೆ ಸಾಗಿ ಬಂದರು, ಅವರ ಸತತ ಪ್ರಯಾಣದ ನಂತರ ಕೃಷ್ಣಾ ನದಿಯ ಪ್ರಶಾಂತ ವಾತಾವರಣಕ್ಕೆ ಬಂದು ಬೀಡು ಬಿಟ್ಟಿತು. ಇಲ್ಲಿ ತಂಪಾದ ಪ್ರಶಾಂತ ವಾತಾವರಣ ಇರುವುದರಿಂದ ಇವರ ಗುಂಪಿನ ಹೊಸೂರಮ್ಮನಿಗೆ ಮೆಚ್ಚಿಗೆಯಾದುದರಿಂದ ಹೊಸೂರಮ್ಮ ಅಲ್ಲಿಯೇ ನೆಲೆಸಿದಳು. ಆಕೆಯ

ಜೊತೆಯಲ್ಲಿದ್ದ ಗುಂಪು ಮುಂದೆ ಸಾಗಿ ಆನೆಗುಂದಿಯ ರಾಜಭಟರು ವಿಚಾರಿಸಲಾಗಿ ಅಲ್ಲಿಯೇ ಬೀಡುಬಿಟ್ಟರು. ಗೋವಿಂದ ಗೌಡರನ್ನೊಳಗೊಂಡ ಮುಖಂಡರು ಆನೆಗುಂದಿ ರಾಜರ ಬಳಿ ಸಾರಿ ೪ ಸಾವಿರ ವರಹಗಳನ್ನು ಕೊಟ್ಟು ತಾವು ಉತ್ತರ ದೇಶದ ಬಾದಶಹನ ವಿರೋಧಿಗಳಾಗಿ ಆ ನಾಡನ್ನು ಬಿಟ್ಟು ಶಾಂತಿಯುತ ಸಹಬಾಳ್ವೆಯನ್ನರಸಿ ದಕ್ಷಿಣದ ಕಡೆ ಸಾಗಿ ಬಂದೆವು ಎಂದು ಹೇಳಿಕೊಂಡಿದ್ದಾರೆ.

ರಾಜನು ಅವರ ಮಾತನ್ನು ಕೇಳಿ ಸುಪ್ರೀತಗೊಂಡು ದಕ್ಷಿಣದ ಒಳನಾಡುಗಳಲ್ಲಿ ಊರುಕೇರಿಗಳನ್ನು ಕಟ್ಟಿಕೊಂಡು ಜೀವನ ನಡೆಸಲು ಪ್ರಾರಂಭಿಸಿದನು. ರಾಜನ ಸೂಚನೆಯ ಪ್ರಕಾರ ಉಜ್ಜನಿ, ಚಿಗಟೇರಿ, ಉಚ್ಚಂಗಿದುರ್ಗ, ಗಂಟನೂರು, ದೊಡ್ಡೋರಿ ಮುಂತಾದ ಕೃಷಿ ಯೋಗ್ಯ ಫಲವತ್ತಾದ ಪ್ರದೇಶಗಳಲ್ಲಿ ಬೀಡು ಬಿಡುತ್ತಾನೆ. ಹಸು ಕರುಗಳನ್ನು ಸಾಕಿ ಕೃಷಿಯನ್ನು ಪ್ರಮುಖ ವೃತ್ತಿಯನ್ನಾಗಿ ಮಾಡಿಕೊಂಡು, ನೆಮ್ಮದಿಯ ಜೀವನವನ್ನು ಪ್ರಾರಂಭಿಸಿದನು. ವಲಸೆ ಬಂದ ಗುಂಪಿನಲ್ಲಿ ಹರಿಜನರೂ, ಮುಸ್ಲಿಮರೂ ಸೇರಿದ್ದರು. ಕೃಷ್ಣಾ ನದಿಯ ತಟದಲ್ಲಿ ಬೀಡು ಬಿಟ್ಟ ಕಾಲದಲ್ಲಿ ಅಪರಿಮಿತ ಸೌಂದರ್ಯವತಿಯಾದ ದ್ಯಾಮಲಾಂಬಳಿಗೆ ದೆಹಲಿಯಲ್ಲಾದ ಗತಿಯೂ ಈ ರಾಜರಿಂದಲೂ ಒದಗಬಹುದೆಂಬ ಶಂಕೆಯಿತ್ತು. ಆದ್ದರಿಂದ ಕೆಲ ಸಂಗಡಿಗರನ್ನು ಕೂಡಿಕೊಂಡು ಪೂರ್ವದಿಕ್ಕಿಗೆ ಸುಮಾರು ೪ ಕಿಮೀ ಹರಿದಾರಿ ದೂರದ 'ಗದ್ದಲಾಲದಕೆರೆ'ಯ ಪ್ರಶಾಂತ ವಾತಾವರಣದಲ್ಲಿ ನೆಲೆಸಿದಳು. ಈಗಲೂ ಅಲ್ಲಿ ದ್ಯಾಮಲಾಂಬಳ ನೆನಪಿಗಾಗಿ ಜಮಲಾಂಬ ದೇವಸ್ಥಾನವನ್ನು ಕಟ್ಟಿಸಿದ್ದಾರೆ. ಆ ಕ್ಷೇತ್ರದಲ್ಲಿ ವಿಜೃಂಭಣೆಯಿಂದ ಜಾತ್ರೆಯೂ ನಡೆಯುತ್ತದೆ.

ಶ್ರೀ ನಾರಮ್ಮನಿಯು ಕೃಷ್ಣಾ ನದಿಯ 'ನಾರದ ಗಡ್ಡೆ'ಯಲ್ಲಿ ಕೆಲವು ಕಾಲ ತಂಗಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪವಿತ್ರ ಸ್ನಾನ ಮಾಡಿ ಪೂಜೆಗೈದು ಧ್ಯಾನದಲ್ಲಿ ತಲ್ಲೀನನಾಗುತ್ತಿದ್ದನು. ನಂತರ ಶ್ರೀ ನಾರಮ್ಮನಿಯ ಗದ್ದಲಾಲ ಮಂದಗದ್ದೆ ಕಡೆಯಿಂದ ಬಂದ ಮೂಲಗುಂಪನ್ನು ಸೇರಿ ದಕ್ಷಿಣಕ್ಕೆ ಸಾಗಿ ಬಂದಿದ್ದರು. ಪ್ರಾಪಂಚಿಕವಾದ ಬರಡು ಬದುಕಿನಿಂದ ಅತೃಪ್ತಿಗೊಂಡ ಮತ್ತೊಂದು ಚಿಕ್ಕ ಗುಂಪು ಪಾರಮಾರ್ಥ ಸಾಧನೆಗಾಗಿ ಕಂಕಣ ಬದ್ಧರಾಗಿ ಹೊರಟು ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸುತ್ತ ಉಚ್ಚಂಗಿ ದುರ್ಗಕ್ಕೆ ಬಂದ ನಂತರ ದೇವಿ ಉತ್ಸವಾಂಬ ಅಲ್ಲಿಯೇ ನೆಲೆಸಿದಳು. ಉಳಿದ ಕೆಲವರು ಉಜ್ಜಿನಿಯ ಮಾರ್ಗವಾಗಿ ನಾನಾ ಕಡೆ ಚದುರಿದರು.

ಭೈರೇಶಿ ಹಾಗೂ ದ್ಯಾಮಲಾಂಬ ತಮ್ಮ ಮೋಕ್ಷ ಸಾಧನೆಗಾಗಿ ಚಿಗಟೇರಿಗೆ ಬಂದು ನಿರ್ಜನ ಪ್ರದೇಶವೊಂದನ್ನು ಆಯ್ಕೆ ಮಾಡಿಕೊಂಡು ಮೋಕ್ಷ ಸಾಧನೆಯಲ್ಲಿ ನಿರತರಾದರು. ಪ್ರತಿನಿತ್ಯ ಪ್ರಾತಃಕಾಲದಲ್ಲಿ ಎದ್ದು ತಮ್ಮ ನಿತ್ಯ ಕರ್ಮಾಧಿಗಳನ್ನು ತೀರಿಸಿಕೊಂಡು ಮಡಿಯುಟ್ಟು ಪ್ರಶಾಂತ ಚಿತ್ತರಾಗಿ ಪದ್ಮಾಸನ ಹಾಕಿ ಕುಳಿತು ತಮ್ಮಿಷ್ಟ ಲಿಂಗಗಳನ್ನು ಕರದಲ್ಲಿರಿಸಿಕೊಂಡು, ಅನ್ನ ನೀರುಗಳ ಹಂಗು ತೊರೆದು ಸಾಧನೆಯಲ್ಲಿ ನಿರತರಾಗಿರುತ್ತಿದ್ದರು.

ಅವರ ಈ ಬದುಕು ದೀರ್ಘಕಾಲ ಉಳಿಯಲಿಲ್ಲ. ಈ ಬಾಳು ಪ್ರಾಪಂಚಿಕತೆಗೆ ಹೊಂದಿಕೆಯಾದೀತು ಎಂಬ ಶಂಕೆ ದ್ಯಾಮಲಾಂಬಗೆ ಮೂಡಿ ಮಾಯೆಯು ತನ್ನ ಛಾಯೆಯನ್ನು ಪಸರಿಸುವ ವಿಫಲ ಯತ್ನ ನಡೆಸಿತು. ಪ್ರಪಂಚದಲ್ಲಿ ಯಾವುದೇ

ಒಂದು ಗಂಡು, ಹೆಣ್ಣಿನ ಜೊತೆಗಿದ್ದುಕೊಂಡು ತಾವು ಪ್ರಾಪಂಚಿಕತೆಯನ್ನು ಮೀರಿ ಸಾಧನೆಯ ಮಾರ್ಗದಲ್ಲಿದ್ದೇವೆ, ಎಂದರೆ ಪ್ರಪಂಚ ಒಪ್ಪಿತೇ? ಎಂಬುದು ದ್ಯಾಮಲಾಂಬಳ ವಾದವಾದರೆ ಹರನನ್ನೇ ಒಲಿಸಬಹುದು, ಆದರೆ ನರ ಜನರನ್ನು ಒಲಿಸುವುದು ಕಡು ಕಷ್ಟಕರ ಎಂಬುದು ಭೈರಪ್ಪ (ನಾರನ್ಮುನಿ)ಯ ವಾದವಾಗಿತ್ತು.

ದ್ಯಾಮಲಾಂಬ ಹೇಳಿದ ವಾದ ವಿವಾದಗಳಿಂದ ಕಿಡಿಕಿಡಿಯಾದ ನಾರನ್ಮುನಿ ಸಾಧನೆಯ ಮಾರ್ಗದಲ್ಲಿ ಅಡ್ಡಿಯಾಗಿದ್ದ ಮಾಯೆಯ ಜಾಲವನ್ನು ಮೆಟ್ಟಿ ನಿಂತನು. ಇಷ್ಟಲಿಂಗವನ್ನು ಹಿಡಿದು ಕಣ್ಣುಗಳಿಗೊಮ್ಮೆ ಒತ್ತಿ ಕರ ಮಧ್ಯದಲ್ಲಿ ಹಿಡಿದು ತದೇಕ ಚಿತ್ತದಿಂದ ಅದನ್ನೇ ದಿಟ್ಟಿಸುತ್ತ 'ಓಂ ನಮಃ ಶಿವಾಯ' ಎಂದು ಉದ್ಗರಿಸಿದವನೇ ಮೌನಿಯಾದನು.

ಈ ಸಾಧನೆಯನ್ನು ಮೂಕಳಂತೆ ವೀಕ್ಷಿಸತೊಡಗಿದಳು ದ್ಯಾಮಲಾಂಬ. ಧ್ಯಾನಾಸಕ್ತನಾದ ನಾರುನ್ಮುನಿ(ಭೈರೇಶಿ)ಯ ದಿಟ್ಟ ನಿಲುವು ವಿಶಾಲವಾದ ಹಣೆಯ ವಿಭೂತಿ, ಕೊರಳ ರುದ್ರಾಕ್ಷಿ, ಎಡಗೈಯಲ್ಲಿ ಎತ್ತಿ ಹಿಡಿದ ಇಷ್ಟಲಿಂಗ ಮೂರ್ತಿ, ಬಲಗೈಯಲ್ಲಿ ಜಪಮಾಲೆ, ಗುರಿಮುಟ್ಟಲು ನಿರ್ಧರಿತವಾದ ಗಂಭೀರ ವದನನಾದ ಈ ಮೂರ್ತಿಯ ಅಚ್ಚರಿತ ಭಂಗಿಯನ್ನು ವೀಕ್ಷಿಸಿದ ದ್ಯಾಮಲಾಂಬ ಭಯ ಭೀತಳಾದಳು. ದ್ಯಾಮಲಾಂಬಗೆ ಮುಂದಿನ ದಾರಿ ತೋಚದಾಯಿತು, ದುಃಖದಿಂದ ಶಿವ-ಶಿವಾ ನನಗೆಂತಹ ವಿಪತ್ತು ತಂದಿರಿಸಿದೆ ಎಂದು ಪರಿತಪಿಸಿದಳು. ತಾನು ಕಣ್ಮುಚ್ಚಿ ಧ್ಯಾನಾಸಕ್ತಳಾದಳು. ದ್ಯಾಮಲಾಂಬಗೆ ಯಾವುದೋ ಅಶರೀರವಾಣಿಯ ನುಡಿ ಕೇಳಿಸಿದಂತಾಗಿ ಕಣ್ತೆರೆದು ಮೇಲೆದ್ದಾಗ ದ್ಯಾಮಲಾಂಬೆಯ ಬದುಕು ನಿರ್ಧಾರವಾದಂತಿತ್ತು. ನಾರುನ್ಮುನಿ(ಭೈರೇಶಿ)ಯನ್ನು ಕೊನೆಯ ಸಲ ನೋಡಿ ಆತನಿಗೆ ವಂದಿಸಿ ಭರ ಭರನೆ ನಡೆದು ಉಚ್ಚಂಗಿ ದುರ್ಗದ ಮಾರ್ಗವಾಗಿ ತಮ್ಮ ಬಳಗವು ಬೀಡುಬಿಟ್ಟ ಗಂಟನೂರಿಗೆ ಬಂದು ಅಲ್ಲಿಯೇ ನೆಲೆಸಿದಳು.

ಇತ್ತ ಚಿಗಟೇರಿಯ ಘೋರ ಕಾನನದಲ್ಲಿ ತಪೋನಿರತನಾದ ಭೈರೇಶಿ ಜಗತ್ತೇ ಮರೆತಂತಿದ್ದ. ಕಾಲಕ್ರಮೇಣ ಭೈರೇಶಿಯ ಸುತ್ತ ಹುತ್ತವು ಬೆಳೆಯಿತು.

ಹೀಗೆ ನಾರುನ್ಮುನಿ(ಭೈರೇಶಿ)ಯ ಸುತ್ತ ಹುತ್ತ ಬೆಳೆದಿರುವಾಗ ಒಂದು ದಿನ ಗೌಡರ ಮನೆಯ ಹಸು ಭೈರಪ್ಪನ ಹುತ್ತಕ್ಕೆ ಹಾಲು ಕರೆದು ಬರುತ್ತಿತ್ತು. ಮನೆಯಲ್ಲಿ ಹಾಲು ಕರೆಯುವಾಗ ಹಾಲು ಕೊಡುತ್ತಿರಲಿಲ್ಲ. ಬರಿ ಗೆಚ್ಚಲಿನಿಂದಲೇ ಇರುವುದನ್ನು ಕಂಡು ಗೌಡರು ಕೋಪಿತರಾದರು. ದನಕಾಯುವ ಹುಡುಗರು ಹಾಲು ಕರೆದುಕೊಳ್ಳಬಹುದೆಂದು ಗೌಡ ದನಕಾಯುವ ಹುಡುಗರನ್ನು ಹಿಂಸಿಸಿದನು. ಹಸು ದಿನಾಲು ಹುತ್ತಕ್ಕೆ ಹೋಗಿ ಬರುವುದನ್ನು ಕಂಡಿದ್ದ ಹುಡುಗರು ನಿಮ್ಮ ಆಕಳು ಹುತ್ತಕ್ಕೆ ಹೋಗಿ ಬರುತ್ತದೆ ಎಂದು ಹೇಳಿದಾಗ ಹುಡುಗರ ಮಾತಿನಂತೆ ಒಂದು ದಿನ ಹಸುವನ್ನು ಹಿಂಬಾಲಿಸಿದರು. ಹುತ್ತಕ್ಕೆ ಹೋಗಿ ಹಸು ಸ್ವಪ್ರೇರಣೆಯಿಂದ ಹುತ್ತಕ್ಕೆ ಹಾಲು ಕರೆಯುವ ದೃಶ್ಯವನ್ನು ಕಂಡು ನೆರೆದ ಜನರೆಲ್ಲರೂ ಬೆರಗಾದರು. ಅವರ ಕುತೂಹಲ ಕೆರಳಿಸಿತು. ಹುತ್ತದೊಳಗೆ ಏನಿರಬಹುದು ಎಂದು ಹುತ್ತವನ್ನು ಬಯಲು ಮಾಡಿದರು. ಆಗ ಪದ್ಮಾಸನ ಹಾಕಿ ಕುಳಿತಿದ್ದ ಭೈರೇಶಿ(ನಾರುನ್ಮುನಿ)ಯನ್ನು ಕಂಡರು. ಅವನ ತಪೋಭಂಗವಾದ್ದರಿಂದ ನೆರೆದ ಜನಕ್ಕೆ ತನ್ನ ಹೆಸರನ್ನು ತಿಳಿಸಿದ ಋಷಿಯು ಕೂಡಲೇ ಅಲ್ಲಿಂದ ಮರೆಯಾದನು.

ಶಿಗಟೇರಿಯ ಪ್ರದೇಶದಲ್ಲಿ ತಪೋಭಂಗವಾದ ಭೈರೇಶಿ ಪರ್ಯಾಟನ ಮಾಡುತ್ತಾ ಹುಲ್ಲೂರಿನ ಶ್ರೀ ಕಾಳಿಕಾಂಬ ದೇವಿಯ ಸನ್ನಿಧಿಗೆ ಬಂದನು. ದೇವಿಯ ಮುಂದೆ ಕರ ಮುಗಿದು ಅಮ್ಮ ದೇವಿ ನಿನ್ನ ಮಮತೆಯ ಮಡಿಲಲ್ಲಿ ಮಗುವಾಗಿಸಿಕೋ ನನಗೆ ಜಗದ ಜಂಜಾಟ ಬೇಕಿಲ್ಲ. ಆದ್ದರಿಂದ ನನ್ನ ಕಾಪಾಡು ಎಂದು ಆಕೆಯ ಆಲಯದಲ್ಲಿ ಈತನ ಸಾಧನೆಯನ್ನು ನಿರಂತರವಾಗಿ ಸಾಗಿಸುವನು. ಮತ್ತು (ಮಗು ರೀತಿಯಲ್ಲಿರುವ ವಿಗ್ರಹವನ್ನು ಹುಲ್ಲೂರಿನ ಕಾಳಿಕಾಂಬ ದೇವಸ್ಥಾನದಲ್ಲಿ ಈಗಲೂ ಕಾಣಬಹುದು. ಸ್ಥಳೀಯರು ಆ ಮೂರ್ತಿಯನ್ನು ಭೈರಸಿದ್ಧೇಶ ಎಂದು ಕರೆಯುತ್ತಾರೆ. ಕೆಲವರು ತಮ್ಮ ಮನೆ ದೇವರನ್ನಾಗಿಸಿಕೊಂಡಿದ್ದಾರೆ). ಪ್ರತಿನಿತ್ಯ ಮುಂಜಾನೆ ಏಳುವುದು ಮಂದಿರದ ಮುಂದೆ ಸ್ವಲ್ಪ ದೂರದ ಕೆರೆಗೆ ಸಾಗುವುದು. ತುಂಬಿದ ಕೆರೆಯಲ್ಲಿ ಮನಸಾರೆ ಈಜಾಡಿ ಮಡಿಯುಟ್ಟು, ತಾಯಿಯೆಡೆಗೆ ಬಂದು ಕರ ಮುಗಿದು ಪಕ್ಕದ ನೆಲ ಮಾಳಿಗೆಯನ್ನು ಹೊಕ್ಕು ಪರಶಿವನ ಧ್ಯಾನದಲ್ಲಿ ಪ್ರಪಂಚವನ್ನೇ ಮರೆಯುವಂತಿದ್ದನು. ಪ್ರತಿನಿತ್ಯ ಬಿಟ್ಟು ಬಿಡದೆ ತನ್ನ ಸಾಧನೆಯನ್ನು ಸಾಗಿಸುತ್ತಿದ್ದನು.

ಒಂದು ದಿನ ಭೈರೇಶಿ(ನಾರುನ್ಮುನಿ)ಯು ಮಿಂದು ಮಡಿಯುಟ್ಟು ಕಾಳಿಕಾಂಬೆಯ ಗುಡಿಯೆಡೆಗೆ ಸಾಗುತ್ತಿದ್ದಾಗ ಆ ನಾಡಿನ ಪಾಳೆಗಾರ ನಾಡ ಗೌಡರು ಭಟರೊಂದಿಗೆ ಬಂದಾಗ ಕಣ್ಣಿಗೆ ಬಿದ್ದ ಭೈರೇಶಿಯನ್ನು ಕರೆದು, ಈ ಊರಿನ ಗೌಡರನ್ನು ಚಾವಡಿಗೆ ಕರೆತರಲು ಆಜ್ಞಾಪಿಸಿದರು. ಗೌಡರ ಮಾತನ್ನು ಲಕ್ಷಿಸದೆ, 'ಅಯ್ಯಾ ಕ್ಷಮಿಸು' ಲೌಕಿಕ ಬದುಕಿನವನಲ್ಲ ನಾನು, ನನ್ನೊಡೆಯ ಹರನುಂಟು, ನಾನುಂಟು ಎಂದವನೆ ಭರ ಭರನೆ ಮುಂದೆ ಸಾಗಿದನು. ಇದರಿಂದ ರೊಚ್ಚಿಗೆದ್ದ ನಾಡಗೌಡರು ತಳವಾರನನ್ನು ಕರೆದು ಇವನಾರೆಂದು ಕೇಳಿದನು. ತಳವಾರ ಇವನೊಬ್ಬ ಹುಚ್ಚ ಬೈರಾ, ಸಮ್ಮಿರಾಯರ ಮನೆತನದ ಚಿಕ್ಕ ಭೈರನ ಅಣ್ಣನೆಂದು, ಹುಚ್ಚನಂತೆ ತಿರುಗುತ್ತಿದ್ದಾನೆಂದು ಹೇಳಿದನು. ಕೂಡಲೇ ಆ ಹುಚ್ಚನನ್ನು ಹಿಡಿದು ಕಟ್ಟಿರಿ ಎಂದು ರಾಜಾಜ್ಞೆಯು ಆಯಿತು.

ಭಟರು ತಳವಾರರು ಇವನಿಗಾಗಿ ಹುಲ್ಲೂರು ಕಾಳಿಕಾಂಬ ದೇವಾಲಯದ ಒಳ ಹೊರಗೆ ಬೆಳೆದು ನಿಂತ ಪೊಳೆಗಳಲೆಲ್ಲ ಶೋಧಿಸಿದರು. ಭೈರೇಶಿ ಕೈಗೆ ಸಿಗಲಿಲ್ಲ. ನಂತರ ಹಿಡಿದು ಕೊಟ್ಟವರಿಗೆ ಸೂಕ್ತ ಬಹುಮಾನ ಎಂದು ಊರಿನಲ್ಲಿ ಡಂಗೂರ ಸಾರಿದರು. ಬಾರಿಸಿದ ಡಂಗೂರವು ನೆಲಮಾಳಿಗೆಯಲ್ಲಿರುವ ಭೈರೇಶಿಯ ಕಿವಿಗೆ ಮುಟ್ಟಲಿಲ್ಲ, ತಾಕಲಿಲ್ಲ. ಎಂದಿನಂತೆ ಒಂದು ದಿನ ಬೆಳಗಿನ ಜಾವ ಸೂರ್ಯ ಹುಟ್ಟುವ ಮೊದಲು ಪೂಜೆಗೆ ಹೊತ್ತಾಯಿತೆಂದು ಮಂದಿರದ ಮುಂದಿನ ಕೆರೆಗೆ ಜಳಕಕ್ಕೆಂದು ಸಾಗುತ್ತಿದ್ದನು. ಆಗ ದಾರಿಯ ಮಧ್ಯದಲ್ಲಿರುವ ಕಬ್ಬಿನ ಗಾಣ ಹೂಡಿ ಆಲೆಮನೆಯಾಡುತ್ತಿದ್ದ ರೈತನೊಬ್ಬನ ಗಾಣದತ್ತ ಬಂದನು.

ಅಲ್ಲಿದ್ದ ತಳವಾರ ಭೈರೇಶಿಯನ್ನು ಗುರುತಿಸಿ ಗೌಡರನ್ನು ಕರೆತರಲು ಓಡಿದನು. ಅಲ್ಲೇ ಕೊಪ್ಪರಿಗೆಯ ಹಾಲು ಕುದಿಸುತ್ತಿದ್ದ ಭೈರಪ್ಪನ ತಮ್ಮ ಚಿಕ್ಕ ಭೈರನು ಅಣ್ಣನನ್ನು ಗುರುತಿಸಿ, ಅಣ್ಣ ಇಷ್ಟು ದಿವಸ ಎಲ್ಲಿಗೆ ಹೋಗಿದ್ದೇ? ಹುಚ್ಚ, ಮೂಕ, ಎಂದೇಕೆ ಜನಗಳ ಬಾಯಿಂದ ಬೇಯುತ್ತಿ ಮನೆ ಬಿಟ್ಟೇಕೆ ತಿರುಗುತ್ತೀಯ ಬಾ ಮನೆಗೆ ಹೋಗೋಣ ಎಂದು ಕರೆದನು. ತಮ್ಮನ ಮಾತು ಕೇಳಿ ಅಣ್ಣ ಭೈರೇಶಿ ನಕ್ಕು ಬಿಟ್ಟನು. ಸ್ವಲ್ಪ ಹೊತ್ತು ತಮ್ಮನನ್ನು ಸಂತೈಸಿದನು. ಆಗ ಗಾಣದೊಡೆಯ ಸಾವಕ್ಕ ಮೂಕತಾದವರಿಗೆ ಹಾಲು ಕೊಟ್ಟು ಸಂತೈಸಿದನು.

ರಾಜಾಜ್ಞೆಯನ್ನು ಮೀರಿ ಮರೆಯಾಗಿದ್ದ ಭೈರೇಶಿಯನ್ನು ಹಿಡಿಯಲು ತಳವಾರರೊಂದಿಗೆ ಧಾವಿಸಿ ಗಾಣದ ಮನೆಗೆ ಬಂದ ಗೌಡರು ಭೈರಪ್ಪನನ್ನು ಮನಸಾರೆ ಬೈಯುತ್ತಾ ಎಲೇ ಭೈರಾ ನಿನಗೂ ಕಬ್ಬಿನ ಹಾಲು ಕುಡಿಯುವ ಆಸೆಯಾಯಿತೇನೋ ಎಂದರು. ಪರಿಸ್ಥಿತಿ ಅರಿತ ಗಾಣದೊಡೆಯ ಇದೋ ಇಂಥಾ ಹಾಲನ್ನೇ ಇವನಿಗೆ ಕುಡಿಸಬೇಕು ಎನ್ನುತ್ತಾ ಕುದಿದು ಕಾದ ಕಬ್ಬಿನ ಹಾಲನ್ನು ಮೈಗೆ ಎರಚುತ್ತಾನೆ. ಆಗ ಭೈರಪ್ಪ ಅಯ್ಯ ಮೈಗೇಕೆ ಎರಚುತ್ತೀಯ ಕೈಗೆ ಕೊಟ್ಟರೆ ಸಂತೋಷದಿಂದ ಕುಡಿಯುತ್ತೇನೆ ಎಂದನು. ಇವನ ಮಾತು ಕೇಳಿ ಅಲ್ಲಿದ್ದವರಿಗೆಲ್ಲಾ ಮೈ ಉರಿಯಿತು. ಸಿಟ್ಟಿಗೆದ್ದವನೆ ಕಾದ ಹಾಲನ್ನು ಹಾಕ ತೊಡಗಿದರು. ಕಾದ ಕಬ್ಬಿನ ಹಾಲು ಭೈರಪ್ಪನ ಬೊಗಸೆ ಮತ್ತು ಮೈಯನ್ನು ಏನು ಮಾಡಲಿಲ್ಲ. ಭೈರಪ್ಪ ಹಾಕುವ ಹಾಲನ್ನು ನೆಲಕ್ಕೆ ಬಿಡಲೂ ಇಲ್ಲ. ಕಾದ ಹಾಲನ್ನೇ ಗಟ ಗಟನೇ ಕುಡಿಯುತ್ತಾನೆ. ಈ ದೃಶ್ಯವನ್ನು ನೋಡಿ ನೆರೆದ ಜನರು ಬೆರಗಾಗಿ ನೋಡಿದರು. ನೋಡು ನೋಡುತ್ತಿದ್ದಂತೆಯೇ ಗೌಡನ ಮಾತಿನಂತೆ ಕುದಿಯುತ್ತಿದ್ದ ಕೊಪ್ಪರಿಗೆಯಲ್ಲಿ ಎತ್ತಿ ಹಾಕಿದರು.

ಭೈರಪ್ಪನು ಕುದಿಯುವ ಹಾಲಿನಲ್ಲಿ ಕುಳಿತು ಕಾದ ಹಾಲಿನಲ್ಲಿಯೇ ಸ್ನಾನ ಮಾಡುತ್ತಾನೆ. ಅಯ್ಯಾ ನನ್ನೊಡೆಯಾ ಶಿವಲಿಂಗನ ಪೂಜೆಗೆ ಮೀಯಲು ಮಡಿಯುಡಲು ದೂರದ ಕೆರೆಯವರೆಗೆ ಹೋಗಬೇಕಿತ್ತು, ಆದರೆ ಈ ಕೊಪ್ಪರಿಗೆಯಲ್ಲಿ ಸ್ನಾನದ ವ್ಯವಸ್ಥೆ ಮಾಡಿದ ನೀವೆಲ್ಲರೂ ಶಿವನ ಕೃಪೆಗೆ ಪಾತ್ರರಾದಿರಿ ಪೂಜೆಗೆ ವೇಳೆಯಾಯಿತು ಎಂದು ದಡ ದಡನೆ ಕಾಳಿಕಾಂಬ ದೇವಸ್ಥಾನದ ಕಡೆಗೆ ಹೊರಟನು. ಅವನನ್ನು ಯಾರು ಮುಟ್ಟಲಿಲ್ಲ. ಯಾಕೆಂದರೆ ಕುದಿಯುವ ಹಾಲು ನಮ್ಮನ್ನು ಸುಟ್ಟುಬಿಟ್ಟಿತು ಎಂಬ ಭಯವು ನೆರೆದ ಜನರಲ್ಲಿ ಆವರಿಸಿತ್ತು.

ಅಷ್ಟಕ್ಕೆ ಗೌಡರು ಮತ್ತು ಸಹಚರರು ಸುಮ್ಮನಾಗಲಿಲ್ಲ. ಗೌಡರು ಮತ್ತೆ ಆಜ್ಞೆ ಮಾಡಿದರು. ಅವರ ಆಜ್ಞೆಯಂತೆ ಭೈರಪ್ಪನನ್ನು ಹಿಂಬಾಲಿಸಿ ಹಿಡಿದು ಸುಣ್ಣದ ಚೀಲದಲ್ಲಿ ಹಾಕಿ ಬಾಯಿಕಟ್ಟಿ ಕೆರೆಯ ಮಧ್ಯಕ್ಕೆ ಹಾಕಿ ಬರಲು ಕೊಂಡೊಯ್ದರು. ಸುಣ್ಣದ ನೀರು ಭೈರಪ್ಪನಿಗೆ ಏನು ಮಾಡಲಿಲ್ಲ. ಮರುದಿನ ಬೆಳಿಗ್ಗೆ ಕಾಳಿಕಾಂಬ ದೇವಸ್ಥಾನದಲ್ಲಿ ಭೈರಪ್ಪ ಧ್ಯಾನ ನಿರತನಾಗಿದ್ದನು. ಇದನ್ನು ಕಂಡು ಮತ್ತಷ್ಟು ಕೋಪಗೊಂಡು ಗೌಡರು ಮತ್ತೊಮ್ಮೆ ತಳವಾರರನ್ನು ಕರೆಸಿ, ಭೈರಪ್ಪನನ್ನು ಹಿಡಿಸಿ ಕಬ್ಬಿಣದ ಸರಪಳಿಗಳಿಂದ ಕಾಳಿಕಾಂಬ ಮಂದಿರದ ಮುಂದಿನ ದೀಪದ ಕಂಬಕ್ಕೆ ಕಟ್ಟಿಸಿದನು. ಆದರೆ ಸರಪಳಿಗಳು ಹರಿದು ಕೆಳಕ್ಕೆ ಬಿದ್ದವು. ಆಗ ಗೌಡ ಸರಪಳಿಗಳೇ ದೋಷವಾಗಿವೆ ಎಂದನು. ಇದನ್ನು ಕಂಡ ಜನಸ್ತೋಮವು ಅಚ್ಚರಿಗೊಂಡು ನೋಡಿದರು. ಮತ್ತು ಅಲ್ಲಿಯೇ ಇದ್ದ ಕಾಳಿಕಾಂಬ ದೇವಸ್ಥಾನದಲ್ಲಿ ಕೂಡಿ ಹಾಕಿ ದೇವಸ್ಥಾನದ ಬಾಗಿಲಿಗೆ 'ಅಡ್ಡಗೋಡೆ' ಯನ್ನು ಕಟ್ಟಿಸಿದನು. ಸಿರಿಗೇರಿ ಗ್ರಾಮದಲ್ಲಿ 'ಇಡುಗೋಡೆ' ಎಂದು ಕರೆಯುತ್ತಾರೆ. ಈ ರೀತಿಯಾಗಿ ದೇಗುಲದಲ್ಲಿ ಕೂಡಿ ಹಾಕಿ ಗೌಡರು ಮನೆಗೆ ಹೋದರು. ದೇಗುಲದಲ್ಲಿ ಸುಮಾರು ಆರು ತಿಂಗಳ ಕಾಲ ಭೈರೇಶಿ ಕಳೆದನು.

ಗುಡಿಯೊಳಗೆ ಭೈರಪ್ಪನು ಆರು ತಿಂಗಳನ್ನು ಆರು ಗಳಿಗೆಯಂತೆ ಕಳೆದನು. ಆರು ತಿಂಗಳ ನಂತರ ಅಡ್ಡಗೋಡೆಯ ಸಂಧಿಯಿಂದ ಒಂದು ತರಹದ ಬಿಳುಪಾದ ದ್ರವವು ಹೊರಬರತೊಡಗಿ ದಾರಿಹೋಕರು, ಆ ದ್ರವವನ್ನು ನೋಡಿ

ಆಶ್ಚರ್ಯಗೊಂಡರು. ಅದನ್ನು ಕೆಲವು ರೋಗಿಗಳು ಮುಟ್ಟಿದ್ದರಿಂದ ಅವರ ಮೈಮೇಲಿನ ರೋಗಗಳೆಲ್ಲವೂ ಮಾಯವಾದವು. ಹೊರ ಬಂದ ಬಿಳುಪಾದ ದ್ರವವು ನಾರುಹುಣ್ಣಿನ ಔಷಧಿಯೇ ಎಂಬಂತೆ ಭಾಸವಾಗುತ್ತಿತ್ತು. ಈ ವಿಚಾರವು ಸುತ್ತಮುತ್ತಲಿನ ಪ್ರದೇಶಕ್ಕೂ ಮತ್ತು ಆ ಪ್ರಾಂತ್ಯದ ಪಾಳೆಗಾರರ ಪ್ರಭು ನಾಡಗೌಡರಿಗೂ ಸುದ್ದಿ ಮುಟ್ಟಿತು.

ಸುದ್ದಿ ತಿಳಿದ ಗೌಡರು ಕಾಳಿಕಾಂಬ ಗುಡಿಗೆ ಧಾವಿಸಿ ಬಂದರು. ತಳವಾರ ಮತ್ತು ಭಟರನ್ನು ಕರೆಸಿ ದೇವಸ್ಥಾನದ ಬಾಗಿಲಿಗೆ ಇಡಲಾಗಿದ್ದ ಗೋಡೆಯನ್ನು ಕಿತ್ತು ಹಾಕಲು ಹೇಳಿದನು. ಇನ್ನೇನು ಗೋಡೆ ಕೀಳಬೇಕು ಅಷ್ಟರಲ್ಲಿಯೇ ಗೋಡೆಯು ತಾನಾಗಿಯೇ ಕುಸಿದು ಕೆಳಕ್ಕೆ ಬಿದ್ದಿತು. ಮತ್ತು ಹೊಸ್ತಿಲು ಸೀಳಿ ಹೋಳಾಯಿತು. ನೆರೆದ ಜನರೆಲ್ಲ ಒಳಹೋಗಿ ನೋಡಿದರೆ ದೇಗುಲದ ತುಂಬ ಹಾಲು ಹೆಪ್ಪುಗಟ್ಟಿ ನಿಂತಿದೆ. ಮಂಡಿಯೂರಿ ಬೊಗಸೆಯೊಡ್ಡಿ ಕುಳಿತ ಭೈರಪ್ಪನಿಗೆ ತಾಯಿ ಕಾಳಿಕಾಂಬೆಯೇ ಹಾಲುಣಿಸಿರಬೇಕು ಎಂದು ತಿಳಿದು ದೇವಿಯ ಕೃಪೆಗೆ ಪಾತ್ರನಾದ ಬೈರಪ್ಪನನ್ನು ಹಿಂಸೆಗೆ ಗುರಿಪಡಿಸಿದ್ದು ದೊಡ್ಡ ತಪ್ಪಾಯಿತಲ್ಲ ಎಂದು ಗೌಡರ ಮನದಲ್ಲಿ ಭಯ ಮೂಡಿತ್ತು. ಎದ್ದು ಹೊರ ಬಂದ ಭೈರಪ್ಪನಿಗೆ ಜನಸ್ತೋಮವು 'ಭೈರೇಶಿಗೆ ಜಯವಾಗಲಿ ನಾರುಹುಣ್ಣು ರೋಗಗಳನ್ನು ವಾಸಿ ಮಾಡಿದ ನಾರನ್ಮುನಿಗೆ ಜಯವಾಗಲಿ' ಎಂದು ಹರ್ಷೋದ್ಗಾರವಾಗಿ ಜೈಕಾರ ಹಾಕಿದರು. ಕಷ್ಟ ಕೊಟ್ಟಿದ್ದಕ್ಕೆ ನಮ್ಮನ್ನು ಕ್ಷಮಿಸು, ಮನ್ನಿಸು ತಮಗೆ ವಿಪರೀತ ತೊಂದರೆ ಕೊಟ್ಟೆವು ಮನ್ನಿಸು ಮುನಿವರ್ಯ ಎಂದು ಅಂಗಲಾಚಿದರು. ತಮಗೇನು ಬೇಕಾದರೂ ಕೊಟ್ಟು ಸನ್ಮಾನಿಸಲು ನಾವು ಸಿದ್ಧರಿದ್ದೇವೆ ಎಂದು ಬೇಡಿಕೊಂಡರು. ಅದಕ್ಕೆ ಮುನಿಯು ಹುಚ್ಚಪ್ಪಗಳಿರಾ ನೀವು ನನಗೇನು ಕೊಟ್ಟೀರಿ? ಕೊಡಲು ಬಿಡಲು ಜಗದೊಡೆಯ ಶಿವನಿರುವನು. ಆದ್ದರಿಂದ ನೀವುಗಳು ಈ ಗರ್ಭಗುಡಿಯ ಬಲಗಡೆ ಇರುವ ಹುತ್ತದಲ್ಲಿ ನನ್ನ ಬಲಮುರಿ ಶಂಖ, ಜಾಗಟೆ ಮತ್ತು ದಂಡ ಘಂಟೆಗಳು ಇವೆ ಅವುಗಳನ್ನು ತಂದು ಕೊಡಿ ಸಾಕು ಎಂದನು. ಮಾತು ಹೊರ ಬೀಳುತ್ತಿದ್ದಂತೆಯೇ ಓಡೋಡಿ ಹೋದ ಜನ ಹುತ್ತವನ್ನು ಅಗೆದರು. ಆತನ ಘಂಟಾಭರಣಗಳನ್ನು ತಂದುಕೊಟ್ಟರು. ತನ್ನ ಸಾಧನಗಳನ್ನು ಕೈಗೆತ್ತಿಕೊಂಡು ನಾರನ್ಮುನಿ(ಭೈರೇಶಿ)ಯು ಶರಣರೇ ಸಾಕು ಮಾಡಿ ಇನ್ನು ಶರಣರ ಸತ್ಯ ಪರೀಕ್ಷೆಯು ನನ್ನ ಕರ್ತವ್ಯ ನನ್ನನ್ನು ಕೈಬೀಸಿ ಕರೆಯುತ್ತಿದೆ ಎಂದು ಹೊರಟೇ ಬಿಟ್ಟ. ನೆರೆದ ಜನರು ಎಲ್ಲಿಗೆ ಎಂದು ಕೇಳಿದಾಗ, ನಾನು ಬಹುದೂರ ಹೊರಟಿದ್ದೇನೆ. ಭೀಕರ ಬರಗಾಲದಿಂದ ತತ್ತರಿಸುತ್ತಿರುವ ಚಿಗಟೇರಿಗೆ ಹೋಗುತ್ತಿದ್ದೇನೆ. ಅಲ್ಲಿಯೇ ನೆಲೆಗೊಳ್ಳುತ್ತೇನೆ ಎಂದು ಹೇಳಿದನು. ಭೈರೇಶಿಯ ಮಹಿಮೆಗೆ ಮನಸೋತ ಭಕ್ತರು ಸ್ವಾಮಿ ನಾವು ಬರುತ್ತೇವೆ ನಮ್ಮನ್ನು ಆಶೀರ್ವದಿಸಿ ತಮ್ಮ ಜೊತೆಗೆ ಕೊಂಡೊಯ್ಯಿರಿ ನೀವು ನೆಲೆಸಿದಲ್ಲಿಯೇ ನಿಮಗೆ ಮಂದಿರವನ್ನು ಕಟ್ಟುವವರೆಗೆ ನಾವು ಶಾಂತರಾಗುವುದಿಲ್ಲ ಎಂದು ನಾರನ್ಮುನಿಗೆ ಜೈ ಮಹಿಮಾ ಪುರುಷ, ಶಿವನಾರನ್ಮುನಿಗೆ ಜೈ ಎಂದು ಜೈಕಾರ ಹಾಕಿದರು. ಇದ್ಯಾವುದನ್ನು ಲೆಕ್ಕಿಸದೆ ನಾರುನ್ಮುನಿಯು ದಕ್ಷಿಣದ ಚಿಗಟೇರಿಯ ಕಡೆಗೆ ಹೊರಟನು.

ಆ ಸಂದರ್ಭದಲ್ಲಿ ಚಿಗಟೇರಿಯ ಸುತ್ತಮುತ್ತ ಪ್ರದೇಶದಲ್ಲಿ ಮಳೆ ಇಲ್ಲದೆ ಭೀಕರ ಕ್ಷಾಮ ತಾಂಡವವಾಡುತ್ತಿತ್ತು. ನೀರು ಕಾಣದೆ ನೆಲ ಬಿರುಕು ಬಿಟ್ಟಿತ್ತು. ಕೆರೆ ಬಾವಿಗಳು ಬತ್ತಿ ಬರಿದಾಗಿದ್ದವು. ಸುತ್ತ ನೋವಿನ ಧ್ವನಿಯು ಕೇಳಿ ಬರುತ್ತಿತ್ತು. ಚಿನ್ನದ ನೆಲವಾಗಿದ್ದ ಚಿಗಟೇರಿಯು ಬರಗಾಲಕ್ಕೆ ತುತ್ತಾಗಿ ಹೋಗಿತ್ತು. ಎಲ್ಲದರಿಂದ ತತ್ತರಿಸಿದ ಜನರು ಬೇರೆಡೆಗೆ ವಲಸೆ ಹೊರಡಲು ಅನುವಾದರು. ಜನರು ಮಾಡಬೇಕಾದ ಯಜ್ಞ ಯಾಗಾದಿಗಳನ್ನು ಮಾಡಿದರು. ಮಳೆಯು ಬರಲಿಲ್ಲ. ಹಿರಿಯರೆಲ್ಲ ಸಭೆ ಸೇರಿ

ಪರಿಶೀಲಿಸುವಾಗ ಸಭೆಯ ಮಧ್ಯದಲ್ಲಿ ಒಬ್ಬ ದಿಢೀರನೆ ಎದ್ದು ಸ್ವಾಮಿ ಮಹರ್ಷಿಗಳಿಗೆ ತಾಣ ಕೊಟ್ಟ ಸ್ಥಳವಿದು, ಚಿನ್ನದ ಚಿಗಟೇರಿ. ಹಿಂದೆ ನಮ್ಮ ಕಾನನದಂಚಿನಲ್ಲಿ ಕುಳಿತು ತಪೋನಿರತರಾಗಿದ್ದ ಮಹರ್ಷಿಯ ಮೇಲಿನ ಹುತ್ತವನ್ನೊಡೆದು ಅವರ ತಪಸ್ಸಿಗೆ ಭಂಗ ತಂದಿದ್ದೆವು ಎಂಬ ವಿಷಯವನ್ನು ಮರೆತು ಬಿಟ್ಟಿದ್ದೇವೆ. ಈಗ ಅವರ ಶಾಪದಿಂದಲೇ ನಮಗೆ ಈ ಪರಿಸ್ಥಿತಿ ಬಂದಿದೆ ಎಂದು ಹೇಳಿದನು. ಇದಕ್ಕೆ ಎಲ್ಲರೂ ಹೌದು ಎಂದು ಧ್ವನಿಗೂಡಿಸಿ ಇಡೀ ಗುಂಪು ಮೇಲೆದ್ದು ಬನ್ನಿ ಹೋಗೋಣ ಆ ಮಹಾತ್ಮನನ್ನು ಹುಡುಕಿ ಕ್ಷಮೆ ಕೇಳೋಣ ಎಂದು ಹೊರಡಲು ತಯಾರಿಯನ್ನು ನಡೆಸಿದರು. ಈ ಸಂದರ್ಭದಲ್ಲಿ ಭಜನಾ ಮೇಳದ ಸಾಮಾನುಗಳನ್ನು ತಂದರು. ಭಾವ ತುಂಬಿ ಹಾಡುತ್ತಾ ಮಹರ್ಷಿಗೆ ಹಾಲು ಹಣ್ಣುಗಳನ್ನು ತೆಗೆದುಕೊಂಡು ದಾರಿಯುದ್ದಕ್ಕೂ ಭಜನೆ ಮಾಡುತ್ತಾ ಹೊರಟರು.

ಹೀಗೆ ಹಾಡುತ್ತಾ ಹೊರಟ ದೊಡ್ಡ ಗುಂಪು ಚಿಗಟೇರಿಯನ್ನು ಬಿಟ್ಟು ಎತ್ತರದ ಕಾನನದಂಚಿನತ್ತ ಸಾಗಿ ಹಿಂದೆ ಮಹರ್ಷಿಯು ತಪಸ್ಸು ಮಾಡುತ್ತಿದ್ದ ಇಸಿಗಿ ಪೆಳೆಯ ಮುಂದಿನ ದೊಡ್ಡ ಹುತ್ತದತ್ತ ಬಂದರು. ಅಷ್ಟೊತ್ತಿಗಾಗಲೇ ನಾರುಮ್ಮುನಿಯು ಬಂದು ಹಾಸುಗಲ್ಲಿನ ಮೇಲೆ ಮಡಿಯುಟ್ಟು ಪದ್ಮಾಸನ ಹಾಕಿ ಕುಳಿತಿದ್ದನು. ಭಜನೆ ಹಾಡಿನ ಸದ್ದು ಕೇಳಿ ನಾರುಮ್ಮುನಿ ಎದ್ದು ನಿಂತನು. ಇದನ್ನು ಕಂಡ ಭಕ್ತರು ಸದ್ದುಗದ್ದಲವಿಲ್ಲದೆ ನಿಶ್ಶಬ್ದವಾಗಿ ನಿಂತು ಹೋಯಿತು. ಕುಳಿತ ಹಾಸುಗಲ್ಲು ಪರಮೇಶ್ವರನ ಪೀಠದಂತೆ ಕಾಣುತ್ತಿತ್ತು. ಅದರ ಮೇಲೆ ನಿಂತ ನಾರುಮ್ಮುನಿಯು ಸಾಕ್ಷಾತ್ ಶಿವನ ಪ್ರತಿರೂಪವಾಗಿ ಕಾಣುತ್ತಿದ್ದನು. ಇವರನ್ನೇ ಕಾಣಲು ಹೊರಟ ಗುಂಪಿಗೆ ಮಹರ್ಷಿಯು ಕಾಣಿಸಿಕೊಂಡಿದ್ದು ಕಳೆದು ಹೋದ ತಾಯಿಯನ್ನು ಮರಳಿ ಕಂಡ ಕರುವಿನ ಸಂತಸಕ್ಕೂ ಮಿಗಿಲಾಗಿ ಹರ್ಷವಾಗಿತ್ತು. ಸಂತಸದಿಂದ ಕುಣಿದು ಕುಪ್ಪಳಿಸಿದರು. ಮುಂದೆ ಸಾಗಿ ನಮಸ್ಕರಿಸಿ ಮಹಾತ್ಮರಲ್ಲಿ ಕ್ಷಮೆ ಕೇಳಿದರು. ನಂತರ ತಮ್ಮ ಕಷ್ಟಗಳನ್ನು ತೋಡಿಕೊಂಡರು. ಆಗ ಶಾಂತನಾಗಿ ಮುನಿಯು ಭಕ್ತರೇ ನಿಮ್ಮ ಬಯಕೆ ಶೀಘ್ರವಾಗಿ ನೆರವೇರಲಿ ವರುಣನ ಕಾರುಣ್ಯವು ಅತಿ ಶೀಘ್ರದಲ್ಲಿ ಧರೆಯನ್ನು ತಣಿಸಲಿ ಎಂದು ಮುಕ್ತ ಮನಸ್ಸಿನಿಂದ ಹರಸಿದರು.

ಮಹರ್ಷಿಯ ಮಾತು ನಿಜವೇ? ಮಳೆ ಬಂದಿತೇ? ಎಂದು ಜನರು ಮಾತನಾಡುವಾಗ, ಖಂಡಿತ ನಿಮ್ಮ ಬಯಕೆ ಈಡೇರುತ್ತದೆ ಅದೋ ನೋಡಲ್ಲಿ ಕರಡಿಗುಡ್ಡದ ಅಂಚಿನ ಮಿಂಚೇ ಇದಕ್ಕೆ ಸಾಕ್ಷಿ. ನೀವು ಸಂತಸದಿಂದ ಮನೆಗೆ ಮರಳಿ ಎಂದವರೇ ಹುತ್ತದ ಹಿಂಬದಿಗೆ ಭರ ಭರನೆ ನಡೆದು ಮರೆಯಾದರು. ಸ್ವಾಮಿಯ ಮಾತು ನಿಜವೆಂಬಂತೆ ಕ್ಷಣಾರ್ಧದಲ್ಲಿ ಮಿಂಚು ಹೆಚ್ಚಿ ಕಾರ್ಮೋಡಗಳು ಭೋರ್ಗರೆದವು. ಬಿರುಗಾಳಿ ಭರಗುಟ್ಟಿತು. ಕತ್ತಲೆ ಕವಿಯಿತು. ಎಲ್ಲೆಲ್ಲಿಯೂ ಮಳೆಯೇ ಮಳೆ ಭೂತಾಯಿ ಸಂಪೂರ್ಣವಾಗಿ ತಣಿಸಿದಳು. ಜನರು ಹರ್ಷಗೊಂಡರು. ಅವರ ಬದುಕು ಬಂಗಾರವಾಯಿತು.

ಇದಾದ ನಂತರ ಮಹಾಪುರುಷನ ಮಹಿಮೆಗೆ ಮನಸೋತು ಆತನನ್ನು ಹಿಂಬಾಲಿಸಿದ ಹಲವಾರು ಜನರು ನಾರುಮ್ಮುನಿಯನ್ನು ಅರಸುತ್ತಾ ಹುಲ್ಲೂರಿನಿಂದ ಚಿಗಟೇರಿಯ ಕಾನನಕ್ಕೆ ಬರುತ್ತಾರೆ. ಹೀಗೆ ಬಂದ ಗುಂಪಿನಲ್ಲಿ ನಾಡಗೌಡ, ಸಾವಕ್ಕ, ಚಿಕ್ಕ ಭೈರ ಮುಂತಾದವರು ಸೇರಿದ್ದರು. ಚಿಗಟೇರಿಗೆ ಹೊರಡುತ್ತೇನೆಂದು ನುಡಿದು ಹುಲ್ಲೂರು ಬಿಟ್ಟು ಬಂದ ಶ್ರೀ ನಾರುಮ್ಮುನಿಯ ವಾಣಿಯನ್ನು ಆಧಾರವಾಗಿಟ್ಟುಕೊಂಡು ಆತನ ಇರುವಿಕೆಯನ್ನು ಅರಸುತ್ತ ಇವರೆಲ್ಲರೂ ಚಿಗಟೇರಿಗೆ ಬಂದ ಕೆಲವರನ್ನು

ವಿಚಾರಿಸುತ್ತಾ ಇಡೀ ಕಾನನ ಪ್ರದೇಶವನ್ನು ಹುಡುಕಿ ಕೊನೆಗೆ ಕಾನನದ ಅಂಚಿನಲ್ಲಿ ತಪೋಗೈಯುತ್ತಿದ್ದ ಋಷಿಯೊಬ್ಬರ ತಾಣ ಎಂದು ಹೇಳಲಾದ ಹುತ್ತದ ಹತ್ತಿರ ಬಂದು ಅದರ ಪಕ್ಕದ ಹಾಸುಗಲ್ಲಿನ ಮೇಲೆ ವಿಚಾರ ಮಗ್ನನಾಗಿ ಕುಳಿತಿದ್ದ ನಾರುನ್ಮುನಿಯನ್ನು ಕಾಣುತ್ತಾರೆ.

ಇವರೆಲ್ಲರ ಕಾಟವನ್ನು ತಪ್ಪಿಸಿಕೊಂಡು ಬಂದರೂ, ಇವರ ಕಾಟ ನಾರುನ್ಮುನಿಯನ್ನು ಬಿಡಲಿಲ್ಲ. ಏಕಾಂತವನ್ನರಸಿ ಬಂಧುಗಳನ್ನು, ಭಕ್ತರನ್ನು ಬಿಟ್ಟು ಬಂದ ನೋವು ಆತನ ಮನಸ್ಸನ್ನು ಗೊಂದಲ ಗೊಳಿಸಿದಂತಿತ್ತು. ಹಿಂದಿನ ಬದುಕಿನಲ್ಲಿ ಇಣಿಕಿ ಹೋದ ಊರ ಪ್ರಮುಖರ ಕಿರುಕುಳ, ಸಾಧನೆಗೆ ಅವರೊಡ್ಡಿದ ಅಡ್ಡಿ ಆತಂಕಗಳು ಅದಕ್ಕಿಂತಲೂ ಮಿಗಿಲಾಗಿ ಅವರ ನೈಜತೆಯನ್ನು ತಿಳಿದು ನಿಜ ಮಾನವರಾಗಿ ಆತನನ್ನು ಬೀಳ್ಕೊಡುವಾಗ ತೋರಿದ ಅನುರಾಗ ಔದಾರ್ಯಗಳು ಒಂದೊಂದು ಮಹಾ ಋಷಿಯ ಮನಸ್ಸಿನ ಪರದೆಯ ಮೇಲೆ ಬಂದು ಹೋಗುತ್ತಿದ್ದವು.

ಆತನು ನಿರೀಕ್ಷಿಸಿದಂತೆಯೇ ಅಣ್ಣ ನಾರೇಶಾ ನಾರುನ್ಮುನಿ ಭೈರಪ್ಪ ಎಂಬ ಕೂಗು ಕಿವಿಗೆ ತಾಕಿ ಮಹಾಮುನಿಯ ಏಕಾಂತಕ್ಕೆ ಭಂಗ ತಂದಿತು. ತಕ್ಷಣ ಎದ್ದು ನಿಂತು ಮುನಿಯು ಅವರನ್ನು ನೋಡಿ ನೀವು ಇಲ್ಲಿಗೇಕೆ ಬಂದಿರಿ? ಎಂದು ಪ್ರಶ್ನಿಸಿದನು. ಆಗ ಸಾವಕ್ಕ ಅಣ್ಣಾ ತಾಯಿಯನ್ನಗಲಿ ಕರು ಇರಬಲ್ಲದೆ ಎಂದಳು. ತಮ್ಮನಾದ ಚಿಕ್ಕ ಭೈರಪ್ಪನು ಅಣ್ಣಾ ಹಳ್ಳಗಳು ಸಮುದ್ರವನ್ನು ಸೇರಬೇಡವೇ? ಎಂದನು. ಅಲ್ಲೇ ಇದ್ದ ನಾಡಗೌಡನು ಮಹಾಮುನಿ ದೇಶ, ಕೋಶ, ಸಿರಿ ಸಂಪತ್ತು, ವಜ್ರ ವೈಢೂರ್ಯ, ಬೊಕ್ಕಸ, ಭಂಡಾರಗಳೇನೂ ನಮಗೆ ಬೇಡ ನಿನ್ನ ಸಂಗ ಒಂದೇ ಸಾಕು ನಮಗೆ ಎನ್ನುತ್ತ ಮುನಿಯ ಪಾದಗಳಿಗೆರಗಿದನು. ಸ್ವಾಮಿ ನಿಮಗೆ ಆಶ್ರಯ ಕೊಡಲು ಸಮಸ್ತ ದೈವವೇ ಆಗಮಿಸುತ್ತಿದೆ ಎಂದನು. ನಾಡಗೌಡನ ಮಾತನ್ನು ಕೇಳಿ ನಗು ಉಕ್ಕಿ ಬಂದಿತು. ನಾರುನ್ಮುನಿಗೆ ಸಂಪೂರ್ಣ ಸಾಧನೆಯ ಮಾರ್ಗದಲ್ಲಿ ಮಾಯೆಯ ಛಾಯೇ ಶಂಭೋ ಮಹಾ ದೇವಾ ಶಂಭೋ ಹರಹರ ಮಹಾದೇವಾ! ಅಶಾಶ್ವತ ಸುಖದ ಆಮಿಷಗಳ ಆಗಮನ ಎಲ್ಲಾ ಸಾಧನೆಯ ಶತ್ರುಗಳಿವು ಎಂದೆನಿಸಿತು. ನಾರುನ್ಮುನಿಯು ಆಗ ಭಕ್ತರನ್ನುದ್ದೇಶಿಸಿ ಬಂಧುಗಳೇ ನಿಮ್ಮ ನಿಮ್ಮ ಕೊಡುಗೆಗಳನ್ನು ನಾನೊಪ್ಪಿದೆನಾದೊಡೆ ಖಂಡಿತ ಅನರ್ಥ ಕಾದಿಟ್ಟ ಬುತ್ತಿ. ನನ್ನ ಆತ್ಮ ಸಾಧನೆಯ ಮಾರ್ಗದಲ್ಲಿ ಅರೆ ಬೆಂದ ಮಡಿಕೆಯಾದೆನು ಎಂದ್ಹೇಳಿ ಎಲ್ಲರನ್ನು ಚಕಿತಗೊಳಿಸಿದನು.

ಹಾಗಾದರೆ ನಮ್ಮನ್ನು ಕೈ ಬಿಡುವಿರಾ ಎಂದಾಗ ಇವರ ಮಾತುಗಳನ್ನು ಕೇಳಿ ದೀರ್ಘವಾಗಿ ಉಸಿರುಬಿಟ್ಟು, ನೀವು ಕೊಡುವುದಾದರೆ ನಾನು ಕೇಳುವುದನ್ನೆಲ್ಲಾ ಕೊಟ್ಟರೆ ಮಾತ್ರ ಸದಾ ನನ್ನಲ್ಲಿಯೇ ನೀವಿರಬಹುದು ಎಂದರು. ನೆರೆದ ಭಕ್ತರು ಕೊಡುವುದಾದರೂ ಏನನ್ನು ಕೇಳಿ ಸ್ವಾಮಿ ಎಂದು ಬಹಳ ಸಂತೋಷದಿಂದ ಸಮಸ್ತವನ್ನು ತಮಗರ್ಪಿಸಲೆಂದೇ ಬಂದಿದ್ದೇವೆ ಎಂದಾಗ ನಮಗೆ ಬೇಕಾಗಿರುವುದು ತಮ್ಮ ಸಾಮಿಪ್ಯವೇ ಹೊರತು ಸಿರಿ ಸಂಪತ್ತಲ್ಲಾ ಎಂದು ನಾರುನ್ಮುನಿಯು ಹೇಳಿದರು.

ಆಗ ಎಲ್ಲರೂ ಎದ್ದು ನಿಂತರು. ಕೂಡಲೇ ನಕ್ಕು ನುಡಿದ ನಾರುನ್ಮುನಿ ಹುಚ್ಚಪ್ಪಗಳಿರಾ ಅಲ್ಲಿಯೇ ನೀವು ದಾರಿ ತಪ್ಪುವುದು ನಿಮ್ಮ ಸಿರಿ ಸಂಪತ್ತನ್ನೆಲ್ಲಾ ನಾನು ಕೇಳುತ್ತಿರುವುದು ಸರಿಯಾಗಿ ಕೇಳಿಸಿಕೊಳ್ಳಿ ನಿಮ್ಮನ್ನೇ ನಾನು ಬೇಡುತ್ತಿದ್ದೇನೆ. ನಿಮ್ಮನ್ನೇ

ಕೊಡುವುದಾದರೆ ನನಗೆ ಕೊಡಿ ಎಂದ ಮಾತುಗಳು ಅಲ್ಲಿರುವವರಿಗೆ ಅರ್ಥವಾಗಲಿಲ್ಲ. ಎಲ್ಲರು ನಮ್ಮನ್ನು ಎಂದರೆ ನಮ್ಮೆಲ್ಲವನ್ನು ತಮಗರ್ಪಿಸುತ್ತಿದ್ದೇವಲ್ಲಾ ನಡುವೆ ನಾಡಗೌಡ ನಮಗೆ ಸೇರಿದ ಸಕಲವೂ ಸಂಪೂರ್ಣವಾಗಿ ತಮ್ಮದೇ ಎಂದ ಮೇಲು ಎಂದಾಗ ತಕ್ಷಣವೇ ನಾರುನ್ಮುನಿಯು ಗಹಗಹಿಸಿ ನಕ್ಕು ಅಷ್ಟೈಶ್ವರ್ಯಗಳ ಹಂಗು ತೊರೆದು ನಿರ್ವಿಕಾರ ಮನಸ್ಕರಾಗಿ ಸಂಪೂರ್ಣ ಪರಿತ್ಯಾಗಕ್ಕೆ ಸಿದ್ಧರಾದರೆ ಮಾತ್ರ ನನ್ನಲ್ಲಿಗೆ ಬನ್ನಿ ನಿಮ್ಮನ್ನು ಮಾತ್ರ ನನಗೆ ಕೊಡಿ, ಇಲ್ಲದಿದ್ದರೆ ಹೊರಟು ಹೋಗಿರಿ ಎಂದಾಗ ಎಲ್ಲರಿಗೂ ಅರ್ಥವಾಯಿತು. ಬಂದವರೆಲ್ಲರು ಇದೋ ನಮ್ಮನ್ನೇ ತಮ್ಮಲ್ಲಿ ಅರ್ಪಿಸಿಕೊಳ್ಳುತ್ತಿದ್ದೇವೆ ಎಂದವರೆ ದೀರ್ಘದಂಡ ಪ್ರಮಾಣ ಮಾಡಿದರು. ಅವರೆಲ್ಲರನ್ನು ಎತ್ತಿ ಭಕ್ತಿ ಸೂತ್ರವನ್ನು ಬೋಧಿಸತೊಡಗಿದರು. ಶ್ರೀ ನಾರುನ್ಮುನಿಯೂ ಅವರ ಮನಸ್ಸುಗಳನ್ನು ಪರಿಪಕ್ವಗೊಳಿಸಿ ಧ್ಯಾನಕ್ಕೆ ಅಣಿಗೊಳಿಸಿ ತಾನು ಪದ್ಮಾಸನ ಹಾಕಿ ಕುಳಿತು ಅವರಿಗೆ ನಿಜ ಮುಕ್ತಿ ಮಾರ್ಗವನ್ನು ಬೋಧಿಸಿದನು.

ನಾರುನ್ಮುನಿಯು ತುಸು ಹೊತ್ತು ಅಂತರ್ ಮುಖಿಯಾದ ನಂತರ ನಿಧಾನವಾಗಿ ಕಣ್ತೆರೆದು ಎದುರುಗಡೆ ಪದ್ಮಾಸನ ಹಾಕಿ ಕುಳಿತ ಪ್ರತಿಯೊಬ್ಬರನ್ನು ಕಣ್ತುಂಬಾ ನೋಡಿ ಮೇಲೆದ್ದು ಆಗಸವನ್ನೊಮ್ಮೆ ದಿಟ್ಟಿಸಿ ನಂತರ ತನ್ನೆದುರಿನ ಪ್ರಕೃತಿಯನ್ನೊಮ್ಮೆ ಕಣ್ಣು ತುಂಬಾ ನೋಡಿದವನೇ ಬದುಕಿನ್ನು ಸಾಕೆನಗೆ ಸಮಾಧಿ ಸ್ಥಿತಿಗೆ ಇಳಿಯಲು ಅನುಮತಿ ಕೊಡಿ ಎಂದೊಡನೆ ಎಲ್ಲರೂ ಎದ್ದು ಗುರುದೇವಾ ಎಂದು ಕರ ಮುಗಿದು ಕಣ್ಣು ಮುಚ್ಚಿ ನಿಂತರು. ಆಗ ಎಲ್ಲರನ್ನು ಆಶೀರ್ವದಿಸಿ ನಿಧಾನವಾಗಿ ಮುಂದೆ ಸಾಗಿ ವಿಶಾಲವಾದ ಇಸಿಗಿ ಪೆಳೆಯಲ್ಲಿರುವ ಬಾಯ್ದೆರೆದ ಹುತ್ತದೊಳಕ್ಕೆ ಇಳಿದು ಮರೆಯಾದರು.

ಶ್ರೀ ನಾರ್ಮುನಿಯು ಐಕ್ಯರಾದ ನಂತರ ಸಾವಕ್ಕ ನಾಡಗೌಡ ಹಾಗೂ ಚಿಕ್ಕ ಭೈರೇಶರ ಸ್ಥಿತಿಯು ಸದ್ದು-ಗದ್ದಲಗಳಿಗೆ ಎಚ್ಚರವಾಗುವ ಸ್ಥಿತಿಯನ್ನು ಮೀರಿ ಹೋಗಿತ್ತು. ನಾಡಗೌಡರು ಮುಂದಿನ ಕರ್ತವ್ಯದ ಪ್ರಜ್ಞೆಯನ್ನು ನೆನಸಿಕೊಂಡು ಎಲ್ಲರನ್ನು ಎಚ್ಚರಗೊಳಿಸಿ ನಾರದಮುನಿಗೆ ಮಂದಿರ ಸ್ಥಾಪನೆ ಮಾಡುವ ವ್ಯವಸ್ಥೆಗಾಗಿ ಕರೆದುಕೊಂಡು ಹೋಗಿ ಹುತ್ತದ ಮುಂದೆ ಮಂದಿರವನ್ನು ನಿರ್ಮಾಣ ಮಾಡಿದರು. ಎಲ್ಲರೂ ಮುನಿಯನ್ನು ಅರಸುತ್ತ ಚಿಗಟೇರಿಯಲ್ಲಿಯೇ ಐಕ್ಯರಾದರು.

ಮಗು ಬದುಕಿಸಿದ್ದು : ಕಾಲ ಗತಿಸಿದಂತೆ ಮುನಿಗೆ ಭಕ್ತರ ಸಂಖ್ಯೆಯು ಹೆಚ್ಚಾಯಿತು. ಚಿತ್ರದುರ್ಗದ ಸೀಮೆಯ ಸಿದ್ದಜ್ಜ ಹಾಗೂ ಸಾವಿತ್ರಮ್ಮ ಎಂಬ ದಂಪತಿಗಳಿಗೆ ಬಹಳ ದಿನಗಳವರೆಗೆ ಮಕ್ಕಳಾಗಿರಲಿಲ್ಲ. ನಾರದ ಮುನಿಯನ್ನು ಮನದಲ್ಲಿಯೇ ಧ್ಯಾನಿಸಿದರು. ಒಂದು ವರ್ಷದೊಳಗೆ ಅವರಿಗೆ ಅಪೂರ್ವ ಗಂಡು ಮಗುವೊಂದು ಜನನವಾಯಿತು. ತಮ್ಮ ಹರಕೆಯನ್ನು ಸಲ್ಲಿಸಲು ಸ್ವಾಮಿಯ ಸನ್ನಿಧಿಗೆ ಹಂಬಲಿಸಿ ಪಡೆದ ಮಗುವನ್ನು ಕರೆದುಕೊಂಡು ಹೋಗುವ ಮಾರ್ಗ ಮಧ್ಯದಲ್ಲಿ ಮಗುವು ಬಿಸಿಲಿನ ತಾಪಕ್ಕೋ ಅಥವಾ ಪ್ರಕೃತಿಯ ವಿಕೋಪಕ್ಕೋ ಮೈಸೆಟಿಸಿ ಕಣ್ಣುಗಳನ್ನು ತಿರುಗಿಸಿ ಸುಮ್ಮನಾಗಿ ಬಿಟ್ಟಿತು. ತೆರೆದ ಬಾಯಿ ತೆರದಂತೆಯೇ ಬಿಟ್ಟ ಕಣ್ಣು ಬಿಟ್ಟಂತೆಯೇ ಇತ್ತು. ಪ್ರೀತಿಯ ಕಂದಮ್ಮನ ಪ್ರಾಣ ಪಕ್ಷಿ ಹಾರಿ ಹೋಯಿತಲ್ಲ ಎಂದು ಮಾತಾಪಿತೃಗಳು ಕಂಗಾಲಾಗಿ ರೋಧಿಸಿದರು. ಕೂಡಲೇ ಸಿದ್ದಜ್ಜ ಮಗುವಿಗೆ ನೀರು ತರಲು ಓಡಿದನು.

ತಾಯಿ ಸಾವಿತ್ರಮ್ಮ ದಿಗಿಲುಗೊಂಡಳು ಮುನಿಯೇ ನಿನ್ನ ಸನ್ನಿಧಿಗೆ ಹೊರಟದ್ದು ತಪ್ಪಾಯಿತೆ? ನಿನ್ನ ಕೃಪೆಯಿಂದ ಹುಟ್ಟಿದ ಮಗು ಸತ್ತರೆ ನಿನಗೆ ಅಪವಾದ ತಪ್ಪುವುದೇ? ನಿನ್ನಲ್ಲಿಗೆ ಹೊರಟು ಮಗುವನ್ನು ಕಳೆದುಕೊಂಡ ನಮ್ಮ ಒಡಲ ಉಸಿರು ಶಾಪವಾಗಿ ನಿನಗೆ ತಟ್ಟಲಾರದೆ ಎಂದು ಮುನಿಯನ್ನು ನೆನೆ ನೆನೆದು ರೋಧಿಸಿ, ನೀನೀಗಲೇ ಬಂದು ನನ್ನ ಮಗುವನ್ನು ಬದುಕಿಸದೆ ಹೋದರೆ ನನ್ನ ಪಾತಿವ್ರತ್ಯದ ಮೇಲಾಣೆ ಎಂದು ಮಗುವಿನ ಉಳಿವಿಗಾಗಿ ಹಂಬಲಿಸಿದಳು.

ಮುನಿಯ ದಯವೋ ಏನೋ ದಂಡ ಘಂಟೆ ಬಾರಿಸುತ್ತಾ ದಾರಿ ಹೋಕನೊಬ್ಬ ಆಗಮಿಸಿ ಬಂದು ಮಗುವಿನ ಸ್ಥಿತಿಯನ್ನು ನೋಡಿ ಮರುಗಿ ತನ್ನ ಕಮಂಡಲದ ಉದಕವನ್ನು ಮಗುವಿನ ಬಾಯಿಗೆ ಹಾಕಿ ಮಗುವನ್ನು ಮೈದಡವಿ ತಾಯಿಗೆ ಸಾಂತ್ವನ ಹೇಳಿ ನೋಡುತ್ತಿದಂತೆಯೇ ಮುಂದೆ ಸಾಗಿಬಿಟ್ಟನು. ನಂತರ ನೀರಿನ ಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡು ಅಲ್ಲಿಗೆ ಓಡೋಡಿ ಬಂದ ಸಿದ್ದಜ್ಜ ಮಗು ಆಡುವುದನ್ನು ಕಂಡು ಆಶ್ಚರ್ಯಪಟ್ಟನು. ಸಂತೋಷದಿಂದ ನಲಿದಾಡಿದನು. ಆ ಸಂದರ್ಭದಲ್ಲಿ ದಂಪತಿಗಳಿಬ್ಬರ ಆನಂದಕ್ಕೆ ಪಾರವೇ ಇಲ್ಲವಾಯಿತು. ನಂತರ ದಂಪತಿಗಳಿಬ್ಬರು ನಾರದಮುನಿಯ ಕ್ಷೇತ್ರವಾದ ಚಿಗಟೇರಿಗೆ ಬಂದು ಹರಕೆ ತೀರಿಸಿ ಮರಳಿದರು.

ಈ ಘಟನೆಯು ನಡೆದದ್ದು ಸಿರಿಗೆರೆಯ ಪುರದಂಚಿನಲ್ಲಿ. ಆದ್ದರಿಂದ ಸಿರಿಗೆರೆಯ ಜನ ನಾರಾಯಣ ಕಟ್ಟೆ, ನಾರಂದನಕಟ್ಟೆ, ಎಂದು ಕರೆಯುತ್ತಾರೆ. ಈ ದೊಡ್ಡ ಐತಿಹ್ಯದ ಮೇಲೆ ಸಿರಿಗೆರೆಯಲ್ಲಿ 'ನಾರದ ಮುನಿ' ದೇವಸ್ಥಾನವನ್ನು ಕಟ್ಟಿಸಿದ್ದಾರೆ. ದೇವಸ್ಥಾನದಲ್ಲಿ ನಾರಪ್ಪ ಮತ್ತು ಸಾವಕ್ಕನ ಮೂರ್ತಿಗಳನ್ನು ಕಾಣುತ್ತೇವೆ. ಸಿರಿಗೆರೆಯಲ್ಲಿಯೂ ಪ್ರತಿನಿತ್ಯ ಪೂಜೆಗಳು ನಡೆಯುತ್ತವೆ.[೨]

ಮನುಷ್ಯ ಮತ್ತು ಕುದುರೆಯ ಬಗ್ಗೆ ಇರುವ ಐತಿಹ್ಯ

ನಾರಪ್ಪನ ದೇವಸ್ಥಾನದಲ್ಲಿ ದೊಡ್ಡ ಕುದುರೆಯ ವಿಗ್ರಹವನ್ನು ಮತ್ತು ಮನುಷ್ಯನ ವಿಗ್ರಹವನ್ನು ಕಾಣಲಾಗಿದೆ. ಕುದುರೆಯ ವಿಗ್ರಹ ದೊಡ್ಡದಾಗಿದೆ. ಮನುಷ್ಯನ ವಿಗ್ರಹ ಸ್ವಲ್ಪ ಸಣ್ಣದಿದೆ. ಈ ತರಹದ ಕುದುರೆಯು ಮೈಲಾರ ಲಿಂಗನ ಗುಡಿಯಲ್ಲಿಯು ಇದೆ. ಮನುಷ್ಯ ಮತ್ತು ಕುದುರೆಯ ಬಗ್ಗೆ ಅಲ್ಲಿರುವ ಐತಿಹ್ಯಗಳಿವು.

ಹಿಂದೆ ನಾರಪ್ಪನ ಪೂಜಾರಿಕೆಯ ಸಂದರ್ಭದಲ್ಲಿ ಮುನಿಯಪ್ಪನಿಗೂ ಮತ್ತು ಶಾಸ್ತ್ರಿಗಳಿಗೂ ಕಿತ್ತಾಟ ಪ್ರಾರಂಭವಾದಾಗ ಸಮಯಕ್ಕೆ ಸರಿಯಾಗಿ ಆನೆಗುಂದಿ ಮಹಾರಾಜರಾದ ನರಪತಿ ಮಹಾರಾಜರು ಅಲ್ಲಿಗೆ ಧಾವಿಸಿ ಬಂದರು. ಈ ಮೊದಲು ಪೂಜೆಯನ್ನು ಸಂಪೂರ್ಣ ಮುನಿಯಪ್ಪನೆ ಮಾಡುತ್ತಿದ್ದನು. ಇದನ್ನು ಕಂಡು ಕೆಲವು ಪುರೋಹಿತರು ಅಸಮಾಧಾನಗೊಂಡು ಪೂಜಾರಿಕೆಯ ಪಟ್ಟದಿಂದ ಕೆಳಗಿಳಿಸಬೇಕು. ಅವನಿಗೆ ಶಾಸ್ತ್ರ, ವೇದ, ಪುರಾಣ, ಪೂಜಾವಿಧಾನಗಳು ಗೊತ್ತಿಲ್ಲ ಅವನು ಬೇಡವೆಂದು ಪಿತೂರಿ ನಡೆಸಿ ಬೇರೆ ಕಡೆ ಇರುವ ಕೃಷ್ಣಮೂರ್ತಿಯನ್ನು ಕಿತ್ತು ತಂದು ನಾರುಮ್ಮುನಿಯ ಗರ್ಭಗುಡಿಯಲ್ಲಿರಿಸಿ ನಾರುಮ್ಮುನಿಗೆ ಜನಿವಾರವನ್ನು ಹಾಕಿ ಎರಡು ವಿಗ್ರಹಗಳನ್ನು ಪೂಜಿಸತೊಡಗಿದನು. ಮುನಿಯಪ್ಪನು ಲಿಂಗವನ್ನು ಹಾಕಿ ಪೂಜಿಸಿದರೆ, ಶಾಸ್ತ್ರಿಗಳು ಜನಿವಾರವನ್ನು ಹಾಕಿ ಪೂಜಿಸುತ್ತಿದ್ದರು. ಇದರಿಂದ ಇಬ್ಬರ ನಡುವೆ ಕಿತ್ತಾಟ ಪ್ರಾರಂಭವಾಯಿತು.

ರಾಜರು ಬಂದ ತಕ್ಷಣ ಮುನಿಯಪ್ಪನು ಮಂಗಳಾರತಿ ತಟ್ಟೆಯನ್ನು ತಂದು ಮಹಾರಾಜರೆದುರಿಗೆ ಹಿಡಿದು ನಿಂತನು. ಆಗ ಶಾಸ್ತ್ರಿಗಳು ಸ್ವೀಕರಿಸಬೇಡಿ ವಿಧಿ ವಿಧಾನಗಳಿಲ್ಲದ ಮಂಗಳಾರತಿ ಎಂದನು. ನಂತರ ಶಾಸ್ತ್ರಿಗಳು ತೀರ್ಥವನ್ನು ಕೊಡುವಾಗ ಸ್ವೀಕರಿಸಬೇಡಿ ಅದು ತಿಳುವಳಿಕೆ ಇಲ್ಲದ ತೀರ್ಥ ಎಂದನು. ಹೀಗೆ ಇಬ್ಬರ ಕಿತ್ತಾಟವು ರಾಜರ ಮುಂದೆಯೇ ನಡೆಯಿತು. ಇವರಿಬ್ಬರ ಪ್ರಕರಣವನ್ನು ತಿಳಿದುಕೊಂಡು ಇಬ್ಬರನ್ನು ತಮ್ಮ ಹತ್ತಿರ ಕರೆದು ನಾನು ನಿಮಗೊಂದು ಪರೀಕ್ಷೆ ನಡೆಸುತ್ತೇನೆ. ಅದರಲ್ಲಿ ಯಾರು ನಿಜ ಹೇಳುತ್ತಾರೋ ಅವರಿಗೆ ಪೂಜಾರಿಕೆಯ ಪಟ್ಟ ಎಂದರು.

ಆಗ ತಮ್ಮ ಎದುರಿಗಿದ್ದ ಕುದುರೆಯನ್ನು ತೋರಿಸಿ ನಮ್ಮ ಕುದುರೆ ಗರ್ಭಿಣಿಯಾಗಿದೆ. ಆದ್ದರಿಂದ ಕುದುರೆಯು ಯಾವ ಮರಿಯನ್ನು ಹಾಕುತ್ತದೆ ಎಂದು ಉತ್ತರಿಸಬೇಕು ಎಂದಾಗ ಕೂಡಲೇ ಲೆಕ್ಕಚಾರ ಹಾಕಿ ಶಾಸ್ತ್ರಿಗಳು ತಮ್ಮ ಕುದುರೆಯು ಹೆಣ್ಣು ಮರಿಯನ್ನು ಹಾಕುತ್ತದೆ ಎಂದರು. ಆಗ ಮುನಿಯಪ್ಪನನ್ನು ಕೇಳಿದಾಗ ಪ್ರಭುಗಳೇ ನಾನು ನಾಳೆ ಸೂರ್ಯೋದಯದ ಮೊದಲೇ ಶ್ರೀ ಸ್ವಾಮಿಯ ಮಾತೊಂದು ಕೇಳಿ ನನ್ನ ತೀರ್ಮಾನವನ್ನು ತಿಳಿಸುತ್ತೇನೆ ಎಂದನು. ಇದಕ್ಕೆ ಪ್ರಭುಗಳು ಸರಿ ಎಂದು ಒಪ್ಪಿಕೊಂಡರು. ಮರುದಿನ ಬೆಳಿಗ್ಗೆ ನೆರೆದ ಜನಸ್ತೋಮದ ಎದುರು ಮುನಿಯಪ್ಪ ಪ್ರಭು ನಿಮ್ಮ ಕುದುರೆ ಗಂಡು ಮರಿಯನ್ನು ಹಾಕುತ್ತದೆ ಎಂದು ಉತ್ತರಿಸಿದನು. ಅದೇ ಸಮಯಕ್ಕೆ ಕುದುರೆಯ ಬಿಡಾರದಿಂದ ಓಡೋಡಿ ಬರುತ್ತಿದ್ದ ಭಟರನ್ನು ಕಂಡು ಮಹಾರಾಜರು ಏನೆಂದು ಕೇಳಿದಾಗ ಕುದುರೆಯು ಪ್ರಸವ ವೇದನೆಯಿಂದ ನರಳುತ್ತಿದೆ ಎಂದನು. ಇದನ್ನು ಕೇಳಿ ಎಲ್ಲರೂ ಕುದುರೆ ಇದ್ದಲ್ಲಿಗೆ ಬಂದರು.

ಎಲ್ಲರ ಎದುರೇ ರಾಜರ ಕುದುರೆಯು ಗಂಡು ಮರಿಯನ್ನು ಪ್ರಸವಿಸಿತು. ಆಗ ರಾಜರು ಪೂಜಾರಿಕೆಯನ್ನು ಮುನಿಯಪ್ಪನೇ ಮಾಡಲಿ ಆತನು ನಾನಿಟ್ಟ ಪರೀಕ್ಷೆಯಲ್ಲಿ ಪಾಸಾಗಿದ್ದಾನೆ ಎಂದರು. ಮತ್ತು ಹೋಗುವಾಗ ಸ್ವಾಮಿಯ ಸೇವೆಗಾಗಿ ರಾಜನು ತಮ್ಮ ಕುದುರೆಯನ್ನು ಅಲ್ಲಿಯೇ ಬಿಟ್ಟು ಹೋದನು ಎಂದು ಕುದುರೆಯ ಬಗ್ಗೆ ಐತಿಹ್ಯವನ್ನು ಹೇಳುತ್ತಾರೆ. ಮನುಷ್ಯನು ಕುದುರೆಯ ಕಾಲ್ದಳದವನು ಎನ್ನುತ್ತಾರೆ. ಹಾಗೆಯೇ ಕುದುರೆಯ ಕಳ್ಳ ಎಂತಲೂ ಕುದುರೆಯನ್ನು ಕದ್ದೊಯ್ಯುವ ಸಂದರ್ಭದಲ್ಲಿ ಸಿಕ್ಕಿದ್ದರಿಂದ ಅವನ ತಲೆಯಲ್ಲಿ ಗೂಟ ಬಡಿದಿದ್ದಾರೆ ಎಂದು ಹೇಳುತ್ತಾರೆ. ಅಲ್ಲದೆ ಮನುಷ್ಯನ ವಿಗ್ರಹಕ್ಕೆ ಮೈಲಾರಲಿಂಗನೆಂದು ಮೊದಲಿನಿಂದಲೂ ಮೈಲಾರಲಿಂಗನಿಗೂ, ನಾರಪ್ಪನಿಗೂ ಆಗುತ್ತಿರಲಿಲ್ಲ. ಆದ್ದರಿಂದ ಮೈಲಾರಲಿಂಗನು ನಾರಪ್ಪನ ಗುಡಿಗೆ ಬಂದಾಗ ನಾರಪ್ಪ ಮೈಲಾರ ಲಿಂಗನ ತಲೆಯಲ್ಲಿ ಗೂಟವನ್ನು ಬಡಿದಿದ್ದಾನೆ ಎಂದು ಒಮ್ಮೆ ನಾರಪ್ಪ ಮೈಲಾರಲಿಂಗನ ಗುಡಿಗೆ ಹೋದಾಗ ಮೈಲಾರ ಲಿಂಗ ನಾರಪ್ಪನ ಕೈಯಲ್ಲಿ ಗೂಟವನ್ನು ಬಡಿದಿದ್ದಾನೆಂದು ಕೆಲವರು ಐತಿಹ್ಯಗಳನ್ನು ಹೇಳುತ್ತಾರೆ.

ಉಯ್ಯಾಲೆ ಕಂಬ : ಪ್ರತಿಯೊಂದು ದೇಗುಲಗಳಲ್ಲೂ ತುಲಾಭಾರ ಅಥವಾ ಉಯ್ಯಾಲೆ ಕಂಬಗಳನ್ನು ಕಾಣುತ್ತೇವೆ. ಹಾಗೆಯೇ ನಾರಪ್ಪನ ದೇಗುಲದ ಮುಂದೆ ಈಗಲೂ ತುಲಾಭಾರ ಅಥವಾ ಉಯ್ಯಾಲೆ ಕಂಬಗಳನ್ನು ಕಾಣಬಹುದು. ಈ ಕಂಬಗಳ ಬಗ್ಗೆ ಹಿಂದೆ ಶಾಸ್ತ್ರಿಗಳು ಕೃಷ್ಣನ ವಿಗ್ರಹವನ್ನು ತಂದಿಟ್ಟುಕೊಂಡು ಪೂಜೆ ಮಾಡುತ್ತಿದ್ದರು. ಯಾವಾಗ ಪೂಜಾರಿಕೆಯ ಪಟ್ಟ ಮುನಿಯಪ್ಪನದಾಯಿತೋ ಆಗ ಮುನಿಯಪ್ಪನು ಕೃಷ್ಣನ ಮೂರ್ತಿಯನ್ನು ಕಡೆಗೆ ಹಾಕುವ ಯೋಚನೆಯನ್ನು ಮಾಡುತ್ತಿದ್ದನು.

ಈ ಸಂದರ್ಭದಲ್ಲಿ ಒಂದು ದಿನ ನಾರದಮುನಿ ಕನಸಿನಲ್ಲಿ ಹೋಗಿ ನಮ್ಮಿಬ್ಬರಲ್ಲಿ ಭಿನ್ನ ಭೇದವಿಲ್ಲ. ಕೃಷ್ಣನನ್ನು ಹೊರಹಾಕಬೇಡ. ಇನ್ನು ಮುಂದೆ ಪ್ರತಿಯೊಂದು ಕಾರ್ಯದಲ್ಲಿ ಕೃಷ್ಣನೇ ನನ್ನೆಲ್ಲ ಕಾರ್ಯವನ್ನು ನಿರ್ವಹಿಸುತ್ತಾನೆ ಎಂದು ಹೇಳಿ ಮಾಯವಾದನು. ಮತ್ತು ನಾರಪ್ಪ, ಕೃಷ್ಣನಿಗೂ, ಸಾವಕ್ಕನಿಗೂ ಮದುವೆ ಮಾಡಿಸಿ ಇಬ್ಬರನ್ನು ಕೂಡಿಸಿ ಉಯ್ಯಾಲೆಯನ್ನು ಆಡಿಸುತ್ತಿದ್ದನಂತೆ. ಆದ್ದರಿಂದಲೇ ಪ್ರತಿವರ್ಷದ ಜಾತ್ರೆಯಲ್ಲಿ ಕೃಷ್ಣನಿಗೂ, ಸಾವಕ್ಕನಿಗೂ ಮದುವೆ ಮಾಡಿಸಿ ಉಯ್ಯಾಲೆಯಲ್ಲಿ ಕೂರಿಸಿ ಇಬ್ಬರನ್ನು ತೂಗುತ್ತಾರೆ.

ಈ ರೀತಿಯಾದ ಐತಿಹ್ಯಗಳು ಚಿಗಟೇರಿ ಪ್ರದೇಶದಲ್ಲಿ ಮತ್ತು ಸಿರಿಗೆರೆ, ಹುಲ್ಲೂರು ಪ್ರದೇಶದಲ್ಲಿ ಯತೇಚ್ಛವಾಗಿ ಕಂಡು ಬರುತ್ತವೆ. ಈ ಐತಿಹ್ಯವನ್ನು ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅವಲೋಕಿಸಲಾಗಿದೆ. ಹಾಗೆಯೇ ಡಾ.ವಿ. ಶಿವನಗೌಡ ರಚಿಸಿರುವ ದಂಡ ಘಂಟೆಯ ಶರಣ 'ಶ್ರೀ ಶಿವನಾರನ್ಮುನಿ' ಎಂಬ ಕೃತಿಯಿಂದಲೂ ತಿಳಿದು ವಿವರಿಸಲಾಗಿದೆ.

೭. ೩ ಕೃತಿಗಳು

'ಚಿಗಟೇರಿ ನಾರಪ್ಪ'ನ ಬಗ್ಗೆ ಇದುವರೆಗೂ ಹೆಚ್ಚು ಕೃತಿಗಳು ರಚಿತವಾಗಿಲ್ಲ. ಆದರೆ ಕಡಬಗೇರಿಯ ಡಾ.ವಿ. ಶಿವನಗೌಡ ಇವರು ಶ್ರೀ ಕ್ಷೇತ್ರ ಚಿಗಟೇರಿ ದಂಡ ಘಂಟೆಯ ಶರಣ 'ಶ್ರೀ ಶಿವನಾರುನ್ಮುನಿ' ಎಂಬ ಪುಸ್ತಕವನ್ನು ರಚಿಸಿದ್ದಾರೆ. ಈ ಹಿಂದೆ ೧೯೮೮ರಲ್ಲಿ ಮೊದಲ ಮುದ್ರಣವನ್ನು ಮತ್ತು ಅದೇ ಪುಸ್ತಕವನ್ನು ಶ್ರೀ ಚಿಗಟೇರಿಯ ಶ್ರೀ ಶಿವನಾರುನ್ಮುನಿ ಮಹಾತ್ಮೆ ಎಂಬ ಹೆಸರಿನಿಂದ ಬಿಡುಗಡೆ ಮಾಡಿದ್ದಾರೆ. ನಂತರ ೨೦೦೧ರಲ್ಲಿ ಈ ಕೃತಿಯ ಮರುಮುದ್ರಣವನ್ನು ಮಾಡಿಸಿದ್ದಾರೆ. ಇದರ ಜೊತೆಗೆ ನಾಟಕವನ್ನು ರಚಿಸಿದ್ದಾರೆ ಹಾಗೂ ಶಿವನಪ್ಪಗೌಡ, ಆರ್. ಶಿವಕುಮಾರ ಸ್ವಾಮಿ ಕುರ್ಕಿ ಹಾಗೂ ಚಂದ್ರಶೇಖರ ಪಾಳ್ಯ ಇವರ ಸಾಹಿತ್ಯದಲ್ಲಿ 'ಹಾಡುಗಳ ಧ್ವನಿ ಸುರುಳಿ' ಹೊರಬಂದಿದೆ. ಈ ಮೇಲಿನ ಕೃತಿಗಳು ಮಾತ್ರ ನಾರದ ಮುನಿಯ ಹೆಸರಿನಲ್ಲಿ ಬಂದಿರುವ ಸ್ವಲ್ಪ ಪ್ರಮಾಣದ ಕೃತಿಗಳು ಆಗಿವೆ.

೭.೪ ಹಾಡುಗಳು

ದೇವತೆಗಳ ಬಗ್ಗೆ ಸ್ಥಳೀಕರು ಹಾಡುಗಳನ್ನು ಕಟ್ಟಿಕೊಂಡಿರುವುದನ್ನು ಕಾಣುತ್ತೇವೆ. ಕೆಲವೊಂದು ದೇವರಲ್ಲಿ ಕಾವ್ಯಗಳು ಸಿಗುತ್ತವೆ. ಉದಾಹರಣೆಗೆ ಮೈಲಾರಲಿಂಗ, ಮಂಟೇಸ್ವಾಮಿ, ಮಲೆಮಾದೇಶ್ವರ, ಕಾಳಿಂಗರಾಯ ಮುಂತಾದ ಸಾಂಸ್ಕೃತಿಕ ನಾಯಕರ ಹಾಡುಗಳನ್ನು, ಕಾವ್ಯಗಳನ್ನು ಕಾಣುತ್ತೇವೆ. ಆದರೆ ನಾರಪ್ಪನ ಬಗ್ಗೆ ಕಾವ್ಯಗಳು ಕಂಡುಬಂದಿರುವುದಿಲ್ಲವಾದರೂ ಸಣ್ಣ ಪುಟ್ಟ ಹಾಡುಗಳನ್ನು ಮಾತ್ರ ಅಲ್ಲಿಯ ಭಕ್ತ ಸಮೂಹ ಕಟ್ಟಿಕೊಂಡಿರುತ್ತಾರೆ.

೧. ಭಜನೆ ಪದಗಳು

ಓಂ ನಮೋ ನಮೋ ನಾರಂದ

ಓಂ ನಮೋ ನಮೋ ಶ್ರೀಗಂಧ

ಭಕ್ತ ಬಂಧುವೆ ನಿತ್ಯ ಪಾಲನೆ

ನಾರಂದ ನಾರಂದ ನಾರಂದ

ಭಕ್ತ ಬಂಧುವೆ ನಿತ್ಯಪಾಲನೆ

ನಾರಂದ ನಾರಂದ ನಾರಂದ

ಭಕ್ತಶೀಲನೆ ಮಹಿಮ ಪುರುಷನೇ

ನಾರಂದ ನಾರಂದ ನಾರಂದ ॥ ೨ ॥

ಓಂ ನಮೋ ನಮೋ ನಾರಂದ

ಓಂ ನಮೋ ನಮೋ ಶ್ರೀಗಂಧ ॥ ೨ ॥

ಕಾವಿ ಕಮಂಡಲ ತೊಟ್ಟು

ಅನೇಕ ಪಾವನ ಬಿಟ್ಟು ॥ ೨ ॥

ಬೆಳಗಿತು ನಿನ್ನಯ ಜ್ಯೋತಿ...ಜ್ಯೋತಿ.... ಜ್ಯೋತಿ...

ಓಂ ನಮೋ ನಮೋ ನಾರಂದ

ಓಂ ನಮೋ ನಮೋ ನೀಬಂದ.

ಹಾಡಿದವರು

ಕಡಬಗೇರಿ ನಾರಪ್ಪ

೨. ಹೊತ್ತು ಮುಳುಗಿದರೇನು ಕತ್ತಲಾದರೇನು

ಅಪ್ಪ ನಿನ ಗುಡಿಗೆ ಬರುವೇವು

ಅಪ್ಪ ನಿನ ಗುಡಿಗೆ ಬರುವೇವು ॥ ಪ ॥

ಮಲ್ಲಿಗೆ ಹೂವಾಗಿ ಚೆಲ್ಲಿತು ನಿನ್ನ ಜಾತ್ರೆ ॥ ೨ ॥

ಚಲ್ಲಾಟಗಾರ ಚಿಗಟೇರಿ ನಾರಂದ

ಚಲ್ಲಾಟಗಾರ ಚಿಗಟೇರಿ ನಾರಂದ

ಮುತ್ತಿನ ಬಾಗಿಲ ತೆಗಿದಿರೊ ।

ನಾರಂದ ಬರುವಾಗ ಮಾಳೆಲ್ಲ ಘುಮ್ಮೆಂದು
ನೆಲವೆಲ್ಲ ಗರಿಗೆ ಬಿಗಿದಾವೊ
ನೆಲವೆಲ್ಲ ಗರಿಗೆ ಬಿಗಿದಾವೊ
ಮೂಡಿಂದ ಮಳೆಯು ಸುರಿದಾವು।

ಕರಡಿ ಗುಡ್ಡದ ಮೇಲೆ ಕಲ್ಲು ಕುದುರೆಯ ಕಟ್ಟಿ
ಗೊಂಡೇದ ಗೊಂಗಡಿ ಬಿಗಿಮಾಡಿ
ಗೊಂಡೇದ ಗೊಂಗಡಿ ಬಿಗಿಮಾಡಿ ನಾರಂದ
ಕಲ್ಲೇರಿ ಕಣಿವಿ ಇಳಿದಾನೋ।

ಹಾಡಿದವರು

ಕೆ. ಮುದುಕಪ್ಪ ಮತ್ತು ಸಂಗಡಿಗರು, ಕಡಬಗೆರೆ

೩. ಹೇಗೆ ಮರೆಯಾಲಿ ನಾರಂದನ
ಎಂತು ಭಜಿಸಾಲಿ ಮುನಿಪನ

ಹರಿಹರರಲ್ಲಿ ಸಮತೆಯ ಸಾರಲು
ಭಕ್ತರೊಳಗಿನ ಭೇದವನಳಿಸಲು
ಲಿಂಗ ಜನಿವಾರಗಳೆರಡನು ಧರಿಸಿದ।

ಬಡವರ ಬಂಧು ಕರುಣಾ ಸಿಂಧು
ಧೂಳುಗಾಲಲ್ಲಿ ನಾವು ಬರೆವೆವು ಇಂದು
ಮಂಗಳ ಮೂರ್ತಿ ಮಹಿಮಾ ಕೀರ್ತಿ।

ಭಕ್ತಿ ಇಲ್ಲದ ಅಕ್ಕಿ ಬೇಯಗೊಡದು ಶಕ್ತಿ
ಒಂದೊಂದೆ ಬೆಡಗಿಗೆ ಬೆಂದ ಪ್ರಸಾದವ
ತೋರಿ ಪವಾಡಗಳ ಮೆರೆದಿಪ ಮುನಿಪ।

ಧರೆಯೊಳು ಕಡಬಗೇರಿ ನಾರದ ಭಕ್ತರು
ಹಾಡಿ ರಚಿಸಿದ ನಾರದ ಕವನವ
ನಮೋ ನಮೋ ಶಿವ ನಾರದ ಮುನಿಯ।

ಹಾಡಿದವರು

ಕೆ. ಮುದುಕಪ್ಪ ಮತ್ತು ಸಂಗಡಿಗರು, ಕಡಬಗೇರೆ

೪. ಚಿಗಟೇರಿ ನಾರಂದ ಮುನಿಯೆ

ನಿಮ ಪಾದಕೆ ಶಿರಭಾಗಿರುವೆ ಹರನೆ ನರಜನ್ಮ
ಇದು ಬೇಡವೆ ಬೇಡ.
ಶಿವನೆ ನರಜನ್ಮ ಎನಗೆ ಸಾಕು ಮಾಡು
ಬಾಲ ಬ್ರಹ್ಮಚಾರಕೆ ಬೆಳೆದೆ ಕಾಮಧೇನು ಕೈಯಲ್ಲಿ
ಪಿಡಿದೆ ನಾನೆಂಬದು ನರುಕಕೆ ಎಳೆದು
ಉರಿಯುವ ಬೆಂಕ್ಯಾಗ ಸುಳಿದೆ ॥ ಚಿಗಟೇರಿ ನಾರಂದ ॥

ಅಕ್ಕ, ತಂಗಿ ತಾಯಿ ಎನಲಿಲ್ಲ
ಒರಳಿ ಒರಳಿ ನೋಡಿದ ನಿಗುಲ
ಕಡಿ ಕೋಪವ ಅವ ಬಿಡಲಿಲ್ಲ
ಗುರು ಮೋಕ್ಷ ಅವ ಪಡೇಲಿಲ್ಲ ॥ ಚಿಗಟೇರಿ ನಾರಂದ ॥

ಜನ್ಮಾಂತರ ಜನಿಸಲು ಬೇಡ
ನಾರಂದನ ಮರೆಯಲು ಬೇಡ
ನಾನೆಂಬುದ ನರಕಕೆ ಎಳೆದು
ಉರಿಯುವ ಬೆಂಕ್ಯಾಗ ಸುಳಿದೆ
ಹರನೇ ನರಜನ್ಮ ಇದು ಬೇಡವೇ ಬೇಡ
ಶಿವನೇ ನರಜನ್ಮ ಎನಗೆ ಸಾಕು ಮಾಡು ॥ ಚಿಗಟೇರಿ ನಾರಂದ ॥

ಹಾಡಿದವರು
ಸಕ್ರಪ್ಪ ನೇರ ಜಯಪ್ಪ ಚಿಗಟೇರಿ

೪. ಕೋಲಾಟದ ಪದ

ಹೇ ತಾನಂದಂದಿನಾನೋ ತಂದುನಾನೋ
ತಾನಂದಂದಿನಾನೋ ತಂದುನಾನೋ
ಯಾಕಪ್ಪ ನಾರಂದ ನಾಕ ನುಗ್ಗಾಗ್ಯಾವೆ
ನಾಕ ಬಜಾರ ತಗುದಾವೊ
ತಾನಂದಂದಿನಾನೋ ತಂದುನಾನೋ
ತಾನಂದಂದಿನಾನೋ ತಂದುನಾನೋ

ನಾಕ ಬಜಾರ ಎನೆಂದು ತಗುದಾವೋ
ನಾರಂದನ ತೇರ ಎಳೆದಾವೋ
ತಾನಂದಂದಿನಾನೋ ತಂದುನಾನೋ
ತಾನಂದಂದಿನಾನೋ ತಂದುನಾನೋ

ನಾರಂದ ತೇರೆ ಎಳೆದಾವೋ ಮರು ದಿನ
ಓಕಳಿನಾಡೆ ಬರುವಾನೋ
ತಾನಂದಂದಿನಾನೋ ತಂದುದುನಾನೋ
ತಾನಂದಂದಿನಾನೋ ತಂದುನಾನೋ

ಓಕಳಿನಾಡೆ ಬರುವ ನಾರಪ್ಪನ
ಸಾವಕ್ಕನ ಗೆಜ್ಜೆ ಗಳಿಗ್ಯಾಗೆ
ತಾನಂದಂದಿನಾನೋ ತಂದುನಾನೋ
ತಾನಂದಂದಿನಾನೋ ತಂದುನಾನೋ

ಅಕಡ ಗುಡ್ಡಕ್ಕೆ ಅಂಕಣ ಕುಂಬಳ
ಬೆಟ್ಟಕ್ಕೆ ಕುಡಿಯ ತಿರುವ್ಯಾಳೋ
ತಾನಂದಂದಿನಾನೋ ತಂದುನಾನೋ
ತಾನಂದಂದಿನಾನೋ ತಂದುನಾನೋ

ಬೆಟ್ಟಕ್ಕೆ ಕುಡಿಯ ಏನೆಂದು ತಿರುವ್ಯಾಳೋ
ಪಟ್ಟಣಕ್ಕೆ ಕಾಯ ಕಳುವ್ಯಾಳೆ
ತಾನಂದಂದಿನಾನೋ ತಂದುನಾನೋ
ತಾನಂದಂದಿನಾನೋ ತಂದುನಾನೋ
ಯಿಡ್ನ್ಯಯ್ಯಸ್ತು ದದ್ದಿಮ್ಮತ್ತ

ಹಾಡಿದವರು

ಕೆ. ಮಂಜುನಾಥ, ಚಿಗಟೇರಿ ಕೋಟೆ.

೫. ಸಂಪ್ರದಾಯದ ಪದ

ನಾರಂದ ಮುನಿಯೋ ನೀನಾರ ಹೇಳ
ಅಕ್ಕನೆ ದುರುಗಮ್ಮ ಹೊಟ್ಟೆ ಮೇಗಳಬಣ್ಣ

ಇಪ್ಪತ್ತು ಲಕ್ಷ ಬೆಲೆಯಾಗಿ
ನಾರಂದ ಮುನಿಯೇ ನೀನಾರ ಹೇಳ
ಇಪ್ಪತ್ತು ಲಕ್ಷ ಬೆಲೆಯಾದ ಬಣ್ಣವ
ಕೊಟ್ಟೂರು ಬಸವಣ್ಣ ಕಳವ್ಯಾನೆ
ನಾರಂದ ಮುನಿಯೇ ನೀನಾರ ಹೇಳ
ದಂಡಿನೆ ದುರುಗಮ್ಮನ ಮ್ಯಾರಿ ಮೈಗಳ ಬಣ್ಣವ
ನಲವತ್ತು ಲಕ್ಷಕ್ಕೆ ಬೆಲೆಯಾಗಿ
ನಾರಂದ ಮುನಿಯೇ ನೀನಾರ ಹೇಳ
ನಲವತ್ತು ಲಕ್ಷಕ್ಕೆ ಬೆಲೆಯಾದ ಬಣ್ಣವ
ನಾರಂದ ಕಳವ್ಯಾನೇ
ನಾರಂದ ಮುನಿಯೇ ನೀನಾರ ಹೇಳ
ಉಜ್ಜಿನಿ ಸಿದ್ದಪ್ಪನಿನ ಗಗ್ಗಳದ ಬಾಲೆಯಾಲೆ
ದೊಡ್ಡ ದುರುಗಮ್ಮ ಮೈ ತೊಳೆದೆ
ನಾರಂದ ಮುನಿಯೇ ನೀನಾರ ಹೇಳ
ದೊಡ್ಡ ದುರುಗಮ್ಮ ಮೈ ತೊಳೆದೆ
ಬರುವಾಗ ನಾರಂದ ಶಿಕುರವ ಇಳಿದಾನೆ
ನಾರಂದ ಮುನಿಯೇ ನೀನಾರ ಹೇಳ
ನಾರಣ್ಣ ಶಿಕುರ ಇಳಿಯುತ ಕೇಳ್ಯಾನೆ
ಅಂಗಳ ಉಡಿಗೆ ಕೊಡ ನೀರ
ನಾರಂದ ಮುನಿಯೇ ನೀನಾರ ಹೇಳ
ಅಂಗಳಯೇ ಉಡಿಗೆ ಕೊಡ ನೀರ
ನೀಸಿರೆಂಟೂ ಎಂಗಸಿಗೇಕೆ ಮೈಯ ಮಾಲೆ
ನಾರಂದ ಮುನಿಯೇ ನೀನಾರ ಹೇಳ
ಹೆಣ್ಣೆಂಬಯೇ ಮಾತ ಹೊಂದಿಸಿ ಕೇಳ್ಯಾನೆ
ನಾರಂದದೊಡ್ಡ ಸಾವಲಗ್ಯೊ
ನಾರಂದ ಮುನಿಯೇ ನೀನಾರ ಹೇಳ
ನಾರಂದ ನಯೋ ದೊಡ್ಡೆ ಸಾವಲಗ್ಗೆ

ಹಿರೇನಾಪುರ ಮಗಳಲ್ಲಾ
ನಾರಂದ ಮುನಿಯೇ ನೀನಾರ ಹೇಳ.

೬. ಹತ್ತು ಸುತ್ತಿನ ಕೋಟೆ ಹೊತ್ತಲೆ ಗರಿಗಲ್ಲೆ
ಹತ್ಯಾವೆ ಎರಡು ಮರಿ ಆನೆ ಹೇ ತಂದಾನಾನೋ
ಹತ್ಯಾವೆ ಎರಡು ಮರಿ ಆನೆ ನಾರಣ್ಣನ ಮಠವ
ಮಾಡೋದರೆಂತ ಶರುಣೋರೇ ಹೇ ತಂದಾನಾನೋ
ನಾಲ್ಕುಸುತ್ತಿನ ಕೋಟೆ ಅದರಡಿಗೆ ಗಗ್ಗರುಗಲ್ಲೆ
ಹತ್ಯಾವೇ ಎರಡು ಮರಿ ಆನೆ ತಂದಾನಾನೋ
ಹತ್ಯಾವೇ ಎರಡು ಮರಿ ಆನೆ ನಾರಪ್ಪನ ಮಠುವ
ಕಟ್ಟೋದರೆಂತ ಶರುಣೋರೆ ತಂದಾನಾನೋ
ಸೋಮವಾರ ದಿನ ಮುಂಜಾನೆ ಉದಿಯಾಕೇ
ಬಂದೋದರ್‍ಯಾರೆ ವಳಿಯಾಕೆ ತಂದಾನಾನೋ
ಬಂದೋದರ್‍ಯಾರೆ ವಳಿಯಾಕೆ ನಾರಣ್ಣನ ವಿಭೂತಿ
ಪೂಜೆ ತಡುದಾವೆ ತಂದಾನಾನೋ
ಬ್ರಸ್ಮಿವಾರ ದಿನ ಮುಂಜಾನೆ ಉದಯಾಕೆ
ಒಕ್ಕೊದರ್‍ಯಾರೆ ಮಠುದಾಕೆ ತಂದಾನಾನೋ
ಒಕ್ಕೂದರ್‍ಯಾರೆ ಮಠುದಾಕೆ ನಾರಣ್ಣನ ಗಂಧದ
ಪೂಜೆ ತಡುದಾವೇ ತಂದಾನಾನೋ
ಬಿಳಿಯ ಹಾವಿಗೆ ಜೋಳಿನ ತಲೆದಿಂಬು
ಇರುವೆನೆ ಕೆಂಜೆಡಿಗೆ ಒಳವದಿಕೆ ತಂದಾನಾನೋ
ಇರುವೆನೆ ಕೆಂಜೆಡಿಗೆ ಒಳವದಿಕೆ ಮಸಣ್ಣನ ಮ್ಯಾಲೆ
ಸ್ವಾಮಿ ನಾರಣ್ಣನ ಸಕ ನಿದ್ರೆ ತಂದಾನಾನೋ
ಮಲ್ಲಿಗೆ ಹಾಸಿಗೆ ಚಾಳಿನ ತಲೆದಿಂಬು
ಎಳಾಡಿ ಸರ್ಪ ಒಳವದಿಕೆ ತಂದಾನಾನೋ
ಎಳಾಡಿ ಸರ್ಪ ಒಳವದಿಕೆ ಮೇಲೆ
ತಂದೇ ನಾರಣ್ಣನ ಸಕನಿದ್ರೆ ತಂದಾನಾನೋ

ಮುಂದಾಕ ಸಿರಿಗೆರೆ
ಹಿಂದಾಗ ಕೊಟ್ಟೂರು
ನಡುವಲ ಗುಂಪು ಚಿಗಟೇರಿ
ನಡುವಲ ಗುಂಪೇ ಚಿಗಟೇರಿ
ನಾರಣ್ಣನ ಬಂಗಾರದ ಕಳಸ ಕಳುವ್ಯಾರೆ ತಂದು ನಾನೋ

೭. ನಾರಂದ ಮುನಿಯೇ ನಂದಿ ಸರ್ಪನ ಏರ‍್ಯಾನೆ
ಭ್ಯಾಗ್ಯನು ಬಚ್ಚಲಾಗೆ ಎದ್ದು ಜಳಕಾಮಾಡಿ
ಜತ್ತು ಜರ್ತರು ನೆನೆದಯ್ಯ.
ನಾರಂದ ಮುನಿಯೇ ನಂದಿಸರ್ಪನ ಏರ‍್ಯಾನೆ
ಜತ್ತನೆ ಜರುತಾರು ನೆನೆದು ಬಣ್ಣ ಹುಡಿಸಿ
ತಾಯವ್ವನ ಬೇವರು ವರಸಣ್ಣ
ನಾರಂದ ಮುನಿಯೇ ನಂದಿ ಸರ್ಪನ ಏರ‍್ಯಾನೆ
ಅಲ್ಲೇನೆ ಮರಿಯವ್ವ ಅಕ್ಕನೇ ದುರುಗಮ್ಮ
ಮುತ್ತಿನಣ್ಣ ತಮ್ಮ ಮರಿಗೋಣಿ
ನಾರಂದ ಮುನಿಯೆ ನಂದಿ ಸರ್ಪನ ಏರ‍್ಯಾನೆ
ಮುತ್ತಿನಣ್ಣನೆ ತಮ್ಮ ಮರಿಗೋಣ ಮುವಾರೆ
ಮಾತಾನಾಡ್ಯಾರೆ ಮಠುದಾಗೆ
ನಾರಂದ ಮುನಿಯೇ ನಂದಿಸರ್ಪ ಏರ‍್ಯಾನೆ
ನಾರನೆ ಆಡ್ಯಾನೆ ಮಠುದಾಗೆ ಮೂವ್ವರೆ
ದುಕಾಡ ಕೊಡೆ ಕೊಡು ಬೇಗ
ನಾರಂದ ಮುನಿಯೆ ನಂದಿ ಸರ್ಪ ಎರ‍್ಯಾನೆ
ಅಪ್ಪಣೆ ಕೊಟ್ಟರೆ ಇರಿದು ಕೊಂದೀಯವ್ವ
ತಕ್ಕಡಿ ತಾಸ ತಡಿಯವ್ವ
ನಾರಂದ ಮುನಿಯೇ ನಂದಿಸರ್ಪ ಏರ‍್ಯಾನೇ
ತಕ್ಕಡಿ ಏತಕ್ಕ ತಡಿಯವ್ವ ನಮ್ಮ ತಂಗಿ
ವಸರು ಬಂದಲ್ಲಿ ವಡಿಯವ್ವ
ನಾರಂದ ಮುನಿಯೇ ನಂದಿಸರ್ಪ ಏರ‍್ಯಾನೆ

ಹಾಡಿದವರು

ಕುಲ್ಡ ಪಕ್ಕಿರಪ್ಪರ ದುರುಗಮ್ಮ, ಮಾಳ್ಗಿ ಗಂಗಮ್ಮ
ಕಡಬಗೇರಿ ಮರಿಯಮ್ಮ, ಸಕ್ರಪ್ಪರ ಕಾಳಮ್ಮ, ಚಿಗಟೇರಿ.

೮. ಮಂಗಳಾರತಿ ಪದ

ಇಟ್ಟ ಅಡಿಗೆವಲ್ಲಿ ಸುಟ್ಟ ಸುಣ್ಣವಲ್ಲ
ಮತ್ತ ಶೆಟ್ಟರ ಮನೆ ಸುಳಿಸನಲ್ಲೆ
ಮತ್ತ ಶೆಟ್ಟರ ಮನೆ ಸುಳಿಸಲ್ಲೆ ನಾರಣ್ಣ
ನೇತ್ರೇಲಿ ಸೂತ್ರವ ಬೇಡಿದ್ದನಲ್ಲೆ
ಜಯ ಮಂಗಳ ಅವನಿತ್ಯ ಶುಭ ಮಂಗಳೆ

ಆದ ಅಡಿಗೆವಲ್ಲಿ ಕಾದ ನೀರವಲ್ಲಿ
ಹೋಗಿ ಭಕ್ತರ ಮನೆ ಸುಳಿಸನಲ್ಲೆ
ಹೋಗಿ ಭಕ್ತರ ಮನೆ ಸುಳಿಸನಲ್ಲೆ ನಾರಪ್ಪ
ಹೊಸ ಮಡಿಕೆ ಎಡೆಯ ಬೇಡಿದ್ದನಲ್ಲೇ
ಜಯ ಮಂಗಳ ಅವನಿತ್ಯ ಶುಭ ಮಂಗಳೆ

ಬುಟ್ಟಿಯ ತಗೊಂಡು ಪತ್ರಿಗೆ ನಾನೋದೆ
ಪತ್ರಿಯೊಳ ಸರ್ಪ ಮಲಗಿದ್ದಾವೇ
ಪತ್ರಿಯೊಳ ಸರ್ಪ ಮಲಗಿದ್ದಾವೇ ಅವು ನಮ್ಮ
ಚಿಗಟೇರಿ ನಾರಪ್ಪನ ಪೂಜೆ ಬೇಡಿದ್ದಾವೆ
ಜಯ ಮಂಗಳ ಅವನಿತ್ಯ ಶುಭಮಂಗಳೆ

ತಂಬಿಗೆ ತಗೊಂಡು ಗಂಗೆಗೆ ನಾನೋದೆ
ಗಂಗಿಯೊಳಗೆ ಮೀನು ಮಲಗಿದ್ದಾವೆ
ಗಂಗಿಯೊಳಗೆ ಮೀನು ಮಲಗಿದ್ದಾವೆ ಅವು ನಮ್ಮ
ನಂದೀಶ್ವರ ಪೂಜೆ ಮುಗಿದಿದ್ದಾವೆ
ಜಯ ಮಂಗಳ ಅವನಿತ್ಯ ಶುಭಮಂಗಳೆ

ತಾಲಿಯ ತಗೊಡ್ಡು ಹಾಲಿಗೆ ನಾ ಹೋಗಿದ್ದೆ
ಹಾಲ ಉಂಡ ಕರವು ಮಲಗಿದ್ದಾವೆ
ಹಾಲ ಉಂಡ ಕರವು ಮಲಗಿದ್ದಾವೆ ಅವು ನಮ್ಮ
ಗೋಣಿ ಬಸವನ ಪೂಜೆ ಮುಗಿದಿದ್ದಾವೆ
ಜಯ ಮಂಗಳ ಅವನಿತ್ಯ ಶುಭ ಮಂಗಳೆ

೯. ರೇವಾತಿ

ಚಿಗಟೇರಿ ಊರ ಎಷ್ಟೊಂದು ಸುಂದರ
ಸಂತೋಷ ಆದೆವು ನಾವು ನೋಡೀ ಊರ
ನೆಲಿಸ್ಯಾರೊ ಇಲ್ಲಿ ನಮ್ಮ ನಾರದ ಮುನಿ ದೇವರ

ಬಾಜಿ ಬಾಜಂತ್ರಿಯವರ ಮತ್ತು ಹೆಜ್ಜೆ ಮೇಳದವರ
ಭಕ್ತಾರು ಬರುತ್ತಾರೋ ನೋಡಿ ಈ ಊರ
ಕೈ ಮುಗಿದು ಬೇಡುತ್ತಾರೊ ದೇವರ
ವರುಷಕ್ಕೊಮ್ಮೆ ತೇರು
ಸಾಗುತ್ತೈತಿ ಬಾರಿ ಜೋರ
ಕೇಳಿದವರು ಬರುತ್ತಾರೋ ನಿನ್ನಯ ಸಾರ

ವಾಲ್ಮೀಕಿ ಜನರು ಸೇವೆ ಮಾಡುತ್ತಾರೆ
ಮುಂದೆ ಸಾಗಲಿ ನಾರಪ್ಪ ದೇವರ
ಕೈಮುಗಿದು ಕೇಳುತೇನಿ ಸಭೆಗೆ ಎಲ್ಲಾರ
ನಾಳೆ ಓಕುಳಿ ಬರುತ್ತೈತಿ ಬಾಳೆ
ಕಾಯಿ ಹರಿತಾರೋ ನಿನ್ನ ಹೆಸರ
ವಾಲ್ಮೀಕಿ ಜನರು ಹರಿತಾರೋ ಭರ್ಜರಿ ಜೋರ

ಸುತ್ತೂರು ಗ್ರಾಮ ಸರ್ವರಿಗೆ ಪ್ರೇಮ
ಸತ್ತೂರು ಈಶನೆ ಮಾಡ್ವೆ ನಮಸ್ಕಾರ
ಚಿಗಟೇರಿ ಹುಡುಗರು ಹಾಡ್ಯರ ಕೇಳಿ ಹಿರಿಯಾರ

ಹಾಡಿದವರು

ಋಷಬೇಂದ್ರಪ್ಪ (ನಾಯಕ) ಚಿಗಟೇರಿ.

ಸುತ್ತಮುತ್ತಲ ಹಳ್ಳಿಗಳಲ್ಲಿ ಗೌರಿ ಮಕ್ಕಳು 'ಪುಟ್ಟರಸ'ನ ಬಗ್ಗೆ ಚಿಗಟೇರಿಯ ನಾರಪ್ಪನನ್ನು ನೆನೆಯುವುದು ಈ ವಿಧಾನದಲ್ಲಿ.

ಚಿಗಟೇರ್‍ಯಾಗಿರುವ ಚಿಗಟೇರಿ ನಾರಪ್ಪ
ನಿನಿಗೆ ಚಿಗುರೆಲೆ ತೇರ ಎಳಿಸೇವಾ
ಚಿಗುರೆಲೆ ತೇರ ಏನೆಂದು ಎಳಿಸೇವಾ
ಬಾಲಾ ಪುಟ್ಟರಸ ಉಳಿದ್ರ
ಕೋಲು ಕೋಲಣ್ಣ ಕೋಲೆ ಎಂದು ನೆನೆಯುತ್ತಾರೆ.

ಜನಪದ ಗೀತೆ

"ಬಾರೆ ಗಾಳಿದುರ್ಗಿ ಊರ್ಗೆಹೋಗಾನು
ತೇರ್ ಮಾಡ್ಕೆಂಡು ಬರುವಂತಿ
ನಾರಪ್ಪ ತೇರ್ ಮಾಡಿ ಬರುವಾಗ
ಸೀರೆ ಕುಬ್ಸ ನಿವ್ವವ್ವ ತರುವಂತಿ"[೩]

ಅಡಿಟಿಪ್ಪಣಿ

೧. ಲಕ್ಕಪ್ಪಗೌಡ ಹೆಚ್.ಜೆ. (ಸಂ.) ಜಾನಪದ ಕೈಪಿಡಿ, ೧೯೯೭ ಪುಟ. ೨೬-೨೭

೨. ಜಿ.ಹೆಚ್ ಶಿವಲಿಂಗಪ್ಪ ಮತ್ತು ಶಿವನಪ್ಪಗೌಡರ ಸಾರ್ಮುನಿಯ ಕೃತಿಯಿಂದ

೩. ಕುಂಬಾಸ - ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ೧೯೯೦, ಪುಟ. ೭೩

ಅಧ್ಯಾಯ - ೮

ನಾರಪ್ಪನ ಸಾಂಸ್ಕೃತಿಕ ಸ್ಥಿಂತ್ಯಂತರಗಳು

'ಚಿಗಟೇರಿ ನಾರಪ್ಪ'ನ ಬಗೆಗೆ ಇದುವರೆಗೆ ಹೆಚ್ಚಿನ ಅಧ್ಯಯನಗಳು ನಡೆದಿರುವುದಿಲ್ಲ. ಡಾ.ಎ.ಶಿವನಪ್ಪಗೌಡ ಕಡಬಗೆರೆ ಇವರು ಮೌಖಿಕ ಸಾಹಿತ್ಯದಲ್ಲಿ ನಾರಪ್ಪನ ಬಗೆಗೆ ಇರುವ ಜೀವನ ವೃತ್ತಾಂತವನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಇವರನ್ನು ಬಿಟ್ಟರೆ ಹೆಚ್ಚಿನ ಸಂಶೋಧನೆಗಳು ನಾರಪ್ಪನ ಬಗೆಗೆ ನಡೆದಿರುವುದಿಲ್ಲ.

ಸಮಾಜದಲ್ಲಿರುವ ಅನೇಕ ದೈವಗಳು ಅನೇಕ ರೀತಿಯಲ್ಲಿ ಸ್ಥಿತ್ಯಂತರಗೊಂಡಿರುವುದನ್ನು ಕಾಣಬಹುದು. ಮೂಲದಲ್ಲಿದ್ದ ಹೆಸರು ಸಂಪೂರ್ಣ ನಶಿಸಿ ಹೋಗಿ ಹೊಸ ಸಂಸ್ಕೃತಿಗೆ ಒಳಗಾಗಿ ಬೇರೆ ನಾಮ ಬಂದಿರುವುದುಂಟು. ಹಾಗೆಯೇ ವಿಧ ವಿಧವಾದ ಆಚರಣೆಗಳನ್ನು, ನಂಬಿಕೆಗಳನ್ನು ಗಮನಿಸಿದ್ದೇವೆ. ಪ್ರತಿಯೊಂದು ಆಚರಣೆಗಳು ಧರ್ಮದ ಸವಾರಿ ಮೇಲೆ ಸಂಚರಿಸುತ್ತವೆ. ಒಂದೊಂದು ಆಚರಣೆಯ ಹಿಂದೆ ಒಂದೊಂದು ಧರ್ಮವು ಇದ್ದೆ ಇರುತ್ತದೆ ಎಂಬುದು ತಿಳಿಯುತ್ತದೆ.

ಹೊರ ಸಂಸ್ಕೃತಿಯು ಧರ್ಮವನ್ನು ಸುತ್ತಿ ಬಳಸಿದಾಗ, ಸಹಜವಾಗಿಯೇ ಬಂದ ಸಂಸ್ಕೃತಿಗೆ ಹೊಂದಿಕೊಳ್ಳುವುದು ಪ್ರತಿಯೊಂದು ಧರ್ಮದ ಮನೋಧರ್ಮವಾಗಿದೆ. ಹಿಂದೆ ಯಾವ ಧರ್ಮದಲ್ಲಿದ್ದೆ ಎಂಬುದು ಮುಖ್ಯವಲ್ಲ. ಪ್ರಸ್ತುತ ಕಾಲದಲ್ಲಿ ನಡೆಯುತ್ತಿರುವುದು ಯಾವ ಧರ್ಮದ ಆಚರಣೆ ಎಂಬುದು ಮುಖ್ಯವಾದ ಅಂಶವಾಗುತ್ತದೆ.

ನಾರಪ್ಪನಿಗೆ ಸಂಬಂಧಪಟ್ಟ ದಾಖಲಾತಿಗಳು ನಿಖರವಾಗಿ ಸಿಗುವವರೆಗೂ ಹೀಗೇ ಎಂದು ಯಾವುದನ್ನು ಹೇಳುವುದು ಕಷ್ಟಕರವಾದ ಸಂಗತಿ. ನಾರಪ್ಪನ ಬಗ್ಗೆ ಅವರಿವರ ಹೇಳಿಕೆಗಳು ಸಿಗುತ್ತವೆ ಹೊರತು ದಾಖಲಾಗಿರುವ ದಾಖಲಾತಿಗಳಿಂದ ಮಾಹಿತಿ ಸಿಗುವುದಿಲ್ಲ. ಹೇಳುವವರಲ್ಲಿಯೇ ಅನೇಕ ಭಿನ್ನಾಭಿಪ್ರಾಯಗಳು ಗೋಚರವಾಗುತ್ತವೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಾದ ದೇವಸ್ಥಾನ ಈಗಿನ ಆಚರಣೆಯ ಪ್ರಕಾರ ಶೈವ ದೇವಾಲಯವಾಗಿತ್ತೋ? ವೈಷ್ಣವ ದೇವಾಲಯವಾಗಿತ್ತೋ? ಅಥವಾ ಜೈನ ದೇವಾಲಯವಾಗಿತ್ತೋ? ಅಗೋಚರವಾದ ವಿಷಯ. ದೇಗುಲದಲ್ಲಿ ಮಾತ್ರ ನಾರಪ್ಪ, ಕೃಷ್ಣ, ರುಕ್ಮಿಣಿ, ಸತ್ಯಭಾಮ ಮತ್ತು ಗಜಲಕ್ಷ್ಮಿ, ಗಣಪತಿ, ಈಶ್ವರ ಮುಂತಾದ ಮೂರ್ತಿಗಳು ಒಂದೇ ದೇವಾಲಯದ ಗರ್ಭಗುಡಿಯಲ್ಲಿಯೇ ಇವೆ. ಸಾಧು ವೀರಶೈವ ಮತ್ತು ನಾಯಕ ಜನಾಂಗದವರು ಈ ದೈವದ ಒಕ್ಕಲಾಗಿ ನಡೆದುಕೊಳ್ಳುತ್ತಾರೆ. ಈ ಜನಾಂಗದವರು ಯಾವಾಗಿನಿಂದ ಆರಾಧಿಸಿಕೊಂಡು ಬಂದರು ಎಂಬುದು ಗೊತ್ತಿಲ್ಲದ ವಿಷಯವಾಗಿದೆ. ದೇವಾಲಯದ ಆಜುಬಾಜು ಇರುವ ದೀಪದ ಕಂಬಗಳು ಮತ್ತು ಮುಂದಿರುವ ಉಯ್ಯಾಲೆ ಕಂಬಗಳು, ಗುಡಿಯ ಮಂದೆ ಮತ್ತು ಹಿಂದೆ ಇದ್ದ ಕಾಲ ಭೈರವ, ಕಾಲ ಭೈರವಿ ಮೂರ್ತಿಗಳು ಸ್ಥಳಾಂತರಗೊಂಡವುಗಳೇ? ಯಾವುದಕ್ಕೂ ನಿಖರವಾದ ಉತ್ತರ ಹೇಳುವುದು ಕಷ್ಟಕರ ಮತ್ತು ಇವುಗಳಿಗೆ ಪ್ರಸ್ತುತ ಕಾಲದಲ್ಲಿ ಒಂದೊಂದು ಕಥೆಗಳನ್ನು ಕಟ್ಟಿಕೊಂಡಿದ್ದಾರೆ.

ವಿದ್ವಾಂಸರ ಹೇಳಿಕೆಗಳ ಪ್ರಕಾರ 'ತೇರು' ಮತ್ತು ದಾಸನಾಗಿ ದೀಕ್ಷೆ ಪಡೆಯುವ ಪದ್ಧತಿಯು ವಿಜಯನಗರ ಕಾಲದಲ್ಲೇ ಪ್ರಾರಂಭವಾಗಿರಬಹುದು ಎನ್ನುವುದರ ಹಿನ್ನೆಲೆಯಲ್ಲಿ ನಾರಪ್ಪನಿಗೆ ತೇರು ಎಳೆಯುವುದು, ಹಾಗೆಯೇ ದಾಸಪ್ಪನ ಬಿಡುವ ಸಂಸ್ಕೃತಿಯು ಕ್ರಮೇಣ ಆರಂಭವಾಗಿದೆ. ದಾಸ ಪದ್ಧತಿಯಲ್ಲಿ ಗರುಡಗಂಬದ ದಾಸಯ್ಯ, ಜಾಗಟೆದಾಸಯ್ಯ ಮುಂತಾದ ದಾಸಪ್ಪಗಳನ್ನು ಕಾಣುತ್ತೇವೆ. ಆದರೆ ನಾರಪ್ಪನ ದಾಸಪ್ಪಗಳು 'ಬೆತ್ತ, ಘಂಟೆಮಣಿಗಳ ಕೋಲು' ಹಣೆಗೆ ಭಸ್ಮ(ವಿಭೂತಿ)

ಧಾರಣೆಯ ದಾಸಪ್ಪಗಳನ್ನು ಇಲ್ಲಿ ಕಾಣುತ್ತೇವೆ. ಈ ತರಹದ ದಾಸಪ್ಪಗಳು ಬೇರೆಲ್ಲಿಯೂ ಕಾಣದಿರಬಹುದು. ಎಲ್ಲ ದಾಸಪ್ಪಗಳ ಹಾಗೆ ಹಾಡುವುದಿಲ್ಲ, ಸಾಹಿತ್ಯ ರಚಿಸುವುದಿಲ್ಲ, ಭಿಕ್ಷೆ ಬೇಡುವುದಿಲ್ಲ. ದೀಕ್ಷೆ ಪಡೆದಾಗ ಮಾತ್ರ ತಮ್ಮದೇ ಆದ ಒಕ್ಕಲು ಮನೆಗಳಿಗೆ ಮಾತ್ರ ಹೋಗಿ ಭಿಕ್ಷೆ ಬೇಡುತ್ತಾರೆ ಹೊರತು ಬೇರೆ ಒಕ್ಕಲು ಮನೆಗೆ ಹೋಗುವುದಿಲ್ಲ. ದೀಕ್ಷೆ ಪಡೆಯುವ ಪದ್ಧತಿಯೂ ವಂಶ ಪಾರಂಪರ್ಯವಾಗಿ ಬೆಳೆದು ಬಂದಿದ್ದರೂ ಪ್ರಸ್ತುತ ಕಾಲದಲ್ಲಿ ಬೇರೆ ಬೇರೆ ಮನೆಗಳಲ್ಲಿಯು ನಾರಪ್ಪನ ಹೆಸರಿನಲ್ಲಿ ದೀಕ್ಷೆ ಪಡೆದುಕೊಳ್ಳುತ್ತಾರೆ. ಇದು ಅಲ್ಲದೆ ಹಿಂದೆ ದಾಸಮ್ಮನನ್ನು ಬಿಡುವ ಪದ್ಧತಿಯು ಇತ್ತು. ನಾಗರೀಕತೆ ಪ್ರಭಾವ ಬೆಳೆದಂತೆ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

'ನಾರಪ್ಪ' ಎಂಬ ಹೆಸರು ಬಂದದ್ದು ಯಾವಾಗ? ಯಾಕೆ ಬಂದಿತು? ಎಂಬುದು ಗೌಪ್ಯವಾದ ಸಂಗತಿ. ಮೌಖಿಕ ಸಾಹಿತ್ಯದ ಪ್ರಕಾರ ಮತ್ತು ಸ್ಥಳೀಕರ ಹೇಳಿಕೆಯ ಪ್ರಕಾರ ನಾರುಣ್ಣು ರೋಗ ವಾಸಿಮಾಡಿದ್ದರಿಂದಲೇ ನಾರಪ್ಪ ಎಂಬ ಹೆಸರು ಬಂತು. ಆದ್ದರಿಂದಲೇ ನಾರನ್ನು ಹರಕೆಯಾಗಿ ನೀಡುವುದು ಎನ್ನುತ್ತಾರೆ. ಇದು ಏನೇ ಇದ್ದರು ಆಧುನಿಕ ಸಂದರ್ಭದಲ್ಲಿ ನಾರಪ್ಪನು ನಾರುಣ್ಣು ರೋಗಿಗಳಿಗೆ ವೈದ್ಯನಾಗಿ ಪರಿಣಮಿಸಿದ್ದಾನೆ. ಇದರಿಂದ ಹರಕೆ ಹೊತ್ತುಕೊಳ್ಳುವ ಭಕ್ತರಿಗೆ ಜಾತಿ, ಮತಗಳ ಕಟ್ಟು ನಿಯಮಗಳಿಲ್ಲ. ಇತ್ತೀಚೆಗೆ ನಾರುಣ್ಣು ರೋಗ ಕಳೆಯುವ ವೈದ್ಯ ಎಂಬುದು ಸಮಾಜಕ್ಕೆ ಗೊತ್ತಾದಂತೆಲ್ಲ ಗುಂಪು ಗುಂಪಾಗಿ ಜಾತ್ರೆಯ ಸಂದರ್ಭದಲ್ಲಿ ಬಂದು ಸೇರುತ್ತಾರೆ. ವರ್ಷದಿಂದ ವರ್ಷಕ್ಕೆ ಜನ ಹೆಚ್ಚುತ್ತಲೇ ಇರುತ್ತಾರೆ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿಯಲಾಯಿತು.

ನಾರಪ್ಪನ ಒಕ್ಕಲು ಮನೆಗಳಲ್ಲಿ ಹಬ್ಬ, ಅಮಾವಾಸ್ಯೆ, ಹುಣ್ಣಿಮೆ, ಕಾರ್ತಿಕ, ಶನಿವಾರ ಹೀಗೆ ವಿಶೇಷ ದಿನಗಳಲ್ಲಿ ಪೂಜೆ ಮಾಡುತ್ತಾರೆ. ಎಡೆ ಕೊಡುವ ಸಂದರ್ಭದಲ್ಲಿ ಹೊಸ ಹೊಸ ಮಡಿಕೆಯಲ್ಲೆ ಪ್ರಸಾದ ತಯಾರು ಮಾಡಿಕೊಂಡು ಅದೇ ಮಡಿಕೆಯನ್ನೆ ನೈವೇದ್ಯ ಮಾಡುತ್ತಾರೆ. ಲಿಂಗಾಯತರ ಮನೆಗಳಲ್ಲಿ ಮಣ್ಣಿನ ಚಿಪ್ಪಿನೊಳಗೆ ಲಿಂಗವಿರುತ್ತದೆ. ಅದರಲ್ಲಿ ಎಡೆಕೊಡುವ ಪದ್ಧತಿಯಿದೆ. ಜಾತ್ರೆಯ ಸಂದರ್ಭದಲ್ಲಿ ಹಿಂದೆ ಪೂಜಾರಿಗಳ ಮನೆಯಲ್ಲಿ ಎಡೆ ಮಾಡಿಸುವ ಪದ್ಧತಿ ಇರುತ್ತಿತ್ತು. ಕಾಲ ಬದಲಾವಣೆಯಾದಂತೆ ಭಕ್ತರ ನಂಬಿಕೆಗಳು ಬದಲಾದವು. ಈಗ ತಾವೇ ದೇವಸ್ಥಾನದ ಆಜುಬಾಜಿನಲ್ಲಿ ಎಡೆ ಮಾಡುತ್ತಾರೆ. ಒಂದೊಂದೇ ಬೆಡಗಿಗೂ ಒಂದೊಂದು ಹೊಸ ಮಡಿಕೆಯನ್ನು ತಂದು ಪ್ರಸಾದವನ್ನು ತಯಾರಿಸುತ್ತಾರೆ. ನಾರಪ್ಪನಿಗೆ ಬೇರೆ ಒಕ್ಕಲಿನವರು ಎಡೆಯನ್ನು ಮಾಡಿಸುವುದಿಲ್ಲ. ಹಣ್ಣು, ಕಾಯಿ ಮೀಸಲು ಮಾಡಿಸಿಕೊಂಡು ಹೋಗುತ್ತಾರೆ.

ಚಿಗಟೇರಿ ನಾರಪ್ಪನ ಒಕ್ಕಲುಗಳಲ್ಲಿರುವವರು ಹೆಚ್ಚು ಶ್ರೀಮಂತರೇ ಇದ್ದಾರೆಂಬುದು ತಿಳಿಯುತ್ತದೆ. ಅವರಲ್ಲಿ ಕೆಲವರು ವ್ಯಾಪಾರಿಗಳು, ಇನ್ನು ಕೆಲವರು ವ್ಯವಸಾಯಗಾರರು, ಹೆಚ್ಚು ಭೂಮಿ ಉಳ್ಳವರು ಆಗಿದ್ದಾರೆ. ಒಂದೊಂದು ಬೆಡಗಿನವರು ಒಂದೊಂದು ಗುಂಪಾಗಿ ಒಂದೊಂದು ಊರಿನಲ್ಲಿ ವಾಸವಾಗಿದ್ದಾರೆ. ನಗರೀಕರಣ, ಆಧುನಿಕತೆ ಬೆಳೆದಂತೆಲ್ಲಾ ನಂಬಿಕೆಗಳು ಆಚರಣೆಗಳು ಹೆಮ್ಮರವಾಗಿ ಬೆಳೆಯತೊಡಗಿವೆ. ಮಾನವನ ಉಡುಗೆ ತೊಡುಗೆಗಳು ಬದಲಾದಂತೆ ನಾರಪ್ಪನಲ್ಲಿಯೂ ಉಡುಪುಗಳು ಬಗಲಾಗುತ್ತ ಸಾಗುತ್ತಿವೆ. ಇತ್ತೀಚಿನ ಪ್ಯಾಶನ್ ಯುಗದಲ್ಲಿ ನಾರಪ್ಪನಿಗೆ ಸಂಧ್ಯಾಕಾಲದಲ್ಲೊಂದು ಉಡುಪು

ಉದಯಕಾಲದಲ್ಲೊಂದು ಉಡುಪು ಧರಿಸಿಕೊಂಡು ಮಾಡ್ರನ್ (ನವೀನ) ದೇವರಾಗಿದ್ದಾನೆ. ಹಿಂದೆ ಉಡುಪು ಒಂದೇ ತೆರನಾಗಿ ಇರುತ್ತಿತ್ತು, ಈಗ ಬದಲಾಗಿದೆ. ಇನ್ನೊಂದು ಮುಖ್ಯ ಸಂಗತಿಯೆಂದರೆ ಅನೇಕ ಶತಮಾನಗಳ ಪುರಾತನ ದೇಗುಲವನ್ನೇ ನವೀಕೃತಗೊಳಿಸಿ ಹಿಂದೆ ಇದ್ದ ಗರ್ಭಗುಡಿಯ ರುಕ್ಮಿಣಿ, ಸತ್ಯಭಾಮ, ಗಜಲಕ್ಷ್ಮಿ, ಗಣಪತಿ ಮುಂತಾದ ವಿಗ್ರಹಗಳೆಲ್ಲ ಇಲ್ಲವಾಗಿವೆ. ಅನೇಕ ವಿಗ್ರಹಗಳಿಗೆ ಆಶ್ರಯವೇ ಇಲ್ಲದೆ ಅನಾಥವಾಗಿ ದೇಗುಲದ ಸುತ್ತಲೂ ಇರುವುದನ್ನು ಕಾಣಬಹುದಾಗಿದೆ. ಅಲ್ಲದೆ ಹಳೆಯ ದೇವಸ್ಥಾನದ ಕೆಲವು ಅವಶೇಷ ವಸ್ತುಗಳು ತಿಪ್ಪೆಗುಂಡಿಯಲ್ಲಿ ಬಿದ್ದಿರುವುದನ್ನು ಈಗಲೂ ಕಾಣಬಹುದು. ಕಾಲ ಗತಿಸಿದಂತೆ ಅವುಗಳು ಕೂಡ ಭೂಗರ್ಭದಲ್ಲಿ ಅಡಗುವ ಸಂಭವಗಳು ಹೆಚ್ಚಿವೆ.

ವೈಜ್ಞಾನಿಕವಾಗಿ ಬೆಳೆಯುತ್ತಿರುವ ಕಾಲದಲ್ಲೂ ನಾರಪ್ಪ ದೇವರ ಬಗ್ಗೆ ನಂಬಿಕೆಗಳು ಗಾಢವಾಗಿ ಬೆಳೆಯುತ್ತಲೇ ಇವೆ. ಸುತ್ತ ಮುತ್ತ ಹಳ್ಳಿಗರಿಗೂ, ಸ್ಥಳೀಕರಿಗೂ, ಒಕ್ಕಲಿನವರಿಗೂ ಭಯಾನಕ ದೇವರಾಗಿದ್ದಾನೆ. ಕೆಲವರು ಈ ದೇವರ ತಂಟೆಗೆ ಬರುವುದಿಲ್ಲ. ದೂರದಿಂದಲ್ಲೆ ಕೈಮುಗಿದು ಹೋಗುತ್ತಾರೆ. ಯಾವುದೇ ಗಳಿಗೆಯಲ್ಲಿಯೂ ಸ್ನಾನಮಾಡದೆ ದೇಗುಲದ ಅಂಗಳಕ್ಕೆ ಕಾಲಿಡುವಂತಿಲ್ಲ. ನಾರಪ್ಪನ ಹೆಸರಿನಲ್ಲಿ ಸಣ್ಣ ವಸ್ತುವಿದ್ದರು ಯಾರು ಮುಟ್ಟುವುದಿಲ್ಲ. ನಾರಪ್ಪ ಎಲ್ಲರಿಗೂ ಅಸವಲ್ಲದ ದೇವರಾಗಿದ್ದಾನೆ.

ವಿಜ್ಞಾನ ಮುಂದುವರಿದಂತೆ ಮೂಢನಂಬಿಕೆಗಳು ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ, ನಾರಪ್ಪನ ನಂಬಿಕೆಗಳು ಹೆಚ್ಚಾಗಿ ಮಡಿ, ಮಡಿಯ ವಿಧಾನ ಮತ್ತು ಆಚರಣೆಗಳು ಬದಲಾಗುತ್ತಲೇ ಇವೆ. ನಾರನ್ನು ಹಾಕುವ ಸಂಪ್ರದಾಯ ಹೆಚ್ಚಾಗತೊಡಗಿದೆ. ನಾರಪ್ಪನ ಆಚರಣೆಗಳು ಪ್ರಬಲಗೊಳ್ಳತೊಡಗಿವೆ. ಜಾತ್ರೆಯಲ್ಲಿ ಓಕಳಿ ಮತ್ತು ಮದುವೆ ಕಾರ್ಯ ವಿಜೃಂಭಣೆಯಿಂದ ಸಾಗುತ್ತದೆ. ಹಿಂದೆ ಅನೇಕ ಭಕ್ತರು ನಾರಪ್ಪಗೂ ಸಾವಕ್ಕನಿಗೂ ಮದುವೆ ನಡೆಯುತ್ತದೆ ಎನ್ನುತ್ತಿದ್ದರು. ಆದರೆ ಈಗ ಕೃಷ್ಣನಿಗೂ, ಸಾವಕ್ಕನಿಗೂ ಮದುವೆ ಎಂದು ಹೇಳುತ್ತಾರೆ. ಕೆಲವರು ನಾರಪ್ಪನಿಗೂ ಸಾವಕ್ಕನಿಗೂ ನಡೆಯುವುದು ಎಂದು ಇಂದಿಗೂ ಹೇಳುತ್ತಾರೆ.

ನವಯುಗದಲ್ಲಿ ನಾರಪ್ಪ ದೈವ ತನ್ನ ಭಕ್ತರ ಚಿಕ್ಕ ಪ್ರಪಂಚದಲ್ಲೇ ತನ್ನ ಪರಂಪರೆ, ಸಂಸ್ಕೃತಿ ಉಳಿಸಿಕೊಂಡಿದ್ದಾನೆ. ಪ್ರಸ್ತುತದಲ್ಲಿ ನಾರಪ್ಪ ವೈದ್ಯನಾಗಿ ವರ್ಗದ ಬೇಧಬಾವವಿಲ್ಲದೆ ಎಲ್ಲರನ್ನು ತನ್ನೆಡೆಗೆ ಬರಮಾಡಿಕೊಳ್ಳತೊಡಗಿದ್ದಾನೆ. ಮಾನವ ಹೊಸ ಹೊಸ ಸಂಸ್ಕೃತಿಗೆ ಹೊಂದಿಕೊಳ್ಳುತ್ತ ಹೆಚ್ಚು ಹೆಚ್ಚು ನಾಗರಿಕನಾಗತೊಡಗಿದಾಗ ಮೌಢ್ಯಗಳು ಅಳಿಯುವ ಕಾಲಗರ್ಭದಲ್ಲಿ ನಾರಪ್ಪದೇವರು ಸ್ಥಿತ್ಯಂತರ ಹೊಂದುತ್ತಲೇ ಇದ್ದಾನೆ.

ಹೀಗೆ ನಾರಪ್ಪ ದೇವರು ಆಧುನಿಕತೆಯ ಅಬ್ಬರದಿಂದಾಗಿ ಕೆಲವು ಸ್ಥಿತ್ಯಂತರಗಳ ರೂಪಗಳನ್ನು ಪಡೆದುಕೊಂಡಿರುವುದನ್ನು ಪ್ರಸ್ತುತ ಸಂದರ್ಭದಲ್ಲಿಯೂ ಚಿಗಟೇರಿಯಲ್ಲಿ ಪ್ರತ್ಯಕ್ಷವಾಗಿ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ನಾರಪ್ಪ ಕಾಲದ ಸಂದರ್ಭಕ್ಕೆ ತಕ್ಕಂತೆ ಅವನು ಧರಿಸುವ ಉಡುಪಿನಲ್ಲಿ ಹಾಗೆಯೇ ಆಭರಣಗಳಲ್ಲಿ ಈ ರೀತಿಯ ಸ್ಥಿತ್ಯಂತರ ರೂಪವನ್ನು ಪಡೆದುಕೊಳ್ಳುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅವಲೋಕಿಸಲಾಗಿದೆ.

ಅಧ್ಯಾಯ - ೯

ಸಮಾರೋಪ

ಗ್ರಾಮೀಣ ಪ್ರದೇಶದಲ್ಲಿರುವ ದೈವಗಳನ್ನು ಸ್ಥೂಲವಾಗಿ ಅಧ್ಯಯನ ಕೈಗೊಳ್ಳುವುದರಿಂದ ಸಮಾಜದ, ಒಂದು ದೈವದ ಸಂಸ್ಕೃತಿಯ ಸ್ಥಿತಿಗತಿಗಳನ್ನು ಸಂಪೂರ್ಣವಾಗಿ ಅರಿತುಕೊಳ್ಳಬಹುದಾಗಿದೆ. ಇವುಗಳ ಆಳದಲ್ಲಿ ನವ ಸಂಸ್ಕೃತಿಯ ಕುರುಹುಗಳನ್ನು ಕೆಲವು ಮಟ್ಟಿಗೆ ತಿಳಿದುಕೊಳ್ಳಬಹುದಾಗಿದೆ.

ಮಂಟೇಸ್ವಾಮಿ, ಮಲೆಮಾದೇಶ್ವರ, ಮೈಲಾರಲಿಂಗ ಮುಂತಾದ ಸಾಂಸ್ಕೃತಿಕ ನಾಯಕರಂತೆ ಕರ್ನಾಟಕದ ಮಧ್ಯ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಾರಪ್ಪ (ನಾರದಮುನಿ) ಒಬ್ಬ ಸಾಂಸ್ಕೃತಿಕ ನಾಯಕನಾಗಿ ಗೋಚರಿಸ ತೊಡಗಿದ್ದಾನೆ. ನಾರಪ್ಪನ ಬಗೆಗೆ ಹೆಚ್ಚಿನ ಸಾಹಿತ್ಯವು ಕಂಡುಬರುವುದಿಲ್ಲವಾದರೂ ನಾರಪ್ಪ ಉತ್ತರದೇಶದ ಅಶಾಂತಿ ವಾತಾವರಣವನ್ನು ತ್ಯಜಿಸಿ ದಕ್ಷಿಣದ ಶಾಂತಿಯುತ ಪ್ರದೇಶಕ್ಕೆ ಬಂದನು ಎಂಬುದು ತಿಳಿಯಲ್ಪಡುತ್ತದೆ. ಇದರ ಜೊತೆಯಲ್ಲಿಯೇ ಇತರರಲ್ಲಿ ಅನೇಕ ಭಿನ್ನಾಭಿಪ್ರಾಯಗಳನ್ನು ಕೂಡ ಗುರುತಿಸಬಹುದು.

ಹೀಗಿದ್ದರೂ ಈ ದೈವಕ್ಕೆ ಸಂಬಂಧಿಸಿದಂತಹ ಆಚರಣೆಗಳು ಬಹಳ ಹಿಂದಿನ ಕಾಲದಿಂದಲೂ ನಡೆಯುತ್ತ ಬಂದಿವೆ. ನಾರಪ್ಪನಿಗೆ ಸಂಬಂಧಿಸಿದಂತೆ ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗಳಲ್ಲಿ ಅನೇಕ ಆಚರಣೆಗಳು ನಡೆಯುತ್ತವೆ. ಗ್ರಾಮದ ಇತರೇ ದೈವಗಳಿಗಿಂತ ನಾರಪ್ಪನಿಗೆ ನಮ್ಮ ಜನಪದರು ನಾಯಕನ ಸ್ಥಾನವನ್ನು ಕೊಟ್ಟಿದ್ದಾರೆ. ಆತನ ಜಾತ್ರೆಯನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತಾರೆ. ನಾರಪ್ಪ ದೇವರು ಹೆಚ್ಚಾಗಿ ಲಿಂಗಾಯತರ ಮತ್ತು ನಾಯಕ ಸಮುದಾಯದ ದೈವವಾಗಿದೆ. ಬೇರೆಯವರು ಯಾರೂ ಈ ದೇವರಿಗೆ ನಡೆದುಕೊಳ್ಳುವುದಿಲ್ಲ. ನಮಗೆ ಒಲಿಯುವುದಿಲ್ಲ ಎಂದು ಹೇಳುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಇಲ್ಲಿ ಜಾತಿಗಳ ಭಾವನೆ ಮುಖ್ಯವಾಗಿರದೆ ಪ್ರತಿಯೊಬ್ಬರೂ ಏಕತಾಭಾವನೆಯಿಂದ ಅಲ್ಲಿ ಸೇರುವುದನ್ನು ಅವಲೋಕಿಸಲಾಗಿದೆ. ಇದೇ ರೀತಿ ನೀಲಗಾರರಲ್ಲಿಯೂ ಸಹ ಜಾತಿ ಬೇರೆ ಬೇರೆ ಇದ್ದರೂ ಧಾರ್ಮಿಕ ಸಮಾರಂಭಗಳಲ್ಲಿ ಏಕತೆಯನ್ನು ಕಾಣುತ್ತೇವೆ.

ನಾರಪ್ಪನಿಗೆ ಸಂಬಂಧಿಸಿದಂತೆ ನಡೆಯುವ ಆಚರಣೆಗಳಲ್ಲಿ ತೇರು, ಎಡೆಮಾಡುವ ವಿಧಾನ, ಓಕಳಿ, ಮದುವೆ ಕಾರ್ಯಗಳು ಮುಂತಾದ ಆಚರಣೆಗಳು ವಿಶಿಷ್ಟ ಮಹತ್ವವನ್ನು ಪಡೆಯುತ್ತವೆ. ಎಡೆಮಾಡುವ ಪದ್ಧತಿಯನ್ನು ಹಬ್ಬ ಹರಿದಿನಗಳಲ್ಲಿ ಹೊಸ ಮಡಿಕೆಯಲ್ಲೇ ಈಗಲೂ ಮಾಡುತ್ತಾರೆ. ಈ ಆಚರಣೆ ಕೇವಲ ನಾರಪ್ಪನಿಗೆ ಮಾತ್ರ ಸಂಬಂಧಿಸಿದ್ದು, ನಾರಪ್ಪನ ದಾಸಪ್ಪಗಳ ಹಾಗೆ ರಾಜ್ಯದ ಬೇರೆ ಯಾವ ಭಾಗದಲ್ಲಿಯೂ ಕಾಣದೆ ಇರಬಹುದು. ಕರ್ನಾಟಕದಲ್ಲೇ ನಾರಪ್ಪ ಎಂಬ ದೇವರು ಸಿಗುವುದಿಲ್ಲ. ಈ ಹೆಸರು ಮತ್ತು ಆಚರಣೆಗಳು ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಆಚರಣೆಗಳಲ್ಲಿ ನಮ್ಮ ಜನಪದರಿಗೆ ನಂಬಿಕೆ ಇರುವುದರಿಂದ ಅವುಗಳು ಇಂದಿಗೂ ಅಳಿಯದೆ ಜೀವಂತವಾಗಿ ಉಳಿದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

'ಚಿಗಟೇರಿ ನಾರಪ್ಪ' ಎಂಬ ಶೀರ್ಷಿಕೆ ಅಡಿಯಲ್ಲಿ ರಚನೆಗೊಂಡ ಈ ಪ್ರಬಂಧದಲ್ಲಿ ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿಯನ್ನು ಕುರಿತು ಚರ್ಚಿಸಲಾಗಿದೆ. ಅಧ್ಯಾಯ ಎರಡರಲ್ಲಿ ಸ್ಥಳೀಯ ಇತಿಹಾಸವನ್ನು ಗ್ರಾಮದ ನಿಷ್ಪತ್ತಿಯನ್ನು, ಭೌಗೋಳಿಕ ಪರಿಸರ, ಚಾರಿತ್ರಿಕ ಹಿನ್ನೆಲೆಯನ್ನು ಮತ್ತು ಸಾಮಾಜಿಕ ಜನ ಜೀವನವನ್ನು ಕುರಿತು ಪ್ರಸ್ತಾಪಿಸಲಾಗಿದೆ.

ಅಧ್ಯಾಯ ಮೂರರಲ್ಲಿ ನಾರಪ್ಪನ ಪರಂಪರೆ, ನಾಮದ ವಿಶ್ಲೇಷಣೆ, ಧರ್ಮದ ಹಿನ್ನೆಲೆ, ನಾರಪ್ಪ ಚಿಗಟೇರಿಯಲ್ಲಿ ನೆಲೆಗೊಂಡಿರುವ ಐತಿಹ್ಯಗಳು, ದೇವಸ್ಥಾನ ಸ್ಥಾಪನೆ, ದೇವಸ್ಥಾನ ಪರಿಚಯ, ಮೂರ್ತಿ ಪರಿಚಯ ಅದರ ವಾಸ್ತುಶಿಲ್ಪದ ಬಗ್ಗೆ, ಸ್ವೀಕರಿಸಿಕೊಂಡಿರುವ ಒಕ್ಕಲುಗಳು ಮತ್ತು ಆಸ್ತಿ, ಆಡಳಿತದ ಬಗೆಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಿಕ್ಕ ಮಾಹಿತಿಗಳ ಮೇಲೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಪ್ರಬಂಧದ ಮಹತ್ವದ ಅಧ್ಯಾಯ ನಾಲ್ಕು. ಆಚರಣೆಗಳು ಎಂಬ ಭಾಗದಲ್ಲಿ ಜೀವನಾವರ್ತನ ಆಚರಣೆಗಳು, ದಾಸಪ್ಪನಾಗುವ ಸಂದರ್ಭ, ವಾರ್ಷಿಕಾವರ್ತನ ಆಚರಣೆಗಳಲ್ಲಿ ನಡೆಯುವ ತೇರು, ಮೂರ್ತಿ ಪರಿಚಯ, ಪವಾಡ, ಓಕುಳಿ, ಉಡುಗೆ-ತೊಡುಗೆಗಳು ಮತ್ತು ಜಾತ್ರೆಯಲ್ಲಿನ ಪ್ರದರ್ಶನ ಕಲೆಗಳನ್ನು ಕುರಿತು ಸ್ಥೂಲವಾಗಿ ವಿವರಿಸಲಾಗಿದೆ. ಹಾಗೆಯೇ ಅಧ್ಯಾಯ ಐದರಲ್ಲಿ ನಾರಪ್ಪನ ಬಗೆಗಿನ ನಂಬಿಕೆ ಮತ್ತು ಹರಕೆಗಳನ್ನು ಹಾಗೂ ಪೂಜಾ ವಿಧಾನ, ಮಡಿ ಮೈಲಿಗೆ ಇವುಗಳನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ನಾರಪ್ಪ ಮತ್ತು ಸ್ಥಳೀಯ ದೇವರಲ್ಲಿರುವ ಮುಖಾ ಮುಖಿಯನ್ನು ಕುರಿತು ಚರ್ಚಿಸಲಾಗಿದೆ. ಅಧ್ಯಾಯ ಏಳರಲ್ಲಿ ನಾರಪ್ಪನ ಕುರಿತು ಇರುವ ಸಾಹಿತ್ಯದ ಬಗ್ಗೆ ಮತ್ತು ಕೃತಿಗಳ ಬಗ್ಗೆ ವಿವರಿಸಲಾಗಿದೆ. ಐತಿಹ್ಯದಲ್ಲಿ ನಾರಪ್ಪ ಯಾವ ಕಡೆಯಿಂದ ಬಂದ, ಯಾವ ರೀತಿಯ ಪವಾಡಗಳನ್ನು ಮಾಡಿದ ಎಂಬುದರ ಬಗ್ಗೆ ತಿಳಿಸಲಾಗಿದೆ. ಅಧ್ಯಾಯ ಎಂಟರಲ್ಲಿ ನಾರಪ್ಪನ ಸಾಂಸ್ಕೃತಿಕ ಸ್ಥಿತ್ಯಂತರದ ಬಗ್ಗೆ ಕುರಿತು ಪ್ರಸ್ತಾಪಿಸಲಾಗಿದೆ.

ಅಧ್ಯಾಯ ಒಂಭತ್ತು ಸಮಾರೋಪ ಎಂದಿದ್ದು ಅದರ ಜೊತೆಗೆ ಅನುಬಂಧದಲ್ಲಿರುವ ಆಹ್ವಾನ ಪತ್ರಿಕೆ. ಛಾಯಾಚಿತ್ರಗಳು, ವಕ್ತೃವಿವರ, ಸಾಂಸ್ಕೃತಿಕ ಪದಕೋಶಗಳು ಮತ್ತು ಪರಾಮರ್ಶನ ಗ್ರಂಥಗಳನ್ನು ಕುರಿತು ಹೇಳಲಾಗಿದೆ. ಒಟ್ಟಿನಲ್ಲಿ ಈ ಅಧ್ಯಯನ ಚಿಗಟೇರಿ ನಾರಪ್ಪನ ಸಾಂಸ್ಕೃತಿಕ ವಿವರಗಳಿಗೆ ಹೆಚ್ಚು ಒತ್ತು ಕೊಟ್ಟಿದೆ. ಹಾಗೆಯೇ ಜಾತ್ರೆ ಹಬ್ಬಗಳಲ್ಲಿ ಇವರ ಆಚರಣೆಗಳನ್ನು ಕುರಿತು ಪಡೆದ ಮಾಹಿತಿಗಳನ್ನು ಚಿತ್ರ ಸಮೇತ ತಿಳಿಸಲಾಗಿದೆ.

ಈ ಪರಂಪರೆಗೆ ಪೂರಕವಾಗಿರುವ ಒಟ್ಟು ಮಾಹಿತಿಗಳನ್ನು ಸಮಗ್ರವಾಗಿ ಕಲೆಹಾಕಿ ಅಗತ್ಯವಿರುವಲ್ಲಿ ಸಂಬಂಧಿಸಿದ ಮಾಹಿತಿಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ. ಈ ದೃಷ್ಟಿಯಿಂದ ಇದೊಂದು ಮಾಹಿತಿ ದತ್ತವಾದ ಅಧ್ಯಯನವಾಗಿರುವುದರ ಜೊತೆಗೆ ವಿಶ್ಲೇಷಣಾ ವಿಧಾನವನ್ನು ಒಳಗೊಳ್ಳಲು ಯತ್ನಿಸಿದೆ ಎಂದು ನಮ್ರವಾಗಿ ಹೇಳಬಯಸುತ್ತೇನೆ.

ಅಧ್ಯಯನದಲ್ಲಿ ಕಂಡುಕೊಂಡ ಅಂಶಗಳು

* ಪಂಚಮಶಾಲಿಯವರು ಹಿಂದಿನಿಂದಲೂ ನಾರಪ್ಪ ದೇವರನ್ನು ಪೂಜೆ ಮಾಡಿಕೊಂಡು ಬಂದಿರುವ ವರ್ಗವಾಗಿದೆ
* ದಾಸಪ್ಪ, ದಾಸಮ್ಮನನ್ನು ಬಿಡುವ ಪದ್ಧತಿಯನ್ನು ನಾರಪ್ಪ ದೇವರಲ್ಲಿಯೂ ಕಾಣಬಹುದು
* ಒಂದೇ ಗರ್ಭಗುಡಿಯಲ್ಲಿ ಎರಡು ಧರ್ಮ(ಶೈವ ಮತ್ತು ವೈಷ್ಣವ)ದ ಮೂರ್ತಿಗಳಿರುವುದು ತುಂಬ ವಿಶೇಷತೆ ಎನಿಸುತ್ತದೆ

* ನಾರಪ್ಪ, ಕೃಷ್ಣ, ಗೋವಿಂದ, ಸಾವಕ್ಕ, ರುಕ್ಮಿಣಿ, ಸತ್ಯಭಾಮ ಹೆಸರುಗಳು ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಹೆಸರುಗಳಾಗಿರುತ್ತವೆ. ಹೀಗಿದ್ದರೂ ಶೈವ ಆಚರಣೆಯನ್ನು ಇಲ್ಲಿ ಕಾಣಬಹುದು

* ಯಾವುದೇ ಕಾರಣಕ್ಕೂ ಸ್ತ್ರೀಯರು ನಾರಪ್ಪನನ್ನು ಪೂಜಿಸುವಂತಿಲ್ಲ ಎಂಬ ಕಟ್ಟುನಿಟ್ಟಿನ ಕ್ರಮವಿದೆ

* ಹೆಣ್ಣು ದೇವತೆಗಳ ಒಕ್ಕಲಿನಲ್ಲಿ ಸಂಬಂಧ ಬೆಳೆಸುವಂತಿಲ್ಲ

* ನಾರಪ್ಪನ ಒಕ್ಕಲಿನವರು ಶ್ರೀಮಂತರೇ ಇರುವುದನ್ನು ಕಾಣಬಹುದು

* ನಾರಪ್ಪನಿಗೆ ಎಡೆ ಮಾಡುವ ಬೆಡಗಿನವರು ಒಂದೊಂದು ಊರಲ್ಲಿ ಗುಂಪು ಗುಂಪಾಗಿರುವುದು ಕಂಡುಬರುತ್ತದೆ

* ಮೊದಲೆಲ್ಲ ನಾರಪ್ಪಗೂ, ಸಾವಕ್ಕಗೂ ಮದುವೆ ಎನ್ನುತ್ತಿದ್ದರು. ಇದು ಈಗಲೂ ಜನಪದರ ಬಾಯಲ್ಲಿದೆ ಆಧುನಿಕಗೊಂಡಂತೆ ಕೃಷ್ಣನಿಗೂ ಸಾವಕ್ಕನಿಗೂ ಮದುವೆ ಎಂದು ಓದು ಬರಹ ಕಲಿತವರು ಹೇಳುತ್ತಾರೆ

* ಎಡೆಯನ್ನು ಪ್ರತ್ಯೇಕವಾಗಿಯೇ ಮಾಡಬೇಕು ಬೇರೆ ಬೆಡಗಿನವರ ಪ್ರಸಾದದ ಜೊತೆಯಲ್ಲಿ ಹಾಕಿದರೆ ಯಾವುದೇ ಕಾರಣಕ್ಕೂ ಪ್ರಸಾದ ಬೇಯುವಂತಿಲ್ಲ

* ಗ್ರಾಮದಲ್ಲಿ ನಾರಪ್ಪನೆ ಪ್ರಮುಖ ದೇವರಾಗಿದ್ದಾನೆ

* ನಾರಪ್ಪ ಪ್ರತಿಯೊಬ್ಬರಿಗೂ 'ಅಸವಲ್ಲದ' ದೇವರಾಗಿದ್ದಾನೆ

* ಯಾವುದೇ ಪ್ರದೇಶದಲ್ಲಿ ನಾರಪ್ಪನ ಬಗ್ಗೆ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿಲ್ಲ

* ನಾರಪ್ಪನ ಮೇಲಿನ ನಂಬಿಕೆಗಳು ಗಾಢವಾಗಿ ಬೆಳೆಯತೊಡಗಿವೆ

* ಪುರಾತನ ಗುಡಿಯನ್ನು ಕೆಡವಿ ಹೊಸ ಗುಡಿಯನ್ನು ಬೃಹತ್ತಾಗಿ ನಿರ್ಮಿಸಿದ್ದಾರೆ

* ಈ ಒಕ್ಕಲಿನಲ್ಲಿ ದೀಕ್ಷೆ ಬಿಡುವ ಪರಂಪರೆ ಕಂಡುಬರುವುದಿಲ್ಲ

* ದೀಕ್ಷೆಯ ಬದಲು ಹೊರೆ ಹೊರಿಸುವುದು ಎನ್ನುತ್ತಾರೆ

ಅನುಬಂಧ - ೧

೧. ೧ ಆಹ್ವಾನ ಪತ್ರಿಕೆ

೧. ೨ ಇತರೇ ಹಾಡುಗಳು

೧. ೩ ಸಾಂಸ್ಕೃತಿಕ ಪದಕೋಶ

ಅನುಬಂಧ - ೨


೨. ೧ ಛಾಯಾಚಿತ್ರಗಳು

೨. ೨ ವಕ್ತೃ ವಿವರ

೨. ೩ ಪರಾಮರ್ಶನ ಗ್ರಂಥಗಳು

೧. ೧ ಆಹ್ವಾನ ಪತ್ರಿಕೆ

॥ ಶ್ರೀ ನಾರದ ಮುನಿ ಪ್ರಸನ್ನ ॥



ಶ್ರೀ ನಾರದಮುನಿಸ್ವಾಮಿ ನೂತನ ದೇವಸ್ಥಾನದ ಉದ್ಘಾಟನೆ ಹಾಗೂ ಕಳಸಾರೋಹಣ ಉದ್ಘಾಟನಾ ಮಹೋತ್ಸವದ

ಆಹ್ವಾನ ಪತ್ರಿಕೆ

ದಿನಾಂಕ: 30-4-2002ರ ಮಂಗಳವಾರ ಬೆಳಿಗ್ಗೆ 10-00 ಗಂಟೆಗೆ

ಸ್ಥಳ: ಶ್ರೀ ನಾರದಮುನಿ ಪ್ರೌಢಶಾಲಾ ಆವರಣ, ಜಿಗಳೇರಿ.

ಶ್ರೀ / ಶ್ರೀಮತಿ ....

....

....

ಇಂದ

ಶ್ರೀ ನಾರದಮುನಿಸ್ವಾಮಿ ಸೇವಾ ಟ್ರಸ್ಟ್ (ರಿ) ಜಿಗಳೇರಿ, ಹರಪನಹಳ್ಳಿ ತಾ।

ಅಧ್ಯಕ್ಷರು ಮತ್ತು ಸದಸ್ಯರು

ಡಿ. ಕಟೇರಿ ಎ.ಹೆಚ್. ಮುನಿಯಪ್ಪ & ಸನ್ಸ್, ನಂ. 651, ಮಂಡಿಪೇಟೆ, ದಾವಣಗೆರೆ - 1



ಶ್ರೀ ನಾರದಮುನಿ ಸ್ವಾಮಿ ರಥೋತ್ಸವ

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಜಿಗಳೇರಿಯಲ್ಲಿ ದಿನಾಂಕ 23-4-2000 ನೇ ಭಾನುವಾರ ಸಾಯಂಕಾಲ 5-00 ಗಂಟೆಗೆ ನಡೆಯಲಿರುವುದು. ಹಾಗೂ 24-4-2000 ನೇ ಸೋಮವಾರ ಸಾಯಂಕಾಲ 5-00 ಗಂಟೆಗೆ ಪದ್ಧತಿಯಂತೆ ಓಕಳಿ ಮತ್ತು ಇತರ ಧೈವಕಾರ್ಯಗಳು ನಡೆಯಲಿವೆ.

ಭಕ್ತಾದಿಗಳಲ್ಲಿ ಮನವಿ

ಶ್ರೀ ನಾರದಮುನಿ ಸ್ವಾಮಿ ಭಕ್ತಾದಿಗಳ ಆಶಯದಂತೆ ಜಿಗಳೇರಿ ಶ್ರೀ ನಾರದಮುನಿ ದೇವಸ್ಥಾನ ನವ ನಿರ್ಮಾಣ ಕಾರ್ಯ ಮುಕ್ತಾಯವಾಗಿರುತ್ತದೆ. ಮುಂದೆ ನೂತನ ಆವರಣದ ಕೆಲಸವು ಇದೆ. ದೇವಸ್ಥಾನ ನಿರ್ಮಾಣ ಕಾರ್ಯದಲ್ಲಿ ಸರ್ವ ಭಕ್ತರು ಸಲಹೆ ಸಹಕಾರ ನೀಡುತ್ತಿರುವುದನ್ನೇ ಸ್ಮರಿಸುತ್ತಾ ಮುಂದಿನ ಕಾರ್ಯಕ್ಕೆ ಭಕ್ತರ ಸಹಕಾರ ಸದಾ ಇರುತ್ತದೆ ಎಂಬ ಆಶಯವಿದೆ.

ಜಾತ್ರಾ ಮಹೋತ್ಸವದ ನಂತರ ದೇವಸ್ಥಾನದ ಆವರಣದ ಕೆಲಸ ಮತ್ತು ಶ್ರೀ ದೇವರ ನೈವೇದ್ಯದ ಅಡಿಗೆ ಮನೆ ಮಾಡುವ ಉದ್ದೇಶವಿರುವುದರಿಂದ ಎಲ್ಲಾ ಸದ್ಭಕ್ತರು ತಮ್ಮ ತಮ್ಮ ಬೆಳೆಗಳನ್ನು ಜಾತ್ರಾ ಕಾಲದಲ್ಲಿ ಸಂಗ್ರಹಿಸಿ ಕಮಿಟಿಯವರಿಗೆ ಸಂದಾಯ ಮಾಡಿ ರಶೀದಿ ಪಡೆಯಬೇಕೆಂದು ತಮ್ಮಲ್ಲಿ ವಿನಂತಿಸುತ್ತೇವೆ.

ಶ್ರೀ ನಾರದಮುನಿ ಸ್ವಾಮಿ ಸೇವಾ ಟ್ರಸ್ಟ್ (ರಿ.)

ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಡಿ. ಹೆಚ್. ಮುನಿಯಪ್ಪ ಅಂಡ್ ಸನ್ಸ್,


ಮಂಡಿಪೇಟೆ, ದಾವಣಗೆರೆ - 1.

✆ : 57025, 56942, 55425

ಸಂಗಮ ಆಫ್‌ಸೆಟ್ ಪ್ರಿಂಟರ್ಸ್, ದಾವಣಗೆರೆ - 2. ✆ : 51277

ನವೀಕೃತ ದೇವಸ್ಥಾನದ ವಿನ್ಯಾಸ

ಚಿಗಟೇರಿ ನಾರದಮುನಿ ಭಕ್ತಾದಿಗಳಲ್ಲಿ ಮನವಿ



PLAN

ಹರಪನಹಳ್ಳಿ ತಾಲ್ಲೂಕಿನ ಸುಪ್ರಸಿದ್ಧ ಚಿಗಟೇರಿ ಶ್ರೀ ನಾರದಮುನಿ ಸ್ವಾಮಿ ದೇವಸ್ಥಾನ ಬಹಳ ಹಳೆಯದಾಗಿದ್ದು, ಅದನ್ನು ಸಾಧ್ಯವಾದಷ್ಟು ಭಕ್ತರಿಗೆ ಅನುಕೂಲವಾಗುವಂತೆ ನವೀಕರಿಸಿ ಸುಂದರ ದೇವಸ್ಥಾನ ನಿರ್ಮಿಸಲು ಸಾವಿರಾರು ಭಕ್ತರು ಅಪೇಕ್ಷೆ ವ್ಯಕ್ತಪಡಿಸಿರುವ ಪ್ರಕಾರ ತಾತ್ಕಾಲಿಕವಾಗಿ ದಾವಣಗೆರೆಯ ಬಿ.ಎನ್. ಪ್ರಕಾಶ್, ಅಣಬೇರು ರಾಜಣ್ಣ, ಎಸ್. ಉಮಾಪತಿ ಮುಂತಾದವರ ನೇತೃತ್ವದಲ್ಲಿ ಸಾರ್ವಜನಿಕ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿ ದೇವಸ್ಥಾನದ ಸ್ವರೂಪ ಮತ್ತು ವೆಚ್ಚದ ಬಗ್ಗೆ ಶಿಲ್ಪಿಗಳನ್ನು ಸಂಪರ್ಕಿಸಿ ಸುಮಾರು 21 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ದೇವಸ್ಥಾನ ನಿರ್ಮಿಸಲು ಉದ್ದೇಶಿಸಿದೆ.

ಉದ್ದೇಶಿತ ದೇವಸ್ಥಾನದ ನಕ್ಷೆಯನ್ನು ಭಕ್ತಾದಿಗಳ ಅವಗಾಹನೆಗಾಗಿ ನೀಡಲಾಗಿದೆ. ಅಪಾರ ಭಕ್ತರನ್ನು ಹೊಂದಿರುವ ಶ್ರೀ ನಾರದಮುನಿ ದೇವಸ್ಥಾನ ಜೀರ್ಣೋದ್ಧಾರಗೊಳಿಸಲು ಎಲ್ಲರ ಸಹಕಾರ, ಸಹಾಯ ಬೇಕಾಗಿದ್ದು, ಭಕ್ತರು ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಿ ಮುಂದಿನ ಕೆಲಸಗಳಿಗೆ ಚಾಲನೆ ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

ಬಿ.ಎನ್. ಪ್ರಕಾಶ್
ಬಿ.ಹೆಚ್. ಮುನಿಯಪ್ಪ ಅಂಡ್ ಸನ್ಸ್
ಮಂಡಿಪೇಟೆ, ದಾವಣಗೆರೆ.
ಫೋನ್ : 25426, 23025

ಅಣಬೇರು ರಾಜಣ್ಣ
ಜಾಲಿನಗರ ಹಾಸ್ಟೆಲ್ ಬಿಲ್ಡಿಂಗ್

ಎಸ್.ಡಿ. ಉಮಾಪತಿ
ಜನತಾ ಸಾ ಮಿಲ್ ದಾವಣಗೆರೆ.
ಫೋನ್ : ~~23323.~~


FRONT ELEVATION


SIDE ELEVATION

೧. ೨ ಇತರೇ ಹಾಡುಗಳು

'ಮಿಂಚಾಗಿ ಉಳಿದ ಶ್ರೀ ನಾರನ್ಮುನಿ'

ಉತ್ತರದಿಂದ ಇತ್ತಲೆ ಬಂದ
ಉತ್ತರ ಮೂರ್ತಿ ನಾರನ್ಮುನಿ
ಕೃಷ್ಣಾನದಿಗೆ ಕಂಬಳಿ ಹಾಸಿ
ತೇಲುತ ದಾಂಟಿದ ನಾರನ್ಮುನಿ

ಚಿಗಟೇರಿಯಂಚಿನ ಕಾನನದಲ್ಲಿ
ತಪವನು ಗೈದ ನಾರನ್ಮುನಿ
ಹುತ್ತವ ಕೆಡವಲು ಕುಪಿತನಾಗಲಿ
ನಿಲ್ಲದೆ ನೆಡೆದಾ ನಾರನ್ಮುನಿ

ಹುಲ್ಲೂರು ಶ್ರೀ ದೇವಿ ಕಾಳಿಕಾ ಗುಡಿಗೆ
ಬಂದನು ಭೈರೇಶ ನಾರನ್ಮುನಿ
ದೇವಿಯ ಮಡಿಲಲಿ ತಪವನಗೈದು
ಹರಸೀ ತಾನಾದ ನಾರನ್ಮುನಿ

ನಾಡಿನ ಗೌಡರು ಚಾಕರಿ ಹೇಳಲು
ನಿಲ್ಲದ ಪೋದ ನಾರನ್ಮುನಿ
ಹಿಡಿದು ಕಂಬಕ್ಕೆ ಬಿಂಬವ ಕಟ್ಟಲು
ಸರಪಣಿಕಿತ್ತ ನಾರನ್ಮುನಿ

ಗುಡಿಯೊಳು ಕೂಡಿ ಇಡುಗೋಡೆ ಇಡಿಸಲು
ಮಡಿಲೊಳು ಮಲಗಿದ ನಾರನ್ಮುನಿ
ದೇವಿಯ ಸ್ಥನಪಾನ ಮೌನದಲುಂಡ
ಮಹದಾನಂದಿ ನಾರನ್ಮುನಿ

ಗುಂಟ್ನೂರ ದ್ಯಾಮವ್ವ ತಪಸಿಗೆ ಮೆಚ್ಚಿ
ಸಿರಿಗೆರೆ ಗೈ ತಂದ ನಾರನ್ಮುನಿ

ನಾರಂದ ಕಟ್ಟೆಗೆ ಯೋಗಕೆ ಕುಳಿತು
ಕಂದನ ಉಳಿಸಿದ ನಾರನ್ಮುನಿ

ಚಿಗಟೇರಿಯಂಚಿನ ಕಾನನದೊಳಗೆ
ಮಿಂಚಾಗಿ ಉಳಿದ ನಾರನ್ಮುನಿ
ಸಾವಕ್ಕ ಚಿಕ್ಕಭೈರ ನಾಡಗೌಡರಿಗೆ
ಮುಕ್ತಿಯ ನೀಡಿದ ನಾರನ್ಮುನಿ

ಫಣಿಯೊಳು ಶ್ರೀ ಶೋಭಿತನೇ
ಕೋಟಿ ಕೋಟಿ ಜನಸುಪ್ರೀತನೇ
ಘಂಟೆಯನುಡಿಸಿ ಲಿಂಗವ ಪೂಜಿಸಿ
ಸುತ್ತಲು ಹೆಸರಾದ ನಾರನ್ಮುನಿ

ನಿನ್ನಯ ನಾಮವ ನುಡಿಯುತ ಬಂದರು
ಸಾಂಬಶಿವನ ಜನಕೋಟಿ
ಮಿಂದು ಮಡಿಯುಟ್ಟು ಬಂದ ಮೀಸಲಿಟ್ಟು
ಭಕ್ತರಿಗೆಲ್ಲಿದೆ ಸರಿಸಾಟಿ
ಭಕ್ತರಿಗಾವುದು ಸರಿಸಾಟಿ
ಶಿವನಾರನ್ಮುನಿ ಗೋವಿಂದಾ.... ನಾರನ್ಮುನಿ ಶ್ರೀ ಗೋವಿಂದಾ...
ಗೋವಿಂದಾ... ಗೋವಿಂದಾ
ನಾರನ್ಮುನಿ ಶ್ರೀ ಗೋವಿಂದಾ.....

೨. ಮಂಗಳಾರುತಿ

ಆರುತಿ ಬೆಳಗಿರಿ ಕೀರುತಿಗೆ
ಸ್ವಾಮಿ ನಾರಂದನ ಮೂರುತಿಗೆ ॥ ಪ ॥

ಚಿಗಟೇರಿಲಿರುವುದು ನಾರಪ್ಪಗುಡಿ
ಎಲ್ಲರೊಡಗೂಡಿ ನೋಡಲಿಕ್ಕೆ ನಡಿ
ತಂದಂತ ಹಣ್ಣು ಕಾಯ ನೈವೇದ್ಯವಿಡಿ
ಸ್ವಾಮಿಯ ಸೇವೆಯ ಚಂದಾಗಿ ಮಾಡಲಿಕ್ಕೆ ನಡಿ ॥ ಆರುತಿ ॥

ಬಯಲಲಿ ನಿಂತದೆ ತೇರುಕಣಮ್ಮ
ಗುಡಿಬಿಟ್ಟು ನಾರಂದ ಹೊಂಟನೋಡಮ್ಮ
ನಗಾರಿ ಬಡಿವುದು ನೊಡ್ನಮಾಧಮ್ಮ
ಪಾತ್ರದ ಕುಣಿತವ ನೋಡ್ ದಿಮ್ ದಿಮ್ಮ
ನೋಡಿ ಭೆ! ಅನಿಸಿತು ಮಹಿಮಕಣಮ್ಮ ॥ ಆರುತಿ ॥

ಸೂರಬೆಲ್ಲ ಮೆಣಸಿನ ಸೂರ‍್ಯಾಟನೋಡು
ಹೂವು ಹಣ್ಣುಗಳ ಹಾರಾಟನೋಡು
ತೇರು ಸಾಗುತಿದೆ ನಮಸ್ಕಾರ ಮಾಡು
ಪರಿಸೆಯಂತನೇ ಚಪ್ಪಾಳೆ ಮಾಡು ॥ ಆರುತಿ ॥

ಸಮಸ್ತ ಭಕ್ತರು ಒಂದೆಡೆ ಕೂಡಿ
ಬೆಡಗಿಗೊಂದೊಂದು ಅಡಿಗೆಯ ಮಾಡಿ
ಘಂಟೆಮನಿ ದಾಸರ ಕರೆಯೋದಿ ನೋಡಿ
ಗುಡಿಗೆಡೆ ಮಾಡಲು ಒಡಗೂಡಿ ನಡಿ ॥ ಆರುತಿ ॥

ಬಯಲು ತುಂಬಿದೆ ಭಾರಿ ಪರಸೆ
ಚಲುವ ನಾರಂದನು ಹೊರಟನು ಈಚೆ
ಓಕಳಿಯಾಡಿ ಭಕ್ತರ ಪರಸೆ
ಶಿವ ಧೋಂ ಎಂದಿದು ಸಮಸ್ತ ಪರಿಸೆ ॥ ಆರುತಿ ॥

೩. ಮಂಗಳಾರತಿ

ಬೆಳಗಿರಿ ನಾರಂದನೇ ಜ್ಯೋತಿ
ಬೆಳಗಿರಿ ನಾರಂದಗೆ
ಪ್ರಾಣವೆಂಬ ಹಣತೆಯಲ್ಲಿ ಭಕ್ತಿಯ ಬತ್ತಿ ಇಟ್ಟು ಬೆಳಗಿರಿ ನಾರಂದಗೆ ॥

ಶರಣರು ಬೆರಣಿಯ ಸುಟ್ಟಂತೆ
ಅದಕಾಧಾರದ ಹೆಸರಿಟ್ಟಂತೆ
ತಾಮಸವನು ಸುಡೆ ತನಂವೆ ವಿಭೂತಿ ಎಂದು ಬೆಳಗಿರಿ ನಾರಂದಗೆ ॥

ಕೊರಡಿನೊಳಡಗಿದ ಶ್ರೀ ಗಂಧ
ಹೊರಟಿತು ತೇಯಲು ಒಳಗಿಂದ
ಕಾಯಕ ನಿರತನ ಬದುಕೆ ಶ್ರೀಗಂಧವೆಂದು ಬೆಳಗಿರಿ ನಾರಂದಗೆ ||

ಪಂಚಭೂತವೂ ಕೂಡಿ ಆಯಿತು
ಕಾಯದ ತೆಂಗಿನಕಾಯಿ
ಹೊಡೆದೆಡೆ ಮಾಡಿ ನೋಡೆ ಬಯಲೇ ಬಯಲು ಎಂದು ಬೆಳಗಿರಿ ನಾರಂದಗೆ ||

ಇಷ್ಟಲಿಂಗವನು ಗುರುಕೊಟ್ಟ
ಆತ್ಮಲಿಂಗವನು ಹರನೆ ಇಟ್ಟ
ಪರತತ್ವ ತಿಳಿದರೆ ಆತ್ಮವೇ ಹರನೆಂದು ಬೆಳಗಿರಿ ನಾರಂದಗೆ ||

೪. ಎದ್ದು ಬಾರಯ್ಯ ಮನೆಗೆ

ಅದು ಬೆಟ್ಟ ಇದು ಬೆಟ್ಟವೊ ನಾರಂದ
ಕರಡಿ ಗುಡ್ಡದ ಬೆಟ್ಟವೊ ||

ದಾಸ್ವಾಳದ್ಹೊವ ತಂದೂ ನಾರಂದ
ದಾರೀಲಿ ಪೂಜೆ ಮಾಡಿ
ಹೂ ಬಾಡಿ ಹೋಯಿತಯ್ಯಾ ನಾರಂದ
ಎದ್ದು ಬಾರಯ್ಯ ಮನೆಗೆ || ಅದು ಬೆಟ್ಟ ||

ಮಲ್ಲೀಗೆ ಹೂವ ತಂದೂ ನಾರಂದ
ಮಾರ್ಗದಲಿ ಪೂಜೆ ಮಾಡಿ
ವಾಸನೆಯು ಮಾಸಿ ಹೊಯ್ತೊ ನಾರಂದ
ಎದ್ದು ಬಾರಯ್ಯ ಮನೆಗೆ || ಅದು ಬೆಟ್ಟ ||

ಕರ್ಪೂರ ವೀಳ್ಯದವನೆ ನಾರಂದ
ಕಸ್ತೂರಿ ತಿಲಕದವನೆ
ಕಸ್ತೂರಿ ತಿಲಕದವನೇ ನಾರಂದ
ಶ್ರೀ ಗಂಧ ಧರಿಸಿದವನೆ || ಅದು ಬೆಟ್ಟ ||

ನಿನ್ನ ಕರುಣೆ ತಪ್ಪಿದ ಮೇಲೆ ನಾರಂದ
ಪರಪಂಚ ನನಗೇತಕೋ
ಪರಪಂಚ ನನಗೇತಕೋ ನಾರಂದ
ನಿನ ಪೂಜೆ ನನಗೇತಕೋ ನಾರಂದ
ನನ ಹಂಗು ನಿನಗೇತಕೋ ॥ ಅದು ಬೆಟ್ಟ ॥

೫. ದೇವನೊಬ್ಬ

ಚಿಗಟೇರಿ ಎಂಬ ಊರು ಬೇರೆಲ್ಲೂ ಇಲ್ಲ
ನಾರನ್ಮುನಿ ಎಂಬ ದೇವನಿನ್ನೆಲ್ಲೂ ಇಲ್ಲ ॥

ದೇವನೊಬ್ಬ ನಾಮ ಹಲವು ಭೂಜಗಕೆಲ್ಲ
ಶಿವ ನಾರನ್ಮುನಿಯೇ ನಮ್ಮ ದೇವನೆಲ್ಲ ॥

ಕೌಸ್ತುಭಕಾಂತಿಯ ಪ್ರಶಾಂತ ಪ್ರಭುವೇ
ನಾರು ಮಡಿ ಜೋತ್ಸ್ನ ಪ್ರಲಕಿತ ವಿಭುವೇ ॥

ವರ ಹಸ್ತದಲಿ ಸುಫಲ ಶೋಭಿತ
ವಿಪುಲ ವಿಭೂತಿ ಶ್ರೀಗಂಧ ಧರಿಸಿದಿ ॥

ಭವ ಶಬ್ದ ದೂರವಿಟ್ಟು ಶಿವಶಬ್ದ ಕರ್ಣದತ್ತ
ಓಂಕರಿಸಲೋಸುಗ ಘಂಟಾನಾದ ನಿರತ ॥

ಘಂಟೆ ಮನೆದಾಸ ಗೋವಿಂದ ಪಾಹಿಮಾಂ
ಅನಾಥನಾಥ ದೀನಬಂಧು ಶಿವಧೊಂ ಪಾಹಿಮಾಂ ॥

ಶಿವನೆಂದು ಕರೆದೇನು ಗೋವಿಂದ ಎಂದೇನು
ಸೃಷ್ಟಿಕರ್ತ ಬ್ರಹ್ಮಾಬಾರೆಂದು ಕೂಗೇನು ॥

ಶ್ರೀಭುವನ ಪಾಲಕ ಬ್ರಹ್ಮಾಂಡ ನಾಯಕ
ನಾರನ್ಮುನಿ ಬಾರೊ ಎಂದು ಭಕ್ತಿಯಿಂದ ಕರೆದೇನು ॥

ಕೃಪೆ ಎ. ಶಿವನಗೌಡ
ಶ್ರೀ ಶಿವ ನಾರನ್ಮುನಿ ಮಹಾತ್ಮೆ

೧. ೩ ಸಾಂಸ್ಕೃತಿಕ ಪದಕೋಶ

ಅಸವಲ್ಲದ	:	ಭಯಾನಕ, ಭಯಂಕರ, ಸಹಿಸಲಾರದ, ಆಗಲಾರದ, ಚಿಗಟೇರಿಯ ಸ್ಥಳೀಕರು ಸುತ್ತಮುತ್ತಲಿನ ಹಳ್ಳಿಗರು ಪ್ರತಿಯೊಬ್ಬ ಭಕ್ತರು ನಾರಪ್ಪನೆ ಅಸವಲ್ಲದ ದೇವರು ಎನ್ನುತ್ತಾರೆ. ಹಾಗೆಯೇ ಆ ಭಯದಲ್ಲೇ ನಾರಪ್ಪನ ಯಾವ ವಸ್ತುವನ್ನು ಮುಟ್ಟುವುದಿಲ್ಲ.
ಇಸಗಿ ಪೆಳೆ	:	ಒಂದು ರೀತಿಯ ಮುಳ್ಳು ಮಿಶ್ರಿತ ಪೊದೆ. ಪರಗಿ ಗಿಡ.
ಉಚ್ಚಯ್ಯ	:	ರಾತ್ರಿ ಎಳೆಯುವ ತೇರಿನ ಉತ್ಸವ.
ಋಷಿ	:	ತಪಸ್ವಿ
ಎಡೆ	:	ದೇವರಿಗೆ ಎದುರೆತ್ತುವ ಪ್ರಸಾದ. ಪ್ರತಿ ಜಾತ್ರೆಯಲ್ಲೂ ನಾರಪ್ಪನಿಗೆ ಈ ಆಚರಣೆಯನ್ನು ಮಾಡುತ್ತಾರೆ.
ಒಕ್ಕಲು	:	ಆಯಾಯ ದೈವಕ್ಕೆ ಸೇರಿದವರು.
ಓಕುಳಿ	:	ಮಂಗಳ ಜಲ, ಅರಿಸಿನ ಸುಣ್ಣ ಸೇರಿಸಿ ಮಾಡಿದ ಕೆನ್ನೀರು, ವಸಂತ ಕ್ರೀಡೆ, ಓಕುಳಿ ಚೆಲ್ಲುವ ಆಟ.
ಕಳ್ಳ	:	ಕದಿಯುವ ಚೋರ, ತುಡುಗ, ನಾರಪ್ಪನ ಗುಡಿಯಲ್ಲಿರುವ ಮನುಷ್ಯನ ವಿಗ್ರಹಕ್ಕೆ ಕರೆಯುತ್ತಾರೆ.
ಕರಿಯ	:	ಕಪ್ಪಾಗಿರುವ, ಕಪ್ಪು, ಮಸಿ ಇಲ್ಲಿ ನಾರಪ್ಪನಿಗೆ ಕರೆಯುತ್ತಾರೆ.
ಕರಿಕೆ	:	ದೇವರಿಗೆ ಪೂಜಿಸುವ ಸಂದರ್ಭದಲ್ಲಿ ತರುವ ಒಂದು ವಿಧದ ಪತ್ರೆ.
ಕಂಕಣ	:	ಮಾಂಗಲ್ಯದ ಗುರುತಾದ ಬಳೆ, ದೀಕ್ಷೆ ಮಾಡುವ ಸಂದರ್ಭ, ಮದುವೆ ಸಂದರ್ಭದಲ್ಲಿ ಬಳಸುತ್ತಾರೆ.
ಕೊಪ್ಪರಿಗೆ	:	ಬರ್ಪರಿಕಾ ಅಗಲಬಾಯ ಕಡಾಯಿ. ಇದರಲ್ಲಿ ನಾರಪ್ಪ ಈಜಾಡಿದ ಎನ್ನುವ ಐತಿಹ್ಯವಿದೆ.
ಗದ್ದ	:	ಗಡ್ಡ, ಗಲ್ಲ, ತುಟಿಯ ಕೆಳಭಾಗ. ಇಲ್ಲ ನಾರಪ್ಪ ಗದ್ದ ಊದಿಕೊಂಡಿದೆ.
ಗಂಧ	:	ಸುವಾಸನೆ, ಪರಿಮಳ, ನಾರಪ್ಪನ ಪೂಜೆಗೆ ಇದು ವಿಶೇಷ.

ಗುಗ್ಗರಿ ಗಂಟು : ಒಂಭತ್ತು ತರಹದ ಧಾನ್ಯದ ಗಂಟು. ಇದನ್ನು ನಾಮಕರಣ ಸಂದರ್ಭದಲ್ಲಿ ಮಗುವಿನ ಮೇಲೆ ಇಡುತ್ತಾರೆ.

ಗೋವಿಂದ : ಕೃಷ್ಣ, ಬೃಹಸ್ಪತಿ, ಗೋವುಗಳ ಒಡೆಯ, ಚಿಗಟೇರಿಯಲ್ಲಿ ಉತ್ಸವ ಮೂರ್ತಿಯ ಹೆಸರು.

ಘಂಟಾಮಣಿ, ಘಂಟೆಮಣಿ : ಬಡಿಯುವ ಕಂಚಿನ ಸಾಧನ, ಗಂಟೆ ಬಡಿಯುವ ಕೋಲು ನಾರಪ್ಪನ ದಾಸಪ್ಪಗಳಲ್ಲಿ ವಿಶೇಷವಾಗಿ ಕಾಣಬಹುದು. ಕೋಲಿನ ನಡುವೆ ಗಂಧದ ಕೋಲನ್ನು ಸೇರಿಸಿರುತ್ತಾರೆ.

ಚಾಮರ : ಚವರಿ, ಕುಂಚ, ಬೀಸಣಿಕೆ, ಕೂದಲಿನ ಬೀಸಣಿಗೆ, ಜಾತ್ರೆಯಲ್ಲಿ ಉತ್ಸವ ಮೂರ್ತಿಗೆ ಬೀಸುತ್ತಾರೆ.

ಜಟಾ : ನಾರಪ್ಪನ ತಲೆಯ ಮೇಲೆ ಇದೆ. ಜಟೆ, ಜಡೆ, ಸಿಕ್ಕುಬಿದ್ದ ಕೂದಲು ಕಗ್ಗಂಟಾದ ಕೂದಲು.

ತಡಿ : ಕುದುರೆ ಮೈಮೇಲೆ ಕುಳಿತಿರಲು ಹಾಕುವ ಹಾಸುಗೆ, ತಡಿ ಮೇಲೆ ನಾರಪ್ಪ ಕುಳಿತಿದ್ದಾನೆಂಬ ನಂಬಿಕೆಯಲ್ಲಿ ನಾಯಕರು ಹಾಸುವುದು ಮಾಡುವುದಿಲ್ಲ.

ದಾಸಪ್ಪ : ವೈಷ್ಣವ ಸಂಪ್ರದಾಯದ ಗುಡ್ಡ. ನಾರಪ್ಪನ (ದೀಕ್ಷೆ) ಹೊರೆ ಹೊತ್ತವ.

ನಾರು : ನಾರುಬಟ್ಟೆ, ನೂಲು, ನಾರುಮುಡಿ, ಪಾಪ, ನಾರುಹುಣ್ಣು ಜಾತ್ರೆಯ ಸಂದರ್ಭದಲ್ಲಿ ಯತೇಚ್ಛವಾಗಿ ನಾರನ್ನು ಎಸೆಯುತ್ತಾರೆ.

ನಾರುಣ್ಣುರೋಗ : ಮನುಷ್ಯನ ಮೈಮೇಲೆ ಕಾಣಿಸಿಕೊಳ್ಳುವ ರೋಗ. ಇದರ ವೈದ್ಯನಾಗಿ ನಾರಪ್ಪ ವಾಸಿ ಮಾಡುತ್ತಾನೆ.

ನಾರಪ್ಪ : ವೈಷ್ಣವ ಸಂಪ್ರದಾಯದ ಹೆಸರು. ಚಿಗಟೇರಿಯ ನಾರಪ್ಪ.

ನಾರದ : ಧರ್ಮವನ್ನು ಕೊಡುವವ, ಒಬ್ಬ ದೇವರ್ಷಿ ವೈದಿಕ ಯುಗದ ಒಬ್ಬ ಋಷಿ. ವಿಶ್ವಾಮಿತ್ರನ ಮಗ.

ನಿರ್ವಾಣಿ : ಮದುವೆಯಾಗದವ, ಇಲ್ಲಿ ನಾರಪ್ಪ.

ಪಣತೆ : ಹಣತೆ, ದೀಪ ಉರಿಸುವ ಮಣ್ಣಿನ ಬಟ್ಟಲು, ಹಣತೆಯ ನಡುವೆ ಲಿಂಗವಿರುತ್ತೆ ಅದರಲ್ಲಿ ನಾರಪ್ಪಗೆ ಮನೆಗಳಲ್ಲಿ ಎಡೆ ಕೊಡುತ್ತಾರೆ.

ಪಲ್ಲಕ್ಕಿ : ಪಾಲಕಿ ದೇವರನ್ನು ಹೊತ್ತುವ ಸಾಧನ.

ಪ್ರಸಾದ	:	ನೈರ್ಮಲ್ಯ, ಚೊಕ್ಕಟ, ಅನುಗ್ರಹ, ನಾರಪ್ಪನಲ್ಲಿ ದಿನನಿತ್ಯ ನಡೆಯುತ್ತದೆ.
ಪಾದೋದಕ	:	ದೇವರನ್ನು ಸ್ನಾನ ಮಾಡಿಸಿದ ನೀರು, ಸ್ವಾಮಿಗಳ ಪಾದದ ನೀರು.
ಬೆತ್ತ	:	ವೇತ್ರ, ಒಂದು ಜಾತಿ ಬೀಳಲು, ಅದರ ಸಲಕೆ, ಸಪ್ಪರಕೋಲು, ಗಲಗು, ನಾರಪ್ಪನ ದಾಸಪ್ಪನಲ್ಲಿರುವ ಒಂದು ವಸ್ತು.
ಬೇಟೆ	:	ಮೃಗಗಳನ್ನು ಹಿಡಿಯುವುದು, ಕೊಲ್ಲುವುದು, ಶಿಕಾರಿ, ಪ್ರತಿವರ್ಷ ನಾರಪ್ಪ ಬೇಟೆಯಾಡಲು ಕಾಡಿಗೆ ಹೋಗುತ್ತಾನೆ.
ಭಂಡಾರ	:	ಪೂಜಾ ಸಾಮಗ್ರಿಯಲ್ಲಿ ಇದು ಒಂದು. ತಂಡಸ್ಲೋರು ಬೆಡಗಿನವರು ಇದನ್ನು ಬಳಸುತ್ತಾರೆ. ಬೊಕ್ಕಸ ಖಜಾನೆ ಕೋಶ ಎಂದು ಬಳಸಬಹುದು.
ಮಲ್ಲಿಗೆ ಹೂವಿನ ಮುದ್ರೆ	:	ನಾರಪ್ಪ ದೇವರ ಹೆಸರಿನಲ್ಲಿ ಹೊರೆ ಹೊರುವವರಿಗೆ ಹಾಕುವ ಗುರುತು.
ಮಡಿಕೆ	:	ಕುಂಭ, ಗಡಿಗೆ, ಮಣ್ಣಿನ ಪಾತ್ರೆ ಇದನ್ನು ಪ್ರತಿ ಎಡೆಯ ಸಂದರ್ಭದಲ್ಲಿ ಬಳಸುತ್ತಾರೆ.
ಮಡಿ	:	ಶುಭ್ರ ಮಾಡಿದ ಬಟ್ಟೆ, ಮೈಲಿಗೆ ಅಲ್ಲದುದು.
ಯಡ ಮುರಿಗಿ	:	ಶಿಕ್ಷಿಸು, ಇಲ್ಲಿ ಕೈಯನ್ನು ಹಿಂದಕ್ಕೆ ಕಟ್ಟುವುದು. ತಂಡಸ್ಲೋರು ಬೆಡಗಿನಲ್ಲಿ ಯಾರೇ ಮದುವೆಯಾಗಲಿ ಈ ಶಿಕ್ಷೆಗೆ ಗುರಿಯಾಗಬೇಕು.
ಯದ್ದ	:	ರಥೋತ್ಸವದ ಸಂದರ್ಭದಲ್ಲಿ ಬಳಸುವ ಸಾಧನ.
ರಾಜಾಂಗಳ	:	ಒಂದು ಸೀಮಿತ ಪ್ರದೇಶಕ್ಕೆ ಇಟ್ಟಿರುವ ಹೆಸರು. ಹಬ್ಬ, ಜಾತ್ರೆಯಲ್ಲಿ ಹರಿಜನರು ನಾರಪ್ಪನ ಗುಡಿಯ ಸುತ್ತಮುತ್ತಲಿರುವ ಜಾಗಕ್ಕೆ ರಾಜಾಂಗಳ ಎಂದು ಕರೆಯುತ್ತಾರೆ.
ಲಿಂಗ	:	ಗುರುತು, ಶಿವನ ಒಂದು ಮೂರ್ತಿ ನಾರಪ್ಪನ ಎಡಗೈಯಲ್ಲಿರುವ ವಸ್ತು.
ಶಂಖ	:	ಗೂಟ, ಕೀಲು ಒಂದು ಆಯುಧ. ನಾರಪ್ಪನ ಬಲಗೈಯಲ್ಲಿ ಇದೆ.
ಸಾರಣೆ	:	ಜಾತ್ರೆಯ ಸಂದರ್ಭದಲ್ಲಿ ಎಡೆಮಾಡುವ ಮುನ್ನ ನೆಲ ಸಾರಿಸುವುದಕ್ಕೆ ಸಾರಣೆ ಎನ್ನುತ್ತಾರೆ. ಮತ್ತು ದಿನನಿತ್ಯ ಈ ಪದ ಬಳಕೆಯಲ್ಲಿದೆ.
ಸಾವಕ್ಕ	:	ಸತ್ಯಭಾಮ, ಸಾವಿತ್ರಿ, ಸಾವ, ಸಾವಮ್ಮ, ಸಾವಜ್ಜಿ, ವ್ಯಕ್ತಿನಾಮ, ವೈಷ್ಣವ ಪಂಥದ ಹೆಸರು.
ಸಾವಕ್ಕನ ಮಾಡುವುದು	:	ಮಾಂಗಲ್ಯ ನಡೆಯುವ ಮುನ್ನ ಮಾಡುವ ಪೂಜೆ. (ತಂಡಸ್ಲೋರು ಬೆಡಗಿನಲ್ಲಿದೆ)
ಹರಿನೀರು	:	ಮದುವೆ ಸಂದರ್ಭದಲ್ಲಿ ಮದುಮಕ್ಕಳಿಗೆ ಮೊದಲು ಹಾಕುವ ನೀರು.
ಹರಿಹರ	:	ಅರ್ಧಶಿವ, ಅರ್ಧ ವಿಷ್ಣುವಿನ ಒಂದು ರೂಪ ವೀರಭದ್ರ. ಒಂದು ಊರಿನ ಹೆಸರು.



ನಾರಪ್ಪನ ಮೂಲ ವಿಗ್ರಹ





ಬೆಳ್ಳಿ ಕವಚ ಧರಿಸಿದ ನಾರಪ್ಪ



ಹಳೆ ದೇವಸ್ಥಾನದ ಸಂದರ್ಭದಲ್ಲಿದ್ದ ನಾರಪ್ಪನ ಅಲಂಕಾರ ಮತ್ತು ಆಜುಬಾಜು ಸತ್ಯಭಾಮ, ರುಕ್ಮಿಣಿಯರ ವಿಗ್ರಹಗಳು



ಉತ್ಸವ ಮೂರ್ತಿ ಕೃಷ್ಣ



ಹೊಸ ಮಡಿಕೆಯಲ್ಲಿ ತಯಾರಾದ ಪ್ರಸಾದವನ್ನು ಹೊತ್ತಿರುವುದು



ಪ್ರಸಾದವನ್ನು ನೈವೇದ್ಯ ಮಾಡುವುದು



[illegible] ತೇರು



ವಿಜೃಂಭಣೆಯಿಂದ ಸಾಗುವ ರಥೋತ್ಸವ



ದೇವಸ್ಥಾನದ ಮುಂದಿರುವ ಉಯ್ಯಾಲೆ ಕಂಬಗಳು



ಜಾತ್ರೆಯಲ್ಲಿ ಉತ್ಸವ ಮೂರ್ತಿಗೆ ನಾರನ್ನು ಹಾಕುವುದು



ಸಾವಕ್ಕನ ಮೂರ್ತಿ



ಕಾಲಭೈರವ ಮೂರ್ತಿ




ಓಕಳಿ ಗುಣಿ



ಆಂಜನೇಯನ ದೇವಸ್ಥಾನ



ಆಶ್ರಯ ತಪ್ಪಿ, ಬಿದ್ದಿರುವ ಶಿವನ ಮೂರ್ತಿ



ಕಾಲಭೈರವಿ ಮೂರ್ತಿ



ಸಿರಿಗೆರೆಯಲಿ ರುವ ನಾರದಮುನಿ ದೇವಸ್ಥಾನ



ಸಿರಿಗೆರೆಯಲ್ಲಿರುವ ನಾರಪ್ಪನ ಮೂರ್ತಿ



ಸಿರಿಗೆರೆಯಲ್ಲಿರುವ ಸಾವಕ್ಕನ ಮೂರ್ತಿ



ಕಾಳಿಕಾದೇವಿ ದೇವಸ್ಥಾನ, ಹುಲ್ಲೂರು. ಐತಿಹ್ಯದ ಪ್ರಕಾರ ನಾರಪ್ಪ ಈ ದೇವಸ್ಥಾನದಲ್ಲಿಯೇ ತಪಸ್ಸು ಮಾಡಿರುವುದು

೨. ೨ ವಕ್ತೃ ವಿವರ

ಕ್ರ.ಸಂ.	ಹೆಸರು	ವಯಸ್ಸು	ತಂದೆ ಗಂಡ	ವಿದ್ಯಾಭ್ಯಾಸ	ವೃತ್ತಿ	ಜಾತಿ	ಮನೆದೇವರು	ವಾಸಸ್ಥಳ
೧.	ಬಿ. ಮುನಿಯಪ್ಪ	೪೮	ಮುನಿಯಪ್ಪ	೨ನೇ ತರಗತಿ	ವ್ಯವಸಾಯ	ನಾಯಕ	ನಾರಪ್ಪ	ಚೀಗಟೇರಿ
೨.	ಜಿ.ಹೆಚ್. ಶಿವಲಿಂಗಪ್ಪ	೬೮	ಸಿದ್ದಪ್ಪ	ಎಸ್.ಎಸ್.ಎಲ್.ಸಿ	ಗುಮಾಸ್ತ	ಲಿಂಗಾಯತ	ನಾರಪ್ಪ	ಸಿರಿಗೇರಿ
೩.	ಶಿವಶಂಕರ ಬಾದಾಮಿ	೪೦	ಚಿದಾನಂದಪ್ಪ	೨ನೇ ತರಗತಿ	ಅರ್ಚಕರು	ಪಂಚಮಶಾಲಿ	ಬೆಟ್ಟದ ಮಲ್ಲಿಕಾರ್ಜುನ	ಚಿಗಟೇರಿ
೪.	ದೇವರಾಜ	೪೪	ರೇವಪ್ಪ	೧೦ನೇ ತರಗತಿ	ವ್ಯವಸಾಯ	ಲಿಂಗಾಯತ	ಮರುಳು ಸಿದ್ದಪ್ಪ	ಚಿಗಟೇರಿ
೫.	ದುರುಗಪ್ಪ	೬೦	ಚಿಕ್ಕರಪ್ಪ	ಇಲ್ಲ	ಪೂಜಾರಿ	ಹರಿಜನ	ಮರುಳುಸಿದ್ದಪ್ಪ	ಚಿಗಟೇರಿ
೬.	ಚಂದ್ರಮ್ಮ	೫೨	ಕರೇಗೌಡ್ರು	೫ನೇ ತರಗತಿ	ಮನೆಗೆಲಸ	ಲಿಂಗಾಯತ	ನಾರಪ್ಪ	ಹುಣಿಸಿಹಳ್ಳಿ
೭.	ಜಿ. ಗುರುಬಸಪ್ಪ	೫೪	ಗೋವಿಂದಪ್ಪ	೧೦ನೇ ತರಗತಿ	ವ್ಯವಸಾಯ	ಲಿಂಗಾಯತ	ನಾರಪ್ಪ	ಕಡಬಗೇರಿ
೮.	ಕೆ. ಚನ್ನಬಸಪ್ಪ (ದಾಸಪ್ಪ)	೬೫	ನಾರಪ್ಪ	೯ನೇ ತರಗತಿ	ವ್ಯವಸಾಯ	ಲಿಂಗಾಯತ	ನಾರಪ್ಪ	ಕಡಬಗೇರಿ
೯.	ಎ.ಹನುಮಂತಪ್ಪ	೩೧	ಕರೇಗೌಡ್ರು	೯ನೇ ತರಗತಿ	ವ್ಯಾಪಾರ	ಲಿಂಗಾಯತ	ನಾರಪ್ಪ	ಕಡಬಗೇರಿ
೧೦.	ಜಿ. ಮುನಿಯಪ್ಪ	೬೦	ನಾರಪ್ಪ	ಇಲ್ಲ	ವ್ಯವಸಾಯ	ನಾಯಕ	ನಾರಪ್ಪ	ಚಿಗಟೇರಿ
೧೧.	ಪರಶುರಾಮಪ್ಪ	೩೨	ಕೆಂಚಪ್ಪ	೨ನೇ ತರಗತಿ	ವ್ಯವಸಾಯ	ಲಿಂಗಾಯತ	ಉಚ್ಚೆಂಗಮ್ಮ	ಹುಣಿಸಿಹಳ್ಳಿ
೧೨.	ಕಾಳಮ್ಮ ಕೆ.	೭೦	ನಂಟಗೌಡ	೫ನೇತರಗತಿ	ಮನೆಗೆಲಸ	ಲಿಂಗಾಯತ	ನಾರಪ್ಪ	ಹುಣಿಸಿಹಳ್ಳಿ
೧೩.	ಚಂದ್ರೇಗೌಡ ಡಿ.	೬೩	ದ್ಯಾಮನಗೌಡ	೫ನೇತರಗತಿ	ವ್ಯವಸಾಯ	ಲಿಂಗಾಯತ	ನಾರಪ್ಪ	ಸಂಗಮೇಶ್ವರ
೧೪.	ಮೂಗಪ್ಪ	೪೫	ಬಸಪ್ಪ	ಇಲ್ಲ	ವ್ಯವಸಾಯ	ಕುರುಬ	ಮೂಗಪ್ಪ	ಚಿಗಟೇರಿ

ಕ್ರ.ಸಂ.	ಹೆಸರು	ವಯಸ್ಸು	ತಂದೆ ಗಂಡ	ವಿದ್ಯಾಭ್ಯಾಸ	ವೃತ್ತಿ	ಜಾತಿ	ಮನೆದೇವರು	ವಾಸಸ್ಥಳ
೧೫.	ಬಿ.ಮೂಗಮ್ಮ	೮೫	ಬಸಪ್ಪ	ಇಲ್ಲ	ದಾಸಮ್ಮ (ದಾಸಿ)	ನಾಯಕ	ನಾರಪ್ಪ	ಚಿಗಟೇರಿ
೧೬.	ತಿಂದಪ್ಪ	೭೦	ಗಿಡ್ಡಜ್ಜ	೨ನೇ ತರಗತಿ	ವ್ಯವಸಾಯ	ಚೆಲವಾದಿ	ಉಚ್ಚೆಂಗೆಮ್ಮ	ಚಿಗಟೇರಿ
೧೭.	ಬಾಡದ ನಾರಪ್ಪ	೫೨	ಭರಮಜ್ಜ	ಪಿ.ಯು.ಸಿ	ವ್ಯವಸಾಯ	ಲಿಂಗಾಯತ	ನಾರಪ್ಪ	ಚಿಗಟೇರಿ
೧೮.	ಕೆಂಚಮ್ಮ	೫೫	ಕೊಟ್ರಪ್ಪ	ಇಲ್ಲ	ಮನೆಗೆಲಸ	ನಾಯಕ	ನಾರಪ್ಪ	ಬಳಿಗನೂರು
೧೯.	ಮುತ್ತಿಗಿ ಮುನಿಯಪ್ಪ	೬೫	ನಾರಪ್ಪ	೪ನೇತರಗತಿ	ವ್ಯವಸಾಯ	ಲಿಂಗಾಯತ	ನಾರಪ್ಪ	ಕೇಸರಹಳ್ಳಿ
೨೦.	ನಡುಮನಿ ಗಂಗಮ್ಮ	೫೫	ಬಸವಗೌಡ	ಇಲ್ಲ	ಮನೆಗೆಲಸ	ಲಿಂಗಾಯತ	ನಾರಪ್ಪ	ಮತ್ತಿಹಳ್ಳಿ
೨೧.	ಕಂದಮೂರ್ತಿ ಬಿ.ಎಂ.	೪೫	ನಿಂಗಯ್ಯ	ಟಿ.ಸಿ.ಹೆಚ್	ವ್ಯವಸಾಯ	ಲಿಂಗಾಯತ	ಮರುಳ ಸಿದ್ದೇಶ	ಸಂಗಮೇಶ್ವರ
೨೨.	ಎಂ. ಬಸಪ್ಪ	೫೬	ಭೀಮಪ್ಪ	೫ನೇ ತರಗತಿ	ವ್ಯವಸಾಯ	ಮಡಿವಾಳರು	ವೀರಭದ್ರ	ಚಿಗಟೇರಿ
೨೩.	ತಿಮ್ಮಪ್ಪ	೭೦	ಸಿದ್ದಪ್ಪ	ಇಲ್ಲ	ವ್ಯವಸಾಯ	ಲಿಂಗಾಯಿತ	ನುಕ್ಕಿ ಸಿದ್ದೇಶ್ವರ	ಹುಲ್ಲೂರು
೨೪.	ನಿಂಗಪ್ಪ	೬೫	ಸಿದ್ದಪ್ಪ	೨ನೇ ತರಗತಿ	ಪೂಜಾರಿ	ಲಿಂಗಾಯಿತ	ನಾರಪ್ಪ	ಸಿರಿಗೆರೆ
೨೫.	ಬಿ. ಚನ್ನಬಸಪ್ಪ	೫೧	ಚೆನ್ನಪ್ಪ	ಪಿ.ಯು.ಸಿ.	ವ್ಯವಸಾಯ	ಲಿಂಗಾಯತ	ಮರುಳಸಿದ್ದೇಶ	ಬೇತೂರು
೨೬.	ಮಂಜುನಾಥ	೩೮	ಶಿವಲಿಂಗಪ್ಪ	ಎಸ್.ಎಸ್.ಎಲ್.ಸಿ.	ವ್ಯವಸಾಯ	ಲಿಂಗಾಯಿತ	ನಾರಪ್ಪ	ಬೇತೂರು
೨೭.	ಕಾಳಿಂಗ ಚಾರ್‍ಯರು	೩೪	ರುದ್ರಚಾರ್‍ಯರು	ಎಸ್.ಎಸ್.ಎಲ್.ಸಿ.	ಪೂಜಾರಿಕೆ	ವಿಶ್ವಕರ್ಮ	ಕಾಳಮ್ಮ	ಜಾನುಕೊಂಡ
೨೮.	ಕಾಳಿಂಗ ಆಚಾರ್‍ಯರು	೬೦	ಪೂರ್ವಚಾರ್‍ಯರು	ಐ.ಟಿ.ಸಿ.	ಶಿಕ್ಷಕರು	ವಿಶ್ವಕರ್ಮ	ಕಾಳಮ್ಮ	ಜಾನುಕೊಂಡ
೨೯.	ಶಾರದಮ್ಮ	೪೫	ನಂಜಪ್ಪ	ಇಲ್ಲ	ಮನೆಗೆಲಸ	ಲಿಂಗಾಯಿತ	ತಿರುಪತಿ ತಿಮ್ಮಪ್ಪ	ಸಿರಿಗೆರೆ

ಕ್ರ.ಸಂ.	ಹೆಸರು	ವಯಸ್ಸು	ತಂದೆ ಗಂಡ	ವಿದ್ಯಾಭ್ಯಾಸ	ವೃತ್ತಿ	ಜಾತಿ	ಮನೆದೇವರು	ವಾಸಸ್ಥಳ
೩೦.	ಬಸವರಾಜಪ್ಪ	೫೩	ನಾರಪ್ಪ	ಪಿ.ಯು.ಸಿ.	ವ್ಯವಸಾಯ	ಲಿಂಗಾಯಿತ	ನಾರಪ್ಪ	ಬೇತೂರು
೩೧.	ಶಿವಲಿಂಗಮ್ಮ	೪೦	ಶರಣಪ್ಪ	೫ನೇ ತರಗತಿ	ಮನೆಗೆಲಸ	ಲಿಂಗಾಯಿತ	ಮರುಳಸಿದ್ದೇಶ	ಸಿಸೆಹಳ್ಳಿ
೩೨.	ನಂಜಪ್ಪ	೫೨	ಈಶ್ವರಪ್ಪ	ಎಸ್.ಎಸ್.ಎಲ್.ಸಿ.	ವ್ಯವಸಾಯ	ಲಿಂಗಾಯಿತ	ನಾರಪ್ಪ	ಸಿರಿಗೆರೆ
೩೩.	ಕೆ.ಸಿ. ಶರಣಪ್ಪ	೬೦	ಚಿಗಟೇರಪ್ಪ	೭ನೇ ತರಗತಿ	ವ್ಯವಸಾಯ	ಲಿಂಗಾಯಿತ	ನಾರಪ್ಪ	ಸಿರಿಗೆರೆ
೩೪.	ಅಜ್ಜಪ್ಪ	೪೦	ಇಲ್ಲ	೭ನೇ ತರಗತಿ	ಪೂಜಾರಿ	ಲಿಂಗಾಯಿತ	ಮರುಳ ಸಿದ್ಧೇಶ್ವರ	ಚಿಗಟೇರಿ
೩೫.	ಹೊನ್ನಜ್ಜಿ	೮೫	ಇಲ್ಲ	ಇಲ್ಲ	ಪೂಜಾರಿ	ನಾಯಕ	ನಾರಪ್ಪ	ಚಿಗಟೇರಿ
೩೬.	ಮುನಿಯಪ್ಪ	೪೪	ಇಲ್ಲ	೭ನೇ ತರಗತಿ	ವ್ಯವಸಾಯ	ನಾಯಕ	ನಾರಪ್ಪ	ಚಿಗಟೇರಿ
೩೭.	ಕೊಟ್ರಬಸಯ್ಯ	೭೧	ಇಲ್ಲ	ಎಸ್.ಎಸ್.ಎಲ್.ಸಿ	ಶಿಕ್ಷಕರು	ಪಂಚಮ	ಮರುಳಸಿದ್ದೇಶ	ಗಜಾಪುರ
೩೮.	ಹೆಚ್.ಕೆ. ದಾಸನಗೌಡ	೮೦	ಇಲ್ಲ	೪ನೇ ತರಗತಿ	ದಾಸಪ್ಪ	ಲಿಂಗಾಯಿತ	ನಾರಪ್ಪ	ಹುಣಿಸಿಹಳ್ಳಿ
೩೯.	ಬಿ.ಹೆಚ್. ಪ್ರಕಾಶ್	೫೨	ಮುನಿಯಪ್ಪ	B.com	ವ್ಯವಹಾರ	ಲಿಂಗಾಯಿತ	ನಾರಪ್ಪ	ದಾವಣಗೆರೆ
೪೦.	ಕಲ್ಲಜ್ಜ	೭೦	ಚೆನ್ನಪ್ಪ	ಇಲ್ಲ	ಹಿರೇ ಪೂಜಾರಿ	ಪಂಚಮಶಾಲಿ	ಬೆಟ್ಟದ ಮಲ್ಲಪ್ಪ	ಚಿಗಟೇರಿ
೪೧.	ಬಿ. ಬಸಮ್ಮ	೫೦	ಕರಿಬಸಪ್ಪ	ಇಲ್ಲ	ಮನೆಗೆಲಸ	ಲಿಂಗಾಯಿತ	ಮರುಳುಸಿದ್ದೇಶ್ವರ	ಹಿಕ್ಕಿಂಗೇರಿ
೪೨.	ಹೆಚ್ ಚನ್ನಬಸಪ್ಪ	೬೦	ಬಸಪ್ಪ	ಇಲ್ಲ	ವ್ಯವಸಾಯ	ಲಿಂಗಾಯತ	ಮೈಲಾರಲಿಂಗ	ಹಿಕ್ಕಿಂಗೇರಿ
೪೩.	ಟಿ. ಬಸವರಾಜು	೩೫	ತಿರುಕಪ್ಪ	ಎಸ್.ಎಸ್.ಎಲ್.ಸಿ.	ವ್ಯವಸಾಯ	ನಾಯಕ	ಗೋಣಿಬಸಪ್ಪ	ನಿಚ್ಚವ್ವನಹಳ್ಳಿ
೪೪.	ವಿಜಯಪ್ಪ	೩೦	ವೀರಭದ್ರಪ್ಪ	೪ನೇತರಗತಿ	ವ್ಯವಸಾಯ	ಲಿಂಗಾಯಿತ	ನಾರಪ್ಪ	ಜಮೀನಹಳ್ಳಿ
೪೫.	ಬಸವರಾಜ	೩೨	ರುದ್ರಪ್ಪ	೩ನೇತರಗತಿ	ಟೈಲರ್	ಲಿಂಗಾಯಿತ	ನಾರಪ್ಪ	ಕೊಣನೂರು

೨. ೩ ಪರಾಮರ್ಶನ ಗ್ರಂಥಗಳು

೧. ಅರ್ಜುನ ಯ. ಗೊಳಸಂಗಿ - ೧೯೯೫ ಗೊಳಸಂಗಿ ಗ್ರಾಮ ಒಂದು ಸಾಂಸ್ಕೃತಿಕ ಅಧ್ಯಯನ, ಮಲ್ಲಿಕಾರ್ಜುನ ಪ್ರಕಾಶನ, ಗೊಳಸಂಗಿ.

೨. ಉಮಾಪತಿ ಬಿ. - ೨೦೦೨ ಕಡಲಬಾಳು ಆಂಜನೇಯ (ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಕಿರುಪ್ರಬಂಧ).

೩. ಕೇಶವನ್ ಪ್ರಸಾದ್ ಕೆ. - ೧೯೯೭ ಮಲೆಮಾದೇಶ್ವರ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೪. ಕುಂಬಾಸ - ೧೯೯೦ ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಶ್ರೀ ಮಾಲತೇಶ ಪ್ರಕಾಶನ, ಕುಂಚೂರು.

೫. ಕುಂಬಾಸ - ೧೯೯೬ ಹರಪನಹಳ್ಳಿ ಪಾಳೆಯಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬. ಗಿರಿಜಾ ಟಿ. - ೨೦೦೧ ದಾವಣಗೆರೆ ಇದು ನಮ್ಮ ಜಿಲ್ಲೆ, ನಿಹಾರಿಕಾ ಪ್ರಕಾಶನ, ದಾವಣಗೆರೆ.

೭. ಗುರುಪ್ರಸಾದ್ ಸಿ.ಟಿ. - ೨೦೦೦ ಕನ್ನಡ ಜಾನಪದ ಗ್ರಂಥಸೂಚಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೮. ಗುರುಪ್ರಸಾದ್ ಸಿ.ಟಿ. - ೨೦೦೨ ನೀಲಗಾರರು ಒಂದು ಧಾರ್ಮಿಕ ಸಮುದಾಯದ ಅಧ್ಯಯನ, (ಕ.ವಿ.ವಿ.ಗೆ ಸಾದರ ಪಡಿಸಿದ ಪಿ.ಎಚ್.ಡಿ. ಮಹಾಪ್ರಬಂಧ).

೯. ಗೋವಿಂದ ರಾಜು ಟಿ. - ೧೯೯೩ ಚೆನ್ನಾದೇವಿ ಅಗ್ರಹಾರ - ಜಾನಪದೀಯ ಅಧ್ಯಯನ, ಪುಸ್ತಕ ಜೇನು, ಚೆನ್ನಾದೇವಿ, ಅಗ್ರಹಾರ.

೧೦. ಚಲವರಾಜು - ೧೯೯೭ ಜುಂಜಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೧. ಚಿದಾನಂದ ಮೂರ್ತಿ ಎಂ. - ೧೯೯೬ ಕನ್ನಡ ಶಾಸನ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು.

೧೨. ಜವರೇಗೌಡ ದೇ - ೧೯೮೬ ಜಾನಪದ ವಾಹಿನಿ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

೧೩. ತಪಸ್ವಿ ಕುಮಾರ್ ನಂ. - ೧೯೯೯ ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೪. ತಿಪ್ಪೇರುದ್ರಸ್ವಾಮಿ ಎಚ್. - ೨೦೦೧ ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.

೧೫. ದಾಸೇಗೌಡ ಜಿ.ವಿ. - ೧೯೭೩ ನಮ್ಮ ಜನಪದ ನಂಬಿಕೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೬. ದೇವರ ಕೊಂಡಾರೆಡ್ಡಿ (ಸಂ) - ೧೯೯೮ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧. ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕ.ವಿ.ವಿ ಹಂಪಿ, ವಿದ್ಯಾರಣ್ಯ.

೧೭. ನಾಗರಾಜ್ ಡಿ.ಆರ್. - ೧೯೯೯ ಅಲ್ಲಮ ಮತ್ತು ಶೈವಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು.

೧೮. ನಾಗಯ್ಯ ಜೆ.ಎಂ. - ೧೯೯೨ ಬಳ್ಳಾರಿ ಜಿಲ್ಲೆ ಶಾಸನಗಳು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೧೯. ನಾಗೇಶ್ ಎಚ್.ವ್ಹಿ. - ೧೯೮೧ ಗ್ರಾಮ ವ್ಯಾಸಂಗ, ಚಂದ್ರನಾಥ ಪ್ರಕಾಶನ, ಧಾರವಾಡ.

೨೦. ನಾಗರಾಜಯ್ಯ ಹಂಪ - ೧೯೮೫ ಕರ್ನಾಟಕದ ಜಾತ್ರೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೧. ಪರಮಶಿವಯ್ಯ ಜೀ.ಶಂ - ೧೯೭೬ ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಪ್ರಸಾರಾಂಗ. ಮೈಸೂರು. ವಿ.ವಿ. ಮೈಸೂರು.

೨೨. ಪುರುಷೋತ್ತಮ ಬಿಳಿಮಲೆ - ೧೯೯೯ ಹುಲಿಗೆಮ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ.

೨೩. ಪ್ರಭಾಕರ ಎ.ಎಸ್. - ೨೦೦೦ ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ. ಕ.ವಿ.ವಿ ಹಂಪಿ. ವಿದ್ಯಾರಣ್ಯ.

೨೪. ಬೋರಲಿಂಗಯ್ಯ ಹಿ.ಚಿ. (ಸಂ) - ೧೯೮೧ ದಾಸಪ್ಪ-ಜೋಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೫. ಬೋರಲಿಂಗಯ್ಯ ಹಿ.ಚಿ. (ಸಂ) - ೧೯೯೬ ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ. ಕ.ವಿ.ವಿ. ಹಂಪಿ. ವಿದ್ಯಾರಣ್ಯ.

೨೬. ಮಂಜುನಾಥ ಬೇವಿನಕಟ್ಟಿ - ೧೯೯೪ ಮಲಿಯಮ್ಮ ನಿನ್ನಾಲ್ಕುದೋ.... ಉಧೋ....... ಅಂಬಿಕಾ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಹೊಸಪೇಟೆ.

೨೭. ಮಂಜುನಾಥ ಬೇವಿನಕಟ್ಟಿ - ೧೯೯೪ ಜನಪದ ಸಂಸ್ಕೃತಿ, ತೇಜಸ್ವಿ ಪ್ರಕಾಶನ, ಹ್ಯಾರಡ.

೨೮. ರಹಮತ್ ತರಿಕೆರೆ - ೧೯೯೫ ಕರ್ನಾಟಕದ ಸೂಫಿಗಳು, ಪ್ರಸಾರಾಂಗ, ಕ.ವಿ.ವಿ. ಹಂಪಿ, ವಿದ್ಯಾರಣ್ಯ.

೨೯. ರಮೇಶ ಸ ಚಿ. (ಸಂ) - ೧೯೯೯ ಸ್ವಾಸಿ ಚೆನ್ನಮ್ಮನ ಕಾವ್ಯ, ಪ್ರಸಾರಾಂಗ, ಕ.ವಿ.ವಿ. ಹಂಪಿ, ವಿದ್ಯಾರಣ್ಯ.

೩೦. ರಾಗೌ - ೧೯೮೬ ಜನಪದ ಸಾಹಿತ್ಯ ರೂಪಗಳು, ಗಂಗಾ ತರಂಗ, ಪ್ರತಿಷ್ಠಾನ ಮೈಸೂರು.

೩೧. ರಾಜಶೇಖರ ಜಮದಂಡಿ - ೧೯೮೬ ಹೊಸೂರಮ್ಮ ಸಾಂಸ್ಕೃತಿಕ ಅಧ್ಯಯನ (ಕ.ವಿ.ವಿ.ಗೆ ಒಪ್ಪಿಸಿದ ಎಂ.ಫಿಲ್ ಕಿರು ಪ್ರಬಂಧ).

೩೨. ಲಕ್ಕಪ್ಪಗೌಡ ಹೆಚ್. ಜೆ. (ಸಂ) - ೧೯೯೭ ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩೩. ವೀರಣ್ಣ ದಂಡೆ - ೧೯೯೩ ಕನ್ನಡ ಜಾನಪದ ಪ್ರಜ್ಞೆ, ಕವಿಮಾರ್ಗ ಪ್ರಕಾಶನ, ತೇಜಸ್ವಿನಿ, ಕಲಬುರ್ಗಿ.

೩೪. ವೀರಣ್ಣ ದಂಡೆ - ೧೯೯೫ ಜಾನಪದ-೧೯೯೨ ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೫. ಶಂಕರ ನಾರಾಯಣ ತೀ.ನಂ. - ೧೯೯೮ ಕರ್ನಾಟಕ ಜನಪದ ಮಹಾಕಾವ್ಯಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೬. ಶಿವನಗೌಡ ಎ. - ೨೦೦೧ ದಂಡ ಘಂಟೆಯ ಶರಣ ಶ್ರೀ ಶಿವನಾರನ್ಮುನಿ, ಸುಪ್ರಿಯ ಸ್ವಪ್ರಕಾಶನ, ಕಡಬಗೆರೆ.

೩೭. ಸಿದ್ದಲಿಂಗಯ್ಯ - ೧೯೯೭ ಗ್ರಾಮದೇವತೆಗಳು, ಮೂಲ ಭಾರತಿ ಪ್ರಕಾಶನ, ಬೆಂಗಳೂರು.

೩೮. ಸುಶೀಲಾ ಪಿ. ಉಪಾಧ್ಯಾಯ - ೧೯೯೮ ದಕ್ಷಿಣ ಭಾರತ ಜಾನಪದ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೩೯. ಹಾ.ಮಾ. ನಾಯಕ - ೧೯೯೧ ಜಾನಪದ ಸ್ವರೂಪ, ತುಳಸಿ ವೆಂಕಣಯ್ಯನವರ ಸ್ಮಾರಕ ಗ್ರಂಥಮಾಲೆ, ಮೈಸೂರು.

೪೦. ಹಿರೇಮಠ ಎಸ್.ಎಸ್. - ೧೯೯೩ ಜಾತ್ರೆಗಳು, ಸಮತಾ ಪ್ರಕಾಶನ, ಹೊಸಪೇಟೆ.